ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ–ಅಗಲ
'ರಾಷ್ಟ್ರೀಯ ವಿಪತ್ತು' ಮಾನದಂಡವೇ ಇಲ್ಲ
ನಿವೃತ್ತಿ ಅಂಚಿನಲ್ಲಿರುವ ಸಿ.ಇಗೆ 'ಗುತ್ತಿಗೆ' ಕೊಡುಗೆ 4
ಬೆಚ್ಚಿಬೀಳಿಸುತ್ತಿರುವ ಊರ ನೆನಪು 8

ಒಲಿಂಪಿಕ್ಸ್ ಹಾಕಿ ಸೆಮಿಫೈನಲ್‌ಗೆ ಭಾರತ

ಪ್ಯಾರಿಸ್ ಒಲಿಂಪಿಕ್ಸ್ ಹಾಕಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದ ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಮತ್ತು ಸಹ ಆಟಗಾರರ ಸಂಭ್ರಮ. ಭಾನುವಾರ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಭಾರತ ತಂಡವು ಬ್ರಿಟನ್ ವಿರುದ್ಧ ಜಯಿಸಿತು

ಅರಣ್ಯ ಒತ್ತುವರಿ ತೆರವಿಗೆ ಪಡೆ

ಪಶ್ಚಿಮಘಟ್ಟದಲ್ಲಿ ಇಂದಿನಿಂದಲೇ ಕಾರ್ಯಾಚರಣೆ ● ಅನಧಿಕೃತ ತೋಟ, ರೆಸಾರ್ಟ್, ಹೋಂ ಸ್ಟೇ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಯನಾಡ್‌ನ ಭೂಕುಸಿತ ದುರಂತ ಮತ್ತು ರಾಜ್ಯದಲ್ಲಿ ವಿವಿಧೆಡೆ ಸಂಭವಿಸಿದ ಭೂಕುಸಿತದ ಘಟನೆಗಳಿಂದ ಎಚ್ಚೆತ್ತುಕೊಂಡಿರುವ ರಾಜ್ಯ ಸರ್ಕಾರ ಪಶ್ಚಿಮಘಟ್ಟ ಪ್ರದೇಶದಲ್ಲಿ ಅರಣ್ಯ ಒತ್ತುವರಿ, ಅಕ್ರಮ ತೋಟಗಳು, ಅನಧಿಕೃತ ರೆಸಾರ್ಟ್‌ಗಳ ವಿರುದ್ಧ ತಕ್ಷಣದಿಂದಲೇ ಕ್ರಮ ಜರುಗಿಸಲು ಕಾರ್ಯಪಡೆ ರಚಿಸಿದೆ.

'ಪಶ್ಚಿಮಘಟ್ಟ ಅರಣ್ಯ ಒತ್ತುವರಿ ತೆರವು ಕಾರ್ಯಪಡೆ' ಹೆಸರಿನ ಈ ಕಾರ್ಯಪಡೆಯು ಸೋಮವಾರ ದಿಂದಲೇ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಆರಂಭಿಸಲಿದೆ.

ಕೆಲವು ವರ್ಷಗಳಿಂದ ಪಶ್ಚಿಮಘಟ್ಟ ಪ್ರದೇಶದ ವ್ಯಾಪ್ತಿಯಲ್ಲಿರುವ ರಾಜ್ಯದ 10 ಜಿಲ್ಲೆಗಳ ಹಲವೆಡೆ ಭೂಕುಸಿತ ಸಂಭವಿಸಿತ್ತು. ಅಲ್ಲಿನ ಅರಣ್ಯ ಪ್ರದೇಶಗಳಲ್ಲಿ ಅಕ್ರಮವಾಗಿ ನಡೆಸುತ್ತಿರುವ ತೋಟ, ರೆಸಾರ್ಟ್ ಮತ್ತಿತರ ಚಟುವಟಿಕೆಗಳೇ ಇದಕ್ಕೆ ಕಾರಣ. ಒತ್ತುವರಿ ತೆರವು ಮಾಡಿದರೆ ಭೂಕುಸಿತದಂತಹ ದುರಂತಗಳನ್ನು ತಪ್ಪಿಸಬಹುದು. ಇದಕ್ಕಾಗಿ ಕಾರ್ಯಪಡೆ ರಚಿಸಬೇಕು ಎಂದು ಅರಣ್ಯ ಇಲಾಖೆ 2023ರ ಸೆಪ್ಟೆಂಬರ್‌ನಲ್ಲೇ ಟಿಪ್ಪಣಿ ಹೊರಡಿಸಿತ್ತು. ಆದರೆ ಕಾರ್ಯಪಡೆ ರಚನೆಯಾಗಿರಲಿಲ್ಲ.

ಜುಲೈ ತಿಂಗಳಲ್ಲಿ ರಾಜ್ಯದ ಶಿರೂರು, ಸಕಲೇಶಪುರ, ಶಿರಾಡಿ ಘಾಟ್, ಚಾರ್ಮಾಡಿ ಘಾಟ್‌ಗಳಲ್ಲಿ ಭಾರಿ ಪ್ರಮಾಣದಲ್ಲಿ ಸಾಲು ಸಾಲು ಭೂಕುಸಿತ ಸಂಭವಿಸಿದ್ದವು. ಆಗಲೂ ಕಾರ್ಯಪಡೆ ರಚನೆಯ ಅವಶ್ಯಕತೆ ಇದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಪ್ರತಿಪಾದಿಸಿದ್ದರು. ಆದರೂ ಕಾರ್ಯಪಡೆ ರಚನೆಯಾಗಿರಲಿಲ್ಲ. ರಾಜ್ಯದೊಂದಿಗೆ ಗಡಿ ಹಂಚಿಕೊಂಡಿರುವ ಕೇರಳದ ವಯನಾಡ್ ಜಿಲ್ಲೆಯಲ್ಲಿ ಜುಲೈ ಕೊನೆಯ ವಾರ ಸಂಭವಿಸಿದ ಭಾರಿ ಭೂಕುಸಿತದ ನಂತರ ಸರ್ಕಾರ ಎಚ್ಚೆತ್ತುಕೊಂಡಿದೆ.

4ನೇ ಪುಟ ನೋಡಿ

ಇಡೀ ವಯನಾಡ್ ಸೂಕ್ಷ್ಮ ಪ್ರದೇಶ

ಕೇರಳದ ವಯನಾಡ್ ಜಿಲ್ಲೆಯ ಶೇ 60ರಷ್ಟು ಪ್ರದೇಶವು ಅತ್ಯಂತ ಸೂಕ್ಷ್ಮ ಎಂದು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಅಧ್ಯಯನ ವರದಿ ಹೇಳಿದೆ. ಸಂಸ್ಥೆಯು ಅಭಿವೃದ್ಧಿಪಡಿಸಿರುವ 'ಪರಿಸರ ಸೂಕ್ಷ್ಮ ರೇಟಿಂಗ್' ಅಡಿಯಲ್ಲಿ ವಯನಾಡ್‌ನ ಎಲ್ಲಾ ಗ್ರಾಮ ಪಂಚಾಯಿತಿಗಳನ್ನು ಸೂಕ್ಷ್ಮ ಎಂದು ವರ್ಗೀಕರಿಸಲಾಗಿದೆ. ಈ ಪ್ರದೇಶಗಳು ಭೂಕುಸಿತದ ಅಪಾಯದ ಪ್ರದೇಶಗಳು ಎಂದೂ ಗುರುತಿಸಲಾಗಿದೆ.

ಪ್ರೊ.ಟಿ.ವಿ.ರಾಮಚಂದ್ರನ್ ನೇತೃತ್ವದ ತಂಡ ರೇಟಿಂಗ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದೆ. 'ಸ್ಥಳೀಯ ಪ್ರಭೇದದ ಸಸಿ–ಮರಗಳನ್ನು ತೆರವು ಮಾಡಿ ಟೀ ತೋಟ, ರಬ್ಬರ್ ತೋಟದಂತಹ ಏಕಜಾತಿಯ ತೋಟಗಳನ್ನು ಮಾಡಿದ್ದರಿಂದ ಮಣ್ಣು ಸಡಿಲವಾಗಿದೆ. ಜತೆಗೆ ವ್ಯಾಪಕ ಅಭಿವೃದ್ಧಿ ಚಟುವಟಿಕೆಗಳಿಂದಲೂ ಮಣ್ಣು ಸಡಿಲವಾಗಿ ಭೂಕುಸಿತಕ್ಕೆ ಕಾರಣವಾಗಿದೆ' ಎಂದು ಅವರು ಹೇಳಿದ್ದಾರೆ.

9
ಮಧ್ಯಮ ಪ್ರಮಾಣದ ಸೂಕ್ಷ್ಮ ಪ್ರದೇಶ ಎಂದು ವರ್ಗೀಕರಿಸಲಾದ ಗ್ರಾಮ ಪಂಚಾಯಿತಿಗಳು

8
ಸೂಕ್ಷ್ಮ ಪ್ರದೇಶ ಎಂದು ವರ್ಗೀಕರಿಸಲಾದ ಗ್ರಾಮ ಪಂಚಾಯಿತಿಗಳು

32
ಅತ್ಯಂತ ಸೂಕ್ಷ್ಮ ಎಂದು ವರ್ಗೀಕರಿಸಲಾದ ಗ್ರಾಮ ಪಂಚಾಯಿತಿಗಳು

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಬಾಂಗ್ಲಾದಲ್ಲಿ ಅಸಹಕಾರ ಚಳವಳಿ: ಹಿಂಸೆಗೆ 100 ಸಾವು

ಢಾಕಾ (ಪಿಟಿಐ): ಬಾಂಗ್ಲಾದೇಶದಲ್ಲಿ ಪ್ರಧಾನಿ ಶೇಖ್ ಹಸೀನಾ ರಾಜೀನಾಮೆಗೆ ಒತ್ತಾಯಿಸಿ ವಿದ್ಯಾರ್ಥಿಗಳು ನಡೆಸುತ್ತಿರುವ ಅಸಹಕಾರ ಚಳವಳಿಯ ಮೊದಲ ದಿನವಾದ ಭಾನುವಾರ, ಪ್ರತಿಭಟನಕಾರರು ಹಾಗೂ ಆಡಳಿತಾರೂಢ ಅವಾಮಿ ಲೀಗ್ ಪಕ್ಷದ ಬೆಂಬಲಿಗರ ನಡುವೆ ಘರ್ಷಣೆ ನಡೆದಿದೆ. ಸುಮಾರು 100 ಮಂದಿ ಮೃತಪಟ್ಟಿದ್ದಾರೆ.

ಹಸೀನಾ ರಾಜೀನಾಮೆಗೆ ಒತ್ತಾಯಿಸಿ ಅಸಹಕಾರ ಚಳವಳಿ ನಡೆಸುತ್ತಿರುವವರಿಗೆ ಅವಾಮಿ ಲೀಗ್, ಛಾತ್ರ ಲೀಗ್ ಮತ್ತು ಜುಬೊ ಲೀಗ್ ಕಾರ್ಯಕರ್ತರಿಂದ ಭಾನುವಾರ ಬೆಳಿಗ್ಗೆ ಪ್ರತಿರೋಧ ಎದುರಾದಾಗ ಘರ್ಷಣೆ ಉಂಟಾಯಿತು. ದೇಶದ 13 ಜಿಲ್ಲೆಗಳಲ್ಲಿ ಘರ್ಷಣೆ ಉಂಟಾಗಿದೆ ಎಂದು ಸ್ಥಳೀಯ ಮಾಧ್ಯಮವೊಂದು ವರದಿ ಮಾಡಿದೆ.

ಭಾನುವಾರ ಸಂಜೆ 6 ಗಂಟೆಯಿಂದ ಅನಿರ್ದಿಷ್ಟ ಅವಧಿಗೆ ದೇಶದಾದ್ಯಂತ ಕರ್ಫ್ಯೂ ವಿಧಿಸಲು ಗೃಹ ಸಚಿವಾಲಯ ತೀರ್ಮಾನಿಸಿದೆ. ಫೇಸ್‌ಬುಕ್, ಮೆಸೆಂಜರ್, ವಾಟ್ಸ್‌ಆ್ಯಪ್ ಮತ್ತು ಇನ್‌ಸ್ಟಾಗ್ರಾಂ ಸೇವೆಗಳನ್ನು ಸ್ಥಗಿತಗೊಳಿಸಲು ಸರ್ಕಾರ ಆದೇಶಿಸಿದೆ. 4ಜಿ ಮೊಬೈಲ್ ಇಂಟರ್ನೆಟ್ ಸೇವೆಗಳ ಸ್ಥಗಿತಕ್ಕೂ ಆದೇಶಿಸಲಾಗಿದೆ ಎಂದು ಮಾಧ್ಯಮವೊಂದು ವರದಿ ಮಾಡಿದೆ.

9ನೇ ಪುಟ ನೋಡಿ

ಯಾದಗಿರಿಗೆ ಸಿಐಡಿ ತಂಡ

ಪ್ರಜಾವಾಣಿ ವಾರ್ತೆ

ಯಾದಗಿರಿ: ನಗರ ಠಾಣೆಯ ಪಿಎಸ್‌ಐ ಪರಶುರಾಮ್ ಅನುಮಾನಾಸ್ಪದ ಸಾವಿನ ಪ್ರಕರಣ ತನಿಖೆಗೆ ಅಪರಾಧ ತನಿಖಾ ದಳ (ಸಿಐಡಿ) ತಂಡವು ಭಾನುವಾರ ಇಲ್ಲಿಗೆ ಭೇಟಿ ನೀಡಿ ಎಫ್‌ಐಆರ್ ಪ್ರತಿ, ಪಂಚನಾಮೆ ವರದಿ, ವಿವಿಧ ಆಯಾಮಗಳ ವಿವರ ಸೇರಿದಂತೆ ಪ್ರಾಥಮಿಕ ಮಾಹಿತಿ ಸಂಗ್ರಹಿಸಿದೆ ಎಂದು ಮೂಲಗಳು ತಿಳಿಸಿವೆ.

ಸಿಐಡಿಯ ಡಿವೈಎಸ್‌ಪಿ ಪುನೀತ್ ಅವರ ತಂಡ ನಗರದ ಡಿವೈಎಸ್‌ಪಿ ಕಚೇರಿಯಲ್ಲಿ ತನಿಖಾಧಿಕಾರಿ ಡಿವೈಎಸ್‌ಪಿ ಜಾವೀದ್ ಇನಾಂದಾರ್ ಸೇರಿ ವಿವಿಧ ಠಾಣೆ ಪೊಲೀಸ್ ಅಧಿಕಾರಿಗಳಿಂದ ಮಾಹಿತಿ ಪಡೆಯಿತು. ಪರಶುರಾಮ್ ಅವರು ಯಾವಾಗ ಇಲ್ಲಿಗೆ ವರ್ಗಾವಣೆಯಾದರು, ಇಲ್ಲಿಂದ ಎಲ್ಲಿಗೆ ವರ್ಗಾವಣೆಯಾಗಿದ್ದರು ಇತ್ಯಾದಿ ವಿವರಗಳೂ ಇದರಲ್ಲಿ ಸೇರಿವೆ.

ಪರಶುರಾಮ್ ಸಾವಿಗೆ ಸಂಬಂಧಿಸಿದಂತೆ ಯಾದಗಿರಿ ಕಾಂಗ್ರೆಸ್ ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರು, ಅವರ ಪುತ್ರ ಪಂಪನಗೌಡ ವಿರುದ್ಧ ಯಾದಗಿರಿ ನಗರ ಠಾಣೆಯಲ್ಲಿ ದೂರು ದಾಖಲಾಗಿದೆ.

ಎರಡು ಬ್ಯಾಗ್‌ಗಳಲ್ಲಿ ಕೆಲವು ಕಡತ, ಪೆನ್‌ಡ್ರೈವ್ ತೆಗೆದುಕೊಂಡು ಸರ್ಕಿಟ್ ಹೌಸ್‌ಗೆ ಸಿಐಡಿ ತಂಡ ತೆರಳಿತು. ವಿವಿಧ ಸಂಘಟನೆಗಳ ಪ್ರತಿಭಟನೆ ನಂತರ ದೂರು ದಾಖಲಾಗಿತ್ತು.

ಈಗ JioMart ಮತ್ತು ನಿಮ್ಮ ಹತ್ತಿರದ SMART BAZAAR ನಲ್ಲಿ ಲಭ್ಯವಿದೆ

ಸಿಕೆಸಿ ಗ್ರೂಪ್
155 ವರ್ಷಗಳು

ಈ ಅಪೂರ್ವ ಕೃತಿಯ ಪ್ರೇರಣೆಯು
ಕೇವಲ ಕೆಲವೆ ಸಾವಿರ ವರ್ಷಗಳ ಹಳೆಯದು
ಪರಿಚಯಿಸುತ್ತಿದ್ದೇವೆ ವಿಷ್ಣು ಪುರಾಣದಿಂದ ಪ್ರೇರಿತವಾದ
'ಗರುಡಾದ್ರಿ ಮಹಾ ವಿಷ್ಣು ವರಲಕ್ಷ್ಮಿ™' ಸಂಕಲನ.

ಗರುಡಾದ್ರಿ™ ಮಹಾ ವಿಷ್ಣು ವರಲಕ್ಷ್ಮಿ

ಸಿ. ಕೃಷ್ಣಯ್ಯ ಚೆಟ್ಟಿ ಜ್ಯೂವೆಲರ್ಸ್, ವಿಷ್ಣು ಪುರಾಣದಿಂದ ಪ್ರೇರಿತವಾದ 'ಗರುಡಾದ್ರಿ ಮಹಾ ವಿಷ್ಣು ವರಲಕ್ಷ್ಮಿ™' ಪರಿಕರವನ್ನು ಇತ್ತೀಚೆಗೆ ರಚಿಸಿದ್ದಾರೆ. ಈ ವಿಶಿಷ್ಟ ಕೃತಿಯಲ್ಲಿ ಶ್ರೀ ಗರುಡಾದ್ರಿಯೊಂದಿಗೆ ತನ್ನ ಪ್ರಭುವಾದ ವಿಷ್ಣುವಿನ ಅಮೋಘ ರೂಪವನ್ನು ನಿಖರವಾಗಿ ತಯಾರಿಸಲಾಗಿದೆ. ವಿಷ್ಣು ಪುರಾಣದಿಂದ ಪ್ರೇರಿತವಾದ ಈ ಕೃತಿಯಲ್ಲಿ ಕನಕವರ್ಷಿಣಿ ಲಕ್ಷ್ಮಿ ದೇವಿಯು ಮಹಾ ವಿಷ್ಣುವಿನ ಕೋಮಳದಲ್ಲಿ ಕುಳಿತಿದ್ದರೆ, 'ಗರುಡನು ಸಂತೋಷದಿಂದ ಅವರನ್ನ ತನ್ನ ತೋಳಿನ ಮೇಲೆ ಹೊತ್ತುಕೊಂಡಿದ್ದಾನೆ,' ಹಾಗೆ ವಿಷ್ಣುಭಕ್ತ ಹನುಮಾನ್ ಮತ್ತು ಚಾಮರಾಧಾರಿಯು ಗೌರವಪೂರ್ವಕವಾಗಿ ಸ್ವಾಮಿಯ ಎರಡು ಕಡೆಗಳಲ್ಲಿ ನಿಂತಿದ್ದಾರೆ. ಹಿನ್ನಲೆಯಲ್ಲಿ ಶೇಷನಾಗ, ವಿಷ್ಣು ತಿಲಕ, ಮತ್ತು ದೇವಾಲಯದ ಗೋಪುರ ವಿನ್ಯಾಸಗಳು ಅತ್ಯಂತ ಸುಂದರವಾಗಿ, ಶ್ರದ್ಧೆ ಹಾಗೂ ಪವಿತ್ರತೆಯನ್ನು ಸಾರುತ್ತವೆ.

ಈ ವಾರ್ಷಿಕ ವರಮಹಾಲಕ್ಷ್ಮಿ ಪೂಜೆಯು ನಿಮ್ಮ ಮನೆಗೆ ದಿವ್ಯತೆಯನ್ನು ತರಲು ಈ ಅಪೂರ್ವ ಕೃತಿಯನ್ನು ನಿಮ್ಮದಾಗಿಸಿಕೊಳ್ಳಿ.

ಸೀಮಿತ ಆವೃತ್ತಿ ಬೆಳ್ಳಿ ಮತ್ತು ತಾಮ್ರದ ಆಕೃತಿಗಳಲ್ಲಿ ಲಭ್ಯ

ಬೆಳ್ಳಿಯ ಆಕೃತಿ : ರೂ.1,08,000/-* ರಿಂದ
ತಾಮ್ರದ ಆಕೃತಿ: ರೂ.71,000/-* ರಿಂದ

ಆನ್‌ಲೈನ್‌ನಲ್ಲಿ ಲಭ್ಯವಿದೆ:
www.ckcjewellers.com/garudadri-mahavishnu-varalakshmi

ಖರೀದಿಸಲು QR ಕೋಡ್ ಅನ್ನು ಸ್ಕ್ಯಾನ್ ಮಾಡಿ
ವೀಡಿಯೊ ವೀಕ್ಷಿಸಲು QR ಕೋಡ್ ಅನ್ನು ಸ್ಕ್ಯಾನ್ ಮಾಡಿ

ಸಿ. ಕೃಷ್ಣಯ್ಯ ಚೆಟ್ಟಿ™ ಗ್ರೂಪ್ ಆಫ್ ಜ್ಯೂವೆಲರ್ಸ್

ಬೆಂಗಳೂರಿನಾದ್ಯಂತ 5 ಭವ್ಯವಾದ ಶೋರೂಮ್‌ಗಳು ಮತ್ತು ಬುಟಿಕ್‌ಗಳು: ಕಮರ್ಷಿಯಲ್ ಸ್ಟ್ರೀಟ್ • ಮೇನ್ ಗಾರ್ಡ್ ಕ್ರಾಸ್ ರೋಡ್ • ಜಯನಗರ • ಮಲ್ಲೇಶ್ವರಂ • ಫೀನಿಕ್ಸ್ ಮಾರ್ಕೆಟ್ ಸಿಟಿ, ವೈಟ್ ಫೀಲ್ಡ್
ಮೀಸಲಿಟ್ಟ ಸಂಬಂಧಿತ ವ್ಯವಸ್ಥಾಪಕರು: +91 95131 31869 | Tel: 080-4000 1869 / 4100 1869 | www.ckcjewellers.com

*ಸೂಚಕ ಬೆಲೆ, ದರ ಏರಿಳಿತಗಳಿಗೆ ಒಳಪಟ್ಟಿರುತ್ತದೆ • ©ವಿನ್ಯಾಸ ಹಕ್ಕುಸ್ವಾಮ್ಯ. ಉಲ್ಲಂಘನೆಯನ್ನು ನಿಷೇಧಿಸಲಾಗಿದೆ • ಗುರುತುಗಳು, ಲೋಗೋಗಳು, ಹೆಸರುಗಳು ಮತ್ತು ನೋಂದಾಯಿತ ಟ್ರೇಡ್‌ಮಾರ್ಕ್‌ಗಳ ಅನಧಿಕೃತ ಬಳಕೆಯನ್ನು ನಿಷೇಧಿಸಲಾಗಿದೆ.

ಸಿಕೆಸಿ ಸಮೂಹ ಕಂಪನಿಗಳು C. KRISHNIAH CHETTY & SONS™ C. KRISHNIAH CHETTY JEWELLERS® THE 1869 GUILD C. Krishniah Chetty & Sons C. KRISHNIAH CHETTY CHARITABLE TRUST C. Krishniah Chetty Foundation

ಎಚ್ಚರಿಕೆ ಸೂಚನೆ – ಸಾರ್ವಜನಿಕ ಹಿತಾಸಕ್ತಿಯಲ್ಲಿ: * ಪ್ರಸ್ತುತ ನಮ್ಮ ಕಂಪನಿಯ ನಿರ್ದೇಶಕರು ಆಗಿರುವ ಶ್ರೀ ಸಿ. ಗಣೇಶ್ ನಾರಾಯಣ್ ಮತ್ತು ಅವರ ಪತ್ನಿಯೊಂದಿಗೆ ನಡೆಸುತ್ತಿರುವ ದೀಪಾಲಿ ಕಂ. ಪ್ರೈ. ಲಿ., ಎಂಬ ಕಂಪನಿಯ ಹೆಸರನ್ನು ಮೋಸತನದಿಂದ ನಮ್ಮ ಹೆಸರಿನಂತೆಯೇ ಬದಲಾಯಿಸಿ ನಮಗೆ ಸಂಬಂಧವಿಲ್ಲದ ಒಂದು ವ್ಯಾಪಾರ ಸಂಸ್ಥೆಯನ್ನು ಆರಂಭ ಮಾಡಿರುತ್ತಾರೆ. ಈ ನೂತನ ಅನಧಿಕೃತ ಮಳಿಗೆಯು ಟಚ್‌ಸ್ಟೋನ್ (ನಮ್ಮ ಪ್ರಮುಖ ಶೋರೂಮ್‌ನ ಪಕ್ಕ) ಎಡಭಾಗದಲ್ಲಿ ತೆರೆಯಲಾಗಿದೆ. ಈ ಸಂಸ್ಥೆಯು, ನ್ಯಾಯಾಲಯದ ಆದೇಶಗಳ ಉಲ್ಲಂಘನೆಯ ಅಡಿಯಲ್ಲಿ ನಿರ್ಬಂಧಗಳಿಗೆ ಒಳಪಟ್ಟಿರುತ್ತದೆ. ಆದ್ದರಿಂದ, ನಮ್ಮ ಎಲ್ಲಾ ಗ್ರಾಹಕರಿಗೆ/ಸಾರ್ವಜನಿಕರಿಗೆ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ದಯವಿಟ್ಟು ಮತ್ತೊಂದು ಅಧಿಕೃತ ಸಿ. ಕೃಷ್ಣಯ್ಯ ಚೆಟ್ಟಿ ಶೋರೂಮ್ ಇದೆಯೆಂಬ ತಪ್ಪು ಕಲ್ಪನೆಗೆ ಒಳಗಾಗದಿರಿ. ವಾಸ್ತವವಾಗಿ ಅದು ಸಿಕೆಸಿ ಹೆಸರು ಅಥವಾ ಸಿಕೆಸಿ ಗ್ರೂಪ್ ಲೋಗೊ ಬಳಸಿಕೊಳ್ಳಲು ಅಧಿಕೃತ ಸಂಸ್ಥೆಯಲ್ಲ. ವಿಷಯಗಳು ನ್ಯಾಯಾಲಯಗಳಲ್ಲಿ ತೀವ್ರ ಆದ್ಯತೆಯ ಮೇರೆಗಿನ ವಿಚಾರಣೆಗೆ ಬಾಕಿ ಇರುತ್ತವೆ. ಗಮನಿಸಿ: *ಒಂದು ವೇಳೆ, ಕಾನೂನಿನ ಪ್ರಕಾರ ಅವರ ವ್ಯವಹಾರ ಸ್ಥಗಿತವಾದಲ್ಲಿ, ಅವರಿಂದ ಮಾರಾಟ ಮಾಡಲಾಗಿರುವ ಉತ್ಪನ್ನಗಳನ್ನು (ಅವರ ಸಂಘರ್ಷಮಯ ವ್ಯಾಪಾರ ಆರಂಭವಾದ ದಿನಾಂಕ 15.03.2023 ರಿಂದ), ನಮ್ಮ ಸಿಕೆಸಿ ನಿಯಮಗಳ ಅಡಿಯಲ್ಲಿ ಮರು–ಖರೀದಿಗೆ/ವಿನಿಮಯ ಯೋಜನೆಯಲ್ಲಿ ಪರಿಗಣಿಸಲಾಗುವುದಿಲ್ಲ.*

ಶಿಶುಮರಣ ತಡೆಗೆ ಎದೆಹಾಲು ಸಹಕಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಗು ಜನಿಸಿದ ಒಂದು ಗಂಟೆಯೊಳಗಾಗಿ ಎದೆಹಾಲು ಉಣಿಸಿದಲ್ಲಿ ಶಿಶುಮರಣದ ಪ್ರಮಾಣವನ್ನು ಶೇಕಡ 20ರಷ್ಟು ತಗ್ಗಿಸಬಹುದು' ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಇಲಾಖೆ ಹಮ್ಮಿಕೊಂಡಿರುವ ಸ್ತನ್ಯಪಾನ ಸಪ್ತಾಹಕ್ಕೆ ಚಾಲನೆ ದೊರೆತಿದ್ದು, ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿದೆ. 'ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡಲು ತಾಯಿಯ ಎದೆಹಾಲು ಸಹಕಾರಿ. ಇದರಿಂದ ರೋಗ ನಿರೋಧಕ ಶಕ್ತಿ ಮಗುವಿನಲ್ಲಿ ಹೆಚ್ಚಳವಾಗಲಿದೆ. ಎದೆಹಾಲಿನಲ್ಲಿ ಮಗುವಿನ ಬೆಳವಣಿಗೆಗೆ ಬೇಕಾದ ಪೌಷ್ಟಿಕತೆ, ಖನಿಜಾಂಶ ಮತ್ತು ಹೇರಳವಾದ ನೀರಿನ ಅಂಶಗಳು ಅಡಕವಾಗಿವೆ. ಮಗುವಿಗೆ ಇದು ಮೊದಲ ಲಸಿಕೆಯಾಗಲಿದೆ. ಮೊದಲ ಮೂರು ದಿನದ ಹಾಲಿನಲ್ಲಿ ಹೆಚ್ಚು ರೋಗ ನಿರೋಧಕಗಳಿರಲಿದ್ದು, ಮಗುವಿನಲ್ಲಿ ರೋಗ ಪ್ರತಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಅದೇ ರೀತಿ, ಸೋಂಕುಗಳಿಂದ ರಕ್ಷಣೆ ನೀಡುತ್ತದೆ. ಜನಿಸಿದ ಒಂದು ಗಂಟೆಯೊಳಗೆ ಹಾಲುಣಿಸಲು ಪ್ರಾರಂಭಿಸಿ, ಆರು ತಿಂಗಳವರೆಗೆ ಎದೆಹಾಲನ್ನು ಮಾತ್ರ ನೀಡಬೇಕು' ಎಂದು ಇಲಾಖೆ ಹೇಳಿದೆ.

'ಸ್ತನ್ಯಪಾನದಿಂದ ಶಿಶು ಮರಣ ತಪ್ಪಿಸಲು ಸಾಧ್ಯವಾಗುತ್ತದೆ. ತಾಯಿಯ ಎದೆ ಹಾಲಿನಷ್ಟು ಪೋಷಕಾಂಶಭರಿತ ಆಹಾರ ಭೂಮಿಯ ಮೇಲೆ ಬೇರೆ ಇಲ್ಲ. ಇದನ್ನು ಕೃತಕವಾಗಿ ಸೃಷ್ಟಿಸಲು ಸಾಧ್ಯವಿಲ್ಲ. ಮಗುವಿಗೆ ನೀಡುವ ಚುಚ್ಚುಮದ್ದಿಗಿಂತ ಇದು ಹೆಚ್ಚು ಶಕ್ತಿಶಾಲಿ' ಎಂದು ತಿಳಿಸಿದೆ.

'ಸ್ತನ್ಯಪಾನ ಮಕ್ಕಳ ಮೇಲೆ ಹೆಚ್ಚಿನ ಸಕಾರಾತ್ಮ ಪರಿಣಾಮ ಬೀರಲಿದ್ದು, ತಾಯಿ ಮತ್ತು ಮಗುವಿನ ಮಧ್ಯದ ಬಾಂಧವ್ಯ ಬಲಗೊಳ್ಳಲು ಸಹಕಾರಿ. ಸಾಂಕ್ರಾಮಿಕ ರೋಗಗಳಿಂದ ಮಕ್ಕಳನ್ನು ರಕ್ಷಿಸಲು ಸೂಕ್ತ ಮುನ್ನೆಚ್ಚರಿಕೆಯೊಂದಿಗೆ ತಾಯಂದಿರು ನವಜಾತ ಶಿಶುಗಳಿಗೆ ಸ್ತನ್ಯಪಾನ ಮಾಡಿಸಬೇಕು' ಎಂದು ಸೂಚಿಸಿದೆ.

ಐಸಿಎಆರ್–ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು–560 030
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ

ದಿನಾಂಕ: 31.07.2024

ಎನ್‌ಐಎಎನ್‌ಪಿ/ಎಡಿವಿ–ಪ್ರಾಜೆಕ್ಟ್–9–ಎಸ್ಟಾ/2024

ಕ್ಲೈಮೇಟ್ ರೆಸಿಲಿಯಂಟ್ ಅಗ್ರಿಕಲ್ಚರ್ ಮೇಲಿನ ರಾಷ್ಟ್ರೀಯ ಆವಿಷ್ಕಾರಗಳ (ಎನ್‌ಐಸಿಆರ್‌ಎ) ಯೋಜನೆ ಅಡಿಯಲ್ಲಿನ ಒಂದು ಸೀನಿಯರ್ ರಿಸರ್ಚ್ ಫೆಲೊ ಹುದ್ದೆಗಾಗಿ ಅರ್ಜಿಗಳನ್ನು ಸ್ವೀಕರಿಸುವ ದಿನಾಂಕವನ್ನು 16–08–2024 ರವರೆಗೆ ವಿಸ್ತರಿಸಲಾಗಿದೆ.
ಅರ್ಹತೆ ಸಂಭಾವನೆ ಇತ್ಯಾದಿ ವಿವರಗಳು, ಸಂಸ್ಥೆಯ www.nianp.res.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಸಹಿ/– ಆಡಳಿತಾಧಿಕಾರಿ

ನೈಸ್ ವಿರುದ್ಧ ಕ್ರಮಕ್ಕೆ ಚಿಂತನೆ

ಟೋಲ್ ದರ ಹೆಚ್ಚಳ: ಕಾನೂನು ಸಲಹೆ ಪಡೆಯಲು ಮುಂದಾದ ಪಿಡಬ್ಲ್ಯುಡಿ

• ನವೀನ್ ಮಿನೇಜಸ್

ಬೆಂಗಳೂರು: ಲೋಕೋಪಯೋಗಿ ಇಲಾಖೆಯಿಂದ (ಪಿಡಬ್ಲ್ಯುಡಿ) ಅನುಮತಿ ಪಡೆಯದೇ ನೈಸ್ ರಸ್ತೆಯಲ್ಲಿ ಟೋಲ್ ದರಗಳನ್ನು ಹೆಚ್ಚಿಸಿರುವ ನಂದಿ ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ (ನೈಸ್) ಲಿಮಿಟೆಡ್ ವಿರುದ್ಧ ಮುಂದಿನ ಕ್ರಮ ಕೈಗೊಳ್ಳುವುದಕ್ಕಾಗಿ ಕಾನೂನು ಸಲಹೆ ಪಡೆಯಲು ಲೋಕೋಪಯೋಗಿ ಇಲಾಖೆ (ಪಿಡಬ್ಲ್ಯುಡಿ) ನಿರ್ಧರಿಸಿದೆ.

ಟೋಲ್ ದರ ಹೆಚ್ಚಿಸುವ ಉದ್ದೇಶವನ್ನು ಇಲಾಖೆಗೆ ತಿಳಿಸದೇ, ಪರಿಷ್ಕೃತ ದರದ ಮಾಹಿತಿಯನ್ನು ಹಂಚಿಕೊಳ್ಳದೇ ಪೆರಿಫೆರಲ್ ಮತ್ತು ಲಿಂಕ್ ರಸ್ತೆಗಳಿಗೆ ದರ ಹೆಚ್ಚಿಸಲಾಗಿದೆ. ಟೋಲ್ ದರ ಪರಿಷ್ಕರಣೆಯಲ್ಲಿ ಈ ಖಾಸಗಿ ಸಂಸ್ಥೆಯು ಇಲಾಖೆಯೊಂದಿಗಿನ ಒಪ್ಪಂದವನ್ನು ಉಲ್ಲಂಘನೆ ಮಾಡಿದೆ ಇಲಾಖೆಯ ಮೂಲಗಳು ಹೇಳಿವೆ.

ಟೋಲ್ ದರದ ಬಗ್ಗೆ ನೈಸ್ ಸಂಸ್ಥೆಯು 2020ರಲ್ಲಿ ಕರ್ನಾಟಕ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. ಈ ಒಪ್ಪಂದದ ಪ್ರಕಾರ ದರ ಪರಿಷ್ಕರಣೆ ಮಾಡುವ ಸಂದರ್ಭದಲ್ಲಿ ಅದರ ವಿವರಗಳನ್ನು ಪಿಡಬ್ಲ್ಯುಡಿಗೆ ತಿಳಿಸಿ, ಒಪ್ಪಿಗೆ ಪಡೆಯಬೇಕು. ಅನುಮತಿಗಾಗಿ ಅರ್ಜಿ ಸಲ್ಲಿಸಿ 30 ದಿನಗಳಲ್ಲಿ ಇಲಾಖೆಯಿಂದ ಯಾವುದೇ ಪ್ರತಿಕ್ರಿಯೆ ಬಾರದೇ ಇದ್ದರೆ ಮಾತ್ರ ನೇರವಾಗಿ ದರ ಹೆಚ್ಚಿಸಲು ಅವಕಾಶ ನೀಡಲಾಗಿದೆ. ಆದರೆ, ನೈಸ್ ಸಂಸ್ಥೆಯು ಪಿಡಬ್ಲ್ಯುಡಿ ಜತೆಗೆ ಯಾವುದೇ ಸಂವಹನ ನಡೆಸಿಲ್ಲ ಎಂದು ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಜುಲೈ 1ರಿಂದ 44 ಕಿಲೋಮೀಟರ್ ಉದ್ದದ ಏಳು ರಸ್ತೆಗಳಲ್ಲಿ ನೈಸ್ ಸಂಸ್ಥೆಯು ಕಾರುಗಳಿಗೆ ₹ 5ರಿಂದ ₹ 10 ವರೆಗೆ ಟೋಲ್ ಶುಲ್ಕ ಹೆಚ್ಚಳ ಮಾಡಿದೆ. 9 ಕಿ.ಮೀ. ಉದ್ದದ ಹೊಸೂರು ರಸ್ತೆ–ಬನ್ನೇರುಘಟ್ಟ ರಸ್ತೆಯಲ್ಲಿ ₹ 10 ಹೆಚ್ಚಳ ಮಾಡಿರುವುದರಿಂದ ಕಾರುಗಳಿಗೆ ಟೋಲ್ ₹ 60ಕ್ಕೇರಿದೆ. ಬನ್ನೇರುಘಟ್ಟ ರಸ್ತೆ–ಕನಕಪುರ ರಸ್ತೆ ಮಧ್ಯದ 6.79 ಕಿ.ಮೀ.ಗೆ ₹ 5 ಹೆಚ್ಚಳವಾಗಿದೆ. ₹ 40 ಇದ್ದ ದರವು ಪರಿಷ್ಕೃತಗೊಂಡ ಬಳಿಕ ₹ 45ಕ್ಕೇರಿದೆ. ದ್ವಿಚಕ್ರ ವಾಹನಗಳ ಟೋಲ್ ದರದಲ್ಲಿ ಯಾವುದೇ ಏರಿಕೆಯಾಗಿಲ್ಲ.

ನೈಸ್ ರಸ್ತೆಯನ್ನು ವೈಜ್ಞಾನಿಕವಾಗಿ ನಿರ್ಮಿಸದೇ ಇರುವ ಬಗ್ಗೆ, ಒಪ್ಪಂದವನ್ನು ಅನುಸರಿಸದೇ ಇರುವ ಬಗ್ಗೆ 2016ರ ಫೆಬ್ರುವರಿಯಲ್ಲಿ ನೈಸ್ ಸಂಸ್ಥೆಗೆ ಪಿಡಬ್ಲ್ಯುಡಿ ನೋಟಿಸ್ ನೀಡಿತ್ತು. ಅದನ್ನು ನೈಸ್ ಸಂಸ್ಥೆಯು ಹೈಕೋರ್ಟ್‌ನಲ್ಲಿ ಪ್ರಶ್ನಿಸಿತ್ತು. ಈ ಪ್ರಕರಣದ ವಿಚಾರಣೆ ನಡೆಯುತ್ತಿದ್ದು, ಇದೇ ಸಮಯದಲ್ಲಿ ದರ ಪರಿಷ್ಕರಣೆ ನಡೆದಿದೆ.

ಎಂಟು ವರ್ಷಗಳಿಂದ ಹೈಕೋರ್ಟ್‌ನಲ್ಲಿ ವಿಚಾರಣೆ ಬಾಕಿ ಇರುವಾಗ ನೈಸ್ ಕಂಪನಿಯು ಹಲವು ಬಾರಿ ಟೋಲ್ ದರ ಹೆಚ್ಚಳ ಮಾಡಿದ್ದರೂ ಸರ್ಕಾರವು ಕಂಪನಿ ಮೇಲೆ ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ.

ಈ ಬಾರಿ ಜುಲೈಯಲ್ಲಿ ದರ ಹೆಚ್ಚಳ ಮಾಡುವ ಮೊದಲು ನೈಸ್ ಸಂಸ್ಥೆಯು ಟೋಲ್ ಶುಲ್ಕದ ಮೂಲಕ ದಿನಕ್ಕೆ ₹ 1.5 ಕೋಟಿ ಸಂಗ್ರಹ ಮಾಡುತ್ತಿತ್ತು. ಇನ್ನು ಸುಂಕ ಸಂಗ್ರಹ ಇನ್ನಷ್ಟು ಹೆಚ್ಚಳವಾಗಲಿದೆ.

ದರ ಹೆಚ್ಚಳದ ಬಗ್ಗೆ ಪ್ರತಿಕ್ರಿಯೆಗೆ ನೈಸ್ ಕಂಪನಿಯ ಪ್ರತಿನಿಧಿಗಳು ಲಭ್ಯರಾಗಿಲ್ಲ.

ಕೆಲವು ಸಚಿವರ ಕಾರ್ಯವೈಖರಿಗೆ ಸಭೆಯಲ್ಲಿ ಅಸಮಾಧಾನ

ಬಿಜೆಪಿ ಹಗರಣಗಳ ಮಾಹಿತಿ ಕೇಳಿದ ಹೈಕಮಾಂಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ಅವಧಿಯಲ್ಲಿ ಭಾರೀ ಭ್ರಷ್ಟಾಚಾರ ಪ್ರಕರಣಗಳು ನಡೆದರೂ ಇನ್ನೂ ಯಾಕೆ ಕ್ರಮ ತೆಗೆದುಕೊಂಡಿಲ್ಲ. ಬಿಟ್ ಕಾಯಿನ್, ಕೋವಿಡ್, ಪಿಎಸ್‌ಐ ಅಕ್ರಮ ನೇಮಕಾತಿ ಸೇರಿದಂತೆ ಹಲವು ಪ್ರಕರಣಗಳ ತನಿಖೆ ಎಲ್ಲಿಗೆ ಬಂದುವು' ಎಂದು ಸಚಿವರನ್ನು ಕಾಂಗ್ರೆಸ್ ವರಿಷ್ಠರು ಪ್ರಶ್ನಿಸಿದ್ದಾರೆ.

ಮುಖ್ಯಮಂತ್ರಿ ನಿವಾಸದಲ್ಲಿ ಸಚಿವರ ಜೊತೆ ಭಾನುವಾರ ಸಭೆ ನಡೆಸಿದ ಎಐಸಿಸಿ ನಾಯಕರಾದ ಕೆ.ಸಿ. ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲ, 'ಬಸವರಾಜ ಬೊಮ್ಮಾಯಿ, ಡಾ.ಕೆ. ಸುಧಾಕರ್, ಅಶ್ವತ್ಥನಾರಾಯಣ ವಿರುದ್ಧ ಗಂಭೀರ ಆರೋಪಗಳಿವೆ. ವಿಜಯೇಂದ್ರ, ಅಶೋಕ ವಿರುದ್ಧವೂ ಭ್ರಷ್ಟಾಚಾರದ ಆರೋಪಗಳಿವೆ. ಆರೋಪಗಳನ್ನು ಸಾಬೀತುಪಡಿಸುವಂತಹ ದಾಖಲೆಗಳಿದ್ದರೂ ಯಾರ ಮೇಲೂ ಕ್ರಮ ಆಗಿಲ್ಲ. ಬಿಜೆಪಿ ಅವಧಿಯ ಅಕ್ರಮಗಳ ಬಗ್ಗೆ ಯಾಕೆ ಗಟ್ಟಿ ಧ್ವನಿಯಲ್ಲಿ ಮಾತನಾಡುತ್ತಿಲ್ಲ' ಎಂದು ಖಾರವಾಗಿ ಕೇಳಿದ್ದಾರೆ ಎಂದು ಗೊತ್ತಾಗಿದೆ.

'ಮೊದಲು ಈ ಎಲ್ಲ ಹಗರಣಗಳ ತನಿಖೆಯ ವರದಿ ತರಿಸಿಕೊಳ್ಳಿ. ಆ ವರದಿಗಳ ಮೇಲೆ ಕ್ರಮ ಆಗಲೇಬೇಕು. ನೀವು ಕ್ರಮ ತೆಗೆದುಕೊಳ್ಳುತ್ತಿದ್ದರೆ ಬಿಜೆಪಿಯವರು ಪಾದಯಾತ್ರೆ ಹಮ್ಮಿಕೊಳ್ಳುತ್ತಿರಲಿಲ್ಲ. ಸಿ.ಎಂ, ಡಿಸಿಎಂ ಮಾತ್ರ ಮಾತನಾಡುವುದಲ್ಲ. ಬಿಜೆಪಿ, ಜೆಡಿಎಸ್ ಕಾಲದ ಹಗರಣಗಳ ಬಗ್ಗೆ ಎಲ್ಲ ಸಚಿವರು ಮಾತನಾಡಿ' ಎಂದು ತಾಕೀತು ಮಾಡಿದ್ದಾರೆ ಎನ್ನಲಾಗಿದೆ.

ಸುದ್ದಿ 2 ನಿಮಿಷ

ಬುಕ್ ಬ್ರಹ್ಮ: ₹2 ಲಕ್ಷ ನಗದಿನ ಸಾಹಿತ್ಯ ಪುರಸ್ಕಾರ ಸ್ಥಾಪನೆ

ಬೆಂಗಳೂರು: ಭಾರತೀಯ ಭಾಷೆಗಳಲ್ಲಿ ಸಾಹಿತ್ಯ ಸೃಷ್ಟಿಸಿ, ಮಹತ್ವದ ಕೊಡುಗೆ ನೀಡಿದ ಸಾಹಿತಿಗಳಿಗೆ ಗೌರವ ಸಲ್ಲಿಸಲು ಬುಕ್ ಬ್ರಹ್ಮ ಸಂಸ್ಥೆಯು 'ಬುಕ್ ಬ್ರಹ್ಮ ಸಾಹಿತ್ಯ ಪುರಸ್ಕಾರ' ಸ್ಥಾಪಿಸಿದೆ.

ಸಂಸ್ಥೆಯು ಪ್ರತಿ ವರ್ಷ ನೀಡಲು ನಿರ್ಧರಿಸಿರುವ ಈ ಪುರಸ್ಕಾರವು ₹ 2 ಲಕ್ಷ ನಗದು, ಫಲಕ ಹಾಗೂ ಪುಸ್ತಕದ ಉಡುಗೊರೆ ಒಳಗೊಂಡಿದೆ. ಪ್ರತಿ ವರ್ಷ ಒಂದೊಂದು ಭಾರತೀಯ ಭಾಷೆಯ ಸಾಹಿತಿಗಳಿಗೆ ಈ ಪುರಸ್ಕಾರವನ್ನು 'ಬುಕ್ ಬ್ರಹ್ಮ ಸಾಹಿತ್ಯ ಉತ್ಸವ'ದಲ್ಲಿ ನೀಡಲಾಗುತ್ತದೆ. ಪ್ರಶಸ್ತಿ ಆಯ್ಕೆಗೆ ಸಂಬಂಧಿಸಿದಂತೆ ಆಯಾ ಭಾಷೆಯ ಸಾಹಿತಿಗಳನ್ನು ಒಳಗೊಂಡ ಆಯ್ಕೆ ಸಮಿತಿ ರಚಿಸಲಾಗುತ್ತದೆ ಎಂದು ಸಂಸ್ಥೆ ತಿಳಿಸಿದೆ.

ಇದೇ 9 ರಿಂದ 11ರವರೆಗೆ ಕೋರಮಂಗಲದ ಸೇಂಟ್ ಜಾನ್ಸ್ ಸಭಾಂಗಣದಲ್ಲಿ 'ಬುಕ್ ಬ್ರಹ್ಮ ಸಾಹಿತ್ಯ ಉತ್ಸವ' ನಡೆಯಲಿದೆ. ಇದೇ ಉತ್ಸವದಲ್ಲಿ ಈ ವರ್ಷದ 'ಬುಕ್ ಬ್ರಹ್ಮ ಸಾಹಿತ್ಯ ಪುರಸ್ಕಾರ' ಪಡೆಯುವ ಸಾಹಿತಿಯ ಹೆಸರನ್ನು ಘೋಷಣೆ ಮಾಡಿ, ಪುರಸ್ಕರಿಸಲಾಗುವುದು ಎಂದು ಸಂಸ್ಥೆ ಹೇಳಿದೆ.

ಮೂರು ದಿನದ ಉತ್ಸವದಲ್ಲಿ ಗೋಷ್ಠಿಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಇದೇ ಉತ್ಸವದಲ್ಲಿ 'ಬುಕ್ ಬ್ರಹ್ಮ ಕಾದಂಬರಿ ಪುರಸ್ಕಾರ'ವನ್ನು ತಮಿಳಿನ ಸಾಹಿತಿ ಪೆರುಮಾಳ್ ಮುರುಗನ್, 'ಬುಕ್ ಬ್ರಹ್ಮ ಸ್ವಾತಂತ್ರ್ಯೋತ್ಸವ ಕಥಾ ಸ್ಪರ್ಧೆ' ವಿಜೇತರಿಗೆ ಮಲಯಾಳಂ ಲೇಖಕ ಬೆನ್ಯಮಿನ್ ಅವರು ಬಹುಮಾನಗಳನ್ನು ವಿತರಿಸುತ್ತಾರೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ನೀಟ್ ರೋಲ್ ನಂಬರ್ ದಾಖಲಿಸಲು 5ರಿಂದ ಅವಕಾಶ

ಬೆಂಗಳೂರು: ಈಗಾಗಲೇ ಯುಜಿ-ಸಿಇಟಿಗೆ ಅರ್ಜಿ ಸಲ್ಲಿಸಿರುವ, ನೀಟ್ ಪರೀಕ್ಷೆಯಲ್ಲಿ ಅರ್ಹತೆ ಪಡೆದಿರುವ ಅಭ್ಯರ್ಥಿಗಳು ತಮ್ಮ ನೀಟ್ ರೋಲ್ ನಂಬರ್ ದಾಖಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಸೋಮವಾರ ಲಿಂಕ್ ಬಿಡುಗಡೆ ಮಾಡಲಿದೆ.

'ಆ. 5ರಂದು ಬೆಳಿಗ್ಗೆ 11ಕ್ಕೆ ಕೆಇಎ ವೆಬ್‌ಸೈಟ್‌ನಲ್ಲಿ ಯುಜಿ ನೀಟ್ -2024 ಲಿಂಕ್ ಬಿಡುಗಡೆ ಮಾಡಲಾಗುವುದು. 7ರಂದು ಬೆಳಿಗ್ಗೆ 11ರವರೆಗೆ ರೋಲ್ ನಂಬರ್ ದಾಖಲಿಸಬಹುದು' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಅಭ್ಯರ್ಥಿಗಳು ದಾಖಲಿಸುವ ರೋಲ್ ನಂಬರ್ ಅನ್ನು ಎನ್‌ಟಿಎ ಡಾಟಾದೊಂದಿಗೆ ತಾಳೆ ಮಾಡಿ ಯುಜಿ ನೀಟ್ ಅರ್ಹತೆ ಪಡೆದಿದ್ದಲ್ಲಿ ಅರ್ಜಿ ನಮೂನೆ ಪ್ರತಿ ತೆಗೆದುಕೊಳ್ಳಲು ಅವಕಾಶ ನೀಡಲಾಗುತ್ತದೆ. ನಂತರ ವೆರಿಫಿಕೇಷನ್ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದಿದ್ದಾರೆ.

ಹೊಸದಾಗಿ ಅರ್ಜಿ ಸಲ್ಲಿಸಲು 7ರಿಂದ ಅವಕಾಶ: ನೀಟ್ ಪರೀಕ್ಷೆಯಲ್ಲಿ ಅರ್ಹತೆ ಪಡೆದಿದ್ದು, ಇನ್ನೂ ಅರ್ಜಿ ಸಲ್ಲಿಸದವರು ಆ.7ರಿಂದ 9ರವರೆಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ಕೆಇಎ ವೆಬ್ ಸೈಟ್ ವೀಕ್ಷಿಸಬಹುದು ಎಂದು ಅವರು ತಿಳಿಸಿದ್ದಾರೆ.

ಕೆಇಎ: ವೈದ್ಯಕೀಯ ಅರ್ಹತಾ ಪಟ್ಟಿ ಪ್ರಕಟ

ಬೆಂಗಳೂರು: ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ, ಯುನಾನಿ ಮತ್ತು ಹೋಮಿಯೋಪಥಿ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹತೆ ಪಡೆದು, ರಾಜ್ಯದವರೆಂದು ಕ್ಲೇಮ್ ಮಾಡಿರುವ 92,858 ಅಭ್ಯರ್ಥಿಗಳ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಪಟ್ಟಿಯಲ್ಲಿ ಅತೀ ಹೆಚ್ಚು ಅಂಕ (716) ಪಡೆದ ಪದ್ಮನಾಭ ಮೆನನ್ ಮೊದಲ ಸ್ಥಾನದಲ್ಲಿದ್ದಾರೆ. ಅತಿ ಕಡಿಮೆ ಅಂದರೆ 127 ಅಂಕ ಪಡೆದವರೂ ಈ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹತೆ ಪಡೆದಿದ್ದಾರೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ವೈದ್ಯಕೀಯ ಕೋರ್ಸ್‌ಗೆ ಅರ್ಹತೆ ಪಡೆದು ಇನ್ನೂ ಅರ್ಜಿ ಸಲ್ಲಿಸದೇ ಇರುವವರಿಗೆ ಒಂದೆರಡು ದಿನಗಳಲ್ಲಿ ಹೊಸದಾಗಿ ನೋಂದಣಿ ಮಾಡಿಕೊಳ್ಳಲು ಲಿಂಕ್ ಬಿಡುಗಡೆ ಮಾಡಲಾಗುವುದು. ಬಳಿಕ ನೀಟ್ ಅಂಕ ದಾಖಲಿಸಲು ಎಲ್ಲ ಅರ್ಹರಿಗೂ ಅವಕಾಶ ನೀಡಲಾಗುವುದು ಎಂದೂ ಅವರು ವಿವರಿಸಿದ್ದಾರೆ.

ಪತ್ರಕರ್ತೆ ಸೀತಾದೇವಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘದಿಂದ ನೀಡಲಾಗುವ 2024ನೇ ಸಾಲಿನ ನಾಗಮಣಿ ಎಸ್. ರಾವ್ ದತ್ತಿ ಪ್ರಶಸ್ತಿಗೆ ಪತ್ರಕರ್ತೆ ಎಚ್.ಎಲ್. ಸೀತಾದೇವಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ₹10 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಇದೇ ತಿಂಗಳ 11ರಂದು ಬಸವನಗುಡಿಯ ಅಬಲಾಶ್ರಮದ ವೇದಿಕೆಯಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಎಚ್.ಎಲ್. ಸೀತಾದೇವಿ

ಎಚ್.ಎಲ್. ಸೀತಾದೇವಿ ಅವರು ದೀರ್ಘಕಾಲ ಕನ್ನಡ ಪ್ರಭ ಪತ್ರಿಕೆಯಲ್ಲಿ ಕಾರ್ಯನಿರ್ವಹಿಸಿದ್ದರು. ಕನ್ನಡ ಪತ್ರಿಕಾ ಕ್ಷೇತ್ರ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿರುವ ಅವರ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪಾ ತಿಳಿಸಿದ್ದಾರೆ.

'ಒಗ್ಗಟ್ಟಿನ ಪರಿಸರ ನಿರ್ಮಿಸಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕವೆಂದು ಪ್ರತ್ಯೇಕವಾಗಿ ಕಾಣದೆ, ಎಲ್ಲ ಭಾಗದ ಜನರು ಒಟ್ಟಾಗಿ ಸಾಗುವ ಪರಿಸರವನ್ನು ನಿರ್ಮಾಣ ಮಾಡಬೇಕು' ಎಂದು ಚಲನಚಿತ್ರ ನಿರ್ದೇಶಕ ಬಿ. ಸುರೇಶ್ ತಿಳಿಸಿದರು.

ವೀರಲೋಕ ಪ್ರಕಾಶನ ನಗರದಲ್ಲಿ ಭಾನುವಾರ ಹಮ್ಮಿಕೊಂಡ 'ಉತ್ತರ ಪರ್ವ' ಕಾರ್ಯಕ್ರಮದಲ್ಲಿ ಉತ್ತರ ಕರ್ನಾಟಕ ಭಾಗದ ಲೇಖಕರ ಹತ್ತು ಕೃತಿಗಳನ್ನು ಬಿಡುಗಡೆ ಮಾಡಿ, ಮಾತನಾಡಿದರು.

'ಕರ್ನಾಟಕದ ಎಲ್ಲ ಭಾಗದ ಜನರು ಒಟ್ಟಾಗಿ ಸಾಗಬೇಕಾದದ್ದು ಈ ಸಂದರ್ಭದ ಅಗತ್ಯವೂ ಹೌದು. ಇದಕ್ಕೆ ಪೂರಕವಾಗಿ ಈ ಭಾಗದ ಲೇಖಕರ ಪುಸ್ತಕಗಳು ಉತ್ತರ ಕರ್ನಾಟಕದಲ್ಲಿ, ಅಲ್ಲಿನ ಲೇಖಕರ ಪುಸ್ತಕಗಳು ದಕ್ಷಿಣ ಕರ್ನಾಟಕದಲ್ಲಿ ಬಿಡುಗಡೆಯಾಗಬೇಕು. ಇಂದರಿಂದ ಬಾಂಧವ್ಯ ಗಟ್ಟಿಗೊಳ್ಳಲಿದೆ. ಕರ್ನಾಟಕದ ಏಕೀಕರಣದ ಬೀಜ ಬಿತ್ತಿದವರೇ ಉತ್ತರ ಕರ್ನಾಟಕದವರು. ಪಾಟೀಲ ಪುಟ್ಟಪ್ಪ,- ಹುಯಿಲಗೋಳ ನಾರಾಯಣರಾವ್ ಮೊದಲಾದವರು ಏಕೀಕರಣದ ಹೋರಾಟದಲ್ಲಿ ಮುಂಚೂಣಿಯಲ್ಲಿ ಇದ್ದರು' ಎಂದು ಹೇಳಿದರು.

ಕತೆಗಾರ ಕರ್ಕಿ ಕೃಷ್ಣಮೂರ್ತಿ, 'ಸಮಾಜದ ಸ್ವಾಸ್ಥ್ಯ ಕಾಪಾಡುವ ಪುಸ್ತಕಗಳ ಅಗತ್ಯವಿದೆ. ಪ್ರಕಟಣೆಗೆ ಸಂಬಂಧಿಸಿದಂತೆ ಸಂಖ್ಯೆಗೆ ಆದ್ಯತೆ ನೀಡದೆ, ಗುಣಮಟ್ಟಕ್ಕೆ ಆದ್ಯತೆ ನೀಡಬೇಕು' ಎಂದು ತಿಳಿಸಿದರು.

ಬಿಡುಗಡೆಯಾದ ಪುಸ್ತಕಗಳು: ಕಾರ್ಯಕ್ರಮದಲ್ಲಿ ಶೆಕ್ಷಾವಲಿ ಮಣೆಗಾರ್ ಅವರ 'ಆ ವದನ', ಮುರ್ತುಜಾಬೇಗಂ ಕೊಡಗಲಿ ಅವರ 'ಪರಸ್ಪರ ಮತ್ತಿತರ ಕತೆಗಳು', ಸದಾಶಿವ ದೊಡ್ಡಮನಿ ಅವರ 'ಇರುಳ ಬಾಗಿಲಿಗೆ ಕಣ್ಣದೀಪ', ರವೀಂದ್ರ ಮುದ್ದಿ ಅವರ 'ವರದಾ ತೀರದ ಕಥೆಗಳು', ಸಿ.ವಿ. ವಿರುಪಾಕ್ಷ ಅವರ 'ಖದೀಜಾ', ಶ್ರೀಧರ ಗಸ್ತಿ ಅವರ 'ಚಂದ್ರಾ ಲೇಔಟ್', ಪ್ರಕಾಶ ಗಿರಿಮಲ್ಲನವರ ಅವರ 'ಜನನಾಯಕ', ಬಿ.ಜೆ. ಪಾರ್ವತಿ ವಿ. ಸೋನಾರೆ ಅವರ 'ಓಡಿ ಹೋದಾಕಿ' ಕವಿತಾ ಹೆಗಡೆ ಅಭಯಂ ಅವರ 'ಇತ್ತ ಹಾಯಲಿ ಚಿತ್ತ' ಹಾಗೂ ಸವ್ಯ ಆರ್. ಕತ್ತಿ ಅವರ 'ಮಾಯಾಗುಹೆ' ಪುಸ್ತಕಗಳು ಬಿಡುಗಡೆಯಾದವು.

ವೀರಲೋಕ ಸಂಸ್ಥೆಯ ಪ್ರಕಾಶಕ ವೀರಕಪುತ್ರ ಶ್ರೀನಿವಾಸ, 'ಉತ್ತರ ಪರ್ವ'ದ ಸಂಪಾದಕ ರಾಜಶೇಖರ ಮಠಪತಿ (ರಾಗಂ), ಕತೆಗಾರ ಮಧು ವೈ.ಎನ್. ಉಪಸ್ಥಿತರಿದ್ದರು.

ಯಾದಗಿರಿಯಲ್ಲಿ ವಂದೇಭಾರತ್ ನಿಲುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಂವಿಟಿ ಬೆಂಗಳೂರು–ಕಲಬುರಗಿ ವಂದೇಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಯಾದಗಿರಿಯಲ್ಲಿ ನಿಲುಗಡೆಗೆ ಶನಿವಾರ ರಾತ್ರಿ ನಗರದಲ್ಲಿ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ವರ್ಚುವಲ್ ಮೂಲಕ ಚಾಲನೆ ನೀಡಿದರು.

ಎಸ್‌ಎಂವಿಟಿ ಬೆಂಗಳೂರು–ಕಲಬುರಗಿ ವಂದೇಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಯಾದಗಿರಿಯಲ್ಲಿ ನಿಲುಗಡೆಗೆ ಶನಿವಾರ ರಾತ್ರಿ ನಗರದಲ್ಲಿ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ವರ್ಚುವಲ್ ಮೂಲಕ ಚಾಲನೆ ನೀಡಿದರು.

ಕರ್ನಾಟಕದಲ್ಲಿ ರೈಲ್ವೆ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ 2024-25ನೇ ಆರ್ಥಿಕ ವರ್ಷದ ಬಜೆಟ್‌ನಲ್ಲಿ ₹ 7,560 ಕೋಟಿ ಅನುದಾನ ನೀಡಲಾಗಿದೆ. ಇದು 2009-14ರ ಅವಧಿಯ ವಾರ್ಷಿಕ ಸರಾಸರಿ ಅನುದಾನಕ್ಕಿಂತ 9 ಪಟ್ಟು ಹೆಚ್ಚಾಗಿದೆ. ರಾಜ್ಯದ ಎಲ್ಲ ಪ್ರಮುಖ ಮಾರ್ಗಗಳನ್ನು ದ್ವಿಪಥವಾಗಿ ಮೇಲ್ದರ್ಜೆಗೇರಿಸಲಾಗುವುದು ಎಂದರು.

ರಾಜ್ಯದ ಶೇ 90ರಷ್ಟು ರೈಲು ಮಾರ್ಗಗಳನ್ನು ವಿದ್ಯುದ್ದೀಕರಣಗೊಳಿಸಲಾಗಿದೆ. ಲೆವೆಲ್ ಕ್ರಾಸಿಂಗ್ ಮುಚ್ಚಲು 2014ರಿಂದ ಇಲ್ಲಿವರೆಗೆ ರಾಜ್ಯದಲ್ಲಿ 534 ಮೇಲ್ಸೇತುವೆ, ಕೆಳ ಸೇತುವೆಗಳನ್ನು ನಿರ್ಮಾಣ ಮಾಡಲಾಗಿದೆ. ರಾಜ್ಯದಲ್ಲಿ ₹ 2,900 ಕೋಟಿ ವೆಚ್ಚದಲ್ಲಿ 59 ರೈಲು ನಿಲ್ದಾಣಗಳ ನವೀಕರಣ ಕಾಮಗಾರಿಗಳು ನಡೆಯುತ್ತಿವೆ. ₹ 7.5 ಕೋಟಿ ವೆಚ್ಚದಲ್ಲಿ ಯಾದಗಿರಿ ನಿಲ್ದಾಣವನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ. ರಾಯಚೂರು ನಿಲ್ದಾಣವನ್ನು ಉನ್ನತೀಕರಿಸಲು ₹ 12.5 ಕೋಟಿ ಅನುದಾನ ಒದಗಿಸಲಾಗಿದೆ ಎಂದು ಮಾಹಿತಿ ನೀಡಿದರು.

10 ವರ್ಷಗಳಲ್ಲಿ ರೈಲ್ವೆಯಲ್ಲಿ ಐದು ಲಕ್ಷ ಉದ್ಯೋಗಗಳನ್ನು ನೀಡಲಾಗಿದೆ. ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕಗೊಳಿಸಲಾಗಿದೆ. ಸಾಮಾನ್ಯ ವರ್ಗದ ಜನರ ಪ್ರಯಾಣಕ್ಕಾಗಿ ದೇಶದಲ್ಲಿ 10 ಸಾವಿರ ಸಾಮಾನ್ಯ ದರ್ಜೆಯ (ಜನರಲ್) ಕೋಚ್‌ಗಳ ನಿರ್ಮಾಣಕ್ಕೆ ರೈಲ್ವೆ ಸಚಿವಾಲಯದಿಂದ ಕಾರ್ಯಯೋಜನೆ ರೂಪಿಸಲಾಗಿದೆ ಎಂದು ವಿವರಿಸಿದರು.

ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಯೋಗೇಶ್ ಮೋಹನ್, ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾದ ಪರೀಕ್ಷಿತ್ ಮೋಹನ್ ಪೂರಿಯಾ ಮತ್ತು ಆಶುತೋಷ್ ಮಾಥುರ್ ಉಪಸ್ಥಿತರಿದ್ದರು. ಯಾದಗಿರಿ ನಿಲ್ದಾಣದಲ್ಲಿ ನಡೆದ ಸ್ಥಳೀಯ ಕಾರ್ಯಕ್ರಮದಲ್ಲಿ ಶಾಸಕ ಶರಣಗೌಡ ಕಂದಕೂರ್, ದಕ್ಷಿಣ ಮಧ್ಯ ರೈಲ್ವೆಯ ಹೆಚ್ಚುವರಿ ಪ್ರಧಾನ ವ್ಯವಸ್ಥಾಪಕ ಧನಂಜಯುಲು, ಗುಂತಕಲ್ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಎಂ. ವಿಜಯ್ ಕುಮಾರ್ ಭಾಗವಹಿಸಿದ್ದರು.

ADMISSION CORNER ಕ್ಲಾಸಿಫೈಡ್ಸ್

MCM
MQI COLLEGE OF MANAGEMENT
Recognised by Govt. of Karnataka
Approved by AICTE, New Delhi
Affiliated to Bengaluru City University
PGCET CODE: B388MB
The Management Congratulates
The Director, Faculty and Students for
Continuously Securing
MBA 100% Result
(All First Class and First-Class Distinctions)
In the 4th Semester Results of 2021 – 23 batch
ADMISSIONS OPEN
for 2024 – 2026 Batch
Avail Merit
SCHOLARSHIP* IN MBA
REGISTER NOW
Last Date:07-08-2024
Registration Link Available at
www.mcm.edu.in
*Merit in MBA Admission Test - MCMAT
Day & Date of MCMAT: Saturday,10 August, 2024
Time: 10:30 – 11:30am Venue: MCM Campus
CAMPUS ADDRESS:
#8, Bore Bank Road, Benson Town,
Bengaluru – 560 046
mqicollegeofmanagement@gmail.com
Website: www.mcm.edu.in
080–48904713 +91 7975961901

SAMBHRAM INSTITUTIONS
ADMISSIONS 2024
FEW SEATS AVAILABLE
OUR PROGRAMS
BE - Computer Science Engg.
BE - Artificial intelligence & ML
BE - Artificial intelligence & DS
BE - Cyber Security
BE - Information Science Engineering
BE - Electronics & Communication Engg.
BE - Mechanical Engineering
BE - Civil Engineering
RANKED AMONG TOP ENGINEERING COLLEGE IN BENGALURU
BBA | BBA Aviation
BCA | B.Com | M.Com
MCA | MBA
Approved by AICTE
Affiliated to VTU / BCU
CET CODE : E113 | COMED K CODE - E114
M S Palya, Jalahalli East, Bengaluru -560097
Email : admissions@sambhram.org
88844 40085 | 92434 58493
www.sambhram.org

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

PROCLAMATION REQUIRING ATTENDANCE OF DEFENDANT
(ORDER V, RULE 20 Of The Code Of Civil Procedure)
IN THE COURT OF SH. VIDYA PRAKASH,
DISTRICT JUDGE, (COMMERCIAL COURT - 02),
ROOM NO. 25, PHC, NDD, NEW DELHI
ROOM NO. 25
CASE NO. CS (COMM.) NO. 69 OF 2023
TITLE :- M/S. G M MODULAR PVT. LTD.
V/S
ARJUN SINGH
TO,
1. ARJUN SINGH, PROPRIETOR,
G M PIPE (INDIA) AT - 811, T.D. LANE,
COTTONPET, BENGALURU,
KARNATAKA - 560053.
WHEREAS above name PLAINTIFF has instituted a commercial suit against you. You are hereby summoned to appear before this court in person or by a pleader on **17.09.2024 at 10:00 AM** to answer the same.
The written statement must be filed within thirty days from the date of receipt of the summons. You are to also file affidavit of admission/ denial off the documents filed by the plaintiff with written statement. It is made clear that any unjustified denial of documents and delay in time lines may lead to an order of costs against the concerned party.
Take notice that, in default of your appearance on that day before mentioned, the suit will be heard and determined in your absence. Given under my hand and the seal of the Court, this 23rd day of JULY, 2024 (Seal)

JOB OPPORTUNITIES

General

WANTED
HOUSEWIVES and
Retired people for part
time job opportunity
in MNC company.
Manager:
8217042937.

PERSONAL

Change of Name

CHANGE OF NAME
I, SHARMILA K @ SHARMILA KRISHNASWAMY @ SHARMILA SHASTRY R/at # 224, 'Sri Hari Krupa', 2nd Main Road, 6th Block, Jayanagar, Bengaluru-560070, declare that all above names belong to me and henceforth I shall be known as SHARMILA SHASTRY vide affidavit dated 30.07.2024, before notary K.P. Sumangala, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH DECCAN HERALD ಪ್ರಜಾವಾಣಿ
Classifieds
More value, more impact
PUBLIC NOTICE
www.dhclassifieds.com
BOOK NOW
BOOK YOUR
PUBLIC NOTICE
ADS IN DH ALL + PRAJAVANI
BENGALURU CITY, ON ALL DAYS
@ 550/-* PER SQCM
*Conditions apply
For more details contact:
+91 9886213331 | +91 9901641752
+91 9845114560 | +91 9731810277

Instagram ನ 50+ ಟೂಲ್‌ಗಳ ಮೂಲಕ ನಿಮ್ಮ ಹರೆಯದವರು ಆನ್‌ಲೈನ್‌ನಲ್ಲಿ ಸುರಕ್ಷಿತವಾಗಿರಲು ಸಹಾಯ ಮಾಡಿ.

ನಿರ್ಬಂಧಿತ ನೇರ ಸಂದೇಶಗಳ,
ಮೂಲಕ, Instagram ನಲ್ಲಿರುವ ಹರೆಯದವರು
ಅವರು ಫಾಲೋ ಮಾಡುವ
ಅಥವಾ ಕನೆಕ್ಟ್ ಆಗಿರುವವರಿಂದ ಮಾತ್ರ ಸಂದೇಶಗಳನ್ನು
ಸ್ವೀಕರಿಸಬಹುದು.

instagram.com/familytools ಇಲ್ಲಿ ನಮ್ಮ 50+
ಟೂಲ್‌ಗಳೊಂದಿಗೆ ಪ್ರಾರಂಭಿಸಿ



ಆನ್‌ಲೈನ್‌ನಲ್ಲಿ ಅರ್ಚನೆಗೆ ಟಿಕೆಟ್ ₹25 ಸಾವಿರ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿಯ ನಿವಾಸಿ ಸಂತೋಷ್ ಕುಮಾರ್ ಎಂಬುವರಿಗೆ ತಿರುಪತಿ ವೆಂಕಟೇಶ್ವರ ದೇಗುಲದಲ್ಲಿ ಅರ್ಚನೆಗೆ ಆನ್‌ಲೈನ್ ಮೂಲಕ ಟಿಕೆಟ್ ಕೊಡಿಸುವುದಾಗಿ ಹೇಳಿ ಅಪರಿಚಿತ ವ್ಯಕ್ತಿಯೊಬ್ಬ ₹25 ಸಾವಿರ ಪಡೆದು ವಂಚನೆ ಮಾಡಿದ್ದಾನೆ.

ಸಂತೋಷ್ ಅವರು ಟಿಟಿಡಿ ವೆಬ್‌ಸೈಟ್ ಪರಿಶೀಲನೆ ನಡೆಸುತ್ತಿದ್ದ ವೇಳೆ ಅಪರಿಚಿತ ವ್ಯಕ್ತಿಯ ಪರಿಚಯವಾಗಿ, ಟಿಕೆಟ್ ಕೊಡಿಸುವುದಾಗಿ ಹೇಳಿ ತನ್ನ ಖಾತೆಗೆ ಹಣ ಹಾಕಿಸಿಕೊಂಡಿದ್ದಾನೆ. ಬಳಿಕ ಫೋನ್ ಸ್ವಿಚ್ ಆಫ್ ಮಾಡಿಕೊಂಡಿದ್ದಾನೆ. ಈ ಬಗ್ಗೆ ಸಂತೋಷ್ ಅವರು ಠಾಣೆಯಲ್ಲಿ ವಂಚನೆ ಪ್ರಕರಣ ದಾಖಲಿಸಿದ್ದಾರೆ.

ಫೋನ್ ಪೇ, ಗೂಗಲ್ ಪೇ ಮೂಲಕ ಬ್ಯಾಂಕ್ ಖಾತೆಗೆ ಹಂತ–ಹಂತವಾಗಿ ಹಣ ವರ್ಗಾವಣೆ

ಉದ್ಯೋಗ ಆಮಿಷ: ₹40 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯೋಗ ಕೊಡಿಸುವುದಾಗಿ ಆಮಿಷವೊಡ್ಡಿ ಆಕಾಂಕ್ಷಿಗಳಿಂದ ₹40 ಲಕ್ಷ ಪಡೆದು ವಂಚಿಸಲಾಗಿದೆ.

ಈ ಬಗ್ಗೆ ಕೇಂದ್ರ ಅಪರಾಧ ವಿಭಾಗ (ಸಿಸಿಬಿ) ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುವ 50 ವರ್ಷದ ವ್ಯಕ್ತಿಯೊಬ್ಬರು ತಮಿಳುನಾಡಿನ ನೆಲ್ಲಿಕುಪ್ಪಂನಲ್ಲಿ ಎಲ್‌ಐಸಿ ಉದ್ಯೋಗಿ ಆಗಿರುವ ಷಣ್ಮುಗರಾಜ್, ವೈಷ್ಣವಿ ಹಾಗೂ ರಾಜೇಶ್ ಚಿಟ್ಟಿ ಎಂಬುವವರ ವಿರುದ್ಧ ಸಿಸಿಬಿ ಪೊಲೀಸರಿಗೆ ದೂರು ನೀಡಿದ್ದಾರೆ.

'ಆರೋಪಿ ಷಣ್ಮುಗರಾಜ್ ಸ್ನೇಹಿತರೊಬ್ಬರ ಮೂಲಕ ಪರಿಚಯವಾಗಿದ್ದ. '2021ರಲ್ಲಿ ಎಲ್‌ಐಸಿ ಕಚೇರಿಯಲ್ಲಿ ಹಲವಾರು ಹುದ್ದೆಗಳು ಖಾಲಿ ಇವೆ. ನನಗೆ ಹಣ ಕೊಟ್ಟರೆ ಎಲ್‌ಐಸಿ ಕಚೇರಿಯಲ್ಲಿ ಕೆಲಸ ಕೊಡಿಸುತ್ತೇನೆ' ಎಂದು ತಿಳಿಸಿದ್ದ. ಇದನ್ನು ನಂಬಿದ್ದ ದೂರುದಾರರು ಹಂತ–ಹಂತವಾಗಿ ₹40 ಲಕ್ಷ ನೀಡಿದ್ದರು' ಎಂದು ಪೊಲೀಸರು ತಿಳಿಸಿದರು.

'ದೂರುದಾರರ ಹೆಂಡತಿ ಹಾಗೂ ಮಾವನ ಮಗಳು ಸೇರಿದಂತೆ ಒಟ್ಟು ಏಳು ಜನರಿಗೆ ಉದ್ಯೋಗ ಕೊಡಿಸುವ ಮಾತುಕತೆ ಆಗಿತ್ತು. 'ನನ್ನ ಸ್ನೇಹಿತನ ಮೂಲಕ ಒಟ್ಟು ₹18 ಲಕ್ಷ ಹಣವನ್ನು ಷಣ್ಮುಗರಾಜ್‌ಗೆ ನೀಡಿದ್ದೆವು. ನಂತರ ಫೋನ್ ಪೇ–, ಗೂಗಲ್ ಪೇ ಮೂಲಕ ಆರೋಪಿಯ ಬ್ಯಾಂಕ್ ಖಾತೆಗೆ ಹಂತ–ಹಂತವಾಗಿ ಒಟ್ಟು ₹40 ಲಕ್ಷ ಹಣ ಸಂದಾಯ ಮಾಡಲಾಗಿತ್ತು' ಎಂದು ದೂರುದಾರರು ಪೊಲೀಸರಿಗೆ ತಿಳಿಸಿದ್ದಾರೆ.

'ಹಣ ಪಡೆದ ನಂತರ ಷಣ್ಮುಗರಾಜ್ ಹಲವರ ಮೊಬೈಲ್ ಸಂಖ್ಯೆಗಳಿಗೆ ವಾಟ್ಸ್ ಆ್ಯಪ್ ಮೂಲಕ ನೇಮಕಾತಿ ಪತ್ರಗಳನ್ನು ಕಳುಹಿಸಿದ್ದ. ಆದರೆ, ಆ ನೇಮಕಾತಿ ಪತ್ರಗಳು ನಕಲಿ ಎಂಬುದು ನಂತರ ಗೊತ್ತಾಗಿದೆ. ಆರೋಪಿ ಕೆಲಸ ಕೊಡಿಸುವ ನೆಪದಲ್ಲಿ ಹಣ ಪಡೆದು ವಂಚಿಸಿದ್ದಾನೆ. ಆರೋಪಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರೆಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹಣ ದುಪ್ಪಟ್ಟು: ₹32 ಲಕ್ಷ ವಂಚನೆ

ಹಣ ದುಪ್ಪಟ್ಟು ಮಾಡಿಕೊಡುವ ಆಮಿಷವೊಡ್ಡಿ ₹32 ಲಕ್ಷ ವಂಚನೆ ಮಾಡಲಾಗಿದ್ದು, ಅಶೋಕನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ 48 ವರ್ಷದ ವ್ಯಕ್ತಿಯೊಬ್ಬರು ರೋಸಲಿನ್ ಮೇರಿ, ಮಂಜುಳಾ, ಲಿಡಿಯಾ ದೇವಕುಮಾರಿ, ನಾಸಿಯಾ ಎಂಬ ನಾಲ್ವರ ವಿರುದ್ಧ ದೂರು ನೀಡಿದ್ದಾರೆ.

'ಪ್ರಕರಣದ ಮೊದಲ ಆರೋಪಿ ರೋಸಲಿನ್ ಮೇರಿ ಅವರು ದೂರುದಾರರ ಮನೆಯಲ್ಲಿ ವಾಸವಾಗಿದ್ದು, ಖಾಸಗಿ ಶಾಲೆಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ರೋಸಲಿನ್ ಮೇರಿ ಮೂಲಕ ಇತರೆ ಮೂವರು ಆರೋಪಿಗಳ ಪರಿಚಯವಾಗಿತ್ತು. ನಮ್ಮ ಬಳಿ ಒಂದು ಯೋಜನೆ ಇದೆ. ಅದರಲ್ಲಿ ನೀವು ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ಹಣ ನೀಡುವುದಾಗಿ ನಂಬಿಸಿ ಆರು ಜನರಿಂದ ಒಟ್ಟು ₹32 ಲಕ್ಷ ಹಣ ಪಡೆದು ವಂಚಿಸಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ದೂರುದಾರರ ಆಧಾರ್ ಕಾರ್ಡ್ ಬಳಸಿಕೊಂಡು ಸಿಮ್ ಕಾರ್ಡ್ ಖರೀದಿಸಿ, ಸಾರ್ವಜನಿಕರಿಗೆ ಕರೆ ಮಾಡಿ ಹಣ ಹೂಡಿಕೆ ಮಾಡುವಂತೆ ಪ್ರೇರೇಪಿಸಿದ್ದಾರೆ. ಇದರಲ್ಲಿ ಖಾಸಗಿ ಶಾಲೆಯೊಂದರ ಆಡಳಿತ ಮಂಡಳಿ ಸದಸ್ಯರು ಹಾಗೂ ಪ್ರಾಂಶುಪಾಲರೂ ಭಾಗಿಯಾಗಿದ್ದಾರೆ. ದೂರುದಾರರು ಹಣ ವಾಪಸ್ ನೀಡುವಂತೆ ಮನವಿ ಮಾಡಿದರೆ, ಜೀವ ಬೆದರಿಕೆ ಹಾಕಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

'ಆರೋಗ್ಯದ ಕಡೆ ಗಮನ ಹರಿಸಿ'

ರಾಜರಾಜೇಶ್ವರಿನಗರ: ಲಗ್ಗೆರೆಯ ಅರ್ಪಿತಾ ಸೇವಾ ಟ್ರಸ್ಟ್ ಹಾಗೂ ವಿವಿಧ ಆಸ್ಪತ್ರೆಗಳ ಸಹಯೋಗದೊಂದಿಗೆ ಚೌಡೇಶ್ವರಿ ನಗರದ ಅಪಲೊ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನಲ್ಲಿ ಭಾನುವಾರ ಆಯೋಜಿಸಿದ್ದ ಆರೋಗ್ಯ ಉಚಿತ ತಪಾಸಣೆ ಶಿಬಿರದಲ್ಲಿ ನೂರಾರು ಮಂದಿ ಆರೋಗ್ಯ ಪರೀಕ್ಷೆ ಮಾಡಿಸಿಕೊಂಡರು.

ಮಾಜಿ ಸಂಸದ ಡಿ.ಕೆ.ಸುರೇಶ್ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು. 'ಕಲುಷಿತ ಆಹಾರ, ನೀರು, ಗಾಳಿ ಹಾಗೂ ರಾಸಾಯನಿಕಯುಕ್ತ ಆಹಾರ ಸೇವನೆಯಿಂದ ರೋಗಗಳು ಹೆಚ್ಚಾಗುತ್ತಿವೆ. ಎಲ್ಲರೂ ಆರೋಗ್ಯದ ಕಡೆ ಗಮನ ಹರಿಸಬೇಕು' ಎಂದು ಸಲಹೆ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕೆಪಿಸಿಸಿ ವಕ್ತಾರರಾದ ಎಚ್.ಕುಸುಮಾ, 'ಮಕ್ಕಳು ಜಂಕ್‌ಫುಡ್ ತಿನ್ನುವುದನ್ನು ನಿಲ್ಲಿಸಿ. ಕ್ರೀಡೆಗಳತ್ತ ಗಮನಹರಿಸಿ' ಎಂದು ಹೇಳಿದರು.

ಕಾರ್ಯಕ್ರಮ ಆಯೋಜಿಸಿದ್ದ ಅರ್ಪಿತಾ ಸೇವಾ ಟ್ರಸ್ಟ್ ಅಧ್ಯಕ್ಷ ಲಗ್ಗೆರೆ ನಾರಾಯಣಸ್ವಾಮಿ ಮಾತನಾಡಿದರು. ಸಪ್ತಗಿರಿ, ಕಿಮ್ಸ್, ಪೂರ್ಣಸುಧಾ ಕ್ಯಾನ್ಸರ್ ಆಸ್ಪತ್ರೆಗಳ ಸಹಯೋಗದಲ್ಲಿ ಶಿಬಿರ ನಡೆಯಿತು.

ಅಂಬೇಡ್ಕರ್ ಆಶಯದಂತೆ ಶಿಕ್ಷಣ ಪಡೆಯಿರಿ: ನಟ ಚೇತನ್

ಕೆ.ಆರ್.ಪುರ: 'ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಆಶಯದಂತೆ ಜನರ ಜೀವನಮಟ್ಟವನ್ನು ಸುಧಾರಿಸಲು ಶಿಕ್ಷಣವೊಂದು ಪ್ರಮುಖ ಅಸ್ತ್ರವಾಗಿದೆ' ಎಂದು ನಟ ಚೇತನ್ ಅಹಿಂಸಾ ಹೇಳಿದರು.

ಕೆ.ಆರ್.ಪುರ ಸಮೀಪದ ಬಿದರಹಳ್ಳಿಯಲ್ಲಿ ಅಖಿಲ ಕರ್ನಾಟಕ ಡಾ.ಬಾಬು ಜಗಜೀವನ್ ರಾಮ್ ಸೇವಾ ಟ್ರಸ್ಟ್ ಉದ್ಘಾಟನೆ ಮತ್ತು ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಪಡೆದ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಲು ಶಿಕ್ಷಣ ಅತಿಮುಖ್ಯ. ಅಂಬೇಡ್ಕರ್ ಅವರು ಶಿಕ್ಷಣ ಪಡೆಯುವ ಮೂಲಕ ಜಗತ್ತಿಗೆ ಮಾದರಿಯಾಗುವಂತಹ ಸಂವಿಧಾನವನ್ನು ರಚನೆ ಮಾಡಿದರು. ಅವರು ತೋರಿದ ದಾರಿಯಲ್ಲಿ ಪ್ರತಿಯೊಬ್ಬರೂ ಸಾಗಬೇಕು 'ಎಂದರು.

ಅಖಿಲ ಕರ್ನಾಟಕ ಡಾ.ಬಾಬು ಜಗಜೀವನ್ ರಾಮ್ ಸೇವಾ ಟ್ರಸ್ಟ್‌ನ ಅಧ್ಯಕ್ಷ ವಿ.ಕೃಷ್ಣಮೂರ್ತಿ ಮಾತನಾಡಿದರು.

ಮೆಟ್ರೊ ಹಳಿಗೆ ಹಾರಿ ಮೃತಪಟ್ಟಿದ್ದ ನವೀನ್

ನಿತ್ಯದ ಖರ್ಚು, ವೆಚ್ಚಕ್ಕೆ ಸಂಬಂಧಿಕರು ಹಾಗೂ ಕುಟುಂಬದವರಿಗೆ ಕರೆ ಮಾಡಿ ಹಣ ಹಾಕಿಸಿಕೊಳ್ಳುತ್ತಿದ್ದರು. ಉತ್ತರ ಪ್ರದೇಶದಲ್ಲಿ ಹಲವರ ಬಳಿ ಸಾಲ ಮಾಡಿದ್ದರು

ವ್ಯಾಪಾರದಲ್ಲಿ ನಷ್ಟ: ಮನನೊಂದು ಆತ್ಮಹತ್ಯೆ

ಬೆಂಗಳೂರು: 'ನಮ್ಮ ಮೆಟ್ರೊ'ದ ಹಸಿರು ಮಾರ್ಗದಲ್ಲಿ ಶನಿವಾರ ಮೆಟ್ರೊ ರೈಲು ಹಳಿಗೆ ಜಿಗಿದು ಆತ್ಮಹತ್ಯೆ ಮಾಡಿಕೊಂಡ ಉತ್ತರ ಪ್ರದೇಶದ ನವೀನ್ ಕುಮಾರ್ ಅರೋರ (57) ಅವರು ವ್ಯಾಪಾರದಲ್ಲಿ ಭಾರಿ ನಷ್ಟ ಅನುಭವಿಸಿ, ಮಾನಸಿಕ ಖಿನ್ನತೆಗೆ ಒಳಗಾಗಿದ್ದರು ಎಂಬುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

ಉತ್ತರ ಪ್ರದೇಶದ ನವೀನ್ ಅವರು ಕೆಲ ವರ್ಷಗಳಿಂದ ಕೆ.ಆರ್. ಮಾರುಕಟ್ಟೆಯಲ್ಲಿ ಹಾರ್ಡ್‌ವೇರ್ ಅಂಗಡಿ ನಡೆಸುತ್ತಿದ್ದರು. ಆರಂಭದಲ್ಲಿ ವ್ಯಾಪಾರ, ವಹಿವಾಟು ಚೆನ್ನಾಗಿಯೇ ನಡೆಯುತ್ತಿತ್ತು. ಕ್ರಮೇಣ ವ್ಯಾಪಾರದಲ್ಲಿ ನಷ್ಟ ಅನುಭವಿಸಿ, ಅಂಗಡಿ ಬಂದ್ ಮಾಡಿದ್ದರು. ಉದ್ಯೋಗವೂ ಇಲ್ಲದೆ ನಿತ್ಯದ ಖರ್ಚಿಗಾಗಿ ಹಣಕ್ಕಾಗಿ ಪರದಾಡುತ್ತಿದ್ದರು.

ಇದೇ ವಿಚಾರವಾಗಿ ಕುಟುಂಬದ ಸದಸ್ಯರ ಜತೆ ಜಗಳವಾಡಿಕೊಂಡು, ಪತ್ನಿ ಹಾಗೂ ಮಕ್ಕಳಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದರು. ಲಾಡ್ಜ್‌ವೊಂದರಲ್ಲಿ ಕೊಠಡಿ ಬಾಡಿಗೆಗೆ ಪಡೆದು ವಾಸವಾಗಿದ್ದ ಅವರು, ಮಾನಸಿಕ ಖಿನ್ನತೆಗೂ ಒಳಗಾಗಿದ್ದರು ಎಂದು ತಿಳಿಸಿದ್ದಾರೆ.

'ನವೀನ್ ಅವರು ಅಣ್ಣನಿಗೆ ಆಗಾಗ್ಗೆ ಕರೆ ಮಾಡಿ ಹಣ ಕೇಳುತ್ತಿದ್ದರು. ಆತ್ಮಹತ್ಯೆಗೂ ಮುನ್ನ ಸಹ ಅಣ್ಣನಿಗೆ ಕರೆ ಮಾಡಿ ಹಣ ಕೇಳಿದ್ದರು' ಎಂದು ಪೊಲೀಸರು ಹೇಳಿದ್ದಾರೆ. ಮೃತರ ಪತ್ನಿ ಖಾಸಗಿ ಶಾಲೆಯಲ್ಲಿ ಶಿಕ್ಷಕಿಯಾಗಿದ್ದು, ಪುತ್ರ ಬಟ್ಟೆ ಅಂಗಡಿ ಹೊಂದಿದ್ದಾರೆ. ಪುತ್ರಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಪೊಲೀಸರಿಂದ ಹೇಳಿಕೆ ದಾಖಲು: ಮತ್ತಷ್ಟು ಮಂದಿ ಸಾಕ್ಷಿಗಳಿಗಾಗಿ ಶೋಧ

ಸಿಮ್ ನೀಡಿದ್ದ ಆಪ್ತನ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಯಾಗಿರುವ ನಟ ದರ್ಶನ್‌ಗೆ ಸಿಮ್ ಖರೀದಿಸಿ ನೀಡಿದ್ದ ಆಪ್ತನನ್ನು ಪೊಲೀಸರು ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ.

ದರ್ಶನ್ ಅವರು ಬೇರೊಬ್ಬರ ಹೆಸರಿನಲ್ಲಿರುವ ಸಿಮ್ ಬಳಕೆ ಮಾಡುತ್ತಿದ್ದರು ಎಂಬುದು ಪೊಲೀಸರ ತನಿಖೆಯಿಂದ ಗೊತ್ತಾಗಿತ್ತು. ಹಾಗಾಗಿ ಸಿಮ್ ಖರೀದಿದಾರರನ್ನು ಪತ್ತೆ ಮಾಡಿ, ಅವರನ್ನು ಕರೆತಂದು ವಿಚಾರಣೆ ನಡೆಸಿ, ಹೇಳಿಕೆಗಳನ್ನು ದಾಖಲು ಮಾಡಿಕೊಂಡಿದ್ದಾರೆ.

ಸಾಕ್ಷ್ಯ ನಾಶಕ್ಕೆ ಜೈಲಿನಿಂದಲೇ ಯತ್ನ ನಡೆಯುತ್ತಿದೆ ಎಂಬ ಮಾಹಿತಿ ಹೊರಬಿದ್ದ ಬೆನ್ನಲ್ಲೆ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ. ಕೊಲೆ ಪ್ರಕರಣದಿಂದ ಪಾರಾಗಲು ಸ್ನೇಹಿತನ ಹೆಸರಿನಲ್ಲಿ ದರ್ಶನ್ ಸಿಮ್ ಕಾರ್ಡ್ ಖರೀದಿಸಿದ್ದರು. ಮೊದಲಿನಿಂದಲೂ ದರ್ಶನ್ ಬೇರೆಯವರ ಹೆಸರಿನ ಸಿಮ್ ಕಾರ್ಡ್ ಬಳಸುತ್ತಿದ್ದರು. ತನ್ನ ಹೆಸರಿನಲ್ಲಿ ಸಿಮ್ ಖರೀದಿಸಿಲ್ಲ. ದರ್ಶನ್ ಈ ನಡೆ ಹಲವು ಅನುಮಾನ ಹುಟ್ಟಿಸಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಸಿಮ್ ಖರೀದಿಸಿ ನೀಡಿದ್ದವರನ್ನು ವಶಕ್ಕೆ ಪಡೆದಿರುವ ಪೊಲೀಸರು, 'ನಿನ್ನ ಹೆಸರಿನಲ್ಲಿ ದರ್ಶನ್ ಸಿಮ್ ಕಾರ್ಡ್ ತೆಗೆದುಕೊಂಡಿದ್ದು ಏಕೆ? ಯಾವ ಉದ್ದೇಶಕ್ಕೆ ನಿನ್ನ ಹೆಸರಿನ ಸಿಮ್ ಕಾರ್ಡ್ ಬಳಸುತ್ತಿದ್ದರು? ಸಿಮ್ ಖರೀದಿ ವೇಳೆ ದರ್ಶನ್ ಏನು ಹೇಳಿದ್ದರು? ಹಲವು ಸ್ನೇಹಿತರು ಇದ್ದರೂ ನಿನ್ನ ಹೆಸರಿನಲ್ಲೇ ಸಿಮ್ ಖರೀದಿ ಮಾಡಲು ಕಾರಣವೇನು? ಸಿಮ್ ಖರೀದಿಗೆ ದರ್ಶನ್ ಹೇಳಿದ್ದರೆ? ಅಥವಾ ಬೇರೆಯವರಾ?' ಎಂಬ ಪ್ರಶ್ನೆಗಳನ್ನು ಕೇಳಿ, ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿಂದೆ 12 ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಲಾಗಿತ್ತು. ಹೊಸದಾಗಿ ಏಳು ಸಾಕ್ಷಿಗಳ ಹೇಳಿಕೆಯನ್ನು ದಾಖಲಿಸಲಾಗಿದೆ. ಸ್ಟೋನಿ ಬ್ರೂಕ್ಸ್ ಹೋಟೆಲ್‌ನ ಮೂವರು ಸಿಬ್ಬಂದಿ ಸೇರಿ ದರ್ಶನ್‌ಗೆ ಸಿಮ್ ಕಾರ್ಡ್ ಕೊಟ್ಟಿದ್ದ ಸ್ನೇಹಿತನನ್ನು ಸಾಕ್ಷಿಯನ್ನಾಗಿ ಮಾಡಲಾಗಿದೆ. ಒಟ್ಟು 19 ಪ್ರಮುಖ ಸಾಕ್ಷಿಗಳ ಹೇಳಿಕೆಗಳನ್ನು ವಿಡಿಯೊ ರೆಕಾರ್ಡ್ ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿ ಸಲ್ಲಿಸುವಷ್ಟರಲ್ಲಿ ತನಿಖಾ ತಂಡ ಮತ್ತಷ್ಟು ಸಾಕ್ಷ್ಯಗಳನ್ನು ಸಂಗ್ರಹಿಸಲು ಯತ್ನಿಸುತ್ತಿದೆ.

ಕೊಲೆ ಪ್ರಕರಣದ ಮೊದಲ ಆರೋಪಿಯಾಗಿರುವ ದರ್ಶನ್ ಆಪ್ತೆ ಪವಿತ್ರಾಗೌಡ, ಐದನೇ ಆರೋಪಿ ನಂದೀಶ್, 14ನೇ ಆರೋಪಿ ಪ್ರದೂಷ್, 15ನೇ ಆರೋಪಿ ಕಾರ್ತಿಕ್ ಅಲಿಯಾಸ್ ಕಪ್ಪೆ, 16ನೇ ಆರೋಪಿ ಕೇಶವಮೂರ್ತಿ ಹಾಗೂ 17ನೇ ಆರೋಪಿ ನಿಖಿಲ್ ನಾಯಕ್ ಸಹ ಬೇರೊಬ್ಬರ ಹೆಸರಿನಲ್ಲಿ ಪಡೆದಿರುವ ಸಿಮ್‌ಗಳನ್ನು ಬಳಸುತ್ತಿದ್ದರು ಎಂಬುದು ತನಿಖೆ ವೇಳೆ ಗೊತ್ತಾಗಿದೆ' ಎಂದು ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿರುವ ರಿಮ್ಯಾಂಡ್ ಅರ್ಜಿಯಲ್ಲಿ ಉಲ್ಲೇಖಿಸಿದ್ದರು.

ಅಭಿಮಾನಿಗಳಿಂದ ಬೆದರಿಕೆ: ದೂರು

ದರ್ಶನ್

ದರ್ಶನ್ ಅಭಿಮಾನಿಗಳು ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಡಾ. ರಾಜ್‌ಕುಮಾರ್ ಅಭಿಮಾನಿ ಯೋಗಿ ಎಂಬುವರು ಪಶ್ಚಿಮ ವಿಭಾಗದ ಸೈಬರ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ದರ್ಶನ್ ಅಭಿಮಾನಿಗಳು ಎಂದು ಹೇಳಿಕೊಂಡಿರುವ ರಂಗಾರೆಡ್ಡಿ, ನಾಗರಾಜ್, ದಚ್ಚು, ವಿಶ್ವಾಸ್, ವೀರೇಶ್ ಎಂಬುವರು 'ಡಿ ಬಾಸ್ ಅಭಿಮಾನಿ', 'ಡಿ ಬಾಸ್ ಅಡ್ಡ', ಕಿಂಗ್ ಬಸವ' ಎಂಬ ಫೇಸ್‌ಬುಕ್ ಖಾತೆಗಳಿಂದ ಬೆದರಿಕೆ ಸಂದೇಶ ಬಂದಿದೆ. ಅಲ್ಲದೇ ಮೊಬೈಲ್‌ಗೆ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ' ಎಂದು ಯೋಗಿ ಆರೋಪಿಸಿದ್ದಾರೆ.

ಚಹರೆ ಗುರುತಿಸುವಿಕೆ

ದರ್ಶನ್ ಮನೆಯ ಸಿಸಿಟಿವಿ ಕ್ಯಾಮೆರಾದ ಡಿವಿಆರ್ ದತ್ತಾಂಶವನ್ನು ಮರು ಸಂಗ್ರಹಿಸಿದ ಬಳಿಕ ಈಗ ವಿಧಿ ವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು ಆರೋಪಿಗಳ ಚಹರೆ ಗುರುತಿಸುವ ಕೆಲಸ ಮಾಡುತ್ತಿದ್ದಾರೆ. ಸಿಸಿಟಿವಿ ದೃಶ್ಯದಲ್ಲಿ ಸೆರೆಯಾಗಿರುವ ವ್ಯಕ್ತಿ ಹಾಗೂ ಬಂಧಿತರ ಫೋಟೊಗಳನ್ನು ಹೋಲಿಕೆ ಮಾಡಿ ಸಾಮ್ಯತೆಯನ್ನು ಖಚಿತ ಪಡಿಸಿಕೊಳ್ಳುತ್ತಿದ್ದಾರೆ.

ಆನೇಕಲ್: ಲಾರಿ ಡಿಕ್ಕಿ – ಪತ್ನಿಯ ಎರಡೂ ಕಾಲು ಛಿದ್ರ, ಪತಿ ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಬೊಮ್ಮಸಂದ್ರದ ಬಳಿ ಭಾನುವಾರ ಮಧ್ಯಾಹ್ನ ಲಾರಿ ಡಿಕ್ಕಿ ಹೊಡೆದು ದ್ವಿಚಕ್ರ ವಾಹನ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದು, ಹಿಂಬದಿಯಲ್ಲಿ ಕುಳಿತಿದ್ದ ಸವಾರನ ಪತ್ನಿಯ ಎರಡೂ ಕಾಲು ಬೇರ್ಪಟ್ಟಿವೆ.

ಸವಾರನನ್ನು ತಮಿಳುನಾಡಿನ ಪ್ರಕಾಶ್ (35) ಎಂದು ಗುರುತಿಸಲಾಗಿದೆ. ಪತ್ನಿ ಮಹದೇವಿ ಅವರ ಎರಡೂ ಕಾಲು ಕಿತ್ತು ಬಂದಿವೆ. ದಂಪತಿಯ ಪುಟ್ಟ ಮಗು ಅಕುಲ್‌ಗೆ ಸಣ್ಣ ಪುಟ್ಟ ಗಾಯಗಳಾಗಿವೆ.

ಪ್ರಕಾಶ್ ಗೋವಿಂದಶೆಟ್ಟಿ ಪಾಳ್ಯದಲ್ಲಿ ಮೊಬೈಲ್ ಅಂಗಡಿ ನಡೆಸುತ್ತಿದ್ದರು. ರಾಯಕೋಟೆಯ ದೇವಾಲಯಕ್ಕೆ ತೆರಳಲು ಬೈಕ್‌ನಲ್ಲಿ ಪತ್ನಿ ಮತ್ತು ಮಗುವಿನೊಂದಿಗೆ ಪ್ರಕಾಶ್ ತೆರಳಿದ್ದರು.

ಬೊಮ್ಮಸಂದ್ರದ ಬಳಿಯ ರಾಯಲ್ ಎನ್‌ಫೀಲ್ಡ್ ಷೋ ರೂಂ ಬಳಿ ಲಾರಿಯೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದ್ದರಿಂದ ಮೂವರು ಕೆಳಗೆ ಬಿದ್ದಿದ್ದಾರೆ. ಪ್ರಕಾಶ್ ಮತ್ತು ಮಹದೇವಿ ಅವರ ಮೇಲೆ ಲಾರಿ ಚಕ್ರ ಹರಿಯಿತು.

ಗಾಯಗೊಂಡಿದ್ದ ಮಗು ಮತ್ತು ತಾಯಿ ಮಹದೇವಿಯನ್ನು ನಾರಾಯಣ ಹೆಲ್ತ್ ಕೇರ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಹೆಬ್ಬಗೋಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಲಾರಿ ಚಾಲಕ ಪರಾರಿಯಾಗಿದ್ದು, ಲಾರಿಯನ್ನು ಹೆಬ್ಬಗೋಡಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಸಂಬಂಧಿಕರಿಬ್ಬರ ಬಂಧನ

ಪಿತ್ರಾರ್ಜಿತ ಆಸ್ತಿಗಾಗಿ ಗಲಾಟೆ: ಚಾಕುವಿನಿಂದ ಇರಿದು ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಬಾಬಾ ರೆಡ್ಡಿ ಎಂಬುವರಿಗೆ ಚಾಕುವಿನಿಂದ ಇರಿದು ಹತ್ಯೆಗೈದಿದ್ದ ಇಬ್ಬರು ಆರೋಪಿಗಳನ್ನು ರಾಮಮೂರ್ತಿ ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮೃತನ ಸಹೋದರಿಯ ಪತಿ ಗೋಪಾಲ್ ರೆಡ್ಡಿ (54) ಹಾಗೂ ಅಣ್ಣನ ಮಗ ಭರತ್ (28) ಎಂಬುವವರು ಬಂಧಿತರು.

ಬಾಬು ರೆಡ್ಡಿ ಅವರು ಪಿತ್ರಾರ್ಜಿತ ಆಸ್ತಿಯಲ್ಲಿ ತನ್ನ ಅಣ್ಣ ಹಾಗೂ ತಂಗಿಗೆ ಪಾಲು ನೀಡಿರಲಿಲ್ಲ ಹಾಗೂ ನಿವೇಶನವನ್ನು ತನ್ನ ಹೆಸರಿಗೆ ಬರೆಸಿಕೊಂಡಿದ್ದರು ಎಂದು ಆರೋಪಿಸಿದ್ದಾರೆ. ಇದರಿಂದ ಎರಡೂ ಕಡೆಯವರ ಮಧ್ಯೆ ಜಗಳ ನಡೆಯುತ್ತಿತ್ತು. ಈ ವಿಚಾರ ನ್ಯಾಯಾಲಯದ ಮೆಟ್ಟಿಲೇರಿತ್ತು.

ಆಸ್ತಿ ಹಂಚಿಕೆ ವಿಚಾರವಾಗಿ ಶುಕ್ರವಾರ ರಾತ್ರಿ ಮಾತುಕತೆಗಾಗಿ ವಿಜಿನಾಪುರದಲ್ಲಿ ಎಲ್ಲರೂ ಸೇರಿದ್ದರು. ಈ ವೇಳೆ ಸಿಟ್ಟಿಗೆದ್ದ ಗೋಪಾಲ್ ರೆಡ್ಡಿ ಹಾಗೂ ಭರತ್ ಚಾಕುವಿನಿಂದ ಇರಿದಿದ್ದರು. ತೀವ್ರ ರಕ್ತಸ್ರಾವಕ್ಕೊಳಗಾಗಿದ್ದ ಬಾಬುರೆಡ್ಡಿ ಅವರನ್ನು ಆಸ್ಪತ್ರೆಗೆ ಸಾಗಿಸುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದರು. ರಾಮಮೂರ್ತಿನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

ಗೋಪಾಲ್ ರೆಡ್ಡಿ, ಭರತ್

ಅಪರಾಧ ಸುದ್ದಿಗಳು

ಬ್ಯಾಗ್ ಕಳವು: ವೈಟ್‌ಫೀಲ್ಡ್ ವಿಭಾಗದಲ್ಲಿ ರಸ್ತೆ ಬದಿ ನಿಲ್ಲಿಸಿದ್ದ ಡೆಲಿವರಿ ಬಾಯ್ ಪಾರ್ಸೆಲ್ ಬ್ಯಾಗ್ ಅನ್ನು ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು ಯುವಕರು ಕಳವು ಮಾಡಿಕೊಂಡು ಪರಾರಿಯಾಗಿದ್ದಾರೆ.

ಆ.1ರಂದು ಈ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಕಳ್ಳರ ಕೈಚಳಕದ ದೃಶ್ಯಗಳು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಶೀಘ್ರ ಬಂಧಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಬ್ರಿಟನ್ ಪ್ರಜೆ ಆತ್ಮಹತ್ಯೆ: ಕೊಳೆತ ಸ್ಥಿತಿಯಲ್ಲಿದ್ದ ದೇಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವಾಸಿ ವೀಸಾ ಮೇಲೆ ಭಾರತಕ್ಕೆ ಬಂದಿದ್ದ ಬ್ರಿಟನ್ ಪ್ರಜೆ ಗೇವಿನ್ ಜೇಮ್ಸ್ ಯಂಗ್ (60) ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಜೇಮ್ಸ್ ಮೃತದೇಹ ಅವರ ಕೋರಮಂಗಲದ ಬಾಡಿಗೆ ಮನೆಯಲ್ಲಿ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ. ಮರಣಪತ್ರ ಪತ್ತೆಯಾಗಿದ್ದು, 'ಆರೋಗ್ಯ ಹಾಗೂ ಕುಟುಂಬ ಸಮಸ್ಯೆ ಕಾರಣಕ್ಕೆ ಆತ್ಮಹತ್ಯೆಗೆ ಶರಣಾಗುತ್ತಿದ್ದೇನೆ' ಎಂದು ಬರೆದಿದ್ದಾರೆ' ಎಂದು ಪೊಲೀಸರು ಹೇಳಿದ್ದಾರೆ

ಜೇಮ್ಸ್, ಕೆಲ ದಿನಗಳ ಹಿಂದೆ ನಗರಕ್ಕೆ ಬಂದಿದ್ದರು. ಜುಲೈ 27ರಂದು ಮನೆ ಮಾಲೀಕರಿಗೆ ಕರೆ ಮಾಡಿ, 'ಆಗಸ್ಟ್ 1ರವರೆಗೆ ತೊಂದರೆ ಮಾಡಬೇಡಿ' ಎಂದಿದ್ದರು. ಶನಿವಾರ ಮನೆ ಮಾಲೀಕರು ಜೇಮ್ಸ್‌ಗೆ ಕರೆ ಮಾಡಿದಾಗ ಅವರು ಕರೆ ಸ್ವೀಕರಿಸಿರಲಿಲ್ಲ. ಮನೆ ಬಳಿ ಬಂದಾಗ ದುರ್ವಾಸನೆ ಬಂದಿದೆ. ಆತಂಕಗೊಂಡು ನಮಗೆ ವಿಷಯ ತಿಳಿಸಿದ್ದಾರೆ ಎಂದಿದ್ದಾರೆ.

'ಅತಿಯಾದ ಮಾತ್ರೆ ಸೇವಿಸಿ ಮೃತಪಟ್ಟಿರುವ ಸಾಧ್ಯತೆ ಇದೆ. ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕ ನಿಖರ ಕಾರಣ ಗೊತ್ತಾಗಲಿದೆ' ಎಂದಿದ್ದಾರೆ.

ಸಂಬಂಧಿಕರಿಗೆ ಹಣ ನೀಡಿದ್ದ ಪತ್ನಿ: ದರೋಡೆ ದೂರು ನೀಡಿದ ಪಿಎಸ್‌ಐ

ಬೆಂಗಳೂರು: ಅಶೋಕನಗರ ಪೊಲೀಸ್ ಠಾಣೆ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಪುಟ್ಟಸ್ವಾಮಿ ಅವರ ಮನೆ ದರೋಡೆ ಪ್ರಕರಣ ಹೊಸ ತಿರುವು ಪಡೆದುಕೊಂಡಿದೆ. ಮನೆಯಲ್ಲಿರಿಸಿದ್ದ ಹಣವನ್ನು ಅಧಿಕಾರಿಯ ಪತ್ನಿಯೇ ತನ್ನ ಸಂಬಂಧಿಕರಿಗೆ ಕೊಟ್ಟಿದ್ದರೆಂಬ ಸಂಗತಿ ತನಿಖೆಯಿಂದ ಗೊತ್ತಾಗಿದೆ.

ಪುಟ್ಟಸ್ವಾಮಿ ಅವರ ನಿವಾಸ ಕೋರಮಂಗಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿದೆ. 25 ದಿನದ ಹಿಂದೆ ಇವರ ಮನೆಗೆ ನುಗ್ಗಿದ ದರೋಡೆಕೋರರು ಅಧಿಕಾರಿ ಪತ್ನಿಯನ್ನು ಬೆದರಿಸಿ ₹ 12 ಲಕ್ಷ ನಗದು ದೋಚಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿತ್ತು.

'ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಕೋರಮಂಗಲ ಠಾಣೆ ಪೊಲೀಸರಿಗೆ ದರೋಡೆ ನಡೆದಿರುವ ಬಗ್ಗೆ ಅನುಮಾನ ಮೂಡಿತು. ಸಿಸಿಟಿವಿ ಕ್ಯಾಮೆರಾ ಪರಿಶೀಲನೆ ವೇಳೆಯೂ ಯಾವುದೇ ಸುಳಿವು ದೊರೆತಿರಲಿಲ್ಲ. ಹಾಗಾಗಿ ಅಧಿಕಾರಿಯ ಪತ್ನಿಯನ್ನು ತೀವ್ರ ವಿಚಾರಣೆ ಒಳಪಡಿಸಿದಾಗ ತನ್ನ ಸಂಬಂಧಿಕರಿಗೆ ಹಣ ನೀಡಿರುವುದಾಗಿ ಅವರು ಒಪ್ಪಿಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಇದು ಕೌಟುಂಬಿಕ ಕಲಹವಾಗಿದ್ದು, ಮನೆಯಲ್ಲಿ ಯಾವುದೇ ದರೋಡೆ ನಡೆದಿಲ್ಲ. ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸರು ತಿಳಿಸಿದ್ದಾರೆ.

ಗೂಡ್ಸ್ ವಾಹನ ಡಿಕ್ಕಿ: ಹೆದ್ದಾರಿ ಗಸ್ತು ಸಿಬ್ಬಂದಿ ಸಾವು

ಬೆಂಗಳೂರು: ನಗರದ ಎಲೆಕ್ಟ್ರಾನಿಕ್ ಸಿಟಿ ಮೇಲ್ಸೇತುವೆ ಮೇಲೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಹೆದ್ದಾರಿ ಗಸ್ತು ತಂಡದ ಸಿಬ್ಬಂದಿಯೊಬ್ಬರು ಮೃತಪಟ್ಟು, ಇಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ.

ತಿಪಟೂರಿನ ಪಿ.ಮಂಜುನಾಥ್ (52) ಮೃತ ವ್ಯಕ್ತಿ. ಅವರು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಗಸ್ತು ತಂಡದಲ್ಲಿ ಅಧಿಕಾರಿಯಾಗಿದ್ದರು. ಗಾಯಗೊಂಡಿರುವ ಸಿಬ್ಬಂದಿ ರಾಜಣ್ಣ ಮತ್ತು ಗೂಡ್ಸ್ ವಾಹನ ಚಾಲಕ ಸಂದೀಪ್ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಮೇಲ್ಸೇತುವೆ ಮೇಲೆ ಶನಿವಾರ ತಡರಾತ್ರಿ ಪಶ್ಚಿಮ ಬಂಗಾಳದ ಭಕ್ತ ಎಂಬುವರ ಕಾರು ಕೆಟ್ಟು ನಿಂತಿತ್ತು. ಮಂಜುನಾಥ್ ಅವರು ಟೋಯಿಂಗ್ ವಾಹನ ಕರೆಸಿ ಸಿಬ್ಬಂದಿ ನೆರವಿನೊಂದಿಗೆ ತೆರವು ಮಾಡಿಸುತ್ತಿದ್ದ ವೇಳೆ ವೇಗವಾಗಿ ಬಂದ ಗೂಡ್ಸ್ ವಾಹನ ಡಿಕ್ಕಿ ಹೊಡೆದು ಪಲ್ಟಿಯಾಗಿದೆ.

ಘಟನೆಯಲ್ಲಿ ಟೋಯಿಂಗ್ ವಾಹನ ಮತ್ತು ಕಾರು ಸಂಪೂರ್ಣ ನಜ್ಜುಗುಜ್ಜಾಗಿವೆ.

ಮಂಜುನಾಥ್ ಅವರ ತಲೆಗೆ ಪೆಟ್ಟು ಬಿದ್ದು, ತೀವ್ರ ರಕ್ತಸ್ರಾವವಾಗಿತು. ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆಯೇ ಅವರು ಮೃತಪಟ್ಟಿದ್ದಾರೆ. ಆರೋಪಿ ಸಂದೀಪ್ ಕಾಲು ಮುರಿದಿದ್ದು, ಟೋಲ್ ಸಿಬ್ಬಂದಿ ರಾಜಣ್ಣ ಅವರಿಗೂ ಪೆಟ್ಟು ಬಿದ್ದಿದೆ. ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹವನ್ನು ಕುಟುಂಬದವರಿಗೆ ಹಸ್ತಾಂತರಿಸಲಾಯಿತು.

ಮೃತದೇಹವನ್ನು ಎಲೆಕ್ಟ್ರಾನಿಕ್ ಸಿಟಿ ವೀರಸಂದ್ರದಲ್ಲಿರುವ ಬೆಂಗಳೂರು ಎಲಿವೇಟೆಡ್ ಟೋಲ್ ವೆ ಪ್ರೈವೇಟ್ ಲಿಮಿಟೆಡ್ ಕಚೇರಿ ಮುಂದೆ ತಂದಿರುವ ಮಂಜುನಾಥ್ ಅವರ ಕುಟುಂಬದ ಸದಸ್ಯರು ಮತ್ತು ಸಹೋದ್ಯೋಗಿಗಳು ₹50 ಲಕ್ಷ ಪರಿಹಾರ ನೀಡುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು. ತಡರಾತ್ರಿಯೂ ಪ್ರತಿಭಟನೆ ಮುಂದುವರಿದಿತ್ತು.

ಆಗಸ್ಟ್ 10ರಂದು ಮಂಜುನಾಥ್ ಅವರ ಮಗಳ ಮದುವೆ ನಿಶ್ಚಯವಾಗಿದೆ. ಮಗಳ ಮದುವೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದ ಅವರು, ಶನಿವಾರ ಸಂಬಂಧಿಕರು ಹಾಗೂ ಸ್ನೇಹಿತರಿಗೆ ಆಮಂತ್ರಣ ಪತ್ರಿಕೆ ವಿತರಿಸಿ ಬಂದಿದ್ದರು. ರಾತ್ರಿ ಪಾಳಿ ಕೆಲಸಕ್ಕೆ ಹಾಜರಾಗಿದ್ದ ವೇಳೆ ಈ ಅವಘಡ ಸಂಭವಿಸಿದೆ. ಹುಳಿಮಾವು ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

'ಮುನ್ನಿರೆಡ್ಡಿ ಲೇಔಟ್: ರಸ್ತೆ ಸರಿಪಡಿಸಿ'

ಬಿಬಿಎಂಪಿ ವ್ಯಾಪ್ತಿಯ ಗುಬ್ಬಲಾಳ ಮುಖ್ಯರಸ್ತೆಯ ಒಂದನೇ ಕ್ರಾಸ್‌ನ ವಾರ್ಡ್ ಸಂಖ್ಯೆ 184ರ ಮುನ್ನಿರೆಡ್ಡಿ ಲೇಔಟ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಗೆ ಜಲ್ಲಿಕಲ್ಲು ಹಾಕಿ ಹಾಗೆಯೇ ಬಿಡಲಾಗಿದೆ. ಒಂದು ತಿಂಗಳಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಿದ್ದು, ಮಕ್ಕಳು, ಮಹಿಳೆಯರು ಹಾಗೂ ವೃದ್ಧರು ರಸ್ತೆಯಲ್ಲಿ ಓಡಾಡುವುದಕ್ಕೂ ಕಷ್ಟಪಡುವ ಪರಿಸ್ಥಿತಿ ಇದೆ. ಈ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರು ಪ್ರತಿನಿತ್ಯ ಪರದಾಡುತ್ತಿದ್ದಾರೆ. ಮಳೆ ಬಂದರೆ ರಸ್ತೆಯು ಕೆಸರು ಗದ್ದೆಯಂತಾಗುತ್ತದೆ. ಮಳೆಯಾಗದ ಸಂದರ್ಭದಲ್ಲಿ ದೂಳಿನ ಮಜ್ಜನವಾಗುತ್ತಿದೆ. ಇದರಿಂದ, ಸ್ಥಳೀಯ ನಿವಾಸಿಗಳ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಕ್ರಮ ಕೈಗೊಳ್ಳುತ್ತಿಲ್ಲ.

ರಾಮದಾಸ್ ಶಾನ್‌ಬಾಗ್, ಮುನ್ನಿರೆಡ್ಡಿ ಲೇಔಟ್

'ರಸ್ತೆಯಲ್ಲಿರುವ ಗುಂಡಿ ಮುಚ್ಚಿ'

ಹೆಬ್ಬಾಳದ ಕೆಂಪಾಪುರ ಬಡಾವಣೆಗೆ ಹೊಂದಿಕೊಂಡಿರುವ ಸಿಂಧಿ ಕಾಲೇಜು ಮುಖ್ಯ ರಸ್ತೆಯ ತಿರುವಿನಲ್ಲಿ ಬೃಹತ್ ಗುಂಡಿ ಬಿದ್ದಿದ್ದು, ವಾಹನ ಸಂಚಾರಕ್ಕೆ ಅಡಚಣೆ ಆಗುತ್ತಿದೆ. ಮುಖ್ಯ ರಸ್ತೆಯ ತಿರುವಿನಲ್ಲಿರುವ ಗುಂಡಿಯಲ್ಲಿ ಪ್ರತಿನಿತ್ಯ ದ್ವಿಚಕ್ರ ವಾಹನ ಸವಾರರು ಬಿದ್ದು, ಅಪಘಾತಗಳು ಸಂಭವಿಸುತ್ತಿವೆ. ಮಳೆಯಾದರೆ, ಈ ಗುಂಡಿಯಲ್ಲಿ ನೀರು ನಿಂತುಕೊಂಡು ರಸ್ತೆ ಯಾವುದು? ಗುಂಡಿ ಯಾವುದು? ಎಂಬುದು ಗೊತ್ತಾಗುವುದಿಲ್ಲ. ಬಿಬಿಎಂಪಿ ಕೂಡಲೇ ಇಲ್ಲಿನ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಶಿವಪ್ರಸಾದ್, ಹೆಬ್ಬಾಳ

'ಪಾದಚಾರಿ ಮಾರ್ಗದ ಅತಿಕ್ರಮಣ ತೆರವುಗೊಳಿಸಿ'

ಮೂಡಲಪಾಳ್ಯ ಟೆಂಟ್ ರಸ್ತೆಯ ವ್ಯಾಪಾರಿಗಳು ತಮ್ಮ ಅಂಗಡಿ ಎದುರಿನ ಪಾದಚಾರಿ ಮಾರ್ಗವನ್ನು ಅತಿಕ್ರಮಣ ಮಾಡಿಕೊಂಡಿದ್ದಾರೆ. ಇದರಿಂದ, ಪಾದಚಾರಿಗಳ ಓಡಾಟಕ್ಕೆ ಸಮಸ್ಯೆ ಆಗಿದೆ. ಇಲ್ಲಿನ ಬಹುತೇಕ ಅಂಗಡಿಗಳ ಮಾಲೀಕರು ಅಂಗಡಿ ಮುಂಭಾಗದಲ್ಲಿನ ಜಾಗವನ್ನು ಅತಿಕ್ರಮಣ ಮಾಡಿಕೊಂಡು ವ್ಯಾಪಾರ–ವಹಿವಾಟು ಮಾಡುತ್ತಿದ್ದಾರೆ. ಪಾದಚಾರಿಗಳು ಮುಖ್ಯ ರಸ್ತೆಯಲ್ಲಿ ಓಡಾಡುತ್ತಿದ್ದಾರೆ. ಇದರಿಂದ, ಸಂಚಾರ ದಟ್ಟಣೆ ಆಗುತ್ತಿದ್ದು, ಅಪಘಾತಗಳೂ ಸಂಭವಿಸುತ್ತಿವೆ. ಅತಿಕ್ರಮಣ ಮಾಡಿಕೊಂಡಿರುವ ಪಾದಚಾರಿ ಮಾರ್ಗವನ್ನು ಬಿಬಿಎಂಪಿ ಅಧಿಕಾರಿಗಳು ಹಾಗೂ ಸಂಚಾರ ಪೊಲೀಸರು ತೆರವುಗೊಳಿಸಬೇಕು.

ಎಂ.ಎಂ. ಮಲ್ಲೇಶ, ಮೂಡಲಪಾಳ್ಯ

'ಮುಖ್ಯರಸ್ತೆಯಲ್ಲಿ ಹಾಕಿರುವ ಕಸ ತೆರವುಗೊಳಿಸಿ'

ಜೆ.ಪಿ. ನಗರದ 2ನೇ ಹಂತದಲ್ಲಿರುವ 16ನೇ ಮುಖ್ಯರಸ್ತೆಯ ರಾಗಿಗುಡ್ಡದ ದೇವಸ್ಥಾನ ಹತ್ತಿರದ ಮುಖ್ಯ ರಸ್ತೆಯಲ್ಲಿ ಕಸ ಸುರಿಯಲಾಗುತ್ತಿದೆ. ಸ್ಥಳೀಯರು ಮನೆಯಲ್ಲಿ ಉತ್ಪತ್ತಿ ಆಗುವ ಕಸವನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ಹಾಕಿಕೊಂಡು ಬಂದು ಇಲ್ಲಿ ಎಸೆದು ಹೋಗುತ್ತಿದ್ದಾರೆ. ಈ ರಸ್ತೆಯೆಲ್ಲಾ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉಗಮ ಸ್ಥಾನವಾಗಿದೆ. ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುತ್ತಿದ್ದಾರೆ. ಬಿಬಿಎಂಪಿ ಸಿಬ್ಬಂದಿ ಕೂಡಲೇ ಇಲ್ಲಿನ ಕಸವನ್ನು ತೆರವುಗೊಳಿಸಬೇಕು.

ಎಸ್.ವಿ. ಶರತ್ ಬಾಬು, ಜೆ.ಪಿ. ನಗರ



'ಗ್ರಂಥಾಲಯಕ್ಕೆ ಬೀಗ, ತೊಂದರೆ'

ಚಾಮರಾಜಪೇಟೆ ವಿಧಾನಸಭೆ ಕ್ಷೇತ್ರದಲ್ಲಿರುವ ವಾರ್ಡ್ ಸಂಖ್ಯೆ 139ರ ಭಕ್ಷಿ ಗಾರ್ಡನ್‌ನಲ್ಲಿರುವ ಸಾರ್ವಜನಿಕ ಗ್ರಂಥಾಲಯವನ್ನು ದುರಸ್ತಿಗೊಳಿಸುವ ನೆಪದಲ್ಲಿ ಬೀಗ ಹಾಕಲಾಗಿದೆ. ಇದರಿಂದ, ಸ್ಥಳೀಯ ಓದುಗರಿಗೆ ತೊಂದರೆ ಆಗುತ್ತಿದೆ.



ಒಂದು ತಿಂಗಳ ಹಿಂದೆಯೇ ಗ್ರಂಥಾಲಯ ದುರಸ್ತಿಗೊಳಿಸುವ ಕಾರಣ ನೀಡಿ ಬೀಗ ಹಾಕಲಾಗಿದೆ. ಆದರೆ, ಇದುವರೆಗೂ ದುರಸ್ತಿ ಕಾರ್ಯ ಪ್ರಾರಂಭವಾಗಿಲ್ಲ. ಇದರಿಂದ, ಪುಸ್ತಕಪ್ರಿಯರಿಗೆ ಸಮಸ್ಯೆ ಆಗುತ್ತಿದ್ದು, ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು.

ಎಸ್. ಪ್ರಭಾಕರ್, ಚಾಮರಾಜಪೇಟೆ

ಸಿ.ಎಂ ಭೇಟಿಯಾದ ಶಾಸಕ ಚನ್ನಾರೆಡ್ಡಿ ಪಾಟೀಲ

ಬೆಂಗಳೂರು: ಯಾದಗಿರಿ ಶಾಸಕ ಚನ್ನಾರೆಡ್ಡಿ ಪಾಟೀಲ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭಾನುವಾರ ಭೇಟಿ ಮಾಡಿ ಕೆಲಹೊತ್ತು ಚರ್ಚೆ ನಡೆಸಿದರು.

ಮುಖ್ಯಮಂತ್ರಿಯ ನಿವಾಸ 'ಕಾವೇರಿ'ಗೆ ಬಂದ ಚನ್ನಾರೆಡ್ಡಿ, ಯಾದಗಿರಿ ನಗರ ಠಾಣೆಯ ಪಿಎಸ್‌ಐ ಪರಶುರಾಮ್ ಅವರ ಸಾವಿನ ನಂತರದ ಬೆಳವಣಿಗೆಗಳ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಗೃಹ ಸಚಿವ ಜಿ. ಪರಮೇಶ್ವರ ಕೂಡಾ ಇದ್ದರು.

'ಪರಶುರಾಮ್ ಅವರ ಸಾವಿಗೆ ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರು ಮತ್ತು ಪುತ್ರ ಪಂಪನಗೌಡ ₹30 ಲಕ್ಷಕ್ಕೆ ಬೇಡಿಕೆ ಇಟ್ಟಿರುವುದೇ ಕಾರಣ' ಎಂದು ಮೃತ ಪರಶುರಾಮ್ ಪತ್ನಿ ಶ್ವೇತಾ, ಕುಟುಂಬಸ್ಥರು ದೂರಿದ್ದರು.

6ನೇ ತರಗತಿಗೆ ಉಚಿತ ಪ್ರವೇಶ • ಪಟ್ಟಿ ಸಿದ್ಧಪಡಿಸಲು ಪತ್ರ

ಬಾಲಮಂದಿರ ಮಕ್ಕಳಿಗೆ ವಸತಿಶಾಲೆ ಭಾಗ್ಯ

• ಸಂತೋಷ ಜಿಗಳಿಕೊಪ್ಪ

ಹಾವೇರಿ: ನಾನಾ ಕಾರಣಗಳಿಂದಾಗಿ ಬಾಲಮಂದಿರ ಸೇರುತ್ತಿರುವ ಮಕ್ಕಳಿಗೆ ಸರ್ಕಾರದ ವಸತಿಶಾಲೆಗಳಲ್ಲಿ ಉಚಿತ ಪ್ರವೇಶ ಕಲ್ಪಿಸಲು ಮುಂದಾಗಿರುವ ಮಕ್ಕಳ ರಕ್ಷಣಾ ನಿರ್ದೇಶನಾಲಯ, ಅರ್ಹ ಮಕ್ಕಳ ಪಟ್ಟಿ ಸಿದ್ಧಪಡಿಸುತ್ತಿದೆ.

'ಬಾಲಮಂದಿರದ ಮಕ್ಕಳು ಉತ್ತಮ ಶಿಕ್ಷಣ ಪಡೆಯಬೇಕು. ಸಮಾಜದಲ್ಲಿ ಮಾದರಿ ವ್ಯಕ್ತಿಗಳಾಗಿ ಬೆಳೆಯಬೇಕು' ಎಂಬ ಉದ್ದೇಶದಿಂದ ನಿರ್ದೇಶನಾಲ-ಯವು ಈ ಹೊಸ ಯೋಜನೆ ರೂಪಿಸಿದೆ.

ರಾಜ್ಯದ 30 ಜಿಲ್ಲೆಗಳ ಬಾಲಕರ ಬಾಲಮಂದಿರ ಹಾಗೂ ಬಾಲಕಿಯರ ಬಾಲಮಂದಿರದ ಅಧೀಕ್ಷಕರಿಗೆ ಪತ್ರ ಬರೆದಿರುವ ನಿರ್ದೇಶನಾಲಯದ ಯೋಜನಾ ನಿರ್ದೇಶಕರು, 'ನಿಮ್ಮ ಬಾಲಮಂದಿರಲ್ಲಿರುವ ಮಕ್ಕಳನ್ನು ಸರ್ಕಾರಿ ವಸತಿ ಶಾಲೆಗಳಿಗೆ ಸೇರಿಸಲು ಕ್ರಮ ವಹಿಸಿ' ಎಂದು ಸೂಚಿಸಿದ್ದಾರೆ.

ಬಾಲಮಂದಿರದ ಮಕ್ಕಳನ್ನು ವಸತಿಶಾಲೆಗೆ ಸೇರಿಸಲು ಮಕ್ಕಳ ರಕ್ಷಣಾ ನಿರ್ದೇಶನಾಲಯ ಸೂಚಿಸಿದೆ. 6ನೇ ತರಗತಿಗೆ ಅರ್ಹರಿರುವ ಮಕ್ಕಳ ಪಟ್ಟಿ ಸಿದ್ಧಪಡಿಸುವ ಪ್ರಕ್ರಿಯೆ ನಡೆದಿದೆ
ಅನ್ನಪೂರ್ಣ ಸಂಗಳದ, ಹಾವೇರಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ

'ಬಾಲಮಂದಿರದಲ್ಲಿರುವ ಹೆಚ್ಚಿನ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಈ ಮಕ್ಕಳನ್ನು ಸರ್ಕಾರದ ವಸತಿ (ಮೊರಾರ್ಜಿ ದೇಸಾಯಿ, ರಾಣಿ ಚನ್ನಮ್ಮ ಹಾಗೂ ಇತರೆ) ಶಾಲೆಗಳಿಗೆ ಸೇರಿಸಿದರೆ ಉತ್ತಮ ವಿದ್ಯಾಭ್ಯಾಸ ಸಿಗಲಿದೆ. ಬಾಲಮಂದಿರದಲ್ಲಿರುವ 6ನೇ ತರಗತಿಗೆ ಅರ್ಹವಿರುವ ಎಲ್ಲ ಮಕ್ಕಳನ್ನು ವಸತಿ ಶಾಲೆಗಳಿಗೆ ಸೇರಿಸಲು ಅವಕಾಶವಿದೆ. ನಿಮ್ಮ ಬಾಲಮಂದಿರದಲ್ಲಿರುವ ಅರ್ಹ ಮಕ್ಕಳನ್ನು ವಸತಿ ಶಾಲೆಗೆ ಸೇರಿಸಲು ಕ್ರಮ ಕೈಗೊಂಡು, ಅದರ ವರದಿಯನ್ನು ಕಚೇರಿಗೆ ಕಳುಹಿಸಿ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಬಾಲ ನ್ಯಾಯ ಕಾಯ್ದೆ ಪ್ರಕಾರ, ಪ್ರತಿಯೊಬ್ಬ ಮಗುವೂ ಕುಟುಂಬದ ವಾತಾವರಣದಲ್ಲಿ ಪೋಷಕರ ಜೊತೆ ಬೆಳೆಯಬೇಕು. ಏಕ ಪೋಷಕ ಹಾಗೂ ಇತರೆ ಕಾರಣದಿಂದ ಬಾಲಮಂದಿರದಲ್ಲಿರುವ ಮಕ್ಕಳನ್ನು ಆಪ್ತಸಮಾಲೋಚನೆಗೆ ಒಳಪಡಿಸಬೇಕು. ಅವರಿಗೆ ಪ್ರಾಯೋಜಕತ್ವ ಹಾಗೂ ಸರ್ಕಾರದ ಇತರೆ ಯೋಜನೆಗಳಡಿ ಸೌಲಭ್ಯ ಒದಗಿಸಬೇಕು' ಎಂದೂ ಪತ್ರದಲ್ಲಿ ತಿಳಿಸಲಾಗಿದೆ.

ಉನ್ನತ ಶಿಕ್ಷಣಕ್ಕೆ ಅನುಕೂಲ

'ಬಾಲ ಕಾರ್ಮಿಕ, ಅನಾಥ, ಭಿಕ್ಷಾಟನೆ ಜಾಲಕ್ಕೆ ಸಿಲುಕಿದ ಹಾಗೂ ಇತರೆ ಸಂದಿಗ್ಧ ಪರಿಸ್ಥಿತಿ ಎದುರಿಸುವ ಮಕ್ಕಳನ್ನು ರಕ್ಷಿಸಿ ಬಾಲ ಮಂದಿರಕ್ಕೆ ಸೇರಿಸಲಾಗುತ್ತದೆ. ಇಂಥ ಮಕ್ಕಳಿಗೆ ಸದ್ಯ ಬಾಲಮಂದಿರದ ಮೂಲಕ ವಿದ್ಯಾಭ್ಯಾಸ ಕೊಡಿಸಲಾಗುತ್ತಿದೆ. ಮಕ್ಕಳ ಉನ್ನತ ಶಿಕ್ಷಣದ ದೃಷ್ಟಿಯಿಂದ ಇದೀಗ ವಸತಿ ಶಾಲೆಗಳಿಗೆ ಸೇರಿಸಲು ತೀರ್ಮಾನಿಸಲಾಗಿದೆ' ಎಂದು ನಿರ್ದೇಶನಾಲಯ ಅಧಿಕಾರಿಯೊಬ್ಬರು ಹೇಳಿದರು.

'ವಸತಿ ಶಾಲೆಗೆ ಸೇರಲು ಅರ್ಹರಿರುವ ಮಕ್ಕಳು ಬಾಲಮಂದಿರದಲ್ಲಿದ್ದಾರೆ. ಪ್ರವೇಶ ಪರೀಕ್ಷೆ ಇಲ್ಲದೇ ಅವರನ್ನು ವಸತಿ ಶಾಲೆಗೆ ಸೇರಿಸಲು ಅವಕಾಶವಿದೆ. ಜಿಲ್ಲಾವಾರು ಪಟ್ಟಿ ಸಿದ್ಧಪಡಿಸಿ, ಆಯಾ ಜಿಲ್ಲೆಯಲ್ಲಿರುವ ವಸತಿ ಶಾಲೆಯ 6ನೇ ತರಗತಿಗೆ ಮಕ್ಕಳನ್ನು ಸೇರಿಸಲಾಗುವುದು' ಎಂದು ತಿಳಿಸಿದರು.

ಆದಾಯಕ್ಕಿಂತ ಹೆಚ್ಚು ಆಸ್ತಿ 72 ವರ್ಷದ ನಿವೃತ್ತ ಅಧಿಕಾರಿಗೆ ಶಿಕ್ಷೆ

ಬೆಂಗಳೂರು: ಹದಿನೈದು ವರ್ಷದ ಹಿಂದಿನ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ್ದ ಪ್ರಕರಣದಲ್ಲಿ ಸಾರಿಗೆ ಇಲಾಖೆ 72 ವರ್ಷದ ನಿವೃತ್ತ ಅಧಿಕಾರಿ ಜೆ.ವಿ.ರಾಮಯ್ಯಗೆ ಸಿಬಿಐ, ಇ.ಡಿ ವಿಶೇಷ ನ್ಯಾಯಾಲಯವು ಮೂರು ವರ್ಷ ಜೈಲುಶಿಕ್ಷೆ ವಿಧಿಸಿದೆ.

ನಾಗಮಂಗಲ ತಾಲ್ಲೂಕು ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಇನ್‌ಸ್ಪೆಕ್ಟರ್ ಆಗಿದ್ದ ರಾಮಯ್ಯ ವಿರುದ್ಧ 2009ರ ಸೆಪ್ಟೆಂಬರ್ ತಿಂಗಳಿನಲ್ಲಿ ಕೋಲಾರ ಲೋಕಾಯುಕ್ತದಲ್ಲಿ ದೂರು ದಾಖಲಾಗಿತ್ತು. ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ, ₹1.24 ಕೋಟಿ ಮೌಲ್ಯದ ನಗ-ನಗದು ಮತ್ತು ಆಸ್ತಿ ಪತ್ರಗಳನ್ನು ಪತ್ತೆ ಮಾಡಿದ್ದರು.

ರಾಮಯ್ಯ ಆದಾಯಕ್ಕಿಂತ ಶೇ149.50ರಷ್ಟು ಹೆಚ್ಚು ಆಸ್ತಿ ಹೊಂದಿರುವುದು ಪತ್ತೆಯಾಗಿತ್ತು. ನಂತರ ನಡೆದ ಸುದೀರ್ಘ ವಿಚಾರಣೆಯ ನಂತರ ನ್ಯಾಯಾಲಯವು ಈಚೆಗೆ ಶಿಕ್ಷೆ ಪ್ರಕಟಿಸಿದೆ. ರಾಮಯ್ಯ ಅವರಿಗೆ 3 ವರ್ಷ ಸಜೆ, ₹2 ಲಕ್ಷ ದಂಡ ವಿಧಿಸಿದೆ. ದಂಡ ಕಟ್ಟದಿದ್ದರೆ ಹೆಚ್ಚುವರಿ ಒಂದು ವರ್ಷ ಸಜೆ ಅನುಭವಿಸಬೇಕು ಎಂದು ಸೂಚಿಸಿದೆ. ಜತೆಗೆ ₹1.09 ಕೋಟಿ ಮೌಲ್ಯದಷ್ಟು ಆಸ್ತಿಯನ್ನು ರಾಜ್ಯ ಸರ್ಕಾರವು ತನ್ನ ಸುಪರ್ದಿಗೆ ತೆಗೆದುಕೊಳ್ಳಲು ಆದೇಶಿಸಿದೆ.

ಭ್ರಷ್ಟರಿಗೆ ಕಠಿಣ ಶಿಕ್ಷೆಯಾಗುತ್ತದೆ ಎಂಬ ಸಂದೇಶ ರವಾನಿಸಲು ಈ ವ್ಯಕ್ತಿಗೆ 7 ವರ್ಷ ಜೈಲು ಶಿಕ್ಷೆ ವಿಧಿಸಬಹುದಿತ್ತು. ವಯಸ್ಸಾಗಿರುವ ಕಾರಣ 3 ವರ್ಷ ಜೈಲು ವಿಧಿಸಲಾಗಿದೆ
ಎಚ್.ಎ.ಮೋಹನ್, ನ್ಯಾಯಾಧೀಶರು, ಸಿಬಿಐ, ಇ.ಡಿಯ ವಿಶೇಷ ನ್ಯಾಯಾಲಯ

ರಕ್ತ ನಾಳೀಯ ಸಮಸ್ಯೆಗಳ ಕುರಿತು ಜಾಗೃತಿ ಮೂಡಿಸಲು ಭಾನುವಾರ ಆಯೋಜಿಸಿದ್ದ ವಾಕಥಾನ್‌ಗೆ ಚಾಲನೆ ನೀಡಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ, ಜನರೊಂದಿಗೆ ತಾವೂ ನಡಿಗೆಯಲ್ಲಿ ಸಾಗಿದರು

'ವೈದ್ಯಕೀಯ ಕಾಲೇಜುಗಳಲ್ಲಿ ವ್ಯಾಸ್ಕುಲರ್ ವಿಭಾಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವ್ಯಾಸ್ಕುಲರ್ (ರಕ್ತ ನಾಳೀಯ) ಸಮಸ್ಯೆಗಳನ್ನು ಪತ್ತೆ ಹಚ್ಚಲು ಹಾಗೂ ಸಾರ್ವಜನಿಕರಿಗೆ ಕೈಗೆಟಕುವ ದರದಲ್ಲಿ ಚಿಕಿತ್ಸೆ ನೀಡಲು ರಾಜ್ಯದ ಎಲ್ಲ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ವ್ಯಾಸ್ಕುಲರ್ ವಿಭಾಗವನ್ನು ಶೀಘ್ರದಲ್ಲಿಯೇ ಪ್ರಾರಂಭ ಮಾಡಲಾಗುವುದು' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ ತಿಳಿಸಿದರು.

ರಾಷ್ಟ್ರೀಯ ರಕ್ತ ನಾಳೀಯ ದಿನದ ಪ್ರಯುಕ್ತ ವ್ಯಾಸ್ಕುಲರ್ ಸೊಸೈಟಿ ಆಫ್ ಇಂಡಿಯಾ ಹಾಗೂ ವ್ಯಾಸ್ಕುಲರ್ ಸರ್ಜನ್ಸ್ ಅಸೋಸಿಯೇಷನ್ ಜಂಟಿಯಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡ ವಾಕಥಾನ್‌ಗೆ ಚಾಲನೆ ನೀಡಿ, ಮಾತನಾಡಿದರು.

'ಈಗಾಗಲೇ ಬೆಂಗಳೂರು ಹಾಗೂ ಮೈಸೂರಿನಲ್ಲಿನ ವೈದ್ಯಕೀಯ ಕಾಲೇಜುಗಳಲ್ಲಿ ವ್ಯಾಸ್ಕುಲರ್ ವಿಭಾಗಗಳು ಕಾರ್ಯನಿರ್ವಹಿಸುತ್ತಿವೆ. ಕಲಬುರಗಿ, ಬೆಳಗಾವಿ ಹಾಗೂ ಹುಬ್ಬಳ್ಳಿಯಲ್ಲಿ ಈ ವಿಭಾಗ ಆರಂಭವಾಗಲಿದೆ. ಇಲ್ಲಿನ ವಿಕ್ಟೋರಿಯಾ ಹಾಗೂ ಸಂಜಯ್ ಗಾಂಧಿ ಆಸ್ಪತ್ರೆಯಲ್ಲಿಯೂ ಈ ವಿಭಾಗ ಪ್ರಾರಂಭಿಸಲು ಚಿಂತನೆ ನಡೆಸಲಾಗಿದೆ' ಎಂದು ಹೇಳಿದರು.

ರಕ್ತ ನಾಳೀಯ ಶಸ್ತ್ರಚಿಕಿತ್ಸಕ ಡಾ.ಕೆ.ಆರ್. ಸುರೇಶ್ ಮಾತನಾಡಿ, 'ಹೃದಯಾಘಾತಕ್ಕೆ ಒಳಗಾದವರಿಗೆ ನಿಗದಿತ ಅವಧಿಯೊಳಗೆ ಚಿಕಿತ್ಸೆ ಒದಗಿಸಬೇಕು. ಇಲ್ಲವಾದಲ್ಲಿ ಜೀವಕ್ಕೆ ಹಾನಿಯಾಗಲಿದೆ. ಹೃದಯ ಕಾಯಿಲೆಗಳ ಬಗ್ಗೆ ಜನರು ಎಚ್ಚರದಿಂದ ಇರಬೇಕು. ಧೂಮಪಾನ, ಮಾದಕ ವಸ್ತುಗಳ ಸೇವನೆಯಿಂದಾಗಿ ಕಿರಿಯ ವಯಸ್ಸಿನಲ್ಲಿಯೇ ಹೃದಯಾಘಾತ ಸಂಭವಿಸುತ್ತಿದೆ. ಆದ್ದರಿಂದ ಉತ್ತಮ ಜೀವನಶೈಲಿ ಅಳವಡಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು. ವ್ಯಾಸ್ಕುಲರ್ ಸರ್ಜನ್ಸ್ ಅಸೋಸಿಯೇಷನ್ ಅಧ್ಯಕ್ಷ ಡಾ.ವೆಂಕಟೇಶ್ ರೆಡ್ಡಿ ಮಾತನಾಡಿ, 'ಹೃದಯದ ಆರೋಗ್ಯಕ್ಕೆ ಸಂಬಂಧಿಸಿದಂತೆ ನಿಯಮಿತವಾಗಿ ಪರೀಕ್ಷೆ ಮಾಡಿ-ಸಿಕೊಳ್ಳಬೇಕು. ಈ ರಕ್ತ ನಾಳೀಯ ಸಮಸ್ಯೆ ಬಗ್ಗೆ ನಿರಂತರ ಅರಿವು ಮೂಡಿಸಲಾಗುತ್ತಿದೆ' ಎಂದು ಹೇಳಿದರು.

ಕಂಠೀರವ ಕ್ರೀಡಾಂಗಣದಿಂದ ಆರಂಭವಾದ ವಾಕಥಾನ್, ಕಸ್ತೂರಬಾ ರಸ್ತೆ, ವಿಧಾನಸೌಧ, ನೃಪತುಂಗ ರಸ್ತೆ ಮೂಲಕ ಸಾಗಿ ಬಂದು ಕಂಠೀರವ ಕ್ರೀಡಾಂಗಣದಲ್ಲಿ ಅಂತ್ಯಗೊಂಡಿತು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ರಮೇಶ್ ಎಂ.ಕೆ.,ಜಯದೇವ ಹೃದ್ರೋಗ ಸಂಸ್ಥೆಯ ವ್ಯಾಸ್ಕುಲರ್ ಸರ್ಜನ್ ಡಾ.ಮುರಳಿ ಕೃಷ್ಣ, ವಿಜ್ಞಾನಿ ವಿ.ಕೆ.ಆತ್ರೆ, ಚಿತ್ರನಟಿ ಸಂಜನಾ ಗರ್ಲಾನಿ ಉಪಸ್ಥಿತರಿದ್ದರು.

ಗಾಜಾ ಮೇಲೆ ಇಸ್ರೇಲ್ ದಾಳಿ 39 ಜನ ಸಾವು

ಟೆಲ್ ಅವೀವ್ (ಎಪಿ): ಇಸ್ರೇಲ್ ನಡೆಸಿದ ಪ್ರತ್ಯೇಕ ದಾಳಿಯಲ್ಲಿ ಗಾಜಾದ ಕನಿಷ್ಠ 39 ಜನರು ಮೃತಪಟ್ಟಿದ್ದಾರೆ.

ಗಾಜಾದಲ್ಲಿ ನಿರಾಶ್ರಿತರಿಗೆ ಆಶ್ರಯ ನೀಡುತ್ತಿದ್ದ ಎರಡು ಶಾಲೆಗಳನ್ನು ಗುರಿಯಾಗಿಸಿಕೊಂಡು ಇಸ್ರೇಲ್ ದಾಳಿ ನಡೆಸಿದ್ದು, ಭಾನುವಾರ ಕನಿಷ್ಠ 25 ಜನರ ಹತರಾಗಿದ್ದಾರೆ ಎಂದು ಅಧಿಕೃತ ಸುದ್ದಿ ಸಂಸ್ಥೆ ತಿಳಿಸಿದೆ. ಗಾಜಾದ ಅಲ್-ಅಕ್ಸಾ ಹುತಾತ್ಮರ ಆಸ್ಪತ್ರೆಯ ಪರಿಹಾರ ಶಿಬಿರದ ಮೇಲೆ ಇಸ್ರೇಲ್ ದಾಳಿ ಮಾಡಿದ್ದು, ಒಬ್ಬ ಮಹಿಳೆ ಸೇರಿದಂತೆ ನಾಲ್ಕು ಜನರು ಮೃತಪಟ್ಟಿದ್ದು, ಇತರರು ಗಾಯಗೊಂಡರು ಎಂದು ಗಾಜಾದ ಆರೋಗ್ಯ ಸಚಿವಾಲಯ ತಿಳಿಸಿದೆ.

ಪ್ರತ್ಯೇಕ ದಾಳಿಯಲ್ಲಿ ಉತ್ತರ ಗಾಜಾದ ಮನೆಯೊಂದು ನೆಲಸಮಗೊಂಡಿದ್ದು, ಮೂರು ಮಕ್ಕಳು ಸೇರಿದಂತೆ ಕನಿಷ್ಠ ಎಂಟು ಜನರು ಸಾವನ್ನಪ್ಪಿದ್ದಾರೆ ಎಂದು ಸಚಿವಾಲಯ ತಿಳಿಸಿದೆ.

ಅಲ್ಲದೇ, ಟೆಲ್ ಅವೀವ್ ಉಪನಗರದಲ್ಲಿ ಪ್ಯಾಲೆಸ್ಟೀನ್ ಉಗ್ರಗಾಮಿಗಳು ಚಾಕು ಇರಿದು 70 ವರ್ಷದ ವೃದ್ಧೆ ಮತ್ತು 80 ವರ್ಷದ ವೃದ್ಧನನ್ನು ಹತ್ಯೆ ಮಾಡಿದ್ದು, ಇಬ್ಬರು ಪುರುಷರು ಗಾಯಗೊಂಡಿದ್ದಾರೆ ಎಂದು ಇಸ್ರೇಲ್‌ನ ಮ್ಯಾಗೆನ್ ಡೇವಿಡ್ ಆಡಮ್ ಪಾರುಗಾಣಿಕಾ ಸಂಸ್ಥೆ ತಿಳಿಸಿದೆ.

ಆರ್‌ವಿ ಕಾಲೇಜು: 1140 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಮೈಸೂರು ರಸ್ತೆಯ ಪೂರ್ಣಿಮಾ ಪ್ಯಾಲೇಸ್‌ನಲ್ಲಿ ಆಯೋಜಿಸಿದ್ದ ಆರ್.ವಿ.ಎಂಜಿನಿಯ-ರಿಂಗ್ ಕಾಲೇಜಿನ 14ನೇ ಘಟಿಕೋತ್ಸವದಲ್ಲಿ ವಿವಿಧ ವಿಭಾಗಗಳಲ್ಲಿ ಉತ್ತೀರ್ಣರಾದ 1,140 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಬಯೊಟೆಕ್ನಾಲಜಿ ವಿಭಾಗದ ಪಿ.ಆರ್. ಶಿವದರ್ಶಿನಿ ಹಾಗೂ ಏರೋಸ್ಪೇಸ್ ವಿಭಾಗದ ಸಂಜಯ್.ಆರ್ ಪ್ರಥಮ ರ‍್ಯಾಂಕ್ ಪಡೆದು ಚಿನ್ನದ ಪದಕ ಮುಡಿಗೇರಿಸಿಕೊಂಡರು. ಘಟಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಬ್ರಿಗೇಡ್ ಸಮೂಹ ಸಂಸ್ಥೆಯ ಕಾರ್ಯಾಧ್ಯಕ್ಷ ಎಂ.ಆರ್. ಜೈಶಂಕರ್, 'ಪ್ರತಿ ವ್ಯಕ್ತಿಯ ಬೆಳವಣಿಗೆ-ಯಲ್ಲಿ ಸುತ್ತಮುತ್ತಲಿನ ವಿದ್ಯಮಾನಗಳು ಪ್ರಮುಖ ಪಾತ್ರವಹಿಸುತ್ತವೆ. ಈ ನಿಟ್ಟಿನಲ್ಲಿ ನಮ್ಮ ಒಡನಾಟ, ಹವ್ಯಾಸ ಹಾಗೂ ವಿವೇಚನೆಗಳು ಪ್ರಗತಿಗೆ ಪೂರಕವಾಗಿ ರಬೇಕು' ಎಂದರು.

'ನಕಾರಾತ್ಮಕ ವಿಚಾರಗಳಿಂದ ದೂರವಿರಬೇಕು. ಸತ್ಯ- ಮಿಥ್ಯಗಳ ವ್ಯತ್ಯಾಸ ಗುರುತಿಸುವ ಸಾಮರ್ಥ್ಯ ಬೆಳೆಸಿಕೊಳ್ಳಿ. ಗುರಿ ಸಾಧನೆಗೆ ಯುವ ಸಮುದಾಯ ಮೊದಲ ಪ್ರಾಶಸ್ತ್ಯ ನೀಡಬೇಕು' ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಉಶಿಯಾ ವಿಸ್ಡಮ್ ವರ್ಕ್ಸ್ ಸಿಇಒ ಉಶಿ ಮೋಹನ್ ದಾಸ್, ಆರ್‌ವಿಸಿಇ ಆಡಳಿತ ಮಂಡಳಿ ಅಧ್ಯಕ್ಷ ಎಂ.ಪಿ. ಶ್ಯಾಮ್, ಕೆ.ಎನ್.ಸುಬ್ರಹ್ಮಣ್ಯ, ಕೆ.ಎಸ್. ಗೀತಾ, ಎ.ಸಿ.ಚಂದ್ರಶೇಖರರಾಜು, ಎ.ವಿ.ಎಸ್ ಮೂರ್ತಿ, ಡಿ.ಪಿ.ನಾಗರಾಜ್, ಪಿ.ಎಸ್.ವೆಂಕಟೇಶ್, ನಿಖಿಲ್ ಮತ್ತಿತರು ಇದ್ದರು.

ಥೀಂ ಪಾರ್ಕ್ ಪ್ರಕರಣ: ಮಹಜರು

ಉಡುಪಿ: ಪರಶುರಾಮ ಥೀಂ ಪಾರ್ಕ್‌ನಲ್ಲಿ ಸ್ಥಾಪಿಸಿದ್ದ ಪರಶುರಾಮನ ಕಂಚಿನ ಮೂರ್ತಿಗೆ ಸಂಬಂಧಿಸಿದ ಪ್ರಕರಣದ ತನಿಖೆ ನಡೆಸುತ್ತಿರುವ ಕಾರ್ಕಳ ಪೊಲೀಸರು ಬೆಂಗಳೂರಿನ ಗೋದಾಮೊಂದರಲ್ಲಿ ಮಹಜರು ನಡೆಸಿ, ಮೂರ್ತಿಯ ಭಾಗಗಳನ್ನು ವಶಕ್ಕೆ ಪಡೆದಿದ್ದಾರೆ.

ಬೆಂಗಳೂರಿನ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಮುದ್ದೇನಹಳ್ಳಿಯಲ್ಲಿರುವ ಶಿಲ್ಪಿ ಕೃಷ್ಣ ನಾಯಕ್ ಎಂಬುವವರಿಗೆ ಸೇರಿದ ಗೋದಾಮಿನಿಂದ ಶನಿವಾರ ಮೂರ್ತಿಯ ಭಾಗಗಳನ್ನು ವಶಕ್ಕೆ ಪಡೆದಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಕಾರ್ಕಳ ಸರ್ಕಲ್ ಇನ್‌ಸ್ಪೆಕ್ಟರ್ ಮಂಜಪ್ಪ ಡಿ.ಆರ್. ಅವರ ನೇತೃತ್ವದ ಪೊಲೀಸರು ಮಹಜರು ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಿಬಿಐ ತನಿಖೆಗೆ ಆರ್. ಅಶೋಕ ಆಗ್ರಹ

ಕಾರಟಗಿ (ಕೊಪ್ಪಳ ಜಿಲ್ಲೆ): 'ಯಾದಗಿರಿಯಲ್ಲಿ ಪಿಎಸ್‌ಐ ಪರಶುರಾಮ್ ಮೃತಪಟ್ಟ ಪ್ರಕರಣ-ವನ್ನು ಯಾರೂ ಆಗ್ರಹಿಸದಿದ್ದರೂ ರಾಜ್ಯ ಸರ್ಕಾರ ಸಿಐಡಿ ತನಿಖೆಗೆ ನೀಡಿ ಕಣ್ಣೊರೆಸುವ ತಂತ್ರ ಮಾಡಿದೆ. ಹಿಂದಿನ ಸಿಐಡಿ ತನಿಖೆಗಳು ಏನಾಗಿವೆ ಎಂಬುದು ಎಲ್ಲರಿಗೂ ಗೊತ್ತೇ ಇದೆ. ಇದರ ಮೇಲೆ ನಮಗೆ ನಂಬಿಕೆ ಇಲ್ಲ. ಆದ್ದರಿಂದ ಸಿಬಿಐ ತನಿಖೆಗೆ ವಹಿಸಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಗ್ರಹಿಸಿದರು.

ಜಿಲ್ಲೆಯ ಕಾರಟಗಿ ತಾಲ್ಲೂಕಿನ ಸೋಮನಾಳ ಗ್ರಾಮದಲ್ಲಿ ಭಾನುವಾರ ಪರುಶುರಾಮ್ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದ ಬಳಿಕ ಮಾಧ್ಯಮದವರ ಜೊತೆ ಮಾತನಾಡಿದ ಅವರು 'ಈ ವಿಷಯದಲ್ಲಿ ರಾಜ್ಯ ಸರ್ಕಾರ ಹಾಗೂ ಪೊಲೀಸರು ನಡೆದುಕೊಂಡ ರೀತಿ ಬೇಸರ ತರಿಸುವಂಥದ್ದು. ದಲಿತ ಕುಟುಂಬದ ಹೆಣ್ಣುಮಗಳಿಗೆ (ಪರಶುರಾಮ್ ಪತ್ನಿ) ನ್ಯಾಯ ಒದಗಿಸಲು ಹೋರಾಟ ಮಾಡುತ್ತಿದ್ದೇವೆ. ನಮ್ಮ ಕ್ಷೇತ್ರದಲ್ಲಿ ದಲಿತರು ಇರಬಾರದು ಎಂದು ಯಾದಗಿರಿ ಶಾಸಕರು ಹೇಳಿದ್ದಾರೆಂದು ಪರಶುರಾಮ್ ಕುಟುಂಬದವರೇ ಆರೋಪಿಸಿದ್ದಾರೆ' ಎಂದರು.

EESL

ವಿದ್ಯುತ್ ಸಕ್ಷಮತೆ ಸೇವೆಗಳ ನಿಗಮ
(ಭಾರತ ಸಕಾರದ ಇಂಧನ ಸಚಿವಾಲಯ ಒಂದು ಜಂಟಿ ಉದ್ಯಮ)
6ನೇ ಮತ್ತು 7ನೇ ಮಹಡಿ, ಕೋರ್-3, ಸ್ಕೋಪ್ ಕಾಂಪ್ಲೆಕ್ಸ್, ಲೋಧಿ ರಸ್ತೆ, ನವದಹೆಲಿ-110003

ಆಹ್ವಾನ ಪ್ರಕಟಣೆ

ಭಾರತೀಯ ಮಾರುಕಟ್ಟೆಗಾಗಿ ವಿದ್ಯುತ್ ಸಕ್ಷಮತೆ ಸೇವೆಗಳ ನಿಮಗ (ಇಇಎಸ್‌ಎಲ್) ಇವರೊಂದಿಗೆ ಡಿಮಾಂಡ್ ಅಗ್ರಿಗೇಟರ್ಸ್/ಚಾನಲ್ ಪಾರ್ಟ್ನರ್ಸ್ ಫೇಸ್-III ಎಂಬುದಾಗಿ ನೋಂದಾಯಿಸಿಕೊಳ್ಳಲು ಕಾರ್ಪೊರೇಟ್ ಸೇಲ್ಸ್ ಏಜೆನ್ಸಿ/ಡೈರೆಕ್ಟ್ ಸೇಲ್ಸ್ ಏಜೆನ್ಸಿ/ಡೀಲರ್ಸ್, ರಿಟೇಲರ್ಸ್ ಮತ್ತು ಇನ್ನಿತರರಿಂದ ನೋಟಿಸ್ ಆಹ್ವಾನಿಸಲಾಗಿದೆ.
ವಿದ್ಯುತ್ ಸಕ್ಷಮತೆ ಸೇವೆಗಳ ನಿಗಮ (ಇಇಎಸ್‌ಎಲ್) ಇವರು ಕಾರ್ಪೊರೇಟ್ ಸೇಲ್ಸ್ ಏಜೆನ್ಸಿ, ಡೈರೆಕ್ಟ್ ಸೇಲ್ಸ್ ಏಜೆನ್ಸಿ, ಡೀಲರ್ಸ್ ಮತ್ತು ರಿಟೇಲರ್ಸ್ ಹಾಗೂ ಇನ್ನಿತರರನ್ನು ಚಾನಲ್ ಪಾರ್ಟ್ನರ್/ಡಿಮಾಂಡ್ ಅಗ್ರಿಗೇಟರ್ಸ್ ಆಗಿ, ಸಕ್ಸೆಸ್ ಫೀ ಮಾಡೆಲ್ ಅಡಿಯಲ್ಲಿ ಅಗತ್ಯ ಕಾಮಗಾರಿ ಸ್ವರೂಪದೊಂದಿಗೆ ತೊಡಗಿಸಿಕೊಳ್ಳಲು ಉದ್ದೇಶಿಸಿರುತ್ತಾರೆ. ಇಇಎಸ್‌ಎಲ್ ಸಂಸ್ಥೆಯು ಭಾರತದಲ್ಲಿ ಎಲ್‌ಇಡಿ ಮಾರುಕಟ್ಟೆಯನ್ನು ಬದಲಾಯಿಸಿರುವ ದಾಖಲೆಗಳನ್ನು ಸೃಷ್ಟಿಸಿದೆ. ಈ ಸಂಸ್ಥೆಯು ಈಗ, ವಿದ್ಯುತ್ ಸಕ್ಷಮತೆಯುಳ್ಳ ಫ್ಯಾನ್, ಎಸ್‌ಇಎಸಿ, ಇಇ ಮೋಟರ್ಸ್, ಇಂಡಕ್ಷನ್ ಕುಕ್‌ಟಾಪ್ಸ್ ಇತ್ಯಾದಿಗಳನ್ನು ತನ್ನ ಪ್ರಸ್ತುತ ಚಾಲಿತಯಲ್ಲಿರುವ ಮತ್ತು ನೂತನ ಕಾರ್ಯಕ್ರಮಗಳ ಅಡಿಯಲ್ಲಿ ಅಭಿವೃದ್ಧಿಪಡಿಸುವ ಮತ್ತು ಪರಿವರ್ತನೆಗೊಳಿಸುವ ಕಾರ್ಯತಂತ್ರ ರೂಪಿಸುತ್ತಲಿದೆ [ಎಸ್‌ಇಎಸಿ/ಉಜಾಲ/ಎನ್‌ಎಂಆರ್‌ಪಿ/ಐಇಇಎಸ್/ಎಸ್‌ಎಲ್‌ಎನ್‌ಪಿ/ಇಂಡಕ್ಷನ್ ಕುಕ್‌ಟಾಪ್ (ಐಸಿ)/ಹೀಟ್ ಪಂಪ್/ಇನ್ನಿತರ]
ಸಂಪೂರ್ಣ ವಿವರಗಳು 5ನೇ ಆಗಸ್ಟ್ 2024ರ ಬಳಿಕ ನಮ್ಮ ವೆಬ್‌ಸೈಟ್‌ನಲ್ಲ ಲಭ್ಯವಾಗುತ್ತವೆ
(www.eeslindia.org/enrollment/phase-III)
ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿ:
ಇಮೇಲ್: services@eesl.co.in ಫೋನ್: (011) 42519576/584 ವಿಳಾಸ: ಇಇಎಸ್‌ಎಲ್, ಕೋರ್3, 7ನೇ ಮಹಡಿ, ಸ್ಕೋಪ್ ಕಾಂಪ್ಲೆಕ್ಸ್, ಲೋಧಿ ರಸ್ತೆ, ನವದೆಹಲಿ 110003
ವಿದ್ಯುತ್ ಸಕ್ಷಮ ಭಾರತ ರೂಪಿಸುವ ನಿಟ್ಟಿನಲ್ಲಿ.................................

'ಕಾಂಗ್ರೆಸ್‌ನಿಂದಲೇ ರಾಜಭವನ ಹೆಚ್ಚು ದುರುಪಯೋಗ'

ಬೆಂಗಳೂರು: 'ರಾಜಭವನವನ್ನು ಅತಿ ಹೆಚ್ಚು ಬಾರಿ ದುರುಪಯೋಗ ಮಾಡಿಕೊಂಡ ಶ್ರೇಯಸ್ಸು ಕಾಂಗ್ರೆಸ್ಸಿನದ್ದು. ದೇಶದ ಇತಿಹಾಸದಲ್ಲಿ 56 ಬಾರಿ ರಾಜ್ಯಪಾಲರನ್ನು ಬಳಸಿಕೊಂಡು ಸರ್ಕಾರಗಳನ್ನು ಕಾಂಗ್ರೆಸ್ ಉರುಳಿಸಿದೆ' ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹಂಸರಾಜ್ ಭಾರದ್ವಾಜ್ ಅವರು ರಾಜ್ಯಪಾಲರಾಗಿ-ದ್ದಾಗ ಬಿ.ಎಸ್.ಯಡಿಯೂರಪ್ಪ ಅವರ ಮೇಲೆ ತನಿಖೆಗೆ ಆದೇಶಿಸಿದ್ದರು. ಆದರೆ ಈಗ ಆ ಪ್ರಕರಣ ಬಿದ್ದುಹೋಗಿದೆ. ಕಾಂಗ್ರೆಸ್ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ಷಮೆ ಕೇಳುತ್ತದೆಯೇ' ಎಂದು ಪ್ರಶ್ನಿಸಿದರು. ಯಾದಗಿರಿ ಪಿಎಸ್‌ಐ ಸಾವಿನ ಬಗ್ಗೆ ಕೇಳಿದ ಪ್ರಶ್ನೆಗೆ, 'ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನದಿಂದಲೇ ವರ್ಗಾವಣೆ ದಂಧೆ ಆರಂಭವಾಗಿದೆ' ಎಂದು ಆರೋಪಿಸಿದರು.

ನಗರದಲ್ಲಿ ಇಂದು

ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ, ವಿದ್ಯಾರ್ಥಿವೇತನ ವಿತರಣೆ: ಅತಿಥಿಗಳು: ಮಹಮಧಾನಂದಜೀ ಸ್ವಾಮೀಜಿ, ರೋನಾಲ್ಡ್ ಕೊಲಾಸೊ, ಅಧ್ಯಕ್ಷತೆ: ಎನ್.ಆರ್. ಪಂಡಿತ್ ಆರಾಧ್ಯ, ವೂಡೇ ಪಿ. ಕೃಷ್ಣ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 9

ಪ್ರತಿಭಾ ಪುರಸ್ಕಾರ-2024: ಸಾನ್ನಿಧ್ಯ: ನಿರಂಜನಾನಂದಪುರಿ ಸ್ವಾಮೀಜಿ, ಶಿವಾನಂದಪುರಿ ಸ್ವಾಮೀಜಿ, ಸಿದ್ಧರಾಮಾನಂದಪುರಿ ಸ್ವಾಮೀಜಿ, ಈಶ್ವರಾನಂದಪುರಿ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಪ್ರತಿಭಾ ಪುರಸ್ಕಾರ ಪ್ರದಾನ: ಬೈರತಿ ಸುರೇಶ್, ಅಧ್ಯಕ್ಷತೆ: ಎಚ್.ಎಂ. ರೇವಣ್ಣ, ಅತಿಥಿಗಳು: ಬಸವರಾಜ್ ಎನ್. ಶಿವಣ್ಣನವರ, ಬಿ.ಜಿ. ಗೋವಿಂದಪ್ಪ, ಆಯೋಜನೆ: ಶ್ರೀಮದ್ ಜಗದ್ಗುರು ರೇವಣಸಿದ್ದೇಶ್ವರ ಸಿಂಹಾಸನ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ಶಾಖಾ ಮಠ, ಚಂದ್ರಾ ಲೇಔಟ್, ಸ್ಥಳ: ಬಂಟರ ಸಂಘ, ವಿಜಯನಗರ, ಬೆಳಿಗ್ಗೆ 10

'ಬೆಂಕಿ ಬೂದಿ' ನಾಟಕ ಪ್ರದರ್ಶನ

ಕಥೆ: ಮಂಜುನಾಥ್ ನಾಯ್ಕ್, **ನಿರ್ದೇಶನ:** ಜೇಮ್ಸ್ ಸನ್ನಿ, **ಅತಿಥಿಗಳು:** ಎ.ಆರ್. ಗೋವಿಂದಸ್ವಾಮಿ, ಸುರೇಶ್ ಕೆ.ಎನ್.ಸಿ., ಎಲ್. ಜಯರಾಜ್, ಡಿ. ಚಂದ್ರಶೇಖರ್, ಕೆ.ಜಿ. ನಾರಾಯಣ್, ಅವಿನಾಶ್ ಶೆಟ್ಟಿ, ಮಂಜುನಾಥ್ ಶೆಟ್ಟಿ, **ಆಯೋಜನೆ:** ಬೆಂಗಳೂರು ಆರ್ಟ್ ಫೌಂಡೇಷನ್, **ಸ್ಥಳ:** ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ನೂಲಿನ ಚಂದಯ್ಯ ಜಯಂತಿ: ಉದ್ಘಾಟನೆ: ವಸುಂಧರಾ ಭೂಪತಿ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ಪ್ರಮೀಳಾ ಗರಡಿ, ಗೀತಾ ಜಯಂತ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ವಿಜಯನಗರ ಘಟಕ, ಸ್ಥಳ: ಬಸವೇಶ್ವರ ಕಾಲೇಜಿನ ಆವರಣ, ವಿಜಯನಗರ ಮೆಟ್ರೊ ನಿಲ್ದಾಣದ ಹತ್ತಿರ, ಬೆಳಿಗ್ಗೆ 11

ಪ್ರಥಮ ವರ್ಷದ ಬಿ.ಎ, ಬಿ.ಕಾಂ ತರಗತಿಗಳ ಪ್ರಾರಂಭೋತ್ಸವ: ಅತಿಥಿಗಳು: ಸಂಗಮೇಶ ಉಪಾಸೆ, ರೇಖಾ ಕೌಶಿಕ್ ಪಿ.ಆರ್., ಅಧ್ಯಕ್ಷತೆ: ಕೆ.ಎಸ್. ಗೋಪಾಲಕೃಷ್ಣ, ಆಯೋಜನೆ ಮತ್ತು ಸ್ಥಳ: ಬಿಇಎಸ್ ಕಲೆ ಮತ್ತು ವಾಣಿಜ್ಯ ಸಂಜೆ ಮಹಾವಿದ್ಯಾಲಯ, ಜಯನಗರ ನಾಲ್ಕನೇ ಬ್ಲಾಕ್, ಸಂಜೆ 6

ನಾಗರ ಪಂಚಮಿ, ಗಂಗಮ್ಮ ದೇವಿ ಜಾತ್ರೆ, ಕರಗದ ಮಹೋತ್ಸವ: ಸಂಜೆ 6.30ಕ್ಕೆ ನಾಗೇಂದ್ರಸ್ವಾಮಿ ಮತ್ತು ಗಂಗಮ್ಮ ದೇವಿಗೆ ವಿಶೇಷ ಅಲಂಕಾರ, ಮಹಾಮಂಗಳಾರತಿ, ಅನ್ನದಾನ, ಆಯೋಜನೆ ಮತ್ತು ಸ್ಥಳ: ಪಾತಾಳ ಪಂಚನಾಗೇಂದ್ರಸ್ವಾಮಿ ಮತ್ತು ಗಂಗಮ್ಮ ದೇವಸ್ಥಾನ, ಮೈಕೊ ಲೇಔಟ್ ಕುರುಬರಹಳ್ಳಿ

'ಗುಲಾಬಿ ಗ್ಯಾಂಗು ಭಾಗ-2' ನಾಟಕ ಪ್ರದರ್ಶನ: ರಂಗರೂಪ ಪ್ರವೀಣ್ ಸೂಡ, ನಿರ್ದೇಶನ: ರಾಜಗುರು ಹೊಸಕೋಟೆ, ಆಯೋಜನೆ: ರಂಗಪಯಣ ಟ್ರಸ್ಟ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

ಪುಲಿಕೇಶಿನಗರ ಜನಸ್ಪಂದನ ಸಭೆಯಲ್ಲಿ ಶಾಸಕ ಶ್ರೀನಿವಾಸ್

ಸಮಸ್ಯೆಗಳ ಪರಿಹಾರಕ್ಕೆ ಸೂಕ್ತ ಕ್ರಮ: ಭರವಸೆ

ಪ್ರಜಾವಾಣಿ ವಾರ್ತೆ

ಯಲಹಂಕ: 'ನಮ್ಮ ಬಡಾವಣೆಗೆ ಕಾವೇರಿ ನೀರು ಪೂರೈಕೆಯಾಗುತ್ತಿಲ್ಲ, ಕಸದ ಸಮಸ್ಯೆ ನಿರಂತರವಾಗಿದೆ, ಒಳಚರಂಡಿ ವ್ಯವಸ್ಥೆ ಇಲ್ಲದೆ ತೊಂದರೆಯಾಗಿದೆ, ರಸ್ತೆಗಳು ಹಾಳಾಗಿವೆ...'

ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದಲ್ಲಿ ಆಯೋಜಿಸಿದ್ದ ಜನಸ್ಪಂದನ ಕಾರ್ಯಕ್ರಮದಲ್ಲಿ ಶಾಸಕರು ಮತ್ತು ಅಧಿಕಾರಿಗಳ ಎದುರು ಸಾರ್ವಜನಿಕರು ಸಮಸ್ಯೆಗಳನ್ನು ತೆರೆದಿಟ್ಟ ಪರಿ ಇದು.

ಕುಶಾಲ್ ನಗರ ಮತ್ತು ಡಿ.ಜೆ ಹಳ್ಳಿಯಲ್ಲಿ 10 ವರ್ಷಗಳಿಂದ ಕಾವೇರಿ ನೀರು ಸರಿಯಾಗಿ ಬರುತ್ತಿಲ್ಲ. ಸಮರ್ಪಕ ಒಳಚರಂಡಿ ವ್ಯವಸ್ಥೆ ಇಲ್ಲದೆ ತೊಂದರೆ ಅನುಭವಿಸಬೇಕಾಗಿದೆ ಎಂದು ನಿವಾಸಿಗಳು ದೂರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಎ.ಸಿ.ಶ್ರೀನಿವಾಸ್, 'ಕ್ಷೇತ್ರದಲ್ಲಿ ಪಿಳ್ಳಣ್ಣ ಗಾರ್ಡನ್ ಬಳಿ ನೀರು ಸಂಗ್ರಹಣಾ ಟ್ಯಾಂಕ್ ನಿರ್ಮಿಸುವುದು ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿ-ಗಾಗಿ ಸರ್ಕಾರದಿಂದ ₹30 ಕೋಟಿ ಅನುದಾನ ಮಂಜೂರಾಗಿದೆ. ಟೆಂಡರ್ ಪ್ರಕ್ರಿಯೆ ಮುಗಿದ ಕೂಡಲೇ ಕಾಮಗಾರಿ ಪ್ರಾರಂಭಿಸಲಾಗುವುದು' ಎಂದು ಭರವಸೆ ನೀಡಿದರು.

ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದಲ್ಲಿ ಆಯೋಜಿಸಿದ್ದ ಜನಸ್ಪಂದನ ಕಾರ್ಯಕ್ರಮದಲ್ಲಿ ಶಾಸಕ ಎ.ಸಿ.ಶ್ರೀನಿವಾಸ್ ಮಾತನಾಡಿದರು

ವಹಾಬ್ ಗಾರ್ಡನ್ ಮತ್ತು ಎಸ್.ಕೆ.ಗಾರ್ಡನ್ ಕೊಳೆಗೇರಿ ನಿವಾಸಿಗಳು, ಮನೆಗಳಿಗೆ ಹಕ್ಕುಪತ್ರ ನೀಡುವಂತೆ ಮನವಿ ಮಾಡಿದರು. ಸಗಾಯಪುರಂ ಹಾಗೂ ಡಿ.ಜೆ.ಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ ಶಿಥಿಲಗೊಂಡಿರುವ ಅಂಗನವಾಡಿ ಕಟ್ಟಡಗಳನ್ನು ಕೂಡಲೇ ದುರಸ್ತಿ ಮಾಡಿಸಿಕೊಡಬೇಕೆಂದು ಸ್ಥಳೀಯರು ಮನವಿ ಮಾಡಿದರು.

'ದಾಖಲೆಗಳನ್ನು ಪರಿಶೀಲಿಸಿ, ಹಕ್ಕುಪತ್ರ ವಿತರಿಸಲು ಸರ್ಕಾರಕ್ಕೆ ಮನವಿ ಮಾಡಲಾಗುವುದು. ಅಂಗನವಾಡಿ ಕಟ್ಟಡಗಳ ದುರಸ್ತಿಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಉಳಿದಂತೆ ಕಸ, ರಾಜಕಾಲುವೆ ಸ್ವಚ್ಛತೆಯಂತಹ ಸಮಸ್ಯೆಗಳನ್ನೂ ಹಂತ ಹಂತವಾಗಿ ಪರಿಹರಿಸಲಾಗುವುದು' ಎಂದು ಶಾಸಕರು ಭರವಸೆ ನೀಡಿದರು.

ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಿರುವ ಪ್ರದೇಶಗಳನ್ನು ಗುರುತಿಸಿ ಮೂರು ದಿನಗಳ ಒಳಗಾಗಿ ವರದಿ ನೀಡುವಂತೆ ಜಲಮಂಡಳಿ ಕಾರ್ಯನಿರ್ವಾಹಕ ಎಂಜಿನಿಯರ್ ರೂಪಾ ಅವರಿಗೆ ಶಾಸಕರು ಸೂಚಿಸಿದರು.

ಬಿಬಿಎಂಪಿ ಪೂರ್ವವಲಯ ಆಯುಕ್ತೆ ಸ್ನೇಹಲ್.ಆರ್, ಜಂಟಿ ಆಯುಕ್ತೆ ಸರೋಜಾ, ಮುಖ್ಯ ಎಂಜಿನಿಯರ್ ಸುಗುಣ, ಬಿಬಿಎಂಪಿ ಮಾಜಿ ಮೇಯರ್ ಸಂಪತ್‌ರಾಜ್, ಮಾಜಿ ಸದಸ್ಯರಾದ ಜಾಕೀರ್, ಜಮೀರ್ ಷಾ, ಸಹಾಯಕ ಪೊಲೀಸ್ ಆಯುಕ್ತ ಪ್ರಕಾಶ್ ರಾಥೋಡ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶಕುಂತಲಾ ದೇವಿ, ಆರೋಗ್ಯ ಅಧಿಕಾರಿ ಅನಂತಲಕ್ಷ್ಮಿ ಉಪಸ್ಥಿತರಿದ್ದರು.

95 ಅರ್ಜಿ ವಿಲೇವಾರಿ

ಜನಸ್ಪಂದನದಲ್ಲಿ ಸಾರ್ವಜನಿಕರಿಂದ ಸಲ್ಲಿಕೆಯಾಗಿದ್ದ ಒಟ್ಟು 335 ಅರ್ಜಿಗಳ ಪೈಕಿ 95 ಅರ್ಜಿಗಳನ್ನು ಸ್ಥಳದಲ್ಲೇ ವಿಲೇವಾರಿ ಮಾಡಲಾಯಿತು. ಉಳಿದವುಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ರವಾನಿಸಿ, ಕಾಲಮಿತಿಯೊಳಗೆ ವಿಲೇವಾರಿ ಮಾಡಲು ಅಧಿಕಾರಿಗಳಿಗೆ ಶಾಸಕ ಶ್ರೀನಿವಾಸ್ ಸೂಚಿಸಿದರು. ಇದೇ ವೇಳೆ 30 ಜನರಿಗೆ ವೃದ್ಧಾಪ್ಯ ಮತ್ತು ವಿಧವಾ ವೇತನದ ಆದೇಶಪತ್ರ ವಿತರಿಸಲಾಯಿತು.

ನಿವೃತ್ತಿಯಂಚಿನ ಸಿ.ಇಗೆ 'ಗುತ್ತಿಗೆ' ಕೊಡುಗೆ?

ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಸಿ.ಇ ಎನ್‌.ಪಿ. ಬಾಲರಾಜು ಮುದುವರಿಸಲು ಪ್ರಸ್ತಾವ • ಸಿಎಂ ಆದೇಶದ ಉಲ್ಲಂಘನೆ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಇದೇ 31ಕ್ಕೆ ವಯೋನಿವೃತ್ತಿ ಹೊಂದಲಿರುವ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಮುಖ್ಯ ಎಂಜಿನಿಯರ್ ಎನ್‌.ಪಿ. ಬಾಲರಾಜು ಅವರನ್ನು ಎರಡು ವರ್ಷಗಳಿಗೆ ಗುತ್ತಿಗೆ ಆಧಾರದಲ್ಲಿ ಅದೇ ಹುದ್ದೆಯಲ್ಲಿ ಮುಂದುವರಿಸಲು ವಸತಿ ಸಚಿವರು ಮುಂದಾಗಿದ್ದಾರೆ.

ವಿವಿಧ ಇಲಾಖೆಗಳಲ್ಲಿ ನಿವೃತ್ತಿ ಬಳಿಕವೂ ಗುತ್ತಿಗೆ ಆಧಾರದಲ್ಲಿ ಮುಂದುವರಿದಿರುವ ಅಧಿಕಾರಿಗಳನ್ನು ಹೊರ ಕಳುಹಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಆದೇಶಿಸಿದ್ದರು. ಆ ಬಳಿಕ ಕೆಲವರನ್ನು ಕೆಲಸದಿಂದ ಬಿಡುಗಡೆಗೊಳಿಸಲಾಗಿತ್ತು. ಮುಖ್ಯಮಂತ್ರಿ ಯವರ ನಿರ್ದೇಶನಕ್ಕೆ ವಿರುದ್ಧವಾಗಿ ಬಾಲರಾಜು ಅವರನ್ನು ಕೆಲಸದಲ್ಲಿ ಮುಂದುವರಿಸಲು ವಸತಿ ಇಲಾಖೆ ಪ್ರಸ್ತಾವ ಸಿದ್ಧಪಡಿಸಿದೆ.

ವಸತಿ ಸಚಿವರಿಂದ ಟಿಪ್ಪಣಿ: ಜುಲೈ 29ರಂದು ವಸತಿ ಇಲಾಖೆ ಪ್ರಧಾನ ಕಾರ್ಯದರ್ಶಿಯವರಿಗೆ ಟಿಪ್ಪಣಿ ಹೊರಡಿಸಿರುವ ವಸತಿ ಸಚಿವ ಬಿ.ಜೆಡ್. ಜಮೀರ್ ಅಹ್ಮದ್ ಖಾನ್, 'ಬಾಲರಾಜು ಅವರು ಕೊಳೆಗೇರಿ ಅಭಿವೃದ್ಧಿ ಮಂಡಳಿ ಮುಖ್ಯ ಎಂಜಿನಿಯರ್ ಹುದ್ದೆಯಿಂದ ಆಗಸ್ಟ್ 31ರಂದು ವಯೋನಿವೃತ್ತಿ ಹೊಂದುತ್ತಿದ್ದಾರೆ. ಅವರನ್ನು ಸೆಪ್ಟೆಂಬರ್ 1 ರಿಂದ ಎರಡು ವರ್ಷಗಳಿಗೆ ಅದೇ ಹುದ್ದೆಗೆ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಕ್ರಮ ವಹಿಸಿ' ಎಂದು ಸೂಚನೆ ನೀಡಿದ್ದಾರೆ.

'ಬಾಲರಾಜು 35 ವರ್ಷ ಮಂಡಳಿಯಲ್ಲಿ ವಿವಿಧ ತಾಂತ್ರಿಕ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ರಾಜ್ಯ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳ ಅನುಷ್ಠಾನದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಪ್ರಗತಿಯಲ್ಲಿ-ರುವ ಯೋಜನೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಇವರ ಸೇವೆ ಅವಶ್ಯಕ' ಎಂದೂ ಉಲ್ಲೇಖಿಸಿದ್ದಾರೆ.

ಹೆಚ್ಚುವರಿ ಹೊಣೆ: ವಸತಿ ಇಲಾಖೆಯ ಅಧೀನದಲ್ಲಿರುವ ರಾಜೀವ್ ಗಾಂಧಿ ವಸತಿ ನಿಗಮದ ಮುಖ್ಯ ಎಂಜಿನಿಯರ್ ಹುದ್ದೆಯಲ್ಲಿದ್ದ ಸಂಜೀವ ವಿ. ಮರೆಡ್ಡಿ ರಜೆಯ ಮೇಲೆ ತೆರಳಿದ್ದು, ಈ ಹುದ್ದೆಯ ಹೆಚ್ಚುವರಿ ಪ್ರಭಾರವನ್ನೂ ಬಾಲರಾಜು ಅವರಿಗೆ ವಹಿಸಿ ಜುಲೈ 30ರಂದು ಆದೇಶ ಹೊರಡಿಸಲಾಗಿದೆ.

ರಾಜೀವ ಗಾಂಧಿ ವಸತಿ ನಿಗಮವು ಗ್ರಾಮೀಣ ವಸತಿ ಯೋಜನೆಗಳ ಜೊತೆ ಯಲ್ಲಿ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಮುಖ್ಯಮಂತ್ರಿಯವರ ಒಂದು ಲಕ್ಷ ಮನೆಗಳ ವಸತಿ ಯೋಜನೆ ಅನುಷ್ಠಾನದ ಜವಾಬ್ದಾರಿ ಹೊಂದಿದೆ.

ಖಾಲಿ ಉಳಿದ ಸಿ.ಇಗಳು: ಕೊಳೆಗೇರಿ ಅಭಿವೃದ್ಧಿ ಮಂಡಳಿ ಮುಖ್ಯ ಎಂಜಿನಿಯರ್ ಸೇರಿದಂತೆ ವಿವಿಧ ಇಲಾಖೆಗಳ ತಾಂತ್ರಿಕ ಹುದ್ದೆಗಳಿಗೆ ಲೋಕೋಪಯೋಗಿ ಇಲಾಖೆ ಮೂಲದ ಮುಖ್ಯ ಎಂಜಿನಿಯರ್‌ಗಳನ್ನೇ ನೇಮಿಸಲಾಗುತ್ತಿತ್ತು. ಈಗ ಹಲವು ಮುಖ್ಯ ಎಂಜಿನಿಯರ್‌ಗಳು ಹುದ್ದೆ ಇಲ್ಲದೆ ಖಾಲಿ ಕುಳಿತಿದ್ದರೂ ನಿವೃತ್ತರನ್ನು ಮುಂದುವರಿಸುವ ಪ್ರಸ್ತಾವಕ್ಕೆ ಅಧಿಕಾರಿಗಳ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿದೆ.

ರಮೇಂದ್ರ, ಜಿ.ಇ. ಯತೀಶ್ ಚಂದ್ರನ್, ವಿನಾಯಕ ಸೂಗೂರು, ಜಗನ್ನಾಥ ಹಲಿಂಗೆ, ಶಾಂತರಾಜಣ್ಣ ಸೇರಿದಂತೆ ಮುಖ್ಯ ಎಂಜಿನಿಯರ್ ದರ್ಜೆಯ ಹಲವರು ಹುದ್ದೆ ಇಲ್ಲದೆ ಖಾಲಿ ಕುಳಿತಿದ್ದಾರೆ. ಮುಖ್ಯ ಎಂಜಿನಿಯರ್‌ಗಳ ಹುದ್ದೆಗಳು ಖಾಲಿ ಇದ್ದರೂ ಅವರಿಗೆ ಹುದ್ದೆ ತೋರಿಸಿಲ್ಲ.

ಪ್ರತಿಕ್ರಿಯೆಗೆ ಸಿಗದ ಸಚಿವರು: ಈ ಕುರಿತು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರಿಂದ ಪ್ರತಿಕ್ರಿಯೆ ಪಡೆಯಲು ಪ್ರಯತ್ನಿಸಲಾಯಿತು. ಆದರೆ, ಅವರು ಮೊಬೈಲ್ ಕರೆ ಸ್ವೀಕರಿಸಲಿಲ್ಲ.

ಭ್ರಷ್ಟಾಚಾರದ ಆರೋಪ ಹೊತ್ತ ಅಧಿಕಾರಿ

ಮುಖ್ಯ ಎಂಜಿನಿಯರ್ ಎನ್‌.ಪಿ. ಬಾಲರಾಜು ವಿರುದ್ಧ ಲೋಕಾಯುಕ್ತ ಪೊಲೀಸರು ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಮೇಲೆ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದು, ತನಿಖೆ ಪ್ರಗತಿಯಲ್ಲಿದೆ. 2023ರ ಅಕ್ಟೋಬರ್ 30ರಂದು ಬಾಲರಾಜು ಅವರ ಮನೆ ಮತ್ತು ಅವರಿಗೆ ಸಂಬಂಧಿಸಿದ ಇತರ ಸ್ಥಳಗಳ ಮೇಲೆ ದಾಳಿ ನಡೆದಿತ್ತು. ಪ್ರಕರಣದ ತನಿಖೆ ಇನ್ನೂ ಪೂರ್ಣಗೊಂಡಿಲ್ಲ.

ನಿವೃತ್ತರನ್ನು ಹುದ್ದೆಯಲ್ಲಿ ಮುಂದುವರಿಸುವ ನಿರ್ಧಾರವನ್ನು ನಮ್ಮ ಹಂತದಲ್ಲಿ ಕೈಗೊಳ್ಳಲಾಗುವುದಿಲ್ಲ. ಮುಖ್ಯಮಂತ್ರಿಯವರೇ ನಿರ್ಧಾರ ಕೈಗೊಳ್ಳಬೇಕಾಗುತ್ತದೆ

ನವೀನ್ ರಾಜ್ ಸಿಂಗ್, ವಸತಿ ಇಲಾಖೆ ಪ್ರಧಾನ ಕಾರ್ಯದರ್ಶಿ

ಸುದ್ದಿ 2 ನಿಮಿಷ

'1984ರಲ್ಲೇ ಬದಲಿ ನಿವೇಶನ'

ಮೈಸೂರು: ಸಿದ್ದರಾಮಯ್ಯ ಅವರು 1984ರಲ್ಲಿ ಶಾಸಕರಾಗಿದ್ದ ಸಂದರ್ಭ ಇಲ್ಲಿನ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯಿಂದ (ಸಿಐಟಿಬಿ, ಈಗಿನ ಮುಡಾ) ಬದಲಿ ನಿವೇಶನ ಪಡೆದಿದ್ದ ಸಂಗತಿ ದಾಖಲೆಗಳಿಂದ ಬಹಿರಂಗಗೊಂಡಿದೆ.

1984ರ ಏಪ್ರಿಲ್‌ನಲ್ಲಿ ಸಿದ್ದರಾಮಯ್ಯ ಅವರಿಗೆ ಮೈಸೂರಿನ ಜಯನಗರ–ತೊಣಚಿಕೊಪ್ಪಲು 2ನೇ ಹಂತದ 'ಎಂ' ಬ್ಲಾಕ್‌ನ ಸಂಖ್ಯೆ 9ರಲ್ಲಿ 50X80 ಚ.ಅಡಿ ಅಳತೆಯ ನಿವೇಶನ ಮಂಜೂರಾಗಿತ್ತು.

ಇದಕ್ಕಾಗಿ ಪ್ರತಿ ಚದರ ಗಜಕ್ಕೆ ₹30ರಂತೆ ಒಟ್ಟು ₹15,110 ದರವನ್ನು ನಿಗದಿಪಡಿಸಲಾಗಿತ್ತು. ಆದರೆ, ಈ ನಿವೇಶನಕ್ಕೆ ಬದಲಾಗಿ ಅದೇ ಬಡಾವಣೆಯ 'ಜಿ' ಮತ್ತು 'ಎಚ್' ಬ್ಲಾಕ್‌ನಲ್ಲಿ ಖಾಲಿ ಇರುವ 'ನಿವೇಶನ ಸಂಖ್ಯೆ– 1245' ಮಂಜೂರು ಮಾಡುವಂತೆ ಸಿದ್ದರಾಮಯ್ಯ ಕೋರಿದ್ದರು.

ಈ ಮನವಿಗೆ ಸ್ಪಂದಿಸಿದ ಅಧಿಕಾರಿಗಳು ಪರ್ಯಾಯ ನಿವೇಶನವನ್ನು ಮಂಜೂರು ಮಾಡಿದ್ದರು. ಆರ್‌ಟಿಐ ಕಾರ್ಯಕರ್ತ ಗಂಗರಾಜು ಅವರಿಗೆ ಮಾಹಿತಿ ಹಕ್ಕಿನ ಅಡಿ ನೀಡಿರುವ ದಾಖಲೆಗಳಲ್ಲಿ ಈ ಸಂಗತಿ ಬಹಿರಂಗಗೊಂಡಿದೆ.

'ಸಿಐಟಿಬಿ ಹಾಗೂ ಈಗಿನ ಮುಡಾದಲ್ಲಿ ಆಗಿನಿಂದಲೂ ಶಾಸಕರ ಪ್ರಭಾವ ಕೆಲಸ ಮಾಡಿರುವುದನ್ನು ಈ ದಾಖಲೆಗಳು ಹೇಳುತ್ತವೆ' ಎಂದು ಗಂಗರಾಜು ದೂರಿದರು.

ಪತ್ರಕರ್ತ ಕುಮಾರ್ ಅರ್ಜಿ ವಜಾ

ನವದೆಹಲಿ: ಅಕ್ರಮವಾಗಿ ಕೋಟ್ಯಂತರ ರೂಪಾಯಿಗಳ ಮೊತ್ತವನ್ನು ಮೂರನೇ ವ್ಯಕ್ತಿಗೆ ವರ್ಗಾವಣೆ ಮಾಡಿದ ಆರೋಪ ಎದುರಿಸುತ್ತಿರುವ ಕನ್ನಡದ ಸುದ್ದಿ ವಾಹಿನಿ 'ಬಿ' ಟಿವಿ ವ್ಯವಸ್ಥಾಪಕ ನಿರ್ದೇಶಕ ಗಂಗಾಧರಪ್ಪ ಮುನೀಂದ್ರ ಕುಮಾರ್ ಅಲಿಯಾಸ್ ಜಿ.ಎಂ.ಕುಮಾರ್ (50) ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಸೆಷನ್ಸ್ ನ್ಯಾಯಾಲಯ ನೀಡಿದ್ದ ಜಾಮೀನನ್ನು ರದ್ದುಪಡಿಸಿದ್ದ ಕರ್ನಾಟಕ ಹೈಕೋರ್ಟ್, ಆರೋಪಿಯನ್ನು ವಶಕ್ಕೆ ಪಡೆದು ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸುವಂತೆ ಸಿಸಿಬಿ ಪೊಲೀಸರಿಗೆ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಕುಮಾರ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ. ಅಹ್ಸಾನುದ್ದೀನ್ ಅಮಾನುಲ್ಲಾ ಅವರಿದ್ದ ಪೀಠ, ಅರ್ಜಿದಾರರು ಆ. 13ರೊಳಗೆ ನ್ಯಾಯಾಲಯಕ್ಕೆ ಶರಣಾಗಬೇಕು ಎಂದು ನಿರ್ದೇಶಿಸಿತ್ತು.

ಕರ್ನಾಟಕ ಸರ್ಕಾರದ ಪರ ವಕೀಲರು, 'ಅರ್ಜಿದಾರರು ₹10 ಕೋಟಿಗೂ ಹೆಚ್ಚು ಹಣವನ್ನು ದುರುಪಯೋಗಪಡಿಸಿಕೊಂಡಿರುವುದ-ರಿಂದ ಕಸ್ಟಡಿ ವಿಚಾರಣೆಯ ಅಗತ್ಯವಿದೆ' ಎಂದು ವಾದ ಮಂಡಿಸಿದರು.

ಪ್ರಕರಣವೇನು?: 'ಬಿ' ಟಿವಿ ಮಾತೃ ಸಂಸ್ಥೆ ಈಗಲ್ ಸೈಟ್ ಮೀಡಿಯಾ ಪ್ರೈವೆಟ್ ಲಿಮಿಟೆಡ್‌ನಿಂದ ಕೋಟ್ಯಂತರ ರೂಪಾಯಿಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ ಆರೋಪದಡಿ ಜಿ.ಎಂ.ಕುಮಾರ್ ವಿರುದ್ಧ ಬೆಂಗಳೂರಿನ ವಿಜಯನಗರ ಪೊಲೀಸ್ ಠಾಣೆಯಲ್ಲಿ 2022ರಲ್ಲಿ ದೂರು ದಾಖಲಾಗಿತ್ತು. ತನಿಖೆ ನಡೆಸಿದ್ದ ಪೊಲೀಸರು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಈ ಸಂಬಂಧ ಜಿ.ಎಂ.ಕುಮಾರ್ ನಿರೀಕ್ಷಣಾ ಜಾಮೀನು ಕೋರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ 2023ರ ಆಗಸ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿ ತಿರಸ್ಕೃತಗೊಂಡಿತ್ತು. ನಂತರ ಪೊಲೀಸರು ಆರೋಪಿಯನ್ನು 2023ರ ನವೆಂಬರ್ 25ರಂದು ಬಂಧಿಸಿದ್ದರು. ನ್ಯಾಯಾಂಗ ವಶಕ್ಕೆ ಒಪ್ಪಿಸಿ ಕೋರ್ಟ್ ಆದೇಶಿಸಿತ್ತು. ಏತನ್ಮಧ್ಯೆ, 56ನೇ ಸೆಷನ್ಸ್ ನ್ಯಾಯಾಲಯ 2023ರ ಡಿಸೆಂಬರ್ 13ರಂದು ಜಾಮೀನು ಮಂಜೂರು ಮಾಡಿತ್ತು.

ಸಚಿವರಿಗೆ ಹೈಕಮಾಂಡ್ ಎಚ್ಚರಿಕೆ

'ಕಾರ್ಯವೈಖರಿ ತಿದ್ದಿಕೊಳ್ಳದಿದ್ದರೆ ಸಹಿಸಲ್ಲ' • ಸಂಪುಟ ಪುನಾರಚನೆ ಸುಳಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಮ್ಮ ಕಾರ್ಯವೈಖರಿ ತೃಪ್ತಿದಾಯಕವಾಗಿ ಇಲ್ಲ. ಎರಡು ತಿಂಗಳು ಕಾದು ನೋಡುತ್ತೇವೆ. ಹೀಗೇ ಮುಂದುವರಿದರೆ ಸಹಿಸಲ್ಲ' ಎಂದು ಸಚಿವರಿಗೆ ಕಾಂಗ್ರೆಸ್ ಹೈಕಮಾಂಡ್ ಖಡಕ್ ಎಚ್ಚರಿಕೆ ನೀಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸ 'ಕಾವೇರಿ'ಯಲ್ಲಿ ಸಚಿವರ ಜೊತೆ ಭಾನುವಾರ ಸಭೆ ನಡೆಸಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಸರಿಯಾಗಿ ಕೆಲಸ ಮಾಡದವರನ್ನು ಕೈಬಿಟ್ಟು, ದಸರಾ ವೇಳೆಗೆ ಸಚಿವ ಸಂಪುಟ ಪುನರ್ ರಚನೆಯ ಸುಳಿವು ನೀಡಿದ್ದಾರೆ ಎಂದು ಗೊತ್ತಾಗಿದೆ.

'ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಪ್ರಕರಣದಲ್ಲಿ ಸರ್ಕಾರ ಮತ್ತು ಮುಖ್ಯಮಂತ್ರಿಯ ಲೋಪ ಇಲ್ಲ. ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಿಂದ ಮತ್ತು ಹಿರಿಯ ವಕೀಲರುಗಳಿಂದ ದಾಖಲೆಗಳ ಪರಿಶೀಲನೆ ನಡೆಸಿದ್ದೇವೆ. ಎರಡೂ ಪ್ರ-ಕರಣಗಳಲ್ಲಿ ಸರ್ಕಾರದ ಪಾತ್ರ ಇಲ್ಲ ಎನ್ನುವುದು ಸ್ಪಷ್ಟವಾಗಿದೆ. ಹೀಗಿದ್ದೂ, ಈ ವಿಚಾರವನ್ನು ರಾಜ್ಯದ ಜನರಿಗೆ ಸರಿಯಾಗಿ ಅರ್ಥ ಮಾಡಿಸುವಲ್ಲಿ ಸೋತಿದ್ದೀರಿ. ಸರಿಯಾಗಿ ನಿರ್ವಹಿಸಿಲ್ಲ' ಎಂದು ಸಚಿವರನ್ನು ವೇಣುಗೋಪಾಲ್ ತರಾಟೆಗೆ ತೆಗೆದುಕೊಂಡರು ಎಂದು ಮೂಲಗಳು ಹೇಳಿವೆ.

'ಸರಿಯಾಗಿ ಕೆಲಸ ಮಾಡಿದ್ದರೆ ಲೋಕಸಭೆ ಚುನಾವಣೆಯಲ್ಲಿ ಕನಿಷ್ಠ 15 ಸ್ಥಾನಗಳನ್ನು ಗೆಲ್ಲಬಹುದಿತ್ತು. ನಿಮ್ಮ ಕೆಲಸ ತವರು ಮತ್ತು ಉಸ್ತುವಾರಿ ಜಿಲ್ಲೆಗೆ ಸೀಮಿತವಾಗಿದೆ. ಉಸ್ತುವಾರಿ ಜಿಲ್ಲೆಯಷ್ಟೆ ಅಲ್ಲ, ಇಡೀ ರಾಜ್ಯ ಪ್ರವಾಸ ಮಾಡಿ ವಹಿಸಿಕೊಂಡ ಇಲಾಖೆಯಲ್ಲಿ ಸುಧಾರಣೆ ತರಬೇಕು' ಎಂದು ಇಬ್ಬರು ನಾಯಕರೂ ಸಲಹೆ ನೀಡಿದ್ದಾರೆ ಎಂದೂ ಗೊತ್ತಾಗಿದೆ.

'ಬಿಜೆಪಿ ಅವಧಿಯ ಹಗರಣಗಳ ತನಿಖೆ ಚುರುಕುಗೊಳಿಸಬೇಕು. ಮುಡಾ ವಿಚಾರದಲ್ಲಿ ರಾಜ್ಯಪಾಲರ ವಿರುದ್ಧ ಕಾನೂನು ಹೋರಾಟ ಮಾಡಬೇಕಿದ್ದು, ಎಲ್ಲರೂ ಸಿದ್ದರಾಮಯ್ಯ ಅವರ ಬೆನ್ನಿಗೆ ನಿಲ್ಲಬೇಕು. ಬಿಜೆಪಿ–ಜೆಡಿಎಸ್‌ಗೆ ತಿರುಗೇಟು ಕೊಡುವ ಕೆಲಸ ಮಾಡಬೇಕು. ನಿಮ್ಮ ಜೊತೆ ಹೈಕಮಾಂಡ್ ನಿಲ್ಲಲಿದೆ' ಎಂದೂ ನಾಯಕರು ಅಭಯ ನೀಡಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಎಂ.ಬಿ. ಪಾಟೀಲ, ಕೆ.ಎನ್. ರಾಜಣ್ಣ, ಎಸ್. ಎಸ್. ಮಲ್ಲಿಕಾರ್ಜುನ, ಶರಣಪ್ರಕಾಶ್ ಪಾಟೀಲ, ಸತೀಶ ಜಾರಕಿಹೊಳಿ, ರಾಮಲಿಂಗಾರೆಡ್ಡಿ, ರಣದೀಪ್ ಸಿಂಗ್ ಸುರ್ಜೇವಾಲಾ, ಬೈರತಿ ಸುರೇಶ್, ಎನ್. ಚಲುವರಾಯಸ್ವಾಮಿ, ಎಚ್‌.ಕೆ. ಪಾಟೀಲ ಸಭೆಯಲ್ಲಿದ್ದರು.

'ನೋಟಿಸ್ ನೀಡಲು ರಾಜಭವನ ಬಳಕೆ'

ಬೆಂಗಳೂರು: 'ಸಿದ್ದರಾಮಯ್ಯ ಅವರಿಗೆ ಶೋಕಾಸ್ ನೋಟಿಸ್ ನೀಡಲು ರಾಜಭವನವನ್ನು ಬಿಜೆಪಿಯವರು ಬಳಸಿಕೊಂಡಿದ್ದಾರೆ. ಈ ಹುನ್ನಾರದ ವಿರುದ್ಧ ಹೋರಾಡಲು ಕಾಂಗ್ರೆಸ್ ತೀರ್ಮಾನಿಸಿದೆ. ಈ ವಿಚಾರವನ್ನು ರಾಜ್ಯದ ಜನರಿಗೆ ತಿಳಿಸುವಂತೆ ಎಂದು ಸಚಿವರಿಗೆ ಸೂಚಿಸಿದ್ದೇವೆ' ಎಂದು ಕೆ.ಸಿ ವೇಣುಗೋಪಾಲ್ ಹೇಳಿದರು.

ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಭ್ರಷ್ಟಾಚಾರದ ಬಗ್ಗೆ ಬಿಜೆಪಿ ನಾಯಕರು ಮಾತನಾಡುವುದು ದೊಡ್ಡ ವ್ಯಂಗ್ಯ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಎಷ್ಟು ಪ್ರಕರಣಗಳಿಲ್ಲ? ಪ್ರಜ್ವಲ್ ರೇವಣ್ಣ ವಿರುದ್ಧ ಎಷ್ಟು ಪ್ರಕರಣಗಳಿಲ್ಲ? ಈ ಕಾರಣದಿಂದಾಗಿ ಮುಖ್ಯಮಂತ್ರಿ ವಿರುದ್ಧ ಅವರು ಮಾತಾಡುತ್ತಿದ್ದಾರೆ. ನಮಗೆ ಯಾವುದೇ ಭಯ ಇಲ್ಲ. ಎಲ್ಲವನ್ನೂ ಎದುರಿಸಲು ಸಿದ್ಧರಾಗಿದ್ದೇವೆ' ಎಂದರು.

'ಬಿಜೆಪಿ ಹುನ್ನಾರದಿಂದಲೇ ಕಾಂಗ್ರೆಸ್– ಜೆಡಿಎಸ್ ಸಮ್ಮಿಶ್ರ ಸರ್ಕಾರ ಪತನಗೊಂಡಿತ್ತು. ಅದೇ ಮಾದರಿಯಲ್ಲಿ ಕರ್ನಾಟಕ ಸರ್ಕಾರವನ್ನು ಗುರಿ ಮಾಡಿದ್ದಾರೆ. ಪ್ರಜ್ವಲ್ ಪ್ರಕರಣದಲ್ಲಿ ಕಾಂಗ್ರೆಸ್ ವಿರುದ್ಧ ಹುನ್ನಾರ ನಡೆದಿರು-ವುದನ್ನು ಗಮನಿಸಬಹುದು. ಅವರವರ ಮಕ್ಕಳನ್ನು ರಕ್ಷಣೆ ಮಾಡಿಕೊಳ್ಳಲು ಕಾಂಗ್ರೆಸ್ ವಿರುದ್ಧ ಆರೋಪ ಹೊರಿಸಿದರು' ಎಂದರು.

'ಮುಖ್ಯಮಂತ್ರಿಯವರ ಪ್ರಾಮಾಣಿಕತೆ ಬಗ್ಗೆ ಎಲ್ಲರಿಗೂ ಗೊತ್ತಿದೆ. ಅವರು ಹೊಸಬರಲ್ಲ. ಎಲ್ಲಿ ಶುರು ಮಾಡಿ ಎಲ್ಲಿಗೆ ಬಂದು ತಲುಪಿದ್ದಾರೆ ಎಂದೂ ಗೊತ್ತಿದೆ. ಸಿದ್ದರಾಮಯ್ಯ ಚಾರಿತ್ರ್ಯದ ಬಗ್ಗೆಯೂ ಎಲ್ಲರಿಗೂ ಅರಿವಿದೆ. ಬಿಜೆಪಿ, ಜೆಡಿಎಸ್‌ಗೆ ಹಿನ್ನಡೆ ಆಗಬಹುದೆಂದು ಷಡ್ಯಂತ್ರ ಮಾಡಲಾಗಿದೆ. ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸಲು ಹೀಗೆ ಪ್ರಯತ್ನ ನಡೆಯುತ್ತಿದೆ' ಎಂದೂ ಕಿಡಿಕಾರಿದರು.

ಪ್ರಭಾರ ಪ್ರಾಂಶುಪಾಲ, ಪ್ರಾಧ್ಯಾಪಕರ ಅನ್ಯ ಕಾರ್ಯ ನಿಯೋಜನೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಯೋಜನೆಯಡಿ ಇತರ ಕಾಲೇಜುಗಳಲ್ಲಿ ಪ್ರಭಾರ ಪ್ರಾಂಶುಪಾಲ, ಪ್ರಾಧ್ಯಾಪಕ, ಸಹ ಹಾಗೂ ಸಹಾಯಕ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುವವರ ನಿಯುಕ್ತಿ ಆದೇಶವನ್ನು ರದ್ದುಗೊಳಿಸಿರುವ ಕಾಲೇಜು ಶಿಕ್ಷಣ ಇಲಾಖೆ, ತಕ್ಷಣದಿಂದ ಮಾತೃ ಕಾಲೇಜಿಗೆ ಹಿಂದಿರುಗುವಂತೆ ಆದೇಶ ಹೊರಡಿಸಿದೆ.

31 ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಅನ್ಯ ಕಾರ್ಯ, ಅನ್ಯ ಕಚೇರಿ ಕರ್ತವ್ಯದ ನೆಪದಲ್ಲಿ ನಿಯೋಜನೆ ಮೇರೆಗೆ ಪ್ರಭಾರ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆ ಎಲ್ಲ ಪ್ರಭಾರ ಪ್ರಾಂಶುಪಾಲರ ಪಟ್ಟಿ ಮಾಡಿರುವ ಇಲಾಖೆ, ನಿಯೋಜನೆ ಆದೇಶವನ್ನು ಆ. 3ರಂದು ರದ್ದುಪಡಿಸಿದೆ.

ಕೂಡಲೇ ಮೂಲ ಕಾಲೇಜಿಗೆ ಮರಳಬೇಕು ಎಂದೂ ಸೂಚಿಸಿದೆ. ಇಲಾಖೆ ಸಿದ್ಧಪಡಿಸಿರುವ ಪಟ್ಟಿಯಲ್ಲಿ ಹೆಸರು ಇಲ್ಲದೇ ಇರುವವರಿಗೂ ಈ ಆದೇಶ ಅನ್ವಯ ಆಗಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ವಹಿಸಿಕೊಂಡಿರುವ ಪ್ರಭಾರ ಪ್ರಾಂಶುಪಾಲರ ಹೊಣೆಯನ್ನು ಕಾಲೇಜಿನ ಬೋಧಕ ಸೇವಾ ಜೇಷ್ಠತೆಯಲ್ಲಿ ಹಿರಿಯರಾದ ಪ್ರಾಧ್ಯಾಪಕರಿಗೆ ವಹಿಸಿ ಕರ್ತವ್ಯದಿಂದ ಬಿಡುಗಡೆ ಆಗಬೇಕು ಎಂದೂ ಆದೇಶಿಸಲಾಗಿದೆ.

ಇನ್ನು ಕಾಲೇಜು ಶಿಕ್ಷಣ ಇಲಾಖೆಯ ಆಡಳಿತ ವ್ಯಾಪ್ತಿಗೆ ಒಳಪಡುವ ಕೇಂದ್ರ ಕಚೇರಿ, ಪ್ರಾದೇಶಿಕ ಕಚೇರಿ ಮತ್ತು ಇತರ ಕಚೇರಿಗಳಲ್ಲಿ ನಿಯೋಜನೆ ಮೇಲೆ ಕಾರ್ಯಗಳನ್ನು ನಿರ್ವಹಿಸುತ್ತಿರುವ ವಿವಿಧ ವಿಷಯಗಳ 48 ಪ್ರಾಧ್ಯಾಪಕರು, ಸಹ ಮತ್ತು ಸಹಾಯಕ ಪ್ರಾಧ್ಯಾಪಕ ನಿಯುಕ್ತಿ ಆದೇಶವನ್ನೂ ರದ್ದುಪಡಿಸಲಾಗಿದೆ.

ಬೋಧಕ ಸಿಬ್ಬಂದಿಯ ಪೈಕಿ ಬಹುತೇಕರು ಉನ್ನತ ಶಿಕ್ಷಣ ಸಚಿವಾಲಯ, ಉನ್ನತ ಶಿಕ್ಷಣ ಪರಿಷತ್, ಧಾರವಾಡದಲ್ಲಿರುವ ಉನ್ನತ ಶಿಕ್ಷಣ ಅಕಾಡೆಮಿ, ಬೆಂಗಳೂರಿನಲ್ಲಿರುವ ಕಾಲೇಜು ಶಿಕ್ಷಣ ಆಯುಕ್ತಾಲಯ, ಬೆಂಗಳೂರು, ಮೈಸೂರು, ಶಿವಮೊಗ್ಗ, ಧಾರವಾಡ, ಮಂಗಳೂರು ಮತ್ತು ಕಲಬುರಗಿ-ಯಲ್ಲಿರುವ ಪ್ರಾದೇಶಿಕ ಕಚೇರಿಗಳಲ್ಲಿ ನಿಯೋಜನೆಯಲ್ಲಿದ್ದಾರೆ.

ಈ ಎಲ್ಲ ಬೋಧಕ ಸಿಬ್ಬಂದಿ ತಕ್ಷಣದಿಂದಲೇ ಮಾತೃ ಕಾಲೇಜಿಗೆ ಹಿಂದಿರುಗಬೇಕು ಎಂದು ಇಲಾಖೆಯ ಆಯುಕ್ತರು ಆದೇಶದಲ್ಲಿ ತಿಳಿಸಿದ್ದಾರೆ.

ಅವಶ್ಯಕತೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಧ್ಯಾಪಕ, ಸಹ ಹಾಗೂ ಸಹಾಯಕ ಪ್ರಾಧ್ಯಾಪಕರು ನಿಯೋಜನೆ ಮೇರೆಗೆ ತೆರಳಿದ್ದರಿಂದ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಬೋಧನೆ ಮಾಡುವುದಕ್ಕೆ ಉಪನ್ಯಾಸಕರೇ ಇಲ್ಲದಂತಾಗಿತ್ತು. ಈ ಬಗ್ಗೆ ವಿದ್ಯಾರ್ಥಿಗಳಿಂದ ದೂರುಗಳು ಬಂದಿದ್ದವು. ಹೀಗಾಗಿ ಉನ್ನತ ಶಿಕ್ಷಣ ಇಲಾಖೆಯು ಈ ಕ್ರಮ ತೆಗೆದುಕೊಂಡಿದೆ.

ಅರಣ್ಯ ಒತ್ತುವರಿ ತೆರವಿಗೆ ಪಡೆ

ಒಂದನೇ ಪುಟದಿಂದ...

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಕಾರ್ಯಪಡೆ ಮುಖ್ಯಸ್ಥರ ನೇತೃತ್ವದಲ್ಲಿ ಈಗ ಕಾರ್ಯಪಡೆ ರಚಿಸಿದೆ.

2015ರ ನಂತರ ನಡೆದ ಒತ್ತುವರಿಗಳ ಪೈಕಿ, ಒತ್ತುವರಿ ಸಾಬೀತಾದ ಪ್ರಕರಣಗಳಲ್ಲಿ ತಕ್ಷಣದಿಂದಲೇ ತೆರವು ಕಾರ್ಯ ಆರಂಭಿಸಬೇಕು. ಕೋರ್ಟ್‌ನಲ್ಲಿರುವ ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ ಅಡ್ವೊಕೇಟ್ ಜನರಲ್ ಜೊತೆ ಚರ್ಚಿಸಲು ಸೂಚಿಸಿದ್ದಾರೆ.

ಪ್ರಕರಣಗಳ ತ್ವರಿತ ವಿಲೇವಾರಿ ಪ್ರಕ್ರಿಯೆಗೆ ವಾರದಲ್ಲಿ ಎರಡು ದಿನ ಮೀಸಲಿಡಬೇಕು ಎಂದು ಇಲಾಖೆ ಅಧಿಕಾರಿಗಳಿಗೂ ಸೂಚನೆ ನೀಡಲಾಗಿದೆ.

ಅಕ್ರಮ ರೆಸಾರ್ಟ್, ಹೋಂ ಸ್ಟೇ ತೆರವು: ಈಶ್ವರ ಖಂಡ್ರೆ

ಈಶ್ವರ ಬಿ. ಖಂಡ್ರೆ

'ಅರಣ್ಯ ಪ್ರದೇಶ ಒತ್ತುವರಿ ಮಾಡಿ ನಿರ್ಮಿಸಿರುವ ಅಕ್ರಮ ರೆಸಾರ್ಟ್, ಹೋಂ ಸ್ಟೇಗಳನ್ನು ತಕ್ಷಣವೇ ತೆರವು ಮಾಡಿ. ನಂತರದ ಹಂತದಲ್ಲಿ ತೋಟ ಮತ್ತು ಕಟ್ಟಡಗಳನ್ನು ತೆರವು ಮಾಡಿ ಎಂದು ಕಾರ್ಯಪಡೆಗೆ ಸೂಚಿಸಲಾಗಿದೆ. ಯಾವ ಒತ್ತುವರಿಯನ್ನೂ ತೆರವು ಮಾಡದೇ ಇರುವುದಿಲ್ಲ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

'ಪಶ್ಚಿಮಘಟ್ಟ ಪ್ರದೇಶವವನ್ನು ಒತ್ತುವರಿ ಮಾಡಿ ವಾಣಿಜ್ಯ ಚಟುವಟಿಕೆ ನಡೆಸುವುದರಿಂದ ಪರಿಸರಕ್ಕೆ ಹಾನಿಯಾಗಿದೆ. ವಯನಾಡ್ ಮತ್ತು ಉತ್ತರ ಕನ್ನಡದ ಶಿರೂರಿನಲ್ಲಿ ಘೋರ ದುರಂತ ಸಂಭವಿಸಿ, ಜೀವಹಾನಿ ಆಗಿದೆ. ಸಹಸ್ರಾರು ವರ್ಷಗಳ ಗುಡ್ಡವೇ ನಾಪತ್ತೆ ಆಗಿದೆ. ಈಗಲೂ ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ಪೀಳಿಗೆ ಕ್ಷಮಿಸುವುದಿಲ್ಲ' ಎಂದರು.

ಅವೈಜ್ಞಾನಿಕ ರಸ್ತೆ ಕಾಮಗಾರಿ ವಿರುದ್ಧವೂ ಕ್ರಮ: 'ಪಶ್ಚಿಮ ಘಟ್ಟದಲ್ಲಿ ರಸ್ತೆಗಳ ಮೇಲ್ದರ್ಜೆ, ವಿಸ್ತರಣೆ ಕಾಮಗಾರಿಯನ್ನು ಅವೈಜ್ಞಾನಿಕವಾಗಿ ನಡೆಸಿದ ಗುತ್ತಿಗೆದಾರರು, ಮತ್ತು ಎಂಜಿನಿಯರ್‌ಗಳಿಗೆ ನೋಟಿಸ್ ನೀಡಿ ಕ್ರಮ ಜರುಗಿಸಲು ಸೂಚಿಸಲಾಗಿದೆ'ಎಂದು ತಿಳಿಸಿದರು..

ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
ದೂರವಾಣಿ: +91–8431186388, ಇ–ಮೇಲ್: sabvmcri@gmail.com

ಸಂಖ್ಯೆ: SABVMCRI/E-TENDER/INS/01/2024-25 ದಿನಾಂಕ: 03–08–2024

ಟೆಂಡರ್ ಅಧಿಸೂಚನೆ

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇದರ ಅಧೀನದಲ್ಲಿ ಬರುವ ಚರಕ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಾರ್ಡಿಯೊಲಾಜಿ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಮೊಹರಾದ ಇ–ಟೆಂಡರ್‌ಗಳನ್ನು ಅರ್ಹ ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ. ಟೆಂಡರ್ ಫಾರಂ, ಇ.ಎಂ.ಡಿ ವಿವರ ಮತ್ತು ಷರತ್ತು ಮುಂತಾದ ವಿವರಗಳನ್ನು ವೆಬ್‌ಸೈಟ್: https://kppp.karnataka.gov.in ನಲ್ಲಿ ವೀಕ್ಷಿಸಿ ಟೆಂಡರ್‌ಗಳನ್ನು ಸಲ್ಲಿಸಬಹುದು ಹಾಗೂ ಹಿಂದಿರುಗಿಸದ ಟೆಂಡರ್ ಪ್ರೋಸೆಸ್ಸಿಂಗ್ ಮೊತ್ತ ರೂ. 2,000/– ಗಳ ಡಿ.ಡಿ. ಯನ್ನು ನಿರ್ದೇಶಕರು ಹಾಗೂ ಡೀನ್, ಎಸ್.ಎ.ಬಿ.ವಿ.ಎಂ.ಸಿ.ಆರ್.ಐ, ಬೆಂಗಳೂರು ಇವರ ಹೆಸರಿನಲ್ಲಿ ಪಡೆದು ಸಲ್ಲಿಸತಕ್ಕದ್ದು ಮತ್ತು ಅದರ ರಸೀದಿಯನ್ನು ಈ ಟೆಂಡರ್‌ನಲ್ಲಿ ಲಗತ್ತಿಸುವುದು. ಆಸಕ್ತಿಯುಳ್ಳ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸತಕ್ಕದ್ದು. ನೋಂದಾವಣಿಗೆ ಅಗತ್ಯವಾದ ವಿವರಗಳನ್ನು ವೆಬ್‌ಸೈಟ್‌ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ಇ–ಮೇಲ್: sabvmcri@gmail.com ಮತ್ತು ದೂರವಾಣಿ ಸಂಖ್ಯೆ: +91–8431186388 ನ್ನು ಸಂಪರ್ಕಿಸಬಹುದು.

1) ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಳ್ಳಲು ಆರಂಭಿಸುವ ದಿನಾಂಕ: 05–08–2024 ರಿಂದ. 2) ಟೆಂಡರ್ ಬಗ್ಗೆ ಆನ್‌ಲೈನ್ ಪ್ರಶ್ನಾವಳಿಗಳಿಗೆ ಕೊನೆಯ ದಿನಾಂಕ: 08–08–2024 ರಂದು ಸಂಜೆ 4.00 ಗಂಟೆವರೆಗೆ. 3) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 14–08–2024 ರಂದು ಸಂಜೆ 4.00 ಗಂಟೆವರೆಗೆ. 4) ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ (ಮೊದಲನೆ ಲಕೋಟೆ): 17–08–2024 ರಂದು ಬೆಳಿಗ್ಗೆ 10.30 ಗಂಟೆಗೆ. ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್ / ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ನಿರ್ದೇಶಕರು ಹಾಗೂ ಡೀನ್
ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ., ಬೆಂಗಳೂರು.
ವಾಸಾಸಂಇ/ವಾ.ಪ್ರ/1261/ಅಡ್ವಟೋರ್/2024–25

ಗೌಡರ ಕುಟುಂಬದ ಆಸ್ತಿ ಶೀಘ್ರವೇ ಬಹಿರಂಗ: ಡಿಕೆಶಿ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಜೆಡಿಎಸ್ ನಾಯಕ ಎಚ್‌.ಡಿ. ಕುಮಾರಸ್ವಾಮಿ ಮಾಡಿರುವ ಆಸ್ತಿ, ಡಿನೋಟಿಫಿಕೇಷನ್, ಗಣಿಗಾರಿಕೆ, ಅವರ ಸಹೋದರರು ಹಾಗೂ ಕುಟುಂಬದವರು ಗಳಿಸಿರುವ ಆಸ್ತಿ ವಿವರಗಳನ್ನು ಸದ್ಯದಲ್ಲೇ ಬಿಡುಗಡೆ ಮಾಡುವುದಾಗಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕುಮಾರಸ್ವಾಮಿ ಮತ್ತು ಅವರ ಕುಟುಂಬ ಮಾಡಿರುವ ಆಸ್ತಿ ಮೊತ್ತವು ರಾಜ್ಯದ ಮೂರು ಬಜೆಟ್ ಮಂಡಿಸುವಷ್ಟಿದೆ. ಅಷ್ಟೊಂದು ಭೂಮಿ ಮತ್ತು ಹಣ ಕೊಳ್ಳೆ ಹೊಡೆದಿದ್ದಾರೆ ಎಂದು ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಆರೋಪ ಮಾಡಿದರು.

ಚನ್ನಪಟ್ಟಣದ ಬಾಲಕರ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಪಕ್ಷದ ಮೂರನೇ ದಿನದ ಜನಾಂದೋಲನ ಸಮಾವೇಶದಲ್ಲಿ ಮಾತನಾಡಿದ ಇಬ್ಬರೂ ಭಾಷಣದ ಉದ್ದಕ್ಕೂ ಕುಮಾರಸ್ವಾಮಿ ವಿರುದ್ಧ ವಾಗ್ದಾಳಿ ನಡೆಸಿದರು.

'ಅಜ್ಜಯ್ಯನ ಮೇಲೆ ಆಣೆಗೆ ನಾ ರೆಡಿ. ಅದಕ್ಕೆಲ್ಲಾ ಸಾರ್ವಜನಿಕರ ಸಮ್ಮುಖದಲ್ಲಿ ಒಳ್ಳೆಯ ವೇದಿಕೆ ನಿರ್ಮಾಣವಾಗಲಿ. ಇಲ್ಲದಿದ್ದರೆ ಅಧಿವೇಶನಕ್ಕೆ ದಾಖಲೆ ಸಮೇತ ಬರಲಿ. ನಾವು ಚರ್ಚಿಸುವುದು ಮುಂದಿನ ಪೀಳಿಗೆಗೆ ದಾಖಲೆಯಾಗಿ ಉಳಿಯಲಿ' ಎಂದು ಶಿವಕುಮಾರ್ ಹೇಳಿದರು.

'ಹಾಸನದಲ್ಲಿ ಪೆನ್‌ಡ್ರೈವ್ ಹಂಚಿದೆ ಎಂದು ಕುಮಾರಸ್ವಾಮಿ ನನ್ನ ಮೇಲೆ ಗೂಬೆ ಕೂರಿಸೋಕೆ ಬಂದಿದ್ದರು. ನಾನಂಥ ನೀಚ ಕೆಲಸ ಮಾಡುವವನಲ್ಲ. ನಾನು ನೇರವಾಗಿ ಬೀದಿಯಲ್ಲಿ ಹೋರಾಡುವವನು. ಈಗಾಗಲೇ ನನ್ನೊಂದಿಗೆ ಒಮ್ಮೆ ಹೋರಾಡಿ ಸೋತಿದ್ದೀಯಾ. ತಾಕತ್ತಿದ್ದರೆ ಮತ್ತೊಮ್ಮೆ ಹೋರಾಡೋಣ ಬಾ' ಎಂದು ಸವಾಲು ಹಾಕಿದರು.

'ನಾನು ಜೆಡಿಎಸ್‌ನಲ್ಲಿದ್ದಾಗ ದಿನದಲ್ಲಿ 16 ತಾಸು ಅವರೊಂದಿಗೆ ಇರುತ್ತಿದ್ದೆ. ಆದರೆ, ಅವರ ಪ್ಯಾಂಟೊಳಗೆ ಖಾಕಿ ಚಡ್ಡಿ ಇರುವ ವಿಷಯವೇ ಗೊತ್ತಾಗಲಿಲ್ಲ. ಬಿಜೆಪಿಗಿಂತ ಹೆಚ್ಚು ಕೋಮು-ವಾದಿಯಾಗಿರುವ ಅವರನ್ನು ನಂಬಬಾರದು. ಬರಿ ಡವ್ ಮಾಡಿಕೊಂಡು ಗೆಲ್ಲುತ್ತಾ ಬಂದಿದ್ದಾರೆಯೇ ಹೊರತು ಕೆಲಸ ಮಾಡಿಲ್ಲ. ಮುಡಾ ವಿಷಯದಲ್ಲಿ ಸಿದ್ದರಾಮಯ್ಯ ಅವರು ಎಳ್ಳಷ್ಟೂ ತಪ್ಪೆಸಗಿಲ್ಲ. ಅವರ ಕುರ್ಚಿ ಅಲ್ಲಾಡಿಸಲು ಯಾರಿಂದಲೂ ಸಾಧ್ಯವಿಲ್ಲ' ಎಂದು ಜಮೀರ್ ಆಕ್ರೋಶ ವ್ಯಕ್ತಪಡಿಸಿದರು.

ಚನ್ನಪಟ್ಟಣದಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಜನಾಂದೋಲನ ಸಮಾವೇಶವನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಘಾಟಿಸಿದರು. ಸಚಿವರಾದ ಕೆ.ಜೆ. ಜಾರ್ಜ್, ಮಂಕಾಳ ವೈದ್ಯ, ರಾಮಲಿಂಗಾ ರೆಡ್ಡಿ, ಡಾ. ಎಂ.ಸಿ. ಸುಧಾಕರ್, ಡಾ. ಜಿ. ಪರಮೇಶ್ವರ, ದಿನೇಶ್ ಗುಂಡೂರಾವ್, ಈಶ್ವರ್ ಖಂಡ್ರೆ, ಜಮೀರ್ ಅಹಮದ್ ಖಾನ್ ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಗಂಗಾಧರ್ ಇದ್ದಾರೆ

ಎರಡನೇ ದಿನದ ಪಾದಯಾತ್ರೆಗೆ ತಮಟೆ ಬಾರಿಸುವ ಮೂಲಕ ಚಾಲನೆ

ಸಿ.ಎಂ ರಾಜೀನಾಮೆ ನೀಡದಿದ್ದರೆ ಹೋರಾಟ ತೀವ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಾಲ್ಮೀಕಿ ಅಭಿವೃದ್ಧಿ ನಿಗಮ ಹಾಗೂ 'ಮುಡಾ' ಹಗರಣಗಳ ಹೊಣೆ ಹೊತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಕ್ಷಣ ರಾಜೀನಾಮೆ ನೀಡಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಹೋರಾಟ ತೀವ್ರಗೊ-ಳಿಸಲಾಗುವುದು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಎರಡನೇ ದಿನದ 'ಮೈಸೂರು ಚಲೋ' ಪಾದಯಾತ್ರೆಗೆ ಭಾನುವಾರ ಬಿಡದಿಯಲ್ಲಿ ತಮಟೆ ಬಾರಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ದಲಿತರು, ಪರಿಶಿಷ್ಟ ಜಾತಿ, ಪಂಗಡದ ಜನರು, ಬಡವರು, ನಿರ್ಗತಿಕರ ಪರವಾಗಿ ಧ್ವನಿ ಎತ್ತಿರುವ ವಿರೋಧ ಪಕ್ಷದ ಪ್ರಶ್ನೆಗಳಿಗೆ ಸದನದಲ್ಲೂ ಉತ್ತರ ಕೊಡದೆ, ಹೊರಗೂ ಉತ್ತರ ನೀಡದೆ ವಿರೋಧ ಪಕ್ಷಗಳನ್ನೇ ಪ್ರಶ್ನಿಸುವ ಮೂಲಕ ಹಗರಣಗಳನ್ನು ಮುಚ್ಚಿ ಹಾಕುವ ಪ್ರಯತ್ನ ಮಾಡುತ್ತಿದ್ದಾರೆ. ಪರಿಶಿಷ್ಟ ಪಂಗಡದ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ದುರ್ಬಳಕೆ ಮಾಡಿಕೊಂಡಿರುವುದನ್ನು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಒಪ್ಪಿಕೊಂಡಿದ್ದಾರೆ. ಅವರು ತಕ್ಷಣ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಅಧಿಕಾರದ ದರ್ಪ, ಅಧಿಕಾರದ ಅಹಂ ಬದಿಗಿಟ್ಟು ಹಗರಣಗಳ ಬಗ್ಗೆ ಜನರಿಗೆ ಉತ್ತರ ನೀಡಬೇಕು ಎಂದು ಆಗ್ರಹಿಸಿದರು.

ಪ್ರಮಾಣ ಮಾಡಲು ಆಗ್ರಹ: ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರು, 'ಉಪ ಮುಖ್ಯಮಂತ್ರಿ ಕುರಿತು ಬಿಚ್ಚಿಡುವುದು ಪುಟಗಟ್ಟಲೆ ಇದೆ. ದಲಿತರಿಗೆ ಸೇರಬೇಕಾದ 68 ಎಕರೆ ಜಮೀನು ಲಪಟಾಯಿಸಿದ್ದಾರೆ. ದಲಿತರಿಗೆ ಸಿಗಬೇಕಾದ ನಿವೇಶನಗಳನ್ನು ಹೊಡೆದುಕೊಂಡಿದ್ದಾರೆ. ನಾನು ಮೋಸ ಮಾಡಿ ಕೇತಗಾನಹಳ್ಳಿಯ 45 ಎಕರೆ ಜಮೀನು ವಂಚನೆ ಮಾಡಿ ಖರೀದಿಸಿದ್ದರೆ ರಾಜಕೀಯ ನಿವೃತ್ತಿ ಹೊಂದುತ್ತೇನೆ' ಎಂದು ಸವಾಲು ಹಾಕಿದರು.

ಪ್ರಮಾಣ ಮಾಡಲಿ: 'ಗಾಜಿನ ಮನೆಯಲ್ಲಿ ಕುಳಿತವರು ಬೀದಿಯಲ್ಲಿ ಇರುವವರ ಮೇಲೆ ಕಲ್ಲು ಎಸೆಯುತ್ತಿದ್ದಾರೆ. ಶಿವಕುಮಾರ್‌ಗೆ ಅಜ್ಜಯ್ಯನ ಶಾಪ ಆರಂಭವಾಗಿದೆ. ಸ್ವಚ್ಛವಾಗಿದ್ದೇನೆ ಎಂದು ಅಜ್ಜಯ್ಯನ ಮುಂದೆ ನಿಂತು ಪ್ರಮಾಣ ಮಾಡಲಿ. ನಾನೂ ಮಾಡುತ್ತೇನೆ' ಎಂದು ಆಹ್ವಾನ ನೀಡಿದರು. 'ಯಡಿಯೂರಪ್ಪ ಸೇರಿದಂತೆ ನಾನು ಯಾರಿಗೂ ದ್ರೋಹ ಮಾಡಲಿಲ್ಲ ಬಿಜೆಪಿ-ಜೆಡಿಎಸ್ ಮೈತ್ರಿ ಕಾಂಗ್ರೆಸ್ ನಿದ್ದೆಗೆಡಿಸಿದೆ. ಅದಕ್ಕೆ ಶಿವಕುಮಾರ್ ಹೊಟ್ಟೆ ಉರಿ ಅನುಭವಿಸುತ್ತಿದ್ದಾರೆ. ಎರಡು ಬಾರಿ ಮುಖ್ಯಮಂತ್ರಿಯಾಗಿದ್ದೇನೆ. ನನಗೆ ಮತ್ತೆ ಅಧಿಕಾರವನ್ನು ಪಡೆಯುವ ಆಸೆ ಇಲ್ಲ' ಎಂದರು.

ರಾಮನಗರ ಜಿಲ್ಲೆಯ ಬಿಡದಿ ಬಳಿ ಸಾಗಿದ 'ಮೈಸೂರು ಚಲೋ' ಪಾದಯಾತ್ರೆಯಲ್ಲಿ ಭಾನುವಾರ ಕಾರ್ಯಕರ್ತರ ಜೊತೆಗೆ ಜೆಡಿಎಸ್ ಯುವ ಘಟಕದ ರಾಜ್ಯ ಘಟಕದ ನಿಖಿಲ್ ಕುಮಾರಸ್ವಾಮಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಡಾ.ಸಿ.ಎನ್‌.ಮಂಜುನಾಥ್ ಮತ್ತು ಶಾಸಕ ಡಾ.ಸಿ.ಎನ್‌.ಅಶ್ವತ್ಥ ನಾರಾಯಣ್ ಇದ್ದರು.

ಜೆಡಿಎಸ್ ನಾಯಕರು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಸೂಚಿಸಲಾಗಿದೆ. ಯಾತ್ರೆಯ ಯಶಸ್ಸಿಗೆ ಎರಡೂ ಪಕ್ಷಗಳು ಶ್ರಮಿಸಲಿವೆ

ಸುರೇಶ್ ಬಾಬು
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ.

ಮುಖ್ಯಮಂತ್ರಿ ಸಿದ್ದರಾಮಯ್ಯ ಆ.10ರ ಒಳಗೆ ರಾಜೀನಾಮೆ ನೀಡಬೇಕು. ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗಲಾಗುವುದು

ವಿ.ಸುನಿಲ್ ಕುಮಾರ್
ಬಿಜೆಪಿ ಪ್ರಧಾನ ಕಾರ್ಯದರ್ಶಿ

ಪಾದಯಾತ್ರೆಯಲ್ಲಿ ದಲಿತರು, ರೈತರ ಅಸ್ಮಿತೆಗೆ ಆದ್ಯತೆ ನೀಡಿದ್ದು ಬಿಡದಿಯಲ್ಲಿ ತಮಟೆ ಬಾರಿಸಿ, ಮಂಡ್ಯದಲ್ಲಿ ಬಾರುಕೋಲು ಬೀಸುವ ಮೂಲಕ ಯಾತ್ರೆಗೆ ಚಾಲನೆ ನೀಡಲಾಗುತ್ತದೆ

ಎನ್. ರವಿಕುಮಾರ್
ವಿಧಾನ ಪರಿಷತ್ ಸದಸ್ಯ

ಎರಡನೇ ದಿನ ಕಾಣದ 'ನಾಯಕರು'

ಮೊದಲ ದಿನದ ಪಾದಯಾತ್ರೆಯಲ್ಲಿ ಎರಡೂ ಪಕ್ಷಗಳ ಘಟಾನುಘಟಿ ನಾಯಕರು ಇದ್ದರು. ಎರಡನೇ ದಿನ ಎರಡೂ ಪಕ್ಷಗಳ ಬಹುತೇಕ ಶಾಸಕರು, ನಾಯಕರು ಕಾಣಿಸಲಿಲ್ಲ. ಯಾತ್ರೆ ಆರಂಭದ ವೇಳೆ ಕೆಲವರು ಕಾಣಿಸಿಕೊಂಡರೂ, ಪಾದಯಾತ್ರೆಯಲ್ಲಿ ಸಾಗಲಿಲ್ಲ.

ಎರಡನೇ ದಿನದ ಪಾದಯಾತ್ರೆ ಬಿಡದಿಯಿಂದ ಆರಂಭವಾಗಿ ಕೆಂಗಲ್‌ವರೆಗೆ 22 ಕಿ.ಮೀ ಸಾಗಿತು. ಎಂದಿಗಿಂತ ತುಸು ಹೆಚ್ಚಾಗಿದ್ದ ಬಿಸಿಲಿಗೆ ಜನರು ಬಸವಳಿದರು. ಧಗೆ ನೀಗಿಸಿಕೊಳ್ಳಲು ರಸ್ತೆ ಬದಿ ಹಂಚುತ್ತಿದ್ದ ಸೌತೆಕಾಯಿ, ನೀರಿನ ಬಾಟಲ್ ಪಡೆಯಲು ಮುಗಿಬಿದ್ದರು. ಭಾನುವಾರವೂ ಜೆಡಿಎಸ್ ಕಾರ್ಯಕರ್ತರ ಸಂಖ್ಯೆ ಕಡಿಮೆ ಇತ್ತು. ಮೊದಲ ದಿನ ಇರದಿದ್ದ ಜೆಡಿಎಸ್ ಬಾವುಟಗಳು ಬಿಜೆಪಿ ಬಾವುಟಗಳ ಮಧ್ಯೆ ರಾರಾಜಿಸುತ್ತಿದ್ದವು.

ಪಾದಯಾತ್ರೆ ಮಧ್ಯೆ 'ಕಾರು'ಗಳ ದರ್ಬಾರು

ಪಾದಯಾತ್ರೆಯಲ್ಲಿ ನೂರಾರು ಕಾರುಗಳು ಸಾಗಿದವು. ಮುಖಂಡರು ಪಾದ-ಯಾತ್ರೆಯಲ್ಲಿ ನಡೆದರೆ ಅವರು ಬಂದಿದ್ದ ಕಾರುಗಳು ಹಿಂಬಾಲಿಸಿದವು. ಕೆಲವು ಭಾಗಗಳಲ್ಲಿ ಕಾರುಗಳ ಸಂಖ್ಯೆ ಹೆಚ್ಚಿದ್ದರಿಂದ ಪಾದಯಾತ್ರೆ ಮಾಡುತ್ತಿದ್ದವರು ಕಿರಿಕಿರಿ ಅನುಭವಿಸಿದರು.

ದಾರಿಯುದ್ದಕ್ಕೂ ವಿಜಯೇಂದ್ರ, ನಿಖಿಲ್ ಕುಮಾರಸ್ವಾಮಿಗೆ ಹಾರ ಹಾಕಿ ಸ್ಥಳೀಯರು ಸ್ವಾಗತಿಸಿದರು. ಸೆಲ್ಫಿಗೆ ಮುಗಿಬೀಳುತ್ತಿದ್ದರು.ಇದರಿಂದ ಪಾದಯಾತ್ರೆಯ ವೇಗ ತಗ್ಗಿತು.

ಭೀಮನ ಅಮಾವಾಸ್ಯೆ ಮತ್ತು ಮಹಿಳೆಯರು

ಬಿಜೆಪಿ–ಜೆಡಿಎಸ್ ಹಮ್ಮಿಕೊಂಡಿರುವ ಮೈಸೂರು ಚಲೋ ಯಾತ್ರೆಯಲ್ಲಿ ಭಾನುವಾರ ಮಹಿಳೆಯರು ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಇದ್ದರು.

'ಇಂದು ಭೀಮನ ಅಮಾವಾಸ್ಯೆ. ಶ್ರಾವಣವೂ ಆರಂಭವಾಗುತ್ತಿದೆ. ಮನೆಯಲ್ಲಿ ಕೆಲಸ ಹೆಚ್ಚಾಗುತ್ತವೆ. ಭಾಗವಹಿಸುವಿಕೆ ಸಹಜವಾಗಿ ಕಡಿಮೆ ಇರುತ್ತದೆ' ಎಂದು ಶಿವಮೊಗ್ಗ ನಗರ ಪಾಲಿಕೆ ಮಾಜಿ ಸದಸ್ಯೆ ಅನಿತಾ ರವಿಶಂಕರ್ ಹೇಳಿದರು.

ಪಾದಯಾತ್ರೆ ಮಾರ್ಗದಲ್ಲಿ ಮಹಿಳೆಯರಿಗೆ ಅಗತ್ಯ ಶೌಚಾಲಯ ಇಲ್ಲದ್ದೂ ಸಮಸ್ಯೆಯಾಗಿದೆ ಎಂದು ರಾಮನಗರದ ಅಶ್ವಿನಿ ಕುಮಾರ್ ಪ್ರತಿಕ್ರಿಯಿಸಿದರು.

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ — ಪ್ರದೀಪ್ ಕುಮಾರ್ ವಿ.

ಜೇಜು ನಾಯಕ್, ಯಾದಗಿರಿ

ಪರೀಕ್ಷೆಗಳ ಪ್ರಾಮುಖ್ಯತೆ, ಕಠಿಣತೆಯ ಮಟ್ಟ ಹಾಗೂ ನಿಮ್ಮ ಧ್ಯೇಯ ಮತ್ತು ಸಾಮರ್ಥ್ಯದ ಆಧಾರದ ಮೇಲೆ ಸೂಕ್ತ ಕಾರ್ಯತಂತ್ರವನ್ನು ರೂಪಿಸಬೇಕು. ಎಷ್ಟು ಸಮಯ ಓದಬೇಕು ಎನ್ನುವುದಕ್ಕಿಂತ ಓದುವಿಕೆ ಪರಿಣಾಮಕಾರಿಯಾಗಿರಬೇಕು. ಅದೇ ರೀತಿ ಸ್ವಯಂ-ಪ್ರಶ್ನೆಗಳನ್ನು ಕೇಳುವುದರಿಂದ ವಿಷಯದ ಬಗ್ಗೆ ಒಳನೋಟಗಳು ಲಭಿಸುತ್ತದೆ. ಈ ಸಲಹೆಗಳನ್ನು ಗಮನಿಸಿ:

- SQ3R ನಂತಹ ಓದುವಿಕೆಯ ತಂತ್ರಗಾರಿಕೆ ಉಪಯುಕ್ತ.
- ಹಿಂದಿನ ಪ್ರಶ್ನೆಪತ್ರಿಕೆಗಳನ್ನು ಗಮನಿಸಿ ಅಣಕು ಪರೀಕ್ಷೆಗಳನ್ನು ಮಾಡುತ್ತಿರಿ.
- ಮನಸ್ಸು ಉಲ್ಲಾಸವಾಗಿರುವಾಗ, ಕಠಿಣ ವಿಷಯಗಳು ಮತ್ತು ಕಡಿಮೆ ಆಸಕ್ತಿಯಿರುವ ವಿಷಯಗಳನ್ನು ಓದಿ
- ದಿನನಿತ್ಯದ ಅಧ್ಯಯನ ವೇಳಾಪಟ್ಟಿಯನ್ನು ಪಾಲಿಸಿ.
- ಆದಷ್ಟು ಶಾಂತ ವಾತಾವರಣದಲ್ಲಿ ಏಕಾಗ್ರತೆಯಿಂದ ಓದಿ. ಏಕಾಗ್ರತೆ ಮತ್ತು ಸ್ಮರಣಶಕ್ತಿಯನ್ನು ಹೆಚ್ಚಿಸುವ ಭ್ರಮರಿ ಪ್ರಾಣಾಯಾಮ ಮಾಡಿ.
- ಆಗಾಗ್ಗೆ ಸಣ್ಣ ವಿರಾಮಗಳನ್ನು ತೆಗೆದುಕೊಳ್ಳಿ.

ಹೆಚ್ಚಿನ ಮಾಹಿತಿಗೆ ವಿಡಿಯೊ ವೀಕ್ಷಿಸಿ:https://www.youtube.com/watch?v = 3PzmKRaJHmk
ಹೆಚ್ಚಿನ ಪ್ರಶ್ನೋತ್ತರಗಳಿಗೆ https://www.prajavani.net/education-career/education ಓದಿ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಸಮಾಜವಿಜ್ಞಾನ

ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು
ಪ್ರಶ್ನೋತ್ತರ:–

42) ಪರ್ಯಾಯ ಪ್ರಸ್ಥಭೂಮಿ ಕುರಿತು ಬರೆಯಿರಿ

ಉತ್ತರ: (........ಹಿಂದಿನ ಸಂಚಿಕೆಯಿಂದ)

ದಖಿನ್ ಪ್ರಸ್ಥಭೂಮಿಯ ಪೂರ್ವಕ್ಕೆ ಪೂರ್ವಘಟ್ಟಗಳಿವೆ. ಅವು ಪಶ್ಚಿಮ ಘಟ್ಟಗಳನ್ನು ನೀಲಗಿರಿ ಬೆಟ್ಟಗಳಲ್ಲಿ ಸಂಧಿಸುತ್ತವೆ. ಪೂರ್ವ ಘಟ್ಟಗಳು ಹೆಚ್ಚು ಎತ್ತರವಾಗಿಲ್ಲ ಮತ್ತು ನಿರಂತರವಾಗಿಯೂ ಇಲ್ಲ. ಆರ್ಮಕೊಂಡ ಮತ್ತು ಮಹೇಂದ್ರಗಿರಿ ಇಲ್ಲಿರುವ ಎತ್ತರವಾದ ಶಿಖರಗಳು. ಈ ಘಟ್ಟಗಳು ನದಿ ಕಣಿವೆಗಳಿಂದ ಅಲ್ಲಲ್ಲಿ ಪ್ರತ್ಯೇಕಿಸಲ್ಪಟ್ಟಿವೆ.

43) ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ. ಈ ಹೇಳಿಕೆಯನ್ನು ಸಮರ್ಥಿಸಿ

ಉತ್ತರ:– ನಿಜ! ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ. ಏಕೆಂದರೆ ಇಲ್ಲಿ ಅಪಾರವಾದ ಖನಿಜ ಸಂಪನ್ಮೂಲಗಳಿವೆ. ಇಲ್ಲಿನ ನದಿಗಳು ಜಲಪಾತಗಳಿಂದ ಕೂಡಿರುವುದರಿಂದ ಜಲ ವಿದ್ಯುಚ್ಛಕ್ತಿಯ ಉತ್ಪಾದನೆಗೆ ಅನುಕೂಲವಾಗಿವೆ.

44) ಕರಾವಳಿಯ ಬಗ್ಗೆ ಬರೆಯಿರಿ

ಉತ್ತರ:– ಭಾರತದ ಕರಾವಳಿಯನ್ನು 'ಪಶ್ಚಿಮ ಕರಾವಳಿ' ಮತ್ತು 'ಪೂರ್ವ ಕರಾವಳಿ' ಎಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಪಶ್ಚಿಮ ಕರಾವಳಿಯು ಅರಬ್ಬೀ ಸಮುದ್ರ ಮತ್ತು ಪಶ್ಚಿಮ ಘಟ್ಟಗಳ ನಡುವೆ ಗುಜರಾತಿನ ಕಛ್‌ನಿಂದ ಅರಬ್ಬೀ ಸಮುದ್ರ ಮತ್ತು ಪಶ್ಚಿಮ ಘಟ್ಟಗಳ ನಡುವೆ ಗುಜರಾತಿನ ಕಛ್‌ನಿಂದ ಕನ್ಯಾಕುಮಾರಿ ಭೂಶಿರದವರೆಗೆ 1500 ಕಿ.ಮೀ.ಗಳಷ್ಟು ಉದ್ದವಾಗಿದೆ. ಇದನ್ನು ಕೇರಳದಲ್ಲಿ ಮಲಬಾರ್ ತೀರ, ಕರ್ನಾಟಕದಲ್ಲಿ ಕರ್ನಾಟಕ ತೀರ ಅಥವಾ ಕೆನರಾ ತೀರ, ಗೋವಾ ಮತ್ತು ಮಹಾರಾಷ್ಟ್ರದಲ್ಲಿ ಕೊಂಕಣ ತೀರ ಮತ್ತು ಗುಜರಾತಿನಲ್ಲಿ ಗುಜರಾತ್ ತೀರ ಎಂದು ವಿಂಗಡಸಲಾಗಿದೆ. ಮುಂಬೈ, ಮರ್ಮಗೋವಾ, ಕೊಚ್ಚಿನ್, ಕಾಂಡ್ಲಾ, ಕಾರವಾರ, ಮಂಗಳೂರು ಇಲ್ಲಿನ ಮುಖ್ಯ ಬಂದರುಗಳಾಗಿವೆ.

ಕನ್ಯಾಕುಮಾರಿಯಿಂದ ಉತ್ತರದಲ್ಲಿ ಗಂಗಾ ನದಿ ಮುಖಜ ಭೂಮಿಯವರೆಗೆ ಪೂರ್ವ ಘಟ್ಟಗಳು ಹಬ್ಬಿವೆ. ಪೂರ್ವ ಘಟ್ಟ ಹಾಗೂ ಬಂಗಾಳಕೊಲ್ಲಿಯ ನಡುವೆ ಪೂರ್ವ ಕರಾವಳಿ ಮೈದಾನವಿದೆ. ಈ ಕರಾವಳಿಯ ಮೈದಾನವು ಹೆಚ್ಚು ಅಗಲ ಮತ್ತು ಒಂದೇ ರೀತಿ ಸಮತಟ್ಟಾಗಿದೆ. ಇದು ಮಹಾನದಿ, ಗೋದಾವರಿ, ಕೃಷ್ಣಾ ಮತ್ತು ಕಾವೇರಿ ನದಿಗಳ ಮುಖಜ ಭೂಮಿಗಳನ್ನು ಒಳಗೊಂಡಿದೆ. ಪೂರ್ವ ತೀರದಲ್ಲಿ ಸಮುದ್ರದ ಉಪ್ಪು ನೀರಿನಿಂದ ನಿರ್ಮಿತವಾದ ಕೆಲವು ಸರೋವರ ಅಥವಾ ಲಗೂನ್‌ಗಳಿವೆ. ಇವುಗಳಲ್ಲಿ ಒಡಿಸ್ಸಾದ ಚಿಲ್ಕಾ, ತಮಿಳುನಾಡಿನ 'ಪುಲಿಕಾಟ್' ಸರೋವರಗಳು ಮುಖ್ಯವಾಗಿವೆ. ಪೂರ್ವ ಕರಾವಳಿಯನ್ನು ಉತ್ಕಲ ತೀರ ಮತ್ತು ಕೋರಮಂಡಲ ತೀರ ಎಂದು ವಿಂಗಡಿಸಲಾಗಿದೆ.

45) ಭಾರತದ ದಕ್ಷಿಣದ ತುತ್ತತುದಿ ಯಾವುದು?

ಉತ್ತರ:– ನಿಕೋಬಾರ್ ದ್ವೀಪದಲ್ಲಿ ಇಂದಿರಾ ಪಾಯಿಂಟ್ ಭಾರತದ ದಕ್ಷಿಣದ ತುತ್ತತುದಿಯಾಗಿದೆ.

46) ಬಿಟ್ಟ ಸ್ಥಳ ತುಂಬಿ

1) ಇಂಡಿಯಾ ಎಂಬ ಹೆಸರು ...... ನದಿಯಿಂದ ಬಳಕೆಗೆ ಬಂದಿದೆ.
ಉತ್ತರ:– ಸಿಂಧೂ

2) ಭಾರತವು ಒಟ್ಟು .... ಚದರ ಕಿ.ಮೀಗಳಷ್ಟು ವಿಸ್ತಾರವಾಗಿದೆ.
ಉತ್ತರ:– 32,87,263 (ಅಂದರೆ 32.87 ಲಕ್ಷ) ಚದರ ಕಿ.ಮಿ

3) ಭಾರತದ ಮಧ್ಯಭಾಗದಲ್ಲಿ.................ಉತ್ತರ ಅಕ್ಷಾಂಶ ಹಾಯ್ದು ಹೋಗುತ್ತದೆ.
ಉತ್ತರ:– $82^{0}.5'$

4) ಭಾರತದ ದಕ್ಷಿಣ ತುದಿಯಲ್ಲಿರುವ ದೇಶ ....
ಉತ್ತರ:– ಶ್ರೀಲಂಕ

5) ಭಾರತವು ಹೊಂದಿರುವ ಉದ್ದವಾದ ಕರಾವಳಿಯು .... ಕಿ.ಮೀ.ಗಳಷ್ಟು ಆಗಿದೆ.
ಉತ್ತರ:– 6100

6) ದಕ್ಷಿಣ ಭಾರತದ ಎತ್ತರವಾದ ಶಿಖರ ....
ಉತ್ತರ:– ಆನೆಮುಡಿ

7) ಮಹಾ ಹಿಮಾಲಯವನ್ನು ....ಎಂದೂ ಕರೆಯುವರು.
ಉತ್ತರ:– ಹಿಮಾದ್ರಿ

8)..................ಪ್ರಪಂಚದಲ್ಲಿಯೇ ಅತ್ಯುನ್ನತ ಶಿಖರವಾಗಿದೆ.
ಉತ್ತರ:– ಮೌಂಟ್ ಎವೆರೆಸ್ಟ್

9) ಉತ್ತರ ಭಾರತದ ಮೈದಾನವು .... ಮಣ್ಣಿನಿಂದ ನಿರ್ಮಾಣವಾಗಿದೆ.
ಉತ್ತರ:– ಮೆಕ್ಕಲು

10) ಕರ್ನಾಟಕದಲ್ಲಿ ಪಶ್ಚಿಮ ಘಟ್ಟಗಳನ್ನು .... ಎಂದು ಕರೆಯುವರು.
ಉತ್ತರ:– ಸಹ್ಯಾದ್ರಿ

11) ....ಎಂಬುದು ಭಾರತದಲ್ಲಿ ಅತಿಎತ್ತರವಾದ ಶಿಖರವಾಗಿದೆ.
ಉತ್ತರ:– ಗಾಡ್ವಿನ್‌ಆಸ್ಟಿನ್ ಅಥವಾ $ಕೆ_2$

13) ಭಾರತದ ಉತ್ತರದ ತುತ್ತತುದಿ.......................
ಉತ್ತರ:– ಇಂದಿರಾಕೂಲ್

14) ಭಾರತದ ದಕ್ಷಿಣದ ತುತ್ತತುದಿ ....
ಉತ್ತರ:– ಇಂದಿರಾ ಪಾಯಿಂಟ್

15) ಭಾರತದ ಭೂಸ್ವರೂಪಗಳಲ್ಲಿ ಅತಿದೊಡ್ಡದು ....
ಉತ್ತರ:– ಪರ್ಯಾಯ ಪ್ರಸ್ಥಭೂಮಿ

16) ಭಾರತ ಮತ್ತು ಚೀನಾದ ನಡುವೆ ಎಳೆದಿರುವ ರೇಖೆ ....
ಉತ್ತರ:– 'ಮ್ಯಾಕ್‌ಮೋಹನ್' (McMohan line) ರೇಖೆ

17) ಭಾರತ ಮತ್ತು ಅಫ್ಘಾನಸ್ಥಾನದ ನಡುವೆ ಎಳೆದಿರುವ ರೇಖೆ ....
ಉತ್ತರ:– 'ಡ್ಯೂರ್ಯಾಂಡ್' (Durand line) ರೇಖೆ

18) ಭಾರತದ ಭೂಸ್ವರೂಪಗಳಲ್ಲಿ ಅತಿಪುರಾತನವಾದದ್ದು ....
ಉತ್ತರ:– ಪರ್ಯಾಯ ಪ್ರಸ್ಥಭೂಮಿ

19) ಪರ್ಯಾಯ ಪ್ರಸ್ಥಭೂಮಿಯ ವಿಸ್ತಾರ ಸುಮಾರು ....
ಉತ್ತರ:– 16 ಲಕ್ಷ ಚ.ಕಿ.ಮೀ.

20) ಮೌಂಟ್ ಎವರೆಸ್ಟ್ ಪರ್ವತದ ಎತ್ತರವನ್ನು ಮೊದಲ ಬಾರಿಗೆ ನಿಖರವಾಗಿ ಗುರುತಿಸಿದ ಭಾರತೀಯ.............
ಉತ್ತರ:– ರಾಧಾನಾಥ್ ಸಿಕ್ದರ್

21) ದಕ್ಷಿಣ ಭಾರತದಲ್ಲಿ ಅತ್ಯುನ್ನದ ಪ್ರದೇಶ/ಅತ್ಯುನ್ನತ ಶಿಖರ ....
ಉತ್ತರ:– ಅಣ್ಣಾಮಲೈ ಶ್ರೇಣಿಯಲ್ಲಿರುವ ಆನೈಮುಡಿ ಶಿಖರ

22) ಪೂರ್ವ ಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳು .... ದಲ್ಲಿ ಸಂಧಿಸುತ್ತವೆ
ಉತ್ತರ:– ನೀಲಗಿರಿ ಬೆಟ್ಟ

23) ಮೌಂಟ್ ಎವೆರೆಸ್ಟ್‌ನ ಎತ್ತರ ....
ಉತ್ತರ:– 8848 ಮೀ

24) ಭಾರತದಲ್ಲಿರುವ ಅತಿಎತ್ತರವಾದ ಶಿಖರ ....
ಉತ್ತರ:– ಗಾಡ್ವಿನ್‌ಆಸ್ಟಿನ್ ಅಥವಾ K2

25) ಗಾಡ್ವಿನ್‌ಆಸ್ಟಿನ್ ಅಥವಾ K2 ಶಿಖರದ ಎತ್ತರ ....
ಉತ್ತರ:– 8,611ಮೀ.

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC MATHS

Inverse trigonometric functions

30. Prove that $\cot^{-1}x+\cot^{-1}y=\cot^{-1}\left(\frac{xy-1}{y+x}\right)$

$$\text{Proof}:-\cot^{-1}x+\cot^{-1}y=\tan^{-1}\frac{1}{x}+\tan^{-1}\frac{1}{y}$$
$$=\tan^{-1}\left[\frac{\frac{1}{x}+\frac{1}{y}}{1-\frac{1}{x}.\frac{1}{y}}\right]$$
$$=\tan^{-1}\left(\frac{y+x}{xy-1}\right)$$
$$=\cot^{-1}\left(\frac{xy-1}{y+x}\right)$$

31. Prove that $\tan^{-1}\frac{1-x}{1+x}-\tan^{-1}\frac{1-y}{1+y}=\sin^{-1}\frac{y-x}{\sqrt{1+x^2}\sqrt{1+y^2}}$

Soln :– Consider, L.H.S.
$$(\tan^{-1}-\tan^{-1}x)-(\tan^{-1}1-\tan^{-1}y)$$
$$=\tan^{-1}y-\tan^{-1}x=\tan^{-1}\frac{y-x}{1+yx}$$
$$=\sin^{-1}\frac{y-x}{\sqrt{(1+yx)^2+(y-x)^2}}$$
$$=\sin^{-1}\frac{y-x}{\sqrt{1+y^2x^2+y^2+x^2}}$$
$$=\sin^{-1}\frac{y-x}{\sqrt{1+x^2}\sqrt{1+y^2}}=\text{R.H.S.}$$

32. Evaluate $\cos\left(2\cos^{-1}x+\sin^{-1}x\right)$ at $x=\frac{1}{5}$, where $0\le\cos^{-1}x\le\pi$ & $-\frac{\pi}{2}\le\sin^{-1}x\le\frac{\pi}{2}$.

Soln :– $\cos(2\cos^{-1}x+\sin^{-1}x)$
$$\Rightarrow\cos\{\cos^{-1}x+(\cos^{-1}x+\sin^{-1}x)\}$$
$$=\cos\left\{\cos^{-1}x+\frac{\pi}{2}\right\}$$
$$=\cos\left(\theta+\frac{\pi}{2}\right),\text{ where }\theta=\cos^{-1}x$$
$$=-\sin\theta=-\sqrt{1-\cos^2\theta}$$
$$=-\sqrt{1-x^2}=-\sqrt{1-\left(\frac{1}{5}\right)^2}$$
$$=\frac{-\sqrt{24}}{5}=\frac{-2\sqrt{6}}{5}$$

33. Solve $\tan^{-1}2x+\tan^{-1}3x=\frac{\pi}{4}$

Soln :– $\tan^{-1}2x+\tan^{-1}3x=\frac{\pi}{4}$
$$\Rightarrow\tan^{-1}\frac{2x+3x}{1-2x.3x}=\frac{\pi}{4}$$
$$\Rightarrow\frac{5x}{1-6x^2}=\tan\frac{\pi}{4}=1$$
$$\Rightarrow5x=1-6x^2$$
$$\Rightarrow6x^2+5x-1=0$$
$$\Rightarrow(6x-1)(x+1)=0$$
$$\Rightarrow x=\frac{1}{6}(\text{or})\,x=-1$$
But $x=-1$ does not satisfy the given equation.
$$\therefore x=\frac{1}{6}$$
[∴ L.H.S. of the equation becomes –ve whereas R.H.S. $=\frac{\pi}{4}>0$]

34. Evaluate $\cos\left[\sin^{-1}\frac{1}{4}+\sec^{-1}\frac{4}{3}\right]$

Soln :– $\cos\left[\sin^{-1}\frac{1}{4}+\sec^{-1}\frac{4}{3}\right]$
$$\Rightarrow\cos\left[\sin^{-1}\frac{1}{4}+\sec^{-1}\frac{3}{4}\right]$$
$$\Rightarrow\frac{3}{4}\sqrt{1-\left(\frac{1}{4}\right)^2}-\frac{1}{4}\sqrt{1-\left(\frac{3}{4}\right)^2}$$
$$\Rightarrow\frac{3}{4}\frac{\sqrt{15}}{4}-\frac{1}{4}\frac{\sqrt{7}}{4}$$
$$\Rightarrow\frac{3\sqrt{15}-\sqrt{7}}{16}$$

35. $\tan^{-1}\left(\frac{1}{4}\right)+\tan^{-1}\frac{2}{9}=\frac{1}{2}\cos^{-1}\left(\frac{3}{5}\right)=\sin^{-1}\left(\frac{1}{\sqrt{5}}\right)$

Soln :– Consider, L.H.S. $=\tan^{-1}\frac{\frac{1}{4}+\frac{2}{9}}{1-\frac{1}{4}.\frac{2}{9}}$



$$=\tan^{-1}\frac{\frac{9+8}{36}}{\frac{36-2}{36}}$$
$$=\tan^{-1}\frac{17}{34}=\tan^{-1}\frac{1}{2}$$
Again putting $\frac{1}{2}\cos^{-1}\frac{3}{5}=\theta$
$$\Rightarrow\cos2\theta=\frac{3}{5}$$
(Contd...)

ಶಿಕ್ಷಕರಿಗೆ ಎಐ ತರಬೇತಿ

ಉದ್ದೇಶ

- ಜೆನೆರೇಟಿವ್ ಎ ಐ ಪ್ರಾಂಪ್ಟ್‌ಗಳನ್ನು ಬರೆಯುವ ಸುಲಭ ಮತ್ತು ಪರಿಣಾಮಕಾರಿ ವಿಧಾನದ ಕುರಿತ ಮಾಹಿತಿ. ತರಗತಿ ಮತ್ತು ಪಠ್ಯಕ್ಕೆ ಸಂಬಂಧ ಪಟ್ಟ ಸಂಪನ್ಮೂಲ (ರಿಸೋರ್ಸಸ್) ಗಳನ್ನು ಎಐ ಬಳಸಿ ಹೊಂದಿಸಿಕೊಳ್ಳುವ ಬಗೆ.

ತರಬೇತಿಯಲ್ಲಿ ಏನಿದೆ?

- ನಿತ್ಯ ಜೀವನದಲ್ಲಿ ಎಐ ಬಳಕೆಯ ವಿವಿಧ ಆಯಾಮಗಳು
- ಶಿಕ್ಷಣ ಕ್ಷೇತ್ರದಲ್ಲಿ ಎಐ ಸಲಕರಣೆಗಳ ಬಳಕೆ
- ರೆಸ್ಪೋನ್ಸಿಬಲ್ ಎಐ (ಜವಾಬ್ದಾರಿ ಯುತವಾಗಿ ಎಐ ಬಳಸುವುದು ಹೇಗೆ)
- ಎ ಐ ಪ್ರಾಂಪ್ಟ್ (ಎಐ ಗೆ ಪ್ರಶ್ನೆ ಕೇಳುವ ವಿಧಾನ) ಬರವಣಿಗೆ ಬಗ್ಗೆ ಮಾಹಿತಿ
- ಶೈಕ್ಷಣಿಕ ಸಂಪನ್ಮೂಲಗಳನ್ನು ಎಐ ಬಳಸಿ ಸಿದ್ಧಪಡಿಸುವ ವಿಧಾನ
- ಪಠ್ಯದಲ್ಲಿ ಸೃಜನಾತ್ಮಕತೆ ತರುವುದು.

ರವಿಚಂದ್ರ ಎಂ.

ಶಾಲಾ ಶಿಕ್ಷಕರಿಗೆ ಉಚಿತ ಜೆನೆರೇಟಿವ್ ಎಐ ತರಬೇತಿಗೆ ಮುಂದಾದ ಎಂಐಟಿ ಮತ್ತು ಗೂಗಲ್ ಜೆನೆರೇಟಿವ್. ಚಾಟ್ ಜಿಟಿಪಿ ಪ್ರಯೋಗಾಲಯದಿಂದ ಮುಖ್ಯವಾಹಿನಿಗೆ ಬಂದಾಗ ಇನ್ನು ಮುಂದೆ ಬರಹಗಾರರಿಗೆ, ಕಥೆಗಾರರಿಗೆ ಕೆಲಸ ಇರುವುದಿಲ್ಲ; ಎಲ್ಲ ರೀತಿಯ ಬರವಣಿಗೆಯನ್ನು ಚಾಟ್ ಜಿಟಿಪಿ ಮಾಡಿ ಮುಗಿಸುತ್ತದೆ ಎಂಬ ಚರ್ಚೆ ನಡೆದಿದ್ದು ನಿಜ.

ಆದರೆ ಜೆನೆರೇಟಿವ್ ಎಐ ಆಧಾರಿತ ತಂತ್ರಜ್ಞಾನಗಳಾದ ಚಾಟ್ ಜಿಟಿಪಿ, ಜೆಮಿನಿ ಎಐ, Copilot ಮೊದಲಾದವು ಬರಹಗಾರರು, ಸಂಗೀತ ತಂತ್ರಜ್ಞರು, ಚಿತ್ರಕಲೆ ಕಲಾವಿದರುಗಳ ಕೆಲಸವನ್ನು ಇನ್ನಷ್ಟು ಉತ್ಕೃಷ್ಟವಾಗಿ ಮಾಡಲು ಸಹಾಯ ಮಾಡುವ ಆಪ್ತಸಹಾಯಕರಂತೆ ಹೊರ ಹೊಮ್ಮತೊಡಗಿವೆ. ಇಂಥ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಜೆನೆರೇಟಿವ್ ಎ.ಐನ ಬಳಕೆ ಮೂಲಕ ಶಿಕ್ಷಕರು ಹೇಗೆ ಮಕ್ಕಳ ಶಕ್ತಿ-ಮತ್ತು ದೌರ್ಬಲ್ಯವನ್ನು ಗುರುತಿಸಿ, ವ್ಯಕ್ತಿಗತ ಶಿಕ್ಷಣ ಪದ್ಧತಿಯನ್ನು ಅನುಷ್ಠಾನ ಮಾಡಬಹುದು ಎಂಬುದರತ್ತ ಚಿಂತನೆ ನಡೆದಿದೆ.

ದೈನಂದಿನ ಚಟುವಟಿಕೆಗಳನ್ನೂ ತ್ವರಿತವಾಗಿ ಮತ್ತು ಜಾಣ್ಮೆಯಿಂದ ನಿರ್ವಹಿಸಬಹುದು. ಶಿಕ್ಷಣ ಕ್ಷೇತ್ರದಲ್ಲಿ ಇನ್ನಷ್ಟು ಆವಿಷ್ಕಾರಗಳನ್ನೂ ತರುವ ಚರ್ಚೆ ನಡೆಸಿದೆ. ಗೂಗಲ್ ಕಂಪನಿ ಮ್ಯಾಸಚೂಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ 'ಜೆನೆರೇಟಿವ್ ಎಐ ಫಾರ್ ಎಡುಕೇಟೋರ್ಸ್' (Generative AI For Educators) ಎಂಬ ಆನ್‌ಲೈನ್ ತರಬೇತಿ ಹಮ್ಮಿಕೊಂಡಿದೆ.

ಈ ಕೋರ್ಸ್ ಶಿಕ್ಷಕರು ಅದರಲ್ಲೂ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಕರನ್ನು ಎಐ ಯುಗಕ್ಕೆ ಸಜ್ಜು ಮಾಡುವ ಗುರಿಯೊಂದಿಗೆ ಪ್ರಾರಂಭಿಸಲಾಗಿದೆ.

- **ತರಬೇತಿ ಸಮಯ: 2 ಗಂಟೆಗಳು**
- **ತರಬೇತಿ ಮಾಧ್ಯಮ: ಇಂಗ್ಲಿಷ್**
- **ಉಚಿತವಾಗಿ ತರಬೇತಿ ಲಭ್ಯ**

ಕೋರ್ಸ್‌ನ ಕೊಂಡಿ https://grow.google/ai-for-educators/.
ಈ ಕೋರ್ಸ್ ಕಲಿಯುಲು gmail id ಮೂಲಕ ಲಾಗಿನ್ ಆಗಬೇಕು

ವಿದ್ಯಾರ್ಥಿ ವೇತನ ಕೈಪಿಡಿ

ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್

ಬ್ಲೂ ಸ್ಟಾರ್ ಫೌಂಡೇಷನ್ ಮೋಹನ್ ಟಿ ಅಡ್ವಾಣಿ ಸೆಂಟೆನ್ನಿಯಲ್ ಸ್ಕಾಲರ್‌ಶಿಪ್ ಯೋಜನೆಯ ಮೂಲಕ ಭಾರತದಾದ್ಯಂತ ಆಯ್ದ ಖಾಸಗಿ ಅಥವಾ ಸರ್ಕಾರಿ ಕಾಲೇಜುಗಳಲ್ಲಿ ಆರ್ಕಿಟೆಕ್ಚರ್ ಮತ್ತು ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ದಾಖಲಾದ ವಿದ್ಯಾರ್ಥಿಗಳನ್ನು ಆರ್ಥಿಕವಾಗಿ ಬೆಂಬಲಿಸುವ ಉದ್ದೇಶ ಹೊಂದಿದೆ.

ಅರ್ಹತೆ: ಸಿವಿಲ್ ಎಂಜಿನಿಯರಿಂಗ್ ಹೊರತುಪಡಿಸಿ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್, ಮೆಕ್ಯಾನಿಕಲ್ ಎಂಜಿನಿಯರಿಂಗ್, ಇನ್‌ಫಾರ್ಮೇಷನ್ ಟೆಕ್ನಾಲಜಿ (ಐಟಿ), ಕಂಪ್ಯೂಟರ್ ಸೈನ್ಸ್ (ಸಿಎಸ್) ಮತ್ತು ಸಂಬಂಧಿತ ಸ್ಟೆಮ್ ಕ್ಷೇತ್ರಗಳಲ್ಲಿ ಆರ್ಕಿಟೆಕ್ಚರ್ ಕೋರ್ಸ್‌ಗಳಿಗೆ ದಾಖಲಾದ ಮೊದಲ ಮತ್ತು ಎರಡನೇ ವರ್ಷದ ವಿದ್ಯಾರ್ಥಿಗಳು ಅರ್ಹರು.

ಪ್ರಥಮ ವರ್ಷದ ವಿದ್ಯಾರ್ಥಿಗಳಾದರೆ 10ನೇ ತರಗತಿ ಮತ್ತು 12ನೇ ತರಗತಿಯಲ್ಲಿ ಕನಿಷ್ಠ ಶೇ 80ರಷ್ಟು ಅಂಕ ಮತ್ತು ಎರಡನೇ ವರ್ಷದ ವಿದ್ಯಾರ್ಥಿಗಳಾದರೆ 12ನೇ ತರಗತಿಯಲ್ಲಿ ಕನಿಷ್ಠ ಶೇ 80 ಮತ್ತು ಎಂಜಿನಿಯರಿಂಗ್‌ನ ಮೊದಲ ವರ್ಷದಲ್ಲಿ ಶೇ 75 ಅಂಕಗಳನ್ನು ಪಡೆದಿರಬೇಕು. ಅರ್ಜಿದಾರರ ವಾರ್ಷಿಕ ಕುಟುಂಬದ ಆದಾಯವು ₹ 6 ಲಕ್ಷಕ್ಕಿಂತ ಕಡಿಮೆ ಇರಬೇಕು.

ಯಾವುದೇ ಇತರ ವಿದ್ಯಾರ್ಥಿವೇತನದ ಫಲಾನುಭವಿಗಳಾಗಿರಬಾರದು.

ಆರ್ಥಿಕ ಸಹಾಯ: ಎಂಜಿನಿಯರಿಂಗ್ ಮತ್ತು ಆರ್ಕಿಟೆಕ್ಚರ್ ವಿದ್ಯಾರ್ಥಿಗಳಿಗೆ: ₹75,000 ಅಥವಾ ವಾರ್ಷಿಕ ಶುಲ್ಕದ ಶೇ 50ರಷ್ಟು ಭರಿಸುವುದು (ಎರಡರಲ್ಲಿ ಒಂದು ಆಯ್ಕೆ)

ಡಿಪ್ಲೊಮಾ ವಿದ್ಯಾರ್ಥಿಗಳಿಗೆ: ₹ 30,000 ಅಥವಾ ವಾರ್ಷಿಕ ಶುಲ್ಕದ ಶೇ 75 (ಎರಡರಲ್ಲಿ ಒಂದು ಆಯ್ಕೆ)

ಅರ್ಜಿ ಸಲ್ಲಿಸಲು ಕೊನೆ ದಿನ: 20-08-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ. ಮಾಹಿತಿಗೆ: Short Url: www.b4s.in/praja/BSFS2

ವಿದ್ಯಾರ್ಥಿನಿಯರಿಗೆ ಸ್ಕಾಲರ್‌ಷಿಪ್

ಶೇಫ್ಲರ್ ಇಂಡಿಯಾವು ಮೊದಲ-ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿನಿಯರಿಗೆ (ಅಂಗವಿಕಲ ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ) ಅಧ್ಯಯನ ಮುಂದುವರಿಸಲು ಅವಕಾಶ ಮಾಡಿಕೊಡುತ್ತದೆ.

ಅರ್ಹತೆ: ಇದು ವಿದ್ಯಾರ್ಥಿನಿಯರಿಗೆ ಮಾತ್ರ ಲಭ್ಯ. 12ನೇ ತರಗತಿಯಲ್ಲಿ (ವಿಜ್ಞಾನ)ಶೇ 60ಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸಿರಬೇಕು. ಮೊದಲ ವರ್ಷಕ್ಕೆ ದಾಖಲಾಗಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 5ಲಕ್ಷಕ್ಕಿಂತ ಕಡಿಮೆ ಇರಬೇಕು.

ಆರ್ಥಿಕ ಸಹಾಯ: ₹ 50,000

ಅರ್ಜಿ ಸಲ್ಲಿಸಲು ಕೊನೆ ದಿನ: 15-08-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್.

ಹೆಚ್ಚಿನ ಮಾಹಿತಿಗೆ : Short Url: www.b4s.in/praja/SIHE15

CMR UNIVERSITY
Private University Estd in Karnataka State by Act No. 45 of 2013
BENGALURU | RECOGNIZED BY UGC

SCAN TO UNLOCK A DEDUCTION OF 25% IN APPLICATION FEES

CREATE THE FUTURE

SCHOOL OF ARCHITECTURE
B.Arch.

SCHOOL OF ENGINEERING & TECHNOLOGY
B.Tech.
• CSE • CSE (AI & ML) • CSE (Data Science)
• Computer Engg. NEW * • CST NEW *
* With specialization in Artificial Intelligence & Machine Learning, Internet of Things
• IT • ECE
M.Tech. (For Regular and Professionals) • CSE • AI
Ph.D. CSE (AI & ML, Networking and Cloud Computing, Data Analytics, Cyber Security, Data Science and Internet of Things)
• ECE • Mechanical Engineering

SCHOOL OF DESIGN
B.Des.
• Communication Design • Product Design
• Fashion Design • Interior Design

SCHOOL OF LIBERAL STUDIES
(Formerly School of Social Science & Humanities)
B.A. / B.A (Hons) (Major + Minor)
• Psychology • English • Journalism • Economics
• Political Science • History • Sociology
• Media Studies • Travel & Tourism NEW
B.Sc. | Psychology
M.Sc. | Psychology • Clinical • Counselling
• Human Resource Development and Management
Ph.D. | Psychology

SCHOOL OF ECONOMICS & COMMERCE
B.Com. / B.Com. (Hons.)
• General • International Accounting & Finance (ACCA, UK)
• Professional - CA Integrated • Data Science NEW
• Certified Management Accountant (US CMA) NEW
Ph.D. | Economics • Commerce

SCHOOL OF LEGAL STUDIES
B.A., LL.B. (Hons.),
B.B.A., LL.B. (Hons.), LL.B.
LL.M. | Constitutional Law • Commercial Law
• Criminal Law NEW Ph.D. | Law

SCHOOL OF SCIENCE & COMPUTER STUDIES
(Formerly School of Science Studies)
BCA / BCA (Hons) • General • Cloud Computing
• Data Science • Game Development
B.Sc. | Sound Engineering • Visual Effects & Animation
• Information Technology NEW
M.Sc. | Information Technology in Data Science NEW
MCA
Ph.D. | Computer Application

SCHOOL OF MANAGEMENT
BBA / BBA (Hons.)
• General • Digital Marketing • Business Analytics
MBA with Dual Specialisation in • Marketing • HR
• Finance • Business Analytics (IoA, UK) • Digital Marketing
• Supply Chain Management
MBA | Business Analytics & Business Intelligence NEW
Executive MBA | Product Leadership
Ph.D. | Management

3rd RANK IN INDIA
Emerging Institutes & Placement category
Source: Times All India Engineering Institutes Ranking Survey 2024

SCHOLARSHIPS OFFERED
CMRUAT · MERIT · SPORTS · DEFENSE · CET RANK BASED
Providing opportunities to get scholarships worth 12 Crores

Accelerated Credit Course Programme (ACCP)
Stay ahead of the competition
APPLY TODAY
to get trained and certified for FREE in niche courses

PGCET code: MBA (City Campus) - B150
MBA (OMBR Campus) - B149 | MBA (Lakeside Campus) - B395
MCA (OMBR Campus) - C527 | MCA (Lakeside Campus) - C521
CET codes: B.Tech. - E257 | B.Arch. - A245
We honour JEE, Comedk, and all National-level tests.

CELEBRATING 25 YEARS
CMRIT
CMR INSTITUTE OF TECHNOLOGY, BENGALURU.
A++ NAAC
CMR INSTITUTE OF TECHNOLOGY
Permanently affiliated to VTU • Approved by AICTE
Recognised by the Govt. of Karnataka • Accredited by NAAC with A++ grade • NBA Accredited • NIRF Ranked

B.E. | CSE • CSE (AI & ML) • AI & DS • AI & ML
CSE (Data Science) • ISE • ECE
MBA | MCA
Ph.D. | CSE • ECE • EEE • Mechanical
Civil • Physics • Mathematics
Chemistry • Business Administration
Computer Applications

B.E : CET code - E097
ComedK code - E032

PGCET code : MCA - C420MC
MBA - B151MB

www.cmrit.ac.in
admission@cmrit.ac.in
SCAN FOR DETAILS

+91 93429 00666
admissions@cmr.edu.in
www.cmr.edu.in

Lakeside Campus: Off Hennur-Bagalur Main Road, Chagalahatti, Bengaluru - 562 149
City Campus: #2, 3rd Cross, 6th A Main, HRBR Layout, Bengaluru - 560 043
OMBR Campus: No.5, Bhuvanagiri, OMBR Layout, Bengaluru - 560 043
CMRIT Campus: 132, AECS Layout, ITPL Main Road, Kundalahalli, Bengaluru - 560 037

❦ ಸುಭಾಷಿತ ❦

ವಿವೇಕವೆಂದರೆ ಬಿಡಿಸಿ ನೋಡುವುದು, ವಿಶ್ಲೇಷಿಸುವುದು, ತೂಗುವುದು, ಅಳೆಯುವುದು.

–ಗೋಪಾಲಕೃಷ್ಣ ಅಡಿಗ

ಪರಿಶಿಷ್ಟ ಜಾತಿಗೆ ಒಳಮೀಸಲು 'ಸುಪ್ರೀಂ' ತೀರ್ಪು ಐತಿಹಾಸಿಕ

ಪರಿಶಿಷ್ಟ ಜಾತಿಗಳೊಳಗಿನ ಉಪಜಾತಿಗಳಿಗೆ ಒಳಮೀಸಲಾತಿ ಕಲ್ಪಿಸಲು ರಾಜ್ಯಗಳಿಗೆ ಅವಕಾಶ ಇದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಇದು ಮೀಸಲಾತಿ ವ್ಯವಸ್ಥೆಯಲ್ಲಿ ಬಹಳ ಮುಖ್ಯವಾದ ಹೆಜ್ಜೆಯಾಗಿದೆ. ಈ ಹಿಂದೆ ಈ ವಿಚಾರದಲ್ಲಿ ಪರಸ್ಪರ ವಿರುದ್ಧವಾದ ತೀರ್ಪುಗಳನ್ನು ನೀಡಲಾಗಿತ್ತು. ಈಗ, ಏಳು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ಈ ವಿಚಾರದಲ್ಲಿ ಇದ್ದ ಗೊಂದಲವನ್ನು ಪರಿಹರಿಸಿದೆ. ಒಳಮೀಸಲಾತಿ ನೀಡಿಕೆಯು ಸಂವಿಧಾನ ಕಲ್ಪಿಸಿರುವ ಸಮಾನತೆಯ ಹಕ್ಕನ್ನು ಉಲ್ಲಂಘಿಸುವುದಿಲ್ಲ; ಬದಲಿಗೆ, ವಾಸ್ತವಿಕವಾಗಿ ಸಮಾನತೆಯನ್ನು ಹೆಚ್ಚಿಸಲು ಅಗತ್ಯವಾಗಿದೆ ಎಂದು ನ್ಯಾಯಾಲಯ ಹೇಳಿದೆ. ಪರಿಶಿಷ್ಟ ಜಾತಿಯ ಸಮುದಾಯಗಳು ಸಮರೂಪದಲ್ಲಿಲ್ಲ ಮತ್ತು ಅವುಗಳಿಗೆ 'ಅಗೋಚರ'ವಾದ ಏಕರೂಪವೂ ಇಲ್ಲ ಎಂದು ನ್ಯಾಯಾಲಯ ಹೇಳಿದೆ. ಈ ಜಾತಿಗಳ ಒಳಗೆ ಇರುವ ಕೆಲವು ಉಪಜಾತಿಗಳಿಗೆ ಮೀಸಲಾತಿಯ ಪ್ರಯೋಜನವನ್ನು ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಹೀಗಾಗಿ, ಇಂತಹ ಉಪಜಾತಿಗಳು ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿವೆ. ಹಿಂದುಳಿದಿರುವಿಕೆಯ ಆಧಾರದಲ್ಲಿ ಒಳಮೀಸಲಾತಿ ನೀಡಿದರೆ ಈತನಕ ಮೀಸಲಾತಿಯ ಲಾಭ ಪಡೆದುಕೊಳ್ಳಲು ಸಾಧ್ಯವಾಗದ ಸಮುದಾಯಗಳಿಗೆ ಕೂಡ ಪ್ರಯೋಜನ ದೊರೆಯಬಹುದು.

ಪಂಜಾಬ್, ಹರಿಯಾಣ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಂತಹ ರಾಜ್ಯಗಳು ಒಳಮೀಸಲಾತಿ ನೀಡಲು ಈ ಹಿಂದೆ ಪ್ರಯತ್ನಿಸಿದ್ದವು. ಆದರೆ, ಈ ಪ್ರಯತ್ನಗಳಿಗೆ ನ್ಯಾಯಾಂಗವೇ ತಡೆ ಒಡ್ಡಿತ್ತು. ಒಳಮೀಸಲಾತಿ ಕಲ್ಪಿಸುವುದು ಬಹಳ ಸಂಕೀರ್ಣವಾದ ಕೆಲಸ. ಹಾಗಾಗಿ ಈ ಕೆಲಸವನ್ನು ನ್ಯಾಯಯುತವಾಗಿ ಮಾಡಬೇಕು. ಒಳಮೀಸಲಾತಿ ನೀಡಿಕೆಯು ಯಾರದೋ ಇಷ್ಟಾನಿಷ್ಟಗಳನ್ನು ಅವಲಂಬಿಸದೆ, 'ಗಣನೀಯವಾದ ಮತ್ತು ಪ್ರಮಾಣೀಕರಿಸಬಹುದಾದ ದತ್ತಾಂಶ'ಗಳ ಆಧಾರದಲ್ಲಿ ನಿರ್ಧಾರವಾಗಬೇಕು. ಇದು ಬಹುದೊಡ್ಡ ಸವಾಲಿನ ಕೆಲಸ. ಪರಿಶಿಷ್ಟ ಜಾತಿಗಳಲ್ಲಿ ಸಾವಿರಕ್ಕೂ ಹೆಚ್ಚು ಉಪಜಾತಿಗಳಿವೆ. ಒಪ್ಪಿತವಾದ ಮಾನದಂಡಗಳು ಮತ್ತು ವಿಧಾನಗಳ ಮೂಲಕ ತುಲನಾತ್ಮಕವಾಗಿ ಈ ಜಾತಿಗಳ ಹಿಂದುಳಿದಿರುವಿಕೆಯನ್ನು ನಿರ್ಣಯಿಸಬೇಕು. ಈ ಮಾನದಂಡಗಳು ಸರ್ಕಾರದಲ್ಲಿನ ಪ್ರಾತಿನಿಧ್ಯ ಮತ್ತು ಶಿಕ್ಷಣಕ್ಕೆ ಸೀಮಿತವಾಗಿರಬಾರದು; ಸಾಮಾಜಿಕ ಸ್ಥಾನಮಾನವನ್ನು ಗಣನೆಗೆ ತೆಗೆದುಕೊಳ್ಳಬೇಕು ಎಂದು ನ್ಯಾಯಾಲಯವು ಹೇಳಿದೆ. ರಾಜ್ಯಗಳಲ್ಲಿ ನೀಡಲಾಗುವ ಒಳಮೀಸಲಾತಿಯನ್ನು ರಾಷ್ಟ್ರ ಮಟ್ಟಕ್ಕೆ ವಿಸ್ತರಿಸಬೇಕು ಎಂದಾದಾಗಲೂ ಬೇರೆ ಬೇರೆ ರಾಜ್ಯಗಳಲ್ಲಿ ಆ ಉಪಜಾತಿಗಳ ಹಿಂದುಳಿದಿರುವಿಕೆಯನ್ನು ಪರಿಶೀಲನೆಗೆ ಒಳಪಡಿಸಬೇಕು. ಏಕೆಂದರೆ, ಒಂದು ಗುಂಪಿನ ಸ್ಥಾನಮಾನವು ಬೇರೆ ಬೇರೆ ರಾಜ್ಯಗಳಲ್ಲಿ ಭಿನ್ನವಾಗಿ ಇರಬಹುದು.

ರಾಜಕೀಯ ಮತ್ತು ಚುನಾವಣಾ ಲೆಕ್ಕಾಚಾರಗಳು ಒಳಮೀಸಲಾತಿಯ ಸಮರ್ಪಕ ಹಂಚಿಕೆಗೆ ತೊಡಕಾಗದಂತೆ ಎಚ್ಚರ ವಹಿಸಬೇಕು

ಒಳಮೀಸಲಾತಿ ನೀಡುವುದಕ್ಕಾಗಿ ಸಮಗ್ರವಾದ ಗಣತಿಗಳನ್ನು ಮಾಡಬೇಕಾಗಬಹುದು. ಈ ಸನ್ನಿವೇಶದಲ್ಲಿ ಜಾತಿ ಜನಗಣತಿಯ ಬೇಡಿಕೆಯು ಮುನ್ನೆಲೆಗೆ ಬರುತ್ತದೆ. ರಾಜಕೀಯ ಮತ್ತು ಚುನಾವಣಾ ಲೆಕ್ಕಾಚಾರಗಳು ಇಲ್ಲಿ ತೊಡಕಾಗುವ ಅಪಾಯ ಇದ್ದೇ ಇದೆ. ಆದರೆ, ಅದು ಸಮರ್ಪಕವಾಗಿ ಒಳಮೀಸಲು ಹಂಚಿಕೆಗೆ ಅಡ್ಡ ಬಾರದಂತೆ ಎಚ್ಚರ ವಹಿಸಬೇಕು. ಕರ್ನಾಟಕದಲ್ಲಿ ಒಳಮೀಸಲಾತಿ ಕುರಿತಂತೆ ದೊಡ್ಡ ಮಟ್ಟದಲ್ಲಿ ಚರ್ಚೆ ಆಗಿದೆ. ಒಳಮೀಸಲಾತಿ ನೀಡುವುದಕ್ಕಾಗಿ ಸಂವಿಧಾನಕ್ಕೆ ತಿದ್ದುಪಡಿ ತರಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದ್ದರು. ಒಳಮೀಸಲು ಕುರಿತು ಇದ್ದ ಗೊಂದಲಗಳಿಗೆ ಸುಪ್ರೀಂ ಕೋರ್ಟ್ ಈಗ ತೆರೆ ಎಳೆದಿದೆ. ಈಗ ಇದನ್ನು ಜಾರಿಗೊಳಿಸುವುದಕ್ಕಾಗಿ ನೀತಿ ರೂಪಿಸಲು, ಯೋಜನೆ ತಯಾರಿಸಲು ರಾಜ್ಯಗಳಿಗೆ ಸಮಯಾವಕಾಶ ಬೇಕು. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿಗೆ ಕೆನೆಪದರ ನೀತಿ ಅನ್ವಯಿಸಬೇಕು. ಮೀಸಲಾತಿ ಪಡೆದು ಮುಂದಕ್ಕೆ ಬಂದವರನ್ನು ಮೀಸಲಾತಿಯಿಂದ ಹೊರಗೆ ಇರಿಸಬೇಕು ಎಂದೂ ಏಳು ನ್ಯಾಯಮೂರ್ತಿಗಳ ಪೈಕಿ ನಾಲ್ವರು ಹೇಳಿದ್ದಾರೆ. ಇದು ವಿವಾದಕ್ಕೆ ಕಾರಣವೂ ಆಗಬಹುದು.

ದಿನದ ಟ್ವೀಟ್

ವಾಹನ ಮಾಲಿನ್ಯ: ಗಂಭೀರವಾಗಿ ಪರಿಗಣಿಸಿ

ಬೆಂಗಳೂರಿನಲ್ಲಿ ನೀವು ಧೂಮಪಾನಿ ಅಲ್ಲದಿದ್ದರೆ, ಅದಕ್ಕಾಗಿ ಹೆಚ್ಚು ಸಂತೋಷಪಡುವ ಅಗತ್ಯವಿಲ್ಲ. ಏಕೆಂದರೆ ಇಲ್ಲಿ ವಾಹನಗಳ ಮಾಲಿನ್ಯವೇ ಸಾಕು– ಧೂಮಪಾನಿಗಳಿಗಿಂತಲೂ ಬಹುಬೇಗ ನೀವು ಸಾವಿಗೀಡಾಗಬಹುದು.

ವಿಜಯ್ ಕುಮಾರ್ ಜಿ., ಸಂಸ್ಥಾಪಕ ಮತ್ತು ನಿರ್ದೇಶಕ, ಗುರು ದೀಕ್ಷಾ ಅಕಾಡೆಮಿ

ಕಿಡಿನುಡಿ

ಅಪಾಯದ ಅರಿವಿಲ್ಲದೆ ಸೆಲ್ಫಿ ಕ್ಲಿಕ್ಕಿಸಲು ಮುಂದಾಗುವ ಮೂರ್ಖರು ವಾಸ್ತವ ಪ್ರಪಂಚದಲ್ಲಿ ಇರಲು ಅರ್ಹರಲ್ಲ. ಅವರ ಕೃತ್ಯವನ್ನು ಖಂಡಿಸಲೇಬೇಕು.

(ಪುಣೆ ಸಮೀಪ ಸೆಲ್ಫಿ ತೆಗೆಯಲು ಮುಂದಾದಾಗ 60 ಅಡಿ ಕಂದಕಕ್ಕೆ ಬಿದ್ದಿದ್ದ 29 ವರ್ಷದ ಯುವತಿಯನ್ನು ಗೃಹರಕ್ಷಕ ದಳ ಮತ್ತು ಸ್ಥಳೀಯರು ರಕ್ಷಿಸಿದ ಪ್ರಕರಣಕ್ಕೆ ಪ್ರತಿಕ್ರಿಯೆ)

ಮಿನಿ ನಾಯರ್, ಲೇಖಕಿ

25 ವರ್ಷಗಳ ಹಿಂದೆ

ಗುರುವಾರ, 5-8-1999

- **ಅಭಿಮಾನಿಗಳ ಒತ್ತಡ: ಅಂಬರೀಷ್ ಹಠಾತ್ ನಿವೃತ್ತಿ ಘೋಷಣೆ**

ಮೈಸೂರು, ಆ. 4– ಜನತಾದಳದಲ್ಲೇ ಉಳಿಯುವಂತೆ ಕಾರ್ಯಕರ್ತರು ಹಾಗೂ ಅಭಿಮಾನಿಗಳು ತಂದ ಒತ್ತಡದಿಂದ ಬೇಸತ್ತ ವಿಸರ್ಜಿತ ಲೋಕಸಭಾ ಸದಸ್ಯ, ಸಿನಿಮಾ ನಟ ಅಂಬರೀಷ್, 'ನನಗೆ ರಾಜಕೀಯವೇ ಬೇಡ. ರಾಜಕೀಯದಿಂದಲೇ ನಿವೃತ್ತಿ ಹೊಂದುತ್ತೇನೆ' ಎಂದು ಘೋಷಿಸಿ ಕಾರು ಹತ್ತಿ ಹೊರಟು ಹೋದ ಘಟನೆ ಇಂದು ಕೆ.ಆರ್.ಎಸ್‌ನಲ್ಲಿ ನಡೆದಿದೆ.

ಕನ್ನಂಬಾಡಿ ಕಟ್ಟೆಯ ಬಳಿ ಕಾವೇರಿ ಮಾತೆಗೆ ಪೂಜೆ ಸಲ್ಲಿಸಲು ಸಕುಟುಂಬ ಸಮೇತರಾಗಿ ಬಂದಿದ್ದ ಅವರು, ಪೂಜೆಯ ನಂತರ ಅಲ್ಲಿ ಸೇರಿದ್ದ ಅಭಿಮಾನಿಗಳು ಹಾಗೂ ಕಾರ್ಯಕರ್ತರ ಜೊತೆ ಮಾತನಾಡುವಾಗ ಸಿನಿಮೀಯ ಮಾದರಿಯಲ್ಲಿ ಈ ಘಟನೆ ನಡೆದಿದೆ. ಒಂದು ಹಂತದಲ್ಲಿ ಕಾಂಗ್ರೆಸ್ ಸೇರುವುದನ್ನು ವಿರೋಧಿಸಿ ಅಂಬರೀಷ್ ಅವರನ್ನು ಅಭಿಮಾನಿಗಳು ಮತ್ತು ದಳ ಕಾರ್ಯಕರ್ತರು ಘೇರಾವ್ ಮಾಡುವ ಯತ್ನ ನಡೆಸಿದರು.

ಅಂಬರೀಷ್ ಕೆ.ಆರ್.ಎಸ್‌ಗೆ ಬರುತ್ತಾರೆಂದು ತಿಳಿದು ದಳ ಕಾರ್ಯಕರ್ತರು ಹಾಗೂ ಅವರ ಅಭಿಮಾನಿಗಳು ಅಲ್ಲಿ ಸೇರಿದ್ದರು. 'ದಳದಿಂದ ಆರಿಸಿಹೋದ ನೀವು ದಳದಲ್ಲೇ ಉಳಿಯಬೇಕು' ಎಂಬ ಘೋಷಣೆಗಳನ್ನು ಕೂಗುತ್ತಿದ್ದರು. ಪೂಜೆ ಮುಗಿಸಿ ಬಂದ ಅಂಬರೀಷ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡತೊಡಗಿದಾಗಲೇ ಪರಿಸ್ಥಿತಿ ವಿಕೋಪಕ್ಕೆ ತಿರುಗಿತು.

- **ಚುನಾವಣೆ: ವೀರಪ್ಪನ್ ವಿರುದ್ಧ ಕಟ್ಟೆಚ್ಚರ**

ಕೊಯಮತ್ತೂರು, ಆ. 4 (ಪಿಟಿಐ)– ಮುಂಬರುವ ಲೋಕಸಭಾ ಚುನಾವಣೆಯನ್ನು ಸುಗಮವಾಗಿ ನಡೆಸಲು, ದಂತಚೋರ ಹಾಗೂ ಶ್ರೀಗಂಧ ಕಳ್ಳಸಾಗಣೆದಾರ ವೀರಪ್ಪನ್ ಚಟುವಟಿಕೆಗಳಿರುವ ಪಶ್ಚಿಮಘಟ್ಟ ಪ್ರದೇಶಗಳ ಸೂಕ್ಷ್ಮ ಪ್ರದೇಶಗಳಲ್ಲಿ ಸೂಕ್ತ ಪಡೆಗಳನ್ನು ನಿಯೋಜಿಸಲಾಗುವುದು ಎಂದು ಜಂಟಿ ವಿಶೇಷ ಕಾರ್ಯಾಚರಣೆ ಪಡೆಯ ಮಹಾನಿರ್ದೇಶಕ ಬಾಲಚಂದ್ರನ್ ಇಂದು ಇಲ್ಲಿ ತಿಳಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 5-8-1974

- **ನೆರೆ ಸಂತ್ರಸ್ತರ ನೆರವಿಗೆ ಕೇಂದ್ರ ಹಣ ಒದಗಿಸದು: ಸಚಿವ ಪೈ ವಿವರಣೆ**

ಮಂಗಳೂರು, ಆ. 4– ಕೇಂದ್ರ ಸರ್ಕಾರ ಪ್ರವಾಹ ಮತ್ತು ಕ್ಷಾಮಪೀಡಿತ ಪ್ರದೇಶಗಳ ಜನರಿಗೆ ಪರಿಹಾರ ಒದಗಿಸಲು ಹಣ ನೀಡುವುದನ್ನು ನಿಲ್ಲಿಸಿದೆ ಎಂದು ಕೇಂದ್ರ ಸಚಿವ ಟಿ.ಎ. ಪೈ ಅವರು ಇಂದು ಇಲ್ಲಿ ತಿಳಿಸಿದರು.

'ಪರಿಹಾರಕ್ಕಾಗಿ ಕೊಟ್ಟ ಹಣದ ಸರಿಯಾದ ವಿನಿಯೋಗ ಮತ್ತು ಉಸ್ತುವಾರಿ ಕಷ್ಟಕರ. ಇಂತಹ ಕಷ್ಟಸ್ಥಿತಿ ಒದಗಿದಾಗ ಸಮಾಜ ಮುಂದೆ ಬಂದು ಸಂತ್ರಸ್ತರಿಗೆ ನೆರವು ನೀಡಬೇಕು' ಎಂದು ಅವರು ಹೇಳಿದರು.

ಬಜಪೆ ವಿಮಾನ ನಿಲ್ದಾಣದಲ್ಲಿ ಬೆಂಗಳೂರಿನಿಂದ ಬಂದಿಳಿದ ಸಚಿವ ಪೈ ಅವರು, ಪ್ರವಾಹದಿಂದಾಗಿರುವ ಕಷ್ಟಸ್ಥಿತಿ ಮತ್ತು ಪರಿಹಾರ ಕಾರ್ಯಕ್ರಮ ಕುರಿತು ಮುಖಂಡರು ಮತ್ತು ಅಧಿಕಾರಿಗಳೊಡನೆ ಚರ್ಚಿಸಿದರು.

- **ರಾಜ್ಯದ ಸಂಪತ್ ಸಾಧನ ಬಳಸಿ ಕಾಳಿ ಯೋಜನೆ ಪೂರೈಕೆ**

ಚಿತ್ರದುರ್ಗ, ಆ. 4– ರಾಜ್ಯ ಸರ್ಕಾರ ತನ್ನಲ್ಲಿರುವ ಎಲ್ಲ ಸಂಪತ್ ಸಾಧನಗಳಿಂದಲೇ ಕಾಳಿ ನದಿ ಜಲವಿದ್ಯುತ್ ಯೋಜನೆಯನ್ನು ನಿಲ್ಲಿಸದೆ ಮುಂದುವರಿಸಿಕೊಂಡು ಹೋಗುವುದಾಗಿ ಮುಖ್ಯಮಂತ್ರಿ ದೇವರಾಜ ಅರಸು ಅವರು ಇಂದು ಹೊಳಲ್ಕೆರೆಯಲ್ಲಿ ಹೇಳಿದರು.

ಹಿಂದಿನ ಸರ್ಕಾರಗಳಂತಲ್ಲದ ಪ್ರಸ್ತುತ ಸರ್ಕಾರ ತನ್ನ ಸಂಪತ್ತನ್ನು ಉತ್ಪಾದನಾ ಮತ್ತು ಸಂಪತ್ ಗಳಿಕೆಯ ಕಾರ್ಯಗಳಿಗಾಗಿ ಮಾತ್ರ ವೆಚ್ಚ ಮಾಡುತ್ತಿದೆಯೆಂದು ಹೇಳಿ, ಎಲ್ಲ ಕಾಮಗಾರಿಗಳಿಗೂ ಸಿಮೆಂಟ್ ಮತ್ತು ಕಬ್ಬಿಣವನ್ನೇ ಬಯಸುತ್ತಿರುವ ಇಂದಿನ ಎಂಜಿನಿಯರ್‌ಗಳ ಮನೋಭಾವನೆ ಬಗ್ಗೆ ಕಟುವಾಗಿ ಟೀಕಿಸಿದರು.

ಮಾತೃತ್ವವನ್ನು ವೈಭವೀಕರಿಸದೆ, ಅದರ ಪ್ರಾಯೋಗಿಕ ಅಂಶಗಳನ್ನು ವಿಶ್ಲೇಷಿಸಬೇಕಾಗಿದೆ

ಮಾತೃಧಾರೆ ಮತ್ತು ಸ್ವಸ್ಥ ಮನಸ್ಸು

ವಿಶ್ಲೇಷಣೆ

ಡಾ. ಕೆ.ಎಸ್.ಪವಿತ್ರ

ಸ್ತನ್ಯಪಾನ ಸಪ್ತಾಹ ನಡೆಯುತ್ತಿದೆ. ಸ್ತನ್ಯಪಾನ ಮಾಡಿಸುವಲ್ಲಿ ಇರುವ ಅಡ್ಡಿಗಳನ್ನು ನಿವಾರಿಸುವ ಉದ್ದೇಶದ ಧ್ಯೇಯವಾಕ್ಯವನ್ನು ನೀಡಲಾಗಿದೆ. ಮಗುವಿಗೆ ಸ್ತನ್ಯಪಾನ ಮಾಡಿಸುವುದು ಅತ್ಯುತ್ತಮವಾದದ್ದು ಎಂಬುದರಲ್ಲಿ ನಮಗೆ ಯಾವ ಸಂದೇಹವೂ ಇಲ್ಲ. ಆದರೆ, ಎದೆ ಹಾಲುಣಿಸುವಾಗ ತಾಯಿಯ ಮನಸ್ಸಿನ ಬಗೆಗೆ ನಾವು ಎಷ್ಟು ಗಮನ ಹರಿಸುತ್ತೇವೆ?! ಹಾಲು ತಾಯಿಯ ಎದೆಯಲ್ಲಿ ಹರಿದುಬರಲು ಮನಸ್ಸಿನ ಸ್ವಾಸ್ಥ್ಯ ಎಷ್ಟು ಅಗತ್ಯ? ಬಹುತೇಕ ತಾಯಂದಿರಿಗೆ ಅಥವಾ ಅವರ ಆರೈಕೆ ಮಾಡುವ ಅವರ ತಾಯಂದಿರಿಗೆ ಈ ಅಂಶದ ಬಗೆಗಿರುವ ಜ್ಞಾನ ಅರೆಬರೆಯಷ್ಟೆ.

ಒಂದು ಸಂದರ್ಭವನ್ನು ಕಲ್ಪಿಸಿಕೊಳ್ಳಿ. ಆಕೆಯು ಮೊದಲೇ ಒಂದು ಮಗುವಿರುವ ತಾಯಿ. ಈಗ ಕೈಯಲ್ಲಿ ಮತ್ತೊಂದು ಹಸುಗೂಸು. ಹಸುಗೂಸಿಗೆ ಹಾಲುಣಿಸುತ್ತಲೇ ಮೊದಲ ಮಗುವಿಗೂ ಅವಳು ಸಮಯ ನೀಡಬೇಕು. ತಾಯಿಗೆ ತನಗಿಂತ ಹೊಸ ಮಗುವೇ ಹೆಚ್ಚು ಇಷ್ಟ ಎಂದು ಭಾವಿಸುವ ಮೊದಲ ಮಗು, ಹಾಲುಣಿಸುತ್ತಿರುವ ತಾಯಿಯ ಗಮನ ಸೆಳೆಯಲು ತನ್ನ ಚಟುವಟಿಕೆಯನ್ನು ಹೆಚ್ಚಿಸುತ್ತದೆ. ತಾಯಿಗೆ ದಣಿವು. ಆಕೆ ಯಾವುದನ್ನು ಮಾಡಬೇಕು?! ಎರಡನೇ ಮಗುವಿಗೆ ಬೇಗ ಬೇಗ ಹಾಲು ಕುಡಿಸಿ, ನಿದ್ರೆ ಮಾಡಿಸಿ, ಮೊದಲ ಮಗುವನ್ನು ನಿಭಾಯಿಸತೊಡಗುತ್ತಾಳೆ. ಒಂದೇ ಗುಕ್ಕಿಗೆ ಒಂದಷ್ಟು ಹಾಲು ಹೀರಿ, ಬಾಯಾರಿಕೆಯನ್ನಷ್ಟೇ ತಣಿಸಿಕೊಂಡಿದ್ದ ಮಗು ಸ್ವಲ್ಪ ಸಮಯದಲ್ಲೇ ಎದ್ದು ಬಿಡುತ್ತದೆ! ತಾಯಿಗೆ ಸಾಕೋಬೇಕಾಗುತ್ತದೆ. ಇದು ಸಾಮಾನ್ಯವಾಗಿ ನಾವು ಎಲ್ಲೆಡೆ ನೋಡುವ ಚಿತ್ರಣ.

ಮತ್ತೆ ಮತ್ತೆ ಎದೆಹಾಲು ಉಣಿಸುವ ರೀತಿ, ಸರಿಯಾದ ಭಂಗಿಯಲ್ಲಿ ಕುಳಿತುಕೊಳ್ಳುವುದರ ಮಹತ್ವ, ಒಂದು ಸ್ತನದ ಪೂರ್ತಿ ಹಾಲನ್ನು ಹೀರಿದ ನಂತರವೇ ಮತ್ತೊಂದು ಸ್ತನದಿಂದ ಮಗುವಿಗೆ ಉಣಿಸಬೇಕಾದ ಅಗತ್ಯ ಎಲ್ಲವನ್ನೂ ವೈದ್ಯಕೀಯ ತಂಡ ವಿವರಿಸಿ ಅಭ್ಯಾಸ ಮಾಡಿಸಿರುತ್ತದೆ. ಆದರೆ ಇವುಗಳನ್ನು ಪಾಲಿಸುವುದು ತಾಯಿಗೆ ಸುಲಭವಲ್ಲ. ಹಾಗೆ ಪಾಲಿಸಲು ಕುಟುಂಬದವರ ಅಪಾರ ಬೆಂಬಲದ ಜೊತೆಗೆ ಶಿಸ್ತಿನಿಂದ ಕೂಡಿದ ಗಟ್ಟಿಯಾದ ಮನೋಭಾವ ತಾಯಿಯಲ್ಲಿ ಇರಬೇಕಾಗುತ್ತದೆ. ಇಬ್ಬರು ಮಕ್ಕಳನ್ನು ಏಕಕಾಲಕ್ಕೆ ನಿರ್ವಹಿಸುವ ಒತ್ತಡದಲ್ಲಿ, ಮಗು ಎದೆಹಾಲಲ್ಲಿ ಮೊದಲು ಬರುವ 'ಫೋರ್‌ಮಿಲ್ಕ್', ಅಂದರೆ ನೀರಿನಂತಹ, ಬಾಯಾರಿಕೆ ತಣಿಸುವ ಹಾಲಿನ ಅಂಶವನ್ನು ಮಾತ್ರ ಹೀರಿ ಮಲಗಿದಾಕ್ಷಣ ತಾಯಿ ನಿಟ್ಟುಸಿರುಬಿಟ್ಟು ಸುಮ್ಮನಾಗಬಹುದು. ಬರೀ ನೀರು ಕುಡಿದರೆ ಹೊಟ್ಟೆ ತುಂಬೀತೆ? ಕೆಲ ಸಮಯದ ನಂತರ ಮಗು ಎದ್ದು ಮತ್ತೆ ಅಳಲಾರಂಭಿಸುತ್ತದೆ. ಹಾಗಾಗಿ, ಇಂತಹ ಸಮಯದಲ್ಲಿ ತಾಯಿ ಈ ಅಂಶಗಳನ್ನು ಪರಿಶೀಲಿಸಿ, ಇವುಗಳನ್ನು ಸರಿಪಡಿಸಿ, ಮಗುವಿಗೆ ಹೊಟ್ಟೆ ತುಂಬುವಂತೆ 'ಹೈಂಡ್ ಮಿಲ್ಕ್' (ಕುಡಿಸಲು ಆರಂಭಿಸಿದ ಕೆಲ ಸಮಯದ ನಂತರ ಬರುವ ಹಾಲು) ಕುಡಿಸದಿದ್ದರೆ, ಆಕೆ ಒತ್ತಡ, ನಿದ್ರಾಹೀನತೆಗೆ ಗುರಿಯಾಗುವುದು ಖಂಡಿತ.

ಹೊಸ ತಾಯಂದಿರಿಗೆ ಸಾಮಾನ್ಯವಾಗಿ ಮಧ್ಯೆ ಮಧ್ಯೆ ಎದೆಹಾಲು ಕುಡಿಸುವ ಪ್ರಕ್ರಿಯೆಯಿಂದ 'ನಿದ್ರಾಹೀನತೆ' ದೊಡ್ಡ ಸಮಸ್ಯೆಯಾಗುತ್ತದೆ. ಇಲ್ಲಿಯೂ ತಾಯಿಯ ಮನಸ್ಸು ಯೋಚಿಸಬೇಕಾದ ರೀತಿಯೆಂದರೆ, 'ಇದು ತಾತ್ಕಾಲಿಕ ಸ್ಥಿತಿ, ಮಗು ಬಲುಬೇಗ ಕೆಲವು ತಿಂಗಳುಗಳಲ್ಲಿ ರಾತ್ರಿ ನಿದ್ರೆ ಮಾಡುವುದನ್ನು ಕಲಿಯುತ್ತದೆ'. ಕುಟುಂಬದ ಉಳಿದವರು ತಾಯಿಯ ಈ ನಿದ್ರಾಹೀನತೆಯನ್ನು ಗುರುತಿಸುವುದು, ಗೌರವಿಸುವುದು, ಮಧ್ಯೆ ತಾವೂ ಏಳುವುದರಿಂದ ಆಕೆಗೆ ಜೊತೆ ನೀಡುವುದನ್ನು ಅವಶ್ಯವಾಗಿ ಮಾಡಬೇಕು.

ತಾಯಿಯ ಹಸಿ ಮೈಗೆ ನಾವು ಜತನದಿಂದ ಆರೈಕೆ ಮಾಡುತ್ತೇವೆ. ಆದರೆ ಆ ಸಂದರ್ಭದಲ್ಲಿ ಮನಸ್ಸೂ 'ಹಸಿ'ಯೇ ಎಂಬುದನ್ನು ಗಮನಿಸುವುದು ಕಡಿಮೆ. ತಾಯಿಯಲ್ಲಿ ಖಿನ್ನತೆ, ಆತಂಕ, ಭ್ರಮೆ ಬರಲು ಈ ಸಂದರ್ಭವು ದೊಡ್ಡ ಕಿಂಡಿಯನ್ನೇ ತೆರೆಯಲು ಸಾಧ್ಯವಿದೆ. ಮಗುವಿನ ಆರೋಗ್ಯದ ಬಗ್ಗೆ ಅತಿಯಾದ ಕಾಳಜಿ, ವೈದ್ಯರು 'ಸುರಕ್ಷಿತ' ಎಂದು ಹೇಳಿದರೂ ಸಾಮಾನ್ಯ ಆರೋಗ್ಯದ ಸಮಸ್ಯೆಗಳಿಗೂ 'ಔಷಧಿಯು ಎದೆಹಾಲಿನ ಮೂಲಕ ಮಗುವಿಗೆ ಹೋಗಿಬಿಟ್ಟರೆ' ಎಂದು ಹೆದರಿ ತಾಯಿಯ ಅನಾರೋಗ್ಯದ ಸಮಸ್ಯೆಯನ್ನು ಕುಟುಂಬದವರು ನಿರ್ಲಕ್ಷಿಸುವುದು, ಒಂದೊಮ್ಮೆ ಎದೆಹಾಲು ವಿವಿಧ ಕಾರಣಗಳಿಂದ ತಾಯಿಯಲ್ಲಿ ಸ್ರವಿಸಲು ತಡವಾದಾಗ ಅದರಿಂದ ತಾಯಿ ಖಿನ್ನತೆ, ತಪ್ಪಿತಸ್ಥ ಭಾವನೆಯಿಂದ ನರಳುವುದು, ತನ್ನ ಮಗು ಮುಂದೆ 'ಬುದ್ಧಿವಂತ'ನಾಗದಿದ್ದರೆ ಎಂದು ಆತಂಕ ಪಡುವುದು, ಎದೆಹಾಲು ನೀಡಲು ಸಾಧ್ಯವಾಗುವುದಿಲ್ಲ ಎಂಬ ಆತಂಕದಿಂದ ಉದ್ಯೋಗ ಬಿಡುವುದು ಇಲ್ಲವೇ ಹಾಲು ಬಿಡಿಸುವುದು ಇವೆಲ್ಲವೂ ವೈದ್ಯರು ತಮ್ಮ ವೃತ್ತಿಜೀವನದಲ್ಲಿ ನೋಡುವಂತಹ ಸಾಮಾನ್ಯ ಸಂದರ್ಭಗಳೇ ಆಗಿರುತ್ತವೆ.

ಸಮಸ್ಯೆಯೆಂದರೆ, ಇಂತಹ ಆತಂಕದ ಮನಃಸ್ಥಿತಿ ಎದೆಹಾಲಿನ ಗುಣಮಟ್ಟವನ್ನು ಮತ್ತಷ್ಟು ಕಡಿಮೆ ಮಾಡಿ, ಮಗುವಿನಲ್ಲಿ ಕಿರಿಕಿರಿ, ಹಟಮಾರಿತನದ ಸಾಧ್ಯತೆಯನ್ನು ಹೆಚ್ಚಿಸುತ್ತದೆ. ಇಂತಹ ಸಂದರ್ಭಗಳಲ್ಲಿ ಪರಿಹಾರ 'ನಿರ್ದಿಷ್ಟ' ಎನ್ನುವಂತೆ ಇರಲಾರದು. ಅವರವರ ಆದ್ಯತೆ, ಬೆಂಬಲ, ಆಯ್ಕೆಯನ್ನು ಅನುಸರಿಸಿ ನಿರ್ಧಾರ ಕೈಗೊಳ್ಳಬೇಕು. ವೈದ್ಯರ ಬಳಿ ಮುಕ್ತ ಮನಸ್ಸಿನ ಚರ್ಚೆ, ಅವರ ಸಲಹೆಯನ್ನು ವಿಶ್ವಾಸದಿಂದ ನಂಬುವ ಮನೋಭಾವ ಸಹಾಯಕ.

ಕೆಲವು ಸಂದರ್ಭಗಳಲ್ಲಿ ತಾಯಿಯ ಅನಾರೋಗ್ಯಕ್ಕೆ ಚಿಕಿತ್ಸೆ ಅನಿವಾರ್ಯವೆಂದಾದಾಗ, ಅದನ್ನು ಒಪ್ಪಿಕೊಳ್ಳುವುದು ಸೂಕ್ತ. ಏಕೆಂದರೆ ತಾಯಿಯ ಅನಾರೋಗ್ಯದಿಂದ, ತಾಯಿ-ಮಗು ಇಬ್ಬರ ಮನಃಸ್ಥಿತಿಯ ಮೇಲೆ ಆಗುವ ಪರಿಣಾಮ, ಅದರಿಂದ ಇಳಿಯುವ ಎದೆಹಾಲಿನ ಗುಣಮಟ್ಟವನ್ನು ಗಮನಿಸದಿದ್ದರೆ, ತಾಯಿ-ಮಗು ಅನಾರೋಗ್ಯದ ವರ್ತುಲದೊಳಕ್ಕೆ ಸಿಲುಕಲು ಅದು ಕಾರಣವಾಗಿಬಿಡಬಹುದು.

ಸ್ತನ್ಯಪಾನ ಸಪ್ತಾಹದ ಸಂದರ್ಭದಲ್ಲಿ, ಎದೆಹಾಲನ್ನು ಬಿಡಿಸುವಾಗ ನಡೆಯಬೇಕಾದ ಸುಗಮ ಪ್ರಕ್ರಿಯೆಯ ಬಗೆಗೂ ನಾವು ಗಮನಹರಿಸಲೇಬೇಕು. ಒಂದರಿಂದ ಎರಡು ವರ್ಷಗಳ ಕಾಲ ಹಾಲುಣಿಸಿದ ಮೇಲೆಯೂ ತಾಯಿಗೆ ಹಾಲು ಬಿಡಿಸುವಾಗ ಸಂಕಟ, ತಪ್ಪಿತಸ್ಥ ಭಾವನೆ ಕಾಡುವುದು ಸಹಜ. ಅದರೊಂದಿಗೆ ಮಗು ಇನ್ನು ಮುಂದೆ ತನ್ನನ್ನು ಅವಲಂಬಿಸುವುದಿಲ್ಲ ಎಂಬ ಆತಂಕವೂ! ಮಗುವಿನ 'ಚೀಪುವ ಆನಂದ'ವನ್ನು ಶಿಸ್ತಿನಿಂದ ಬಿಡಿಸಲು ಅಮ್ಮಂದಿರಿಗೆ ಅದೆಷ್ಟು ಕಷ್ಟ! ತಾಯಿಯ ಎದೆಹಾಲುಣ್ಣುವಾಗ ಸಿಗುವ ಸುರಕ್ಷಿತ ಭಾವವನ್ನು ಮಕ್ಕಳು ಇತರ ವಿವಿಧ ಚಟುವಟಿಕೆಗಳ ಮೂಲಕ ಕಂಡುಕೊಳ್ಳಲು ಮುಂದಾಗುತ್ತಾರೆ. ಹೆಬ್ಬೆಟ್ಟು ಚೀಪುವುದು, ಬಟ್ಟೆ ತುಂಡನ್ನು ಮೂಸುವುದು, ಗೊಂಬೆಯನ್ನು ಹಿಡಿದೇ ಮಲಗುವುದು, ಹಾಲಿನ ಬಾಟಲಿ ಬಾಯಿಯಲ್ಲಿಟ್ಟೇ ನಿದ್ರೆ ಮಾಡುವಂತಹ ಕ್ರಿಯೆಗಳು ಇದರಲ್ಲಿ ಸೇರುತ್ತವೆ. ಇವುಗಳಿಂದ ಬರುವ ಇತರ ಆರೋಗ್ಯ ಸಮಸ್ಯೆಗಳೂ ವೈವಿಧ್ಯಮಯವೇ. ಎದೆ ಹಾಲುಣ್ಣುವ ಪ್ರಕ್ರಿಯೆ ಇಲ್ಲದೆಯೂ ಮಗುವಿನಲ್ಲಿ 'ಸುರಕ್ಷತೆ'ಯ ಭಾವ ಮೂಡುವಂತೆ ಮಾಡಬಹುದು ಎಂಬುದನ್ನು ಇಲ್ಲಿ ನಾವು ನೆನಪಿಡಬೇಕು. ತಾಯಿ ಹಾಗೂ ಇತರ ಹಿರಿಯರು ಹಲವು ಚಟುವಟಿಕೆಗಳ ಮೂಲಕ ಅದರೊಂದಿಗೆ ಒಡನಾಡುವುದರಿಂದ ಇದು ಸಾಧ್ಯ ಎನ್ನುವುದು ಗಮನಾರ್ಹ ಅಂಶ.

ಎದೆ ಹಾಲುಣಿಸುವುದು ಮತ್ತು ಮಾತೃತ್ವವನ್ನು ವೈಭವೀಕರಿಸುವ ಪ್ರವೃತ್ತಿಯಿಂದ ತಾಯಿ-ಮಗು ಇಬ್ಬರ ಆರೋಗ್ಯಕ್ಕೆ ಹೆಚ್ಚೇನೂ ಉಪಯೋಗ ಆಗಲಾರದು. ಅದರ ಬದಲು 'ಎದೆ ಹಾಲುಣಿಸುವ' ಪ್ರಕ್ರಿಯೆಯ ಪ್ರಾಯೋಗಿಕ ಅಂಶಗಳನ್ನು ವಿಶ್ಲೇಷಿಸಿ, ತಾಯಿಗೆ ವಿವಿಧ ರೀತಿಯಲ್ಲಿ ನಾವು ಬೆಂಬಲ ನೀಡುವಂತಾದರೆ, ಸ್ವಸ್ಥ-ಸುಖಿ ತಾಯಿ ಮತ್ತು ಆರೋಗ್ಯವಂತ ಮಗು ಇಬ್ಬರೂ ನಮ್ಮ ಮಧ್ಯೆ ಹೆಚ್ಚಾಗುತ್ತಾರೆ.

ಚುರುಮುರಿ

ಅ–ಅಂ ತಲಾದಾಯ!

• ಸುಮಂಗಲಾ

'ಸೋರುತಿಹುದು ಸಂಸತ್ ಮಾಳಿಗಿ… ಜಡಿಮಳೆಯಿಂದ' ಬೆಕ್ಕಣ್ಣ ಹೊಸ ಸಂಸತ್ತಿನ ಪಡಸಾಲೆಯಲ್ಲಿ ಮಳೆನೀರಿಗೆ ಇಟ್ಟ ಬಕೆಟ್ಟುಗಳ ಚಿತ್ರ ನೋಡುತ್ತ ಹಾಡುತ್ತಿತ್ತು.

'ಯಾಕಲೇ… ಅಜ್ಞಾನದಿಂದ ಅಲ್ಲೇನು?' ಎಂದೆ.

'ಖಂಡಿತಾ ಅಲ್ಲ. ವಯನಾಡಿನಾಗೆ, ಮತ್ತೆ ನಮ್ಮಲ್ಲಿ ಭೂಕುಸಿತ ಆದ್ರೆ ಅದು ರಾಜ್ಯ ಸರ್ಕಾರಗಳ ಅಜ್ಞಾನದಿಂದ, ಜನರ ಅಜ್ಞಾನದಿಂದ. ಸಂಸತ್ ಹೊಸದಾಗಿ ಕಟ್ಯಾರೆ, ಹಂಗಾಗಿ ಮೊದಲ ಜಡಿಮಳೆ ಬಂದ್ರೆ ಸೋರೂದು ಸಹಜ, ಅಜ್ಞಾನದಿಂದ ಅಲ್ಲ' ಬೆಕ್ಕಣ್ಣ ಗುರುಗುಟ್ಟಿತು.

'ಬ್ರಿಟಿಷರು ಕಟ್ಟಿಸಿದ ಹಳೇ ಸಂಸತ್ ಭವನ ನೂರು ವರ್ಷ ಆದ್ರೂ ಸೋರತಿದ್ದಲ್ಲಂತ… ಈಗ ಇಷ್ಟ್ ಅತ್ಯಾಧುನಿಕ ಮೇಡ್ ಇನ್ ಇಂಡಿಯಾ ತಂತ್ರಜ್ಞಾನ ಬಳಸಿ ಮಾಡಿದ್ರೂನು ಒಂದೇ ಮಳೆಗೆ ಸೋರಿದ್ರೆ ಹೆಂಗೆ?' ನನ್ನ ಪ್ರಶ್ನೆ.

'ಬ್ರಿಟಿಷರು ಕಟ್ಟಿಸಿದ್ದು ಅಂದ್ರೇನು ಅರ್ಥ? ಇಟ್ಟಿಗೆ, ಕಲ್ಲು, ಮಣ್ಣು ಹೊತ್ತು, ಭವನ ಕಟ್ಟಿದವರು ನಮ್ಮ ಕೂಲಿಕಾರ ಮಂದೀನೇ ಅಲ್ಲೇನು?' ಬೆಕ್ಕಣ್ಣನ ತರ್ಕ.

'ಅದಂತೂ ಖರೇ' ಎಂದು ಉಪಾಯದಿಂದ ಮಾತು ಬದಲಿಸಿದೆ.

'ಅಮೆರಿಕದ ತಲಾದಾಯ ಎಷ್ಟ್ ಹೆಚ್ಚಿಗೆ ಐತಿ ಗೊತ್ತೈತೇನ್. ಭಾರತದ ಮಂದಿ ಅವ್ರ ಕಾಲುಭಾಗದಷ್ಟು ತಲಾದಾಯ ಗಳಿಸೋದಕ್ಕೂ ಇನ್ನಾ 25 ವರ್ಷಗಳೇ ಬೇಕಾಗಬೌದು ಅಂತ ವಿಶ್ವಬ್ಯಾಂಕ್ ಹೇಳೈತಿ. ಈಗ ನಮ್ಮದು ವರ್ಷಕ್ಕೆ ಎರಡೂ ಕಾಲು ಲಕ್ಷ ರೂಪಾಯಿ ತಲಾದಾಯ ಇದ್ದರೆ ಅವರದ್ದು 59 ಲಕ್ಷ ರೂಪಾಯಿ ಐತಿ. ಅಮೃತಕಾಲ 2047ನೇ ಇಸ್ವಿಗೂ ಅವರ ಹತ್ತನೇ ಒಂದು ಭಾಗ ತಲಾದಾಯ ಗಳಿಸಕ್ಕೂ ಆಗಲ್ಲ' ಎಂದೆ.

'ವಿಶ್ವಬ್ಯಾಂಕ್ ಹೇಳಿದ್ದನ್ನೆಲ್ಲ ನಂಬೂದು ಹೆಂಗೆ? ಅಚ್ಛೇ ದಿನ ಬಂದಿದ್ದು ಸಾಲದೇನು? ನಮ್ ದೇಶದ ಎಲ್ಲರ ತಲಾದಾಯ ತಗಂಡು ಏನು ಮಾಡತಿ? ಅ-ಅಂ ಸ್ವರಗಳ, ಅಂದ್ರ ಅದಾನಿ, ಅಂಬಾನಿ ಇಬ್ಬರ ತಲಾದಾಯ ಬಿಲಿಯನ್‌ಗಟ್ಟಲೆ ಐತಲ್ಲ, ಸಾಕೇಳು. ವ್ಯಂಜನಗಳ, ಅಂದ್ರೆ ನೀವು ಶ್ರೀಸಾಮಾನ್ಯರ ತಲಾದಾಯ ಲೆಕ್ಕಕ್ಕಿಲ್ಲ' ಬೆಕ್ಕಣ್ಣ ಉಡಾಫೆಯಿಂದ ಹೇಳಿತು.

ಸಂಗತ

ಬಂಡವಾಳ ತೆರಿಗೆ ಏರಿಕೆ: ಕಾರಣ?

ತೆರಿಗೆ ಏರಿಕೆ ಕ್ರಮಕ್ಕೆ ಕೇಂದ್ರ ಮುಂದಾಗಿರುವುದರ ಹಿಂದೆ, ವರಮಾನ ಸಂಗ್ರಹ ಹೆಚ್ಚಿಸುವುದಷ್ಟೇ ಅಲ್ಲದೆ, ಇತರ ಮಹತ್ವದ ಕಾರಣಗಳು ಇದ್ದಿರಲೇಬೇಕು

• ವಿಜಯ್ ಜೋಷಿ

ದೇಶದ ಜನ ತಮ್ಮ ಹಣಕಾಸಿನ ಆಸ್ತಿಯನ್ನು ಷೇರುಗಳಲ್ಲಿ ಹಾಗೂ ಮ್ಯೂಚುವಲ್ ಫಂಡ್‌ಗಳಲ್ಲಿ ತೊಡಗಿಸುವ ಪ್ರಮಾಣವು ಈಚಿನ ವರ್ಷಗಳಲ್ಲಿ ಹೆಚ್ಚಳ ಕಾಣುತ್ತಿದೆ ಎಂಬುದನ್ನು ಹಲವು ಅಂಕಿ–ಅಂಶಗಳು ಹೇಳಿವೆ. ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಅವರೂ ಈ ಮಾತನ್ನು ಈಚೆಗೆ ಹೇಳಿದ್ದಾರೆ.

ಕುಟುಂಬಗಳ ಹಣಕಾಸಿನ ಆಸ್ತಿಯಲ್ಲಿ ಪ್ರಧಾನವಾದ ಪಾಲು ಬ್ಯಾಂಕ್ ಠೇವಣಿಗಳ ರೂಪದಲ್ಲಿ ಇದೆಯಾದರೂ, ಕುಟುಂಬಗಳು ತಮ್ಮ ಉಳಿತಾಯವನ್ನು ಮ್ಯೂಚುವಲ್ ಫಂಡ್‌ಗಳಲ್ಲಿ, ಪಿಂಚಣಿ ನಿಧಿಗಳಲ್ಲಿ ತೊಡಗಿಸುವುದು ಹೆಚ್ಚಾಗುತ್ತಿರುವ ಕಾರಣ, ಬ್ಯಾಂಕ್ ಠೇವಣಿ ಪಾಲು ಕಡಿಮೆ ಆಗುತ್ತಿದೆ ಎಂದು ದಾಸ್ ಅವರು ಈಚೆಗೆ ಹೇಳಿದ್ದಾರೆ. ಅಲ್ಲದೆ, ಆರ್‌ಬಿಐ ಸಿದ್ಧಪಡಿಸಿರುವ ವರದಿಯೊಂದು, ಜನರು ಬ್ಯಾಂಕ್ ಠೇವಣಿಗಳ ಜೊತೆಯಲ್ಲೇ ಈಕ್ವಿಟಿ ಹಾಗೂ ಹೂಡಿಕೆ ಫಂಡ್‌ಗಳ ಬಗ್ಗೆ ಹೆಚ್ಚು ಆಸಕ್ತಿ ತೋರಿಸುತ್ತಿದ್ದಾರೆ ಎಂದು ಹೇಳಿದೆ. 2011–12ರಿಂದ 2022–23ರ ನಡುವಿನ ಅವಧಿಯಲ್ಲಿ ಕುಟುಂಬಗಳ ಹಣಕಾಸಿನ ಆಸ್ತಿಗಳಲ್ಲಿ ಈಕ್ವಿಟಿ ಹಾಗೂ ಹೂಡಿಕೆ ನಿಧಿಗಳ ಪಾಲು ಶೇಕಡ 50ಕ್ಕಿಂತ ಹೆಚ್ಚು ಏರಿಕೆ ದಾಖಲಿಸಿದೆ.

ಆರ್‌ಬಿಐ ಹಾಗೂ ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ನೀಡುವ ಅಂಕಿ–ಅಂಶಗಳನ್ನು ಒಗ್ಗೂಡಿಸಿ ಸಿದ್ಧಪಡಿಸಿದ ಈಚಿನ ವರದಿಯೊಂದು ಇನ್ನೊಂದು ಆಸಕ್ತಿಕರ ಅಂಶವನ್ನು ತೆರೆದಿರಿಸಿದೆ. ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಮ್ಯೂಚುವಲ್ ಫಂಡ್ ಕಂಪನಿಗಳು ನಿರ್ವಹಿಸುತ್ತಿರುವ ಸಂಪತ್ತಿನ ಒಟ್ಟು ಮೊತ್ತವು ನಾಲ್ಕು ಪಟ್ಟು ಹೆಚ್ಚಾಗಿದೆ. ಇದೇ ಅವಧಿಯಲ್ಲಿ ಬ್ಯಾಂಕ್ ಠೇವಣಿಗಳ ಮೊತ್ತದಲ್ಲಿ ಆಗಿರುವ ಹೆಚ್ಚಳ 1.6ರಷ್ಟು ಮಾತ್ರ ಎಂದು ಆ ವರದಿ ಹೇಳುತ್ತದೆ.

2020ರ ಮಾರ್ಚ್ ತಿಂಗಳಲ್ಲಿ ಒಟ್ಟಾರೆ ಬ್ಯಾಂಕ್ ಠೇವಣಿಗಳಿಗೆ ಹೋಲಿಸಿದರೆ ಮ್ಯೂಚುವಲ್ ಫಂಡ್‌ಗಳಲ್ಲಿ ತೊಡಗಿಸಿರುವ ಮೊತ್ತವು ಶೇ 16ರಷ್ಟಾಗಿತ್ತು. ಈಗ ಅದು ಶೇ 26ಕ್ಕೆ ಏರಿಕೆ ಆಗಿದೆ. ನಿಶ್ಚಿತ ಠೇವಣಿಗಳ ಆಚೆಗೂ ಜನ ನೋಟ ಹರಿಸಿದ್ದಾರೆ. ಅವರು ಮ್ಯೂಚುವಲ್ ಫಂಡ್‌ಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಣ ತೊಡಗಿಸುತ್ತಿದ್ದಾರೆ. ಇದಕ್ಕೆ, ದೇಶದ ಬಂಡವಾಳ ಮಾರುಕಟ್ಟೆಗಳು ಒಳ್ಳೆಯ ಪ್ರಮಾಣದಲ್ಲಿ ಲಾಭ ತಂದುಕೊಡುತ್ತಿರುವುದು ಸೇರಿದಂತೆ ಹಲವು ಕಾರಣಗಳಿವೆ. ಷೇರು ಮಾರುಕಟ್ಟೆಗಳ ಬಗ್ಗೆ ಹೆಚ್ಚಿನ ಅರಿವು ಇರುವವರು, ನೇರವಾಗಿ ಷೇರುಗಳಲ್ಲಿ ಹಣ ತೊಡಗಿಸುತ್ತಿದ್ದಾರೆ. ಡಿ–ಮ್ಯಾಟ್ ಖಾತೆಗಳ ಸಂಖ್ಯೆಯಲ್ಲಿ ಆಗಿರುವ ಹೆಚ್ಚಳವು ಇದನ್ನು ಸ್ಪಷ್ಟಪಡಿಸುತ್ತಿದೆ.

ಕುಟುಂಬಗಳ ಮಟ್ಟದಲ್ಲಿ, ಉಳಿತಾಯ–ಹೂಡಿಕೆಯಂತಹ ಜೀವನದ ಅತಿಮುಖ್ಯ ಆಯಾಮವೊಂದರಲ್ಲಿ ಇಂತಹ ಮಹತ್ವದ ಪರಿವರ್ತನೆ ಆಗುತ್ತಿರುವ ಹೊತ್ತಿನಲ್ಲಿ ಕೇಂದ್ರ ಸರ್ಕಾರವು ಅಲ್ಪಾವಧಿ ಬಂಡವಾಳ ಲಾಭ (ಎಸ್‌ಟಿಸಿಜಿ) ತೆರಿಗೆ ಹಾಗೂ ದೀರ್ಘಾವಧಿ ಬಂಡವಾಳ ಲಾಭ (ಎಲ್‌ಟಿಸಿಜಿ) ತೆರಿಗೆಯನ್ನು ಹೆಚ್ಚು ಮಾಡಿದೆ. ಹಿಂದೆ ಯುಪಿಎ ಸರ್ಕಾರ ಇದ್ದಾಗ ಎಲ್‌ಟಿಸಿಜಿಗೆ ಪೂರ್ತಿಯಾಗಿ ತೆರಿಗೆ ವಿನಾಯಿತಿ ಇತ್ತು ಎಂಬುದು ಗಮನಾರ್ಹ. ಕೆಲವು ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತವಾಗುತ್ತಿರುವ ಅಭಿಪ್ರಾಯಗಳನ್ನು ಗಮನಿಸಿ ಹೇಳುವುದಾದರೆ, ತೆರಿಗೆ ಏರಿಕೆ ಕ್ರಮವು ಬಿಜೆಪಿಯ ಬಹುಮುಖ್ಯ ಬೆಂಬಲಿಗರಾದ ಮಧ್ಯಮ ಹಾಗೂ ಮೇಲ್ಮಧ್ಯಮ ವರ್ಗದವರಲ್ಲಿಯೇ ತೀವ್ರ ಅಸಮಾಧಾನ ಸೃಷ್ಟಿಸಿದೆ. ಆದರೆ, ಇಂಥದ್ದೊಂದು ಕ್ರಮಕ್ಕೆ ಕೇಂದ್ರ ಮುಂದಾಗಿರುವುದರ ಹಿಂದೆ, ವರಮಾನ ಸಂಗ್ರಹ ಹೆಚ್ಚಿಸುವುದಷ್ಟೇ ಅಲ್ಲದೆ, ಇತರ ಮಹತ್ವದ ಕಾರಣಗಳು ಇದ್ದಿರಲೇಬೇಕು.

ಮೊದಲಿಗೆ, ಕುಟುಂಬಗಳ ಉಳಿತಾಯದ ಹಣವು ಬ್ಯಾಂಕ್ ಠೇವಣಿಗಳ ಬದಲಿಗೆ ಎಸ್‌ಐಪಿ (ವ್ಯವಸ್ಥಿತ ಹೂಡಿಕೆ ಯೋಜನೆಗಳು) ಮೂಲಕ ಬಂಡವಾಳ ಮಾರುಕಟ್ಟೆಯ ಕಡೆಗೆ ಭಾರಿ ಪ್ರಮಾಣದಲ್ಲಿ ಹರಿಯುವುದು ಕೇಂದ್ರಕ್ಕೆ ಇಷ್ಟವಾಗದೆ ಇರಬಹುದು. ಎಸ್‌ಟಿಸಿಜಿ ಹಾಗೂ ಎಲ್‌ಟಿಸಿಜಿ ತೆರಿಗೆ ಹೆಚ್ಚಿಸುವ ಮೂಲಕ ಸರ್ಕಾರವು, ಜನರ ಉಳಿತಾಯದ ಒಂದಿಷ್ಟಾದರೂ ಮೊತ್ತವು ಬ್ಯಾಂಕ್ ಕಡೆಗೇ ಸಾಗಲಿ ಎಂದು ಬಯಸಿರಬಹುದು. ದೇಶದ ಬಂಡವಾಳ ಮಾರುಕಟ್ಟೆಗಳಲ್ಲಿ ಹೂಡಿಕೆಯನ್ನು ನಿರುತ್ತೇಜಿಸುವ ನಕಾರಾತ್ಮಕ ಉದ್ದೇಶವು ಸರ್ಕಾರಕ್ಕೆ ಇರುವ ಸಾಧ್ಯತೆ ಕಡಿಮೆ. ಆದರೆ, ಬಂಡವಾಳ ಮಾರುಕಟ್ಟೆಗಳಲ್ಲಿ ಅಲ್ಪಾವಧಿಯ ಹೂಡಿಕೆ ತಗ್ಗಲಿ; ಅದರ ಬದಲಿಗೆ ದೀರ್ಘಾವಧಿಗೆ ಹೂಡಿಕೆ ಹೆಚ್ಚಾಗಲಿ ಎಂಬ ಉದ್ದೇಶ ಸರ್ಕಾರದ್ದಾಗಿರಬಹುದು. ಬಹುಶಃ ಇದೇ ಉದ್ದೇಶದಿಂದ ಅಲ್ಪಾವಧಿ ಹೂಡಿಕೆಗೆ ಸಂಬಂಧಿಸಿದ ಎಸ್‌ಟಿಸಿಜಿ ತೆರಿಗೆ ಪ್ರಮಾಣ ಶೇ 15 ಇದ್ದಿದ್ದನ್ನು ಶೇ 20ಕ್ಕೆ ಹೆಚ್ಚು ಮಾಡಲಾಗಿದೆ. ಹಾಗೆಯೇ, ಆಪ್ಷನ್ಸ್ ಮತ್ತು ಫ್ಯೂಚರ್ಸ್ ವಹಿವಾಟುಗಳಿಗೆ ಸಂಬಂಧಿಸಿದ ಸೆಕ್ಯುರಿಟೀಸ್ ಟ್ರಾನ್ಸಾಕ್ಷನ್ ತೆರಿಗೆಯನ್ನು ಹೆಚ್ಚು ಮಾಡಿರುವುದರ ಹಿಂದೆಯೂ, ಅಲ್ಪಾವಧಿಯ ವಹಿವಾಟುಗಳನ್ನು ನಿರುತ್ತೇಜಿಸುವ ಉದ್ದೇಶ ಇದ್ದಿರಬಹುದು.

ದೇಶದ ಬಂಡವಾಳ ಮಾರುಕಟ್ಟೆಗಳಲ್ಲಿನ ಷೇರುಗಳ ಮೌಲ್ಯವು ಅವುಗಳ ನಿಜಮೌಲ್ಯಕ್ಕಿಂತ ಬಹಳ ದುಬಾರಿ ಆಗಿವೆ ಎಂಬ ವಾದವೊಂದು ಕೆಲವು ಸಮಯದಿಂದ ಚಾಲ್ತಿಯಲ್ಲಿದೆ. ಸರ್ಕಾರವು ಈ ವಾದವನ್ನು ಗಂಭೀರವಾಗಿ ಪರಿಗಣಿಸಿರಬಹುದು. ತೆರಿಗೆ ಪ್ರಮಾಣವನ್ನು ಹೆಚ್ಚಿಸಿ, ಹೂಡಿಕೆದಾರರು ಬಂಡವಾಳ ಮಾರುಕಟ್ಟೆಗಳಲ್ಲಿ ಅತಿಯಾಗಿ ವಹಿವಾಟು ನಡೆಸದಿರುವಂತೆ ಮಾಡಿ, ಆ ಮೂಲಕ ಬಂಡವಾಳ ಮಾರುಕಟ್ಟೆಗಳಲ್ಲಿ ವಹಿವಾಟಿಗೆ ಲಭ್ಯವಿರುವ ಷೇರುಗಳ ಮೌಲ್ಯದಲ್ಲಿ ಸಮತೋಲನ ತರುವ ಉದ್ದೇಶವನ್ನು ಕೂಡ ಕೇಂದ್ರವು ಹೊಂದಿರಬಹುದು. ಅದೇನೇ ಇದ್ದರೂ, ಕೇಂದ್ರದ ನಡೆಯ ಪರಿಣಾಮವಾಗಿ ಹೂಡಿಕೆ ಪ್ರವೃತ್ತಿಗೆ ಅಲ್ಪಾವಧಿಯಲ್ಲಂತೂ ತಣ್ಣೀರೆರಚಿದಂತಾಗಿದೆ.

ವಾಚಕರ ವಾಣಿ

ಪಾದಯಾತ್ರೆಯ ಗೌರವ ಕಳೆಯುವಿರೇಕೆ?

ವಿರೋಧ ಪಕ್ಷಗಳ ಮುಖಂಡರು ರಾಜ್ಯದ ಜನರ ಹಿತದೃಷ್ಟಿಯಿಂದ ಯೋಚಿಸುವುದರ ಬದಲು, ಬರೀ ತಮ್ಮ ಕೇಂದ್ರ ನಾಯಕರ ಮನವೊಲಿಸುವಿಕೆ ಹಾಗೂ ಚುನಾಯಿತ ಸರ್ಕಾರವನ್ನು ಉರುಳಿಸುವ ಪ್ರಯತ್ನದಲ್ಲೇ ಕಾಲ ಕಳೆಯುತ್ತಿದ್ದಾರೆ. ವಿಧಾನಸಭಾ ಕಲಾಪವನ್ನು ಸದ್ದುಗದ್ದಲದ ಮೂಲಕ ಹಾಳು ಮಾಡಿ, ಈಗ ಮತ್ತೆ ಸ್ವ ಹಿತಾಸಕ್ತಿಗಾಗಿ ಪಾದಯಾತ್ರೆ ನಾಟಕವಾಡುವ ಬದಲಾಗಿ, ಪ್ರತಿಪಕ್ಷದ ನಿಜವಾದ ಜವಾಬ್ದಾರಿಯನ್ನು ಅರಿತು ನಡೆಯುವುದು ಒಳ್ಳೆಯದು. ಅಟಲ್ ಬಿಹಾರಿ ವಾಜಪೇಯಿ ಅವರು ಪ್ರತಿಪಕ್ಷದಲ್ಲಿದ್ದಾಗ ನಡೆದುಕೊಂಡ ರೀತಿಯನ್ನು ನೋಡಿ ನಮ್ಮ ನಾಯಕರು ಕಲಿಯಬೇಕು. ಪಾದಯಾತ್ರೆಗಳು ಗಾಂಧೀಜಿಯ ಹಾಗೇ ದೇಶಪರ, ಜನಪರ ಆಗಿರಬೇಕು. ರಾಜ್ಯದಲ್ಲಿ ಪ್ರಸ್ತುತ ಎದುರಾಗಿರುವ ನೆರೆ-ಪ್ರವಾಹದ ಹಿನ್ನೆಲೆಯಲ್ಲಿ ಜನರ ಸಂಕಷ್ಟ ಅರಿಯಲು ಅವರ ಬಳಿ ತೆರಳುವುದನ್ನು ಬಿಟ್ಟು ಕುರ್ಚಿಗಾಗಿ ಪಾದಯಾತ್ರೆ ಮಾಡುವುದು ಸರಿಯಲ್ಲ.

ಸುರೇಂದ್ರ ಪೈ, ಭಟ್ಕಳ

ಕಾಡಿದ ನೆನಪು… ಮಹಾತ್ಮನ ಶಕ್ತಿ…

ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ಅಲ್ಲಿನ ಭಾರತೀಯರು ಮತ್ತು ಇತರರ ಹಕ್ಕುಗಳಿಗಾಗಿ ಹೋರಾಡುವಾಗ, ತಮ್ಮನ್ನು ಹಲವು ಬಾರಿ ಬಂಧಿಸಿದ್ದ ಬ್ರಿಟಿಷ್ ಆಡಳಿತಾಧಿಕಾರಿಗೆ ಚಪ್ಪಲಿ ಹೊಲಿದುಕೊಟ್ಟಿದ್ದನ್ನು ನೆನಪಿಸುವ ವೆಂಕಟೇಶ ಮಾಚಕನೂರ ಅವರ ಪತ್ರ (ವಾ.ವಾ., ಆ. 3) ನಿಜಕ್ಕೂ ನನ್ನನ್ನು ಅಲ್ಲಾಡಿಸಿಬಿಟ್ಟಿತು. ಕಣ್ಣುಗಳು ಹನಿಗೂಡಿದವು. ದುರದೃಷ್ಟವಶಾತ್, ಈ ಪ್ರಕರಣವನ್ನು ಇದುವರೆಗೂ ನಾನು ಎಲ್ಲೂ ಓದಿರಲಿಲ್ಲ ಮತ್ತು ಕೇಳಿರಲಿಲ್ಲ. ನಸುಕಿನಲ್ಲಿ ಓದಿದ ಈ ಪತ್ರ, ಗೋಧೂಳಿ ಕಾಲಕ್ಕೂ ಕಾಡಿತು. ಇದಲ್ಲವೇ, ಮಹಾತ್ಮ ಎನಿಸಿಕೊಂಡ ಆ ಪುಣ್ಯಾತ್ಮನ ಶಕ್ತಿ? ನಮ್ಮ ಹುಚ್ಚಾಟಗಳು ಆ ದಿವ್ಯ ಚೇತನವನ್ನು ಎಂದೂ ಬಾಧಿಸದಿರಲಿ.

ಎಸ್.ಕೆ.ಕುಮಾರ್, ಬೆಂಗಳೂರು

ಕನ್ನಡ ಬಾರದ ಆರೋಗ್ಯ ಕಾರ್ಯಕರ್ತರು

ಇತ್ತೀಚಿನ ದಿನಗಳಲ್ಲಿ ವೇಗವಾಗಿ ಹರಡುತ್ತಿರುವ ಡೆಂಗಿ ಜ್ವರಕ್ಕೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸಲು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವತಿಯಿಂದ ಕೆಲವು ಆರೋಗ್ಯ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡುತ್ತಿರುವುದು ಒಳ್ಳೆಯ ಕ್ರಮ. ಆದರೆ ಇವರು ಮಾಹಿತಿ ಪಡೆಯಲು ಮನೆಯ ಸದಸ್ಯರಿಗೆ ಪ್ರಶ್ನೆ ಕೇಳುವುದು ಇಂಗ್ಲಿಷ್‌ನಲ್ಲಿ. ಆಡಳಿತದಲ್ಲಿ ಕನ್ನಡ ಜಾರಿಯಾಗಿ ಇಷ್ಟು ವರ್ಷಗಳಾದರೂ ಬಿಬಿಎಂಪಿ ಇನ್ನೂ ಆಡಳಿತದಲ್ಲಿ ಕನ್ನಡವನ್ನು ಅಳವಡಿಸಿಕೊಳ್ಳದಿರುವುದು ಯಾಕೆ ಎಂಬುದು ಅರ್ಥವಾಗುತ್ತಿಲ್ಲ.

ಅದಲ್ಲದೆ, ಕಾಯಕರ್ತರು ಇಂಗ್ಲಿಷ್‌ನಲ್ಲಿ ಪ್ರಶ್ನೆ ಕೇಳಿದಾಗ ಮನೆಯ ಸದಸ್ಯರು ಕಷ್ಟಪಟ್ಟಾದರೂ ಇಂಗ್ಲಿಷ್‌ನಲ್ಲಿ ಉತ್ತರಿಸುತ್ತಾರೆಯೇ ವಿನಾ ಕನ್ನಡದಲ್ಲಿ ಉತ್ತರಿಸುವುದಿಲ್ಲ, ಕಾರ್ಯಕರ್ತರು ಕನ್ನಡದಲ್ಲಿ ಪ್ರಶ್ನೆ ಕೇಳಲಿ ಎಂದು ನಿರೀಕ್ಷಿಸುವುದೂ ಇಲ್ಲ. ಇಂಥ ಸನ್ನಿವೇಶ ಇರುವಾಗ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕನ್ನಡೇತರರಿಗೆ ಕನ್ನಡ ಕಲಿಸುವ ಯೋಜನೆಯನ್ನು ಹಾಕಿಕೊಂಡಿರುವುದಕ್ಕೆ ಏನಾದರೂ ಅರ್ಥ ಇದೆಯೇ? ಈ ವಿಷಯದಲ್ಲಿ ಪಾಲಿಕೆ, ಪ್ರಾಧಿಕಾರ ಮತ್ತು ಪ್ರಜೆಗಳು ಆತ್ಮಾವಲೋಕನ ಮಾಡಿಕೊಳ್ಳಲಿ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಇವರೂ ಕೇಂದ್ರದ ಕೈಗೊಂಬೆಯೇ?

ವಿವಾದಗಳಿಗೆ ಗುರಿಯಾಗುತ್ತಿರುವ ರಾಜ್ಯಪಾಲರ ಸಂಖ್ಯೆ ಹೆಚ್ಚುತ್ತಿರುವ ಈ ದಿನಗಳಲ್ಲಿ ನಮ್ಮ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಯಾವ ವಿವಾದವನ್ನೂ ಮೈಮೇಲೆ ಎಳೆದುಕೊಳ್ಳದೆ, ಪಕ್ಷಪಾತರಹಿತ ರಾಜ್ಯಪಾಲರೆಂಬ ನಂಬಿಕೆಯನ್ನು ಜನರಲ್ಲಿ ಮೂಡಿಸಿದ್ದರು. ಇದೀಗ, ಮುಖ್ಯಮಂತ್ರಿಗೆ ಅವಸರದಲ್ಲಿ ಮತ್ತು ವಿವಾದಾತ್ಮಕವಾಗಿ ಷೋಕಾಸ್ ನೋಟಿಸ್ ನೀಡುವ ಮೂಲಕ ಜನರ ಆ ನಂಬಿಕೆಗೆ ಒಂದು ಮಟ್ಟದಲ್ಲಿ ಪೆಟ್ಟು ಕೊಟ್ಟಿದ್ದಾರೆ. 'ಇವರೂ ಕೇಂದ್ರದ ಕೈಗೊಂಬೆಯೇ?' ಎಂದು ಅನುಮಾನಿಸಲು ಅವಕಾಶ ಮಾಡಿಕೊಟ್ಟಿದ್ದಾರೆ.

ಆತ್ಮಸಾಕ್ಷಿ, ಕಾನೂನು-ಸಂವಿಧಾನದ ಸೂಕ್ಷ್ಮ, ಸಂಪ್ರದಾಯ, ಮುಖ್ಯ ಕಾರ್ಯದರ್ಶಿಯ ವರದಿ, ಘೋಷಿತ ನ್ಯಾಯಾಂಗ ತನಿಖೆಯಂತಹ ಎಲ್ಲ ಸಂಗತಿಗಳನ್ನೂ ಪುನರ್ ಅವಲೋಕಿಸದಷ್ಟು ಅವಸರದ ಅಗತ್ಯವೇನಿರಲಿಲ್ಲ. ಜಯಚಾಮರಾಜೇಂದ್ರ ಒಡೆಯರ್, ಜನರಲ್ ಶ್ರೀನಾಗೇಶ್, ಧರ್ಮವೀರ ಅವರಂತಹ, ನಿಜಕ್ಕೂ 'ಘನತೆವೆತ್ತ' ರಾಜ್ಯಪಾಲರನ್ನು ಕಂಡವನು ನಾನು. ಆ ಪದವಿಯು ಬರಬರುತ್ತ, ದೇಶದ ಜನಮಾನಸದಲ್ಲಿ ತನ್ನ ಘನತೆಯನ್ನು ಕುಗ್ಗಿಸಿಕೊಳ್ಳುತ್ತಿದೆ. ದಶಕದಿಂದೀಚೆಗೆ ಜನಮಾನಸದಲ್ಲಿ ಅದು ಒಟ್ಟು ಹೋಲಿಕೆಯಲ್ಲಿ ಕನಿಷ್ಠ ಮಟ್ಟವನ್ನು ತಲುಪಿದೆ ಅನ್ನಿಸುತ್ತದೆ.

ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

ಪರಿಸರ ಸಂರಕ್ಷಣೆ: ಸಮನ್ವಯದ ಕೊರತೆ?

ಪಶ್ಚಿಮ ಘಟ್ಟಗಳಲ್ಲಿ ಪರಿಸರ ಸೂಕ್ಷ್ಮ ಪ್ರದೇಶದ ವಿಸ್ತೀರ್ಣದ ಬಗೆಗೆ ಕರ್ನಾಟಕ ಸರ್ಕಾರ ಈಗಲೂ ಸೂಕ್ತ ನಿಲುವು ತಳೆಯುತ್ತಿಲ್ಲ. ಆರನೇ ಬಾರಿಗೆ ಕರಡು ಅಧಿಸೂಚನೆ ಪ್ರಕಟವಾಗಿರುವಾಗ (ಪ್ರ.ವಾ., ಆ. 3) 'ಕಸ್ತೂರಿರಂಗನ್ ಸಮಿತಿ ವರದಿ ರದ್ದು ಮಾಡುವಂತೆ ಕೇಳುವುದನ್ನೂ ಪರಿಶೀಲಿಸುತ್ತೇವೆ' ಎಂದು ಮುಖ್ಯಮಂತ್ರಿ ಹೇಳಿರುವುದು ಅತಾರ್ಕಿಕ. ಮೊದಲಿಗೆ ಅಧಿಸೂಚಿತ ಪ್ರದೇಶದಲ್ಲಿನ ಗ್ರಾಮಗಳ ಸಮಗ್ರ ಸರ್ವೇಕ್ಷಣೆ ನಡೆಸಿರುವುದೇ ಸಂದೇಹಾಸ್ಪದ.

ಇದೇ ವೇಳೆ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಡಿಪಿಆರ್‌ಗೆ ಸ್ವೀಕೃತಿ ದೊರೆತು, ರಾಜ್ಯ ಸರ್ಕಾರ ಮುಂದಿನ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ. ಒಟ್ಟಿನಲ್ಲಿ ಇವೆರಡೂ ಪರಸ್ಪರ ಸಂಬಂಧ ಇರುವ ವಿಷಯಗಳು ಎಂಬುದನ್ನು ಗಮನಿಸಬೇಕು. ಒಂದೆಡೆ, ಅರಣ್ಯ ಸಚಿವರು ಪರಿಸರ ರಕ್ಷಿಸುವ ಕ್ರಮಗಳನ್ನು ಘೋಷಿಸುತ್ತಾರೆ, ಇನ್ನೊಂದೆಡೆ, ಬೇರೆ ಸಚಿವರು 'ಅಭಿವೃದ್ಧಿ' ಯೋಜನೆಗಳನ್ನು ಪ್ರಕಟಿಸುತ್ತಾರೆ. ಸಮನ್ವಯ, ಸಂತುಲನದ ಜವಾಬ್ದಾರಿ ಮುಖ್ಯಮಂತ್ರಿಯವರದೋ ಉಪಮುಖ್ಯಮಂತ್ರಿಯವರದೋ ತಿಳಿಯುತ್ತಿಲ್ಲ. ಕ್ಯಾಬಿನೆಟ್‌ನ ಸಾಮೂಹಿಕ ಉತ್ತರದಾಯಿತ್ವ ಕಾಣುತ್ತಿಲ್ಲ. ಇದಕ್ಕೇನು ಪರಿಹಾರ?

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಮರೆತುಬಿಡೋಣ…

ಶಿರೂರು ಗುಡ್ಡ ಕುಸಿತ
ನೋಡಿದ ಮೇಲಾದರೂ
ವಯನಾಡ್ ದುರಂತ
ಕರುಳು ಹಿಂಡಿದ
ಮೇಲಾದರೂ 'ಟ್ರಯಲ್ ಬ್ಲಾಸ್ಟ್'
ಎಂಬ ಪದಗಳನ್ನು
ಮರೆತುಬಿಡಬೇಕು
ಕನ್ನಂಬಾಡಿಯ ಸುತ್ತ
ಗಣಿಗಾರಿಕೆ ನಿಷೇಧಿಸಬೇಕು

ಜೆ.ಬಿ.ಮಂಜುನಾಥ, ಪಾಂಡವಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ರಾಷ್ಟ್ರೀಯ ವಿಪತ್ತು’ ಮಾನದಂಡವೇ ಇಲ್ಲ

ದೇಶದ ಯಾವುದೇ ಭಾಗದಲ್ಲಿ ತೀವ್ರ ನೆರೆ, ಬರ ಇತ್ಯಾದಿ ಉಂಟಾದಾಗಲೂ ಅದನ್ನು ‘ರಾಷ್ಟ್ರೀಯ ವಿಪತ್ತು’ ಎಂದು ಘೋಷಿಸಬೇಕು ಎನ್ನುವ ಬೇಡಿಕೆ ಬರುತ್ತದೆ. ವಿಚಿತ್ರ ಎಂದರೆ, ಯಾವುದೇ ಒಂದು ವಿಕೋಪವನ್ನು ‘ರಾಷ್ಟ್ರೀಯ ವಿಪತ್ತು’ ಎಂದು ಘೋಷಿಸುವ ಬಗ್ಗೆ ಕೇಂದ್ರದ ನಿಯಮಗಳಲ್ಲಿ ಮಾನದಂಡಗಳೇ ಇಲ್ಲ. ಆದರೂ ಈ ಕುರಿತ ಬೇಡಿಕೆ ಈಗಲೂ ನಿರಂತರವಾಗಿ ಒಂದಿಲ್ಲೊಂದು ರಾಜ್ಯದಿಂದ ಕೇಳಿಬರುತ್ತಲೇ ಇದೆ. ಕೇಂದ್ರ ಸರ್ಕಾರವು ಕಾಲದಿಂದ ಕಾಲಕ್ಕೆ ವಿಕೋಪಗಳ ತೀವ್ರತೆಯ ಆಧಾರದ ಮೇಲೆ, ತನ್ನ ವಿವೇಚನೆಯ ಮೇರೆಗೆ ಹಣಕಾಸಿನ ನೆರವು ನೀಡುತ್ತಾ ಬರುತ್ತಿದೆ...

ಪ್ರಜಾವಾಣಿ ವಾರ್ತೆ

ಕೇರಳದ ವಯನಾಡ್ ಜಿಲ್ಲೆಯಲ್ಲಿ ಘಟಿಸಿರುವ ಮಹಾದುರಂತವನ್ನು ‘ರಾಷ್ಟ್ರೀಯ ವಿಪತ್ತು’ ಎಂದು ಪರಿಗಣಿಸಬೇಕು ಎಂದು ವಿಪಕ್ಷಗಳು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುತ್ತಿವೆ. ಅದರ ಬೆನ್ನಲ್ಲೇ ರಾಷ್ಟ್ರೀಯ ವಿಪತ್ತು ಘೋಷಣೆಯ ಸಂಬಂಧ ವಾದ ಪ್ರತಿವಾದಗಳು ಆರಂಭವಾಗಿವೆ. ಹಾಗೆ ಘೋಷಣೆ ಮಾಡಲು ಸಾಧ್ಯವೇ ಎಂಬುದನ್ನು ಕಾನೂನಿನ ನೆಲೆಯಲ್ಲಿ ಪರಿಶೀಲನೆ ಮಾಡಲಾಗುವುದು ಎಂದು ಕೇಂದ್ರ ಸಚಿವ ಸುರೇಶ್ ಗೋಪಿ ಹೇಳಿದ್ದರೆ, ನೈಸರ್ಗಿಕ ವಿಕೋಪವನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಲು ನಿಯಮದಲ್ಲಿ ಅವಕಾಶ ಇಲ್ಲ ಎಂದು ಬಿಜೆಪಿ ಮುಖಂಡ ವಿ.ಮುರಳೀಧರನ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ.

2018ರಲ್ಲಿ ಕೇರಳದಲ್ಲಿ ಭಾರಿ ಮಳೆ ಸುರಿದು, ಪ್ರವಾಹ ಉಂಟಾಗಿ 400 ಮಂದಿ ಸಾವಿಗೀಡಾಗಿದ್ದರು. ಆಗಲೂ ಇದೇ ರೀತಿಯ ಬೇಡಿಕೆ ಬಂದಿತ್ತು. ಕೇರಳದ ಆಡಳಿತಾರೂಢ ಎಲ್‌ಡಿಎಫ್ ಮುಖಂಡರು, ಆಗ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ರಾಹುಲ್ ಗಾಂಧಿ ಸೇರಿದಂತೆ ಹಲವರು ಈ ಬಗ್ಗೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದರು. ಆದರೆ, ಕೇಂದ್ರ ಸರ್ಕಾರವು ಕೇರಳದ ಪ್ರವಾಹವನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಿರಲಿಲ್ಲ. ಈಗ ಕೂಡ ಆ ರಾಜ್ಯವನ್ನು ನಡುಗಿಸಿರುವ ಭೂಕುಸಿತವನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸುವ ಬಗ್ಗೆ ಅನುಮಾನಗಳಿವೆ. ಏಕೆಂದರೆ, ಕಾನೂನಿನ ಅಡಿಯಲ್ಲಿ ರಾಷ್ಟ್ರೀಯ ವಿಪತ್ತು ಎಂದು ಘೋಷಣೆ ಮಾಡುವ ಬಗ್ಗೆ ಸ್ಪಷ್ಟ ಮಾರ್ಗಸೂಚಿಯೇ ಇಲ್ಲ.

1999ರಲ್ಲಿ ಒಡಿಶಾಕ್ಕೆ ಚಂಡಮಾರುತ ಅಪ್ಪಳಿಸಿತ್ತು. ಅದೇ ರೀತಿ 2001ರಲ್ಲಿ ಗುಜರಾತ್‌ನಲ್ಲಿ ತೀವ್ರ ಭೂಕಂಪ ಸಂಭವಿಸಿತ್ತು. ಅವರೆಡರ ಬಗ್ಗೆ ‘ಈ ಹಿಂದೆಂದೂ ಇಲ್ಲದಷ್ಟು ತೀವ್ರತೆಯ ವಿಕೋಪಗಳು’ ಎಂದು ಆಗ ಕೇಂದ್ರ ಕೃಷಿ ಖಾತೆಯ ರಾಜ್ಯ ಸಚಿವರಾಗಿದ್ದ ಶ್ರೀಪಾದ್ ನಾಯ್ಕ್ ಬಣ್ಣಿಸಿದ್ದರು. ಸಂತ್ರಸ್ತರಿಗೆ ಕೇಂದ್ರ ಪುನರ್ವಸತಿ ಕಲ್ಪಿಸುವುದೇ ಎನ್ನುವ ಪ್ರಶ್ನೆಗೆ ರಾಜ್ಯಸಭೆಯಲ್ಲಿ (ಮಾರ್ಚ್ 15, 2001) ಉತ್ತರಿಸಿದ್ದ ಅವರು, ‘ವಿಪತ್ತು ಪರಿಹಾರ ಎನ್ನುವುದು ಪ್ರಾಥಮಿಕವಾಗಿ ರಾಜ್ಯದ ಕರ್ತವ್ಯ’ ಎಂದು ಹೇಳಿದ್ದರು. ರಾಜ್ಯ ಸರ್ಕಾರದ ಪ್ರಯತ್ನಗಳೊಂದಿಗೆ ಕೇಂದ್ರ ಸರ್ಕಾರವು ಕೈಜೋಡಿಸಲಿದೆ ಎಂದಿದ್ದರು.

ಮತ್ತೊಮ್ಮೆ, ವಿವಿಧ ರಾಜ್ಯಗಳಲ್ಲಿ ಸಂಭವಿಸಿದ ಪ್ರಾಕೃತಿಕ ವಿಕೋಪಗಳು ಹಾಗೂ ಅವು ಸಂಭವಿಸಿದ ರಾಜ್ಯಗಳಿಗೆ ಕೇಂದ್ರ ಸರ್ಕಾರದ ನೆರವಿನ ಬಗ್ಗೆ ಕೇಳಿದ್ದ ಪ್ರಶ್ನೆಗೆ ಲೋಕಸಭೆಯಲ್ಲಿ ಆಗ (ಜುಲೈ 24, 2018) ಗೃಹ ಖಾತೆಯ ರಾಜ್ಯ ಸಚಿವರಾಗಿದ್ದ ಕಿರಣ್ ರಿಜಿಜು ಉತ್ತರಿಸಿದ್ದರು. ‘ವಿಪತ್ತು ನಿರ್ವಹಣೆಯ ಪ್ರಾಥಮಿಕ ಜವಾಬ್ದಾರಿಯು ರಾಜ್ಯಗಳದ್ದಾಗಿದೆ. ವಿಕೋಪದ ತೀವ್ರತೆಗೆ ತಕ್ಕಂತೆ ರಾಜ್ಯವು ರಾಜ್ಯ ವಿಪತ್ತು ಪರಿಹಾರ ನಿಧಿಯ (ಎಸ್‌ಡಿಆರ್‌ಎಫ್) ಮೂಲಕ ಪರಿಹಾರ ಕ್ರಮಗಳನ್ನು ಕೈಗೊಳ್ಳುತ್ತದೆ. ಹೆಚ್ಚುವರಿಯಾಗಿ, ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ (ಎನ್‌ಡಿಆರ್‌ಎಫ್) ನೆರವು ನೀಡಲಾಗುತ್ತದೆ. ಹಣಕಾಸಿನ ನೆರವು ಪರಿಹಾರ ಕ್ರಮಗಳಿಗೇ ಹೊರತು ಸಂಭವಿಸಿರುವ/ಪ್ರತಿಪಾದನೆ ಮಾಡಲಾಗುವ ನಷ್ಟಕ್ಕಾಗಿ ಅಲ್ಲ’ ಎಂದಿದ್ದರು.

ಆಧಾರ: ಪಿಟಿಐ, 10ನೇ ಹಣಕಾಸು ಆಯೋಗದ ವರದಿ, ಸಂಸತ್ತಿನಲ್ಲಿ ಸಚಿವರ ಉತ್ತರಗಳು, 2005ರ ವಿಪತ್ತು ನಿರ್ವಹಣಾ ಕಾಯ್ದೆ, ಕೇರಳ ನೈಸರ್ಗಿಕ ವಿಪತ್ತು ನಿರ್ವಹಣಾ ಪ್ರಾಧಿಕಾರ

ವಿಪತ್ತು ಎಂದರೆ...

2005ರ ವಿಪತ್ತು ನಿರ್ವಹಣಾ ಕಾಯ್ದೆಯು ವಿಪತ್ತನ್ನು ಈ ರೀತಿ ವ್ಯಾಖ್ಯಾನಿಸುತ್ತದೆ:

‘ಯಾವುದೇ ಪ್ರದೇಶದಲ್ಲಿ ನೈಸರ್ಗಿಕವಾಗಿ ಅಥವಾ ಮಾನವ ನಿರ್ಮಿತವಾದ ಅಥವಾ ಆಕಸ್ಮಿಕ ಇಲ್ಲವೇ ನಿರ್ಲಕ್ಷ್ಯದಿಂದಾಗಿ ಸಂಭವಿಸುವ, ಗಣನೀಯ ಪ್ರಮಾಣದ ಜೀವ ಹಾನಿ ಅಥವಾ ಮನುಷ್ಯರಿಗೆ ಸಂಕಟ ನೀಡುವ ಅಥವಾ ಆಸ್ತಿಗಳನ್ನು ಧ್ವಂಸಗೊಳಿಸುವ ಅಥವಾ ಅವುಗಳಿಗೆ ಹಾನಿ ಮಾಡುವ ಅಥವಾ ಪರಿಸರಕ್ಕೆ ಧಕ್ಕೆ ಉಂಟು ಮಾಡುವ ಮಹಾವಿನಾಶ, ದುರಂತ, ಆಪತ್ತು ಅಥವಾ ಘೋರವಾದಂತಹ ದುರ್ಘಟನೆ’.

ಬಾಧಿತ ಪ್ರದೇಶದಲ್ಲಿ ನೆಲೆಸಿರುವ ಸಮುದಾಯಕ್ಕೆ ಪರಿಸ್ಥಿತಿಯನ್ನು ನಿಭಾಯಿಸಲು ಸಾಧ್ಯವಾಗದಷ್ಟು ತೀವ್ರತೆಯ ಹಾನಿಯಾಗಿದ್ದರೆ ಅದನ್ನು ‘ವಿಪತ್ತು’ ಎಂದು ಕಾಯ್ದೆ ಪರಿಗಣಿಸುತ್ತದೆ.

‘ಹೆಚ್ಚು ತೀವ್ರತೆಯ ವಿಪತ್ತು’: ಮಾನದಂಡಗಳು

- ವಿಪತ್ತಿನ ತೀವ್ರತೆ ಮತ್ತು ಪರಿಣಾಮ
- ಪರಿಹಾರ ನೆರವಿನ ಅಗತ್ಯ
- ಸಮಸ್ಯೆಯನ್ನು ನಿಭಾಯಿಸಲು ರಾಜ್ಯ ಹೊಂದಿರುವ ಸಾಮರ್ಥ್ಯ
- ಸಹಾಯ ಮತ್ತು ಪರಿಹಾರ ನೀಡಲು ಇರುವ ಪರ್ಯಾಯ ವ್ಯವಸ್ಥೆಗಳು

* 10ನೇ ಹಣಕಾಸು ಆಯೋಗದ ವರದಿ

ಕಾನೂನು ತಿದ್ದುಪಡಿಗೆ ಮುಂದಾದ ಕೇಂದ್ರ

ವಿಪತ್ತು ನಿರ್ವಹಣಾ ಕಾನೂನಿಗೆ ತಿದ್ದುಪಡಿ ತರುವ ಮಸೂದೆಯನ್ನು ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಮಂಡಿಸಿದೆ.

ಈಗಿರುವ ಕಾಯ್ದೆಯನ್ನೇ ಬಲಪಡಿಸುವ ಉದ್ದೇಶದಿಂದ ಮಸೂದೆ ಮಂಡಿಸಲಾಗಿದೆ ಎಂದು ಸರ್ಕಾರ ಹೇಳಿದೆ.

ವಿಪತ್ತು ನಿರ್ವಹಣಾ ಯೋಜನೆಗಳನ್ನು ರೂಪಿಸಲು ಮತ್ತು ಅನುಷ್ಠಾನದ ಮೇಲ್ವಿಚಾರಣೆ ಮಾಡಲು ಸಾಂಸ್ಥಿಕ ವ್ಯವಸ್ಥೆಯ ಅಗತ್ಯವಿದೆ. ಇದಕ್ಕಾಗಿ ರಾಷ್ಟ್ರೀಯ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಕೆಲವು ಪ್ರಾಧಿಕಾರಗಳು, ಸಮಿತಿಗಳನ್ನು ರಚಿಸಬೇಕಾಗಿದೆ. ಈ ಉದ್ದೇಶಕ್ಕೆ ತಿದ್ದುಪಡಿ ಮಸೂದೆಯನ್ನು ರೂಪಿಸಲಾಗಿದೆ ಎಂದು ಮಸೂದೆಯಲ್ಲಿ ವಿವರಿಸಲಾಗಿದೆ.

ಈ ತಿದ್ದುಪಡಿಗೆ ವಿರೋಧ ಪಕ್ಷಗಳು ವಿರೋಧ ವ್ಯಕ್ತಪಡಿಸಿವೆ. ಇದರ ಸಂವಿಧಾನಬದ್ಧತೆಯನ್ನು ಪ್ರಶ್ನಿಸಿವೆ.

ಮೂರು ದಶಕಗಳಿಂದ ಚರ್ಚೆ

ದೇಶದ ವಿವಿಧೆಡೆ ದೊಡ್ಡ ಮಟ್ಟದ ವಿಪತ್ತು ಸಂಭವಿಸಿದಾಗ ಅದನ್ನು ‘ರಾಷ್ಟ್ರೀಯ ವಿಪತ್ತು’ ಎಂದು ಘೋಷಿಸಬೇಕು ಎಂಬ ಕೂಗು ಕೇಳಿ ಬರುತ್ತಲೇ ಇರುತ್ತದೆ. ಆದರೆ, ನಿಯಮಗಳಲ್ಲಿ ಅದಕ್ಕೆ ಅವಕಾಶ ಇಲ್ಲ ಎಂದು ಕೇಂದ್ರ ಸರ್ಕಾರ ಹೇಳುತ್ತಾ ಬರುತ್ತಿದೆ.

2005ರ ವಿಪತ್ತು ನಿರ್ವಹಣಾ ಕಾಯ್ದೆ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಮಾರ್ಗಸೂಚಿಗಳು, ನೀತಿಗಳಲ್ಲೂ ಈ ಬಗ್ಗೆ ಪ್ರಸ್ತಾಪವಿಲ್ಲ.

ಸಂಸತ್ತಿನಲ್ಲಿ ಈ ಹಿಂದೆ ಈ ವಿಚಾರದ ಬಗ್ಗೆ ಸದಸ್ಯರು ಪ್ರಶ್ನೆ ಕೇಳಿದಾಗ ಗೃಹ ಇಲಾಖೆ ನೀಡಿರುವ ಉತ್ತರವೂ ಇದನ್ನೇ ಹೇಳುತ್ತದೆ.

1990ರ ದಶಕದಿಂದಲೂ ಹಲವು ರಾಜ್ಯಗಳು ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಮನವಿ ಮಾಡುತ್ತಲೇ ಇವೆ. 10ನೇ ಹಣಕಾಸು ಆಯೋಗದ (1995-2000) ಮುಂದೆಯೂ ಭಾರಿ ಸಾವು ನೋವಿಗೆ ಮತ್ತು ಗಣನೀಯ ಪ್ರಮಾಣದ ನಷ್ಟಕ್ಕೆ ಕಾರಣವಾದ ವಿಪತ್ತಿನ ಸಂದರ್ಭದಲ್ಲಿ ಕೇಂದ್ರದಿಂದ ಹೆಚ್ಚು ನೆರವು ಸಿಗಬೇಕು ಎಂದು ರಾಜ್ಯಗಳು ಮನವಿ ಮಾಡಿದ್ದವು.

ಆಯೋಗವು ಇದಕ್ಕೆ ಸ್ಪಂದಿಸಿತ್ತು. ಅಪರೂಪದ ಮತ್ತು ಹೆಚ್ಚು ದಾರುಣವಾಗಿರುವ ವಿಪತ್ತನ್ನು ಆಯೋಗ ‘ರಾಷ್ಟ್ರೀಯ ವಿಪತ್ತು’ ಎಂದು ಕರೆಯದಿದ್ದರೂ, ಕೇಂದ್ರ ಸರ್ಕಾರವು ಅದನ್ನು ‘ರಾಷ್ಟ್ರೀಯ ವಿಪತ್ತು’ ಎಂಬಂತೆ ನಿರ್ವಹಿಸಬೇಕು; ವಿಪತ್ತು ನಿರ್ವಹಣಾ ನಿಧಿಗೆ (ಸಿಆರ್‌ಎಫ್) ಸೀಮಿತವಾಗದೆ, ಅದಕ್ಕಿಂತ ಹೆಚ್ಚಿನ ಆರ್ಥಿಕ ನೆರವು ಮತ್ತು ಬೆಂಬಲ ನೀಡಬೇಕು ಎಂದು ಹೇಳಿತ್ತು.

ಅಲ್ಲದೇ, ಇಂತಹ ಸಂದರ್ಭಗಳಲ್ಲಿ ಕೇಂದ್ರದೊಂದಿಗೆ ರಾಜ್ಯಗಳೂ ಕೈಜೋಡಿಸಬೇಕು ಎಂದು ಅಭಿಪ್ರಾಯ ಪಟ್ಟಿದ್ದ ಆಯೋಗ, ಅದಕ್ಕಾಗಿ ವಿಪತ್ತು ಪರಿಹಾರ ರಾಷ್ಟ್ರೀಯ ನಿಧಿಯನ್ನು ಸ್ಥಾಪಿಸಬೇಕು; ಕೇಂದ್ರ ಮತ್ತು ರಾಜ್ಯಗಳು ಪ್ರತಿನಿಧಿಸುವ ರಾಷ್ಟ್ರೀಯ ವಿಪತ್ತು ಪರಿಹಾರ ಸಮಿತಿಯು ಈ ನಿಧಿಯನ್ನು ನಿರ್ವಹಿಸಬೇಕು ಎಂದು ಹೇಳಿತ್ತು.

2001ರಲ್ಲಿ ಪ್ರಧಾನಿ ನೇತೃತ್ವದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಮಿತಿಯು ‘ರಾಷ್ಟ್ರೀಯ ವಿಪತ್ತು’ ಘೋಷಣೆಗೆ ಸಂಬಂಧಿಸಿದ ವಿಚಾರ ಚರ್ಚಿಸಿತ್ತಾದರೂ, ಮಾನದಂಡಗಳನ್ನು ನಿಗದಿಪಡಿಸಿರಲಿಲ್ಲ.

2013ರಲ್ಲಿ ಉತ್ತರಾಖಂಡದಲ್ಲಿ ಸಂಭವಿಸಿದ ಪ್ರವಾಹ ಮತ್ತು 2014ರಲ್ಲಿ ಆಂಧ್ರಪ್ರದೇಶದಲ್ಲಿ ಹುಡ್‌ಹುಡ್ ಚಂಡಮಾರುತದ ಸಂದರ್ಭದಲ್ಲಿ ಅವುಗಳನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಬಂದಿತ್ತು. ಆದರೆ, ಕೇಂದ್ರ ಸರ್ಕಾರ ಈ ಬಗ್ಗೆ ಕ್ರಮ ಜರುಗಿಸಿರಲಿಲ್ಲ. ಬದಲಿಗೆ ಅವುಗಳನ್ನು ‘ತೀವ್ರ ಸ್ವರೂಪದ ವಿಪತ್ತು’ ಎಂದು ಪರಿಗಣಿಸಿತ್ತು.

2018ರಲ್ಲಿ ಕೇರಳಕ್ಕೆ ವಿದೇಶಿ ಸರ್ಕಾರಗಳ ನೆರವು ತಿರಸ್ಕರಿಸಿದ್ದ ಕೇಂದ್ರ

2018ರಲ್ಲಿ ಕೇರಳದಲ್ಲಿ ಪ್ರವಾಹ ಉಂಟಾಗಿದ್ದ ಸಂದರ್ಭದಲ್ಲೂ ‘ರಾಷ್ಟ್ರೀಯ ವಿಪತ್ತು’ ಘೋಷಣೆ ವಿಚಾರ ಚರ್ಚೆಗೆ ಬಂದಿತ್ತು. ಪರಿಹಾರ ಕಲ್ಪಿಸಲು ಹೆಚ್ಚು ನೆರವು ನೀಡುವಂತೆ ಕೇರಳ ಕೇಂದ್ರಕ್ಕೆ ಮನವಿಯನ್ನೂ ಮಾಡಿತ್ತು.

ಯುಎಇ, ಕತಾರ್, ಮಾಲ್ದೀವ್ಸ್ ಸೇರಿದಂತೆ, ಕೇರಳದ ಜನರು ಹೆಚ್ಚು ನೆಲೆಸಿರುವ ರಾಷ್ಟ್ರಗಳ ಸರ್ಕಾರಗಳು ನೆರವು ನೀಡಲು ಮುಂದೆ ಬಂದಿದ್ದವು. ಕೇಂದ್ರ ಸರ್ಕಾರ ಇದನ್ನು ತಿರಸ್ಕರಿಸಿತ್ತು. ಕೇಂದ್ರದ ಈ ನಿರ್ಧಾರ ಭಾರಿ ಚರ್ಚೆ ಹುಟ್ಟುಹಾಕಿತ್ತು.

ಸರ್ಕಾರದ ವಿಪತ್ತು ನೆರವಿನ ನೀತಿಯ ಅನುಸಾರ, ಹೊರದೇಶಗಳ ಸರ್ಕಾರದ ನೆರವನ್ನು ಸ್ವೀಕರಿಸುವಂತಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿತ್ತು.

ಕೇಳಿದಷ್ಟು ಹಣವನ್ನು ಕೇಂದ್ರ ನೀಡಿಲ್ಲ ಎಂದು ಕೇರಳ ಸರ್ಕಾರ ಆರೋಪಿಸಿತ್ತು. ಅದಕ್ಕೆ ಪ್ರತಿಯಾಗಿ, ನೀಡಿದ್ದ ಹಣವನ್ನು ಕೇರಳ ಸಮರ್ಪಕವಾಗಿ ಬಳಸಿಕೊಂಡು, ಅದಕ್ಕೆ ದಾಖಲೆ ಸಲ್ಲಿಸಿಲ್ಲ ಎಂದು ಕೇಂದ್ರ ಸರ್ಕಾರ ಪ್ರತಿಪಾದಿಸಿತ್ತು.

ಸಿನಿ ಬಿಟ್ಸ್

‘ಭೀಮ’ನಿಗೆ ಶಿವರಾಜ್‌ಕುಮಾರ್ ಸಾಥ್

ದುನಿಯಾ ವಿಜಯ್ ನಿರ್ದೇಶಿಸಿ, ನಟಿಸಿರುವ ‘ಭೀಮ’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ಶಿವರಾಜ್‌ಕುಮಾರ್ ಚಿತ್ರದ ಟ್ರೇಲರ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು.

‘ನನಗೆ ಆ್ಯಕ್ಷನ್ ಸಿನಿಮಾಗಳೆಂದರೆ ಇಷ್ಟ. ಈ ಚಿತ್ರದಲ್ಲಿ ಸಾಕಷ್ಟು ಆ್ಯಕ್ಷನ್ ಇದೆ. ದುನಿಯಾ ವಿಜಯ್ ನಿರ್ದೇಶನದಲ್ಲಿ ನಾನು ಸಿನಿಮಾ ಮಾಡಬೇಕೆಂದು ಆಸೆಯಿದೆ. ಆ ಸಮಯ ಬೇಗ ಬರಲಿ. ‘ಭೀಮ’ ಗೆಲುವು ಇದಕ್ಕೆ ಬುನಾದಿಯಾಗಲಿ’ ಎಂದು ಶಿವಣ್ಣ ತಂಡಕ್ಕೆ ಶುಭ ಕೋರಿದರು.

‘ಒಂದೊಳ್ಳೆ ಸಿನಿಮಾ ಮಾಡಿರುವೆ ಎಂಬ ನಂಬಿಕೆ ಇದೆ. ಇಷ್ಟಪಟ್ಟು, ಕಷ್ಟಪಟ್ಟು ಈ ಸಿನಿಮಾ ಮಾಡಿದ್ದೇವೆ. ಇನ್ನು ಮುಂದೆ ಸಿನಿಮಾವೇ ಮಾತನಾಡಬೇಕು. ಜನರ ಪ್ರತಿಕ್ರಿಯೆಗಾಗಿ ಕಾಯುತ್ತಿರುವೆ’ ಎಂದು ದುನಿಯಾ ವಿಜಯ್ ಹೇಳಿದರು.

ನಾಯಕಿಯಾಗಿ ಅಶ್ವಿನಿ ಅಂಬರೀಶ್ ಕಾಣಿಸಿಕೊಂಡಿದ್ದಾರೆ. ಡ್ರಗ್ಸ್ ಕುರಿತು ಸಂದೇಶ ನೀಡುವ ಕಥೆಗೆ ಕೃಷ್ಣ ಸಾರ್ಥಕ್, ಜಗದೀಶ್ ಗೌಡ ಬಂಡವಾಳ ಹೂಡಿದ್ದಾರೆ. ರಂಗಾಯಣ ರಘು, ಅಚ್ಯುತ್ ಕುಮಾರ್, ನಯನಾ ಸೂಡ, ರಾಘು ಶಿವಮೊಗ್ಗ, ಗೋಪಾಲಕೃಷ್ಣ ದೇಶಪಾಂಡೆ, ಪ್ರಿಯಾ ಶಠಮರ್ಷಣ್ ಮೊದಲಾದವರು ತಾರಾಗಣದಲ್ಲಿದ್ದಾರೆ.

ಆ.9ಕ್ಕೆ ಚಿತ್ರ ತೆರೆಗೆ ಬರುತ್ತಿದೆ. ಚಿತ್ರಕ್ಕೆ ಚರಣ್‌ರಾಜ್ ಸಂಗೀತವಿದೆ. ಶಿವಸೇನಾ ಛಾಯಾಚಿತ್ರಗ್ರಹಣ, ದೀಪು. ಎಸ್. ಕುಮಾರ್ ಸಂಕಲನ, ಮಂಜು ಮಾಸ್ತಿ ಸಂಭಾಷಣೆಯಿದೆ.

ಎಂ.ಡಿ. ಶ್ರೀಧರ್ ‘ಜಂಬೂ ಸರ್ಕಸ್’

‘ಬುಲ್ ಬುಲ್’, ‘ಕೃಷ್ಣ’, ‘ಚೆಲ್ಲಾಟ’ ಮೊದಲಾದ ಸಿನಿಮಾಗಳನ್ನು ನಿರ್ದೇಶಿಸಿದ್ದ ಜನಪ್ರಿಯ ನಿರ್ದೇಶಕ ಎಂ.ಡಿ. ಶ್ರೀಧರ್ ಒಂದು ವಿರಾಮದ ಬಳಿಕ ಮತ್ತೆ ನಿರ್ದೇಶನಕ್ಕೆ ಮರಳಿದ್ದಾರೆ. ಅವರ ನಿರ್ದೇಶನದ ‘ಜಂಬೂ ಸರ್ಕಸ್’ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಹಾಸ್ಯದೊಂದಿಗೆ ಡ್ರಾಮಾ ಕಥೆ ಹೊಂದಿರುವ ಚಿತ್ರಕ್ಕೆ ಹೆಚ್.ಸಿ.ಸುರೇಶ್ ಅವರು ಮಹತಿ ಕಂಬೈನ್ಸ್ ಮೂಲಕ ಬಂಡವಾಳ ಹೂಡಿದ್ದಾರೆ. ಪ್ರವೀಣ್ ತೇಜ್ ನಾಯಕನಾಗಿದ್ದು, ಅಂಜಲಿ ಎಸ್.ಅನೀಶ್ ನಾಯಕಿಯಾಗಿದ್ದಾರೆ.

‘ಒಡೆಯ’ ಚಿತ್ರದ ನಂತರ ಗ್ಯಾಪ್ ತೆಗೆದುಕೊಂಡು ಈ ಚಿತ್ರ ಮಾಡಿದ್ದೇನೆ. ‘ಜಂಬೂ ಸರ್ಕಸ್’ ಸಿನಿಮಾ ಆಗಲು ಕಾರಣ ನಿರ್ಮಾಪಕರು. ಕೆಲ ವರ್ಷಗಳ ಹಿಂದೆ ಬೇರೆ ಸಿನಿಮಾಗಾಗಿ ಅಡ್ವಾನ್ಸ್ ಕೊಟ್ಟಿದ್ದರು. ಆ ಚಿತ್ರ ಆಗಿರಲಿಲ್ಲ. ಆ ಕಮಿಟ್‌ಮೆಂಟ್ ಮೇಲೆ ಈ ಸಿನಿಮಾ ಮಾಡಿದ್ದೇವೆ. ಇದು ಗೆಳೆಯರಿಬ್ಬರ ಕಥೆ. ಒಂದೇ ಶಾಲೆ, ಕಾಲೇಜ್‌ನಲ್ಲಿ ಓದಿ, ಒಂದೇ ಮಂಟಪದಲ್ಲಿ ಒಂದೇ ದಿನ ಮದುವೆ ಆಗುತ್ತಾರೆ. ನಂತರ ಏನೆಲ್ಲ ಆಗುತ್ತದೆ ಎಂಬುದನ್ನು ಚಿತ್ರದಲ್ಲಿಯೇ ನೋಡಬೇಕು’ ಎಂದರು ನಿರ್ದೇಶಕರು.

‘ನನಗೆ ‘ಜಾಲಿ ಡೇಸ್’ ಸಿನಿಮಾ ದಿನಗಳು ನೆನಪಿಗೆ ಬರುತ್ತಿದೆ. ನಾನು ಚಿತ್ರರಂಗಕ್ಕೆ ಬಂದು 15 ವರ್ಷ ಆಯ್ತು. ನನ್ನ ಮೊದಲ ಸಿನಿಮಾ ನಿರ್ದೇಶಕರ ಜೊತೆ ಮತ್ತೆ ಸಿನಿಮಾ ಮಾಡಿದ್ದು ಒಂದು ರೀತಿ ವಿಶೇಷ’ ಎಂದರು ಪ್ರವೀಣ್ ತೇಜ್.

ವಾಸುಕಿ ವೈಭವ್ ಈ ಚಿತ್ರಕ್ಕೆ ಸಂಗೀತ ನೀಡಿದ್ದಾರೆ. ಕೃಷ್ಣ ಕುಮಾರ್ (ಕೆ.ಕೆ) ಛಾಯಾಚಿತ್ರಗ್ರಹಣ, ಜ್ಞಾನೇಶ್ ಸಂಕಲನವಿದೆ.

ಅಂಜಲಿ, ಪ್ರವೀಣ್ ತೇಜ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಮನೆಯ ಮುಂದಿನ ಗೇಟ್ ಒಂದು, ಸುತ್ತಮುತ್ತ ಆವರಿಸಿರುವ ನೀರಿನಲ್ಲಿ ಮುಳುಗಿಹೋಗುವ ವಿಡಿಯೊ ಅನ್ನು ಕೆಲವರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಇದು ವಯನಾಡ್ ಜಿಲ್ಲೆಯಲ್ಲಿ ಭೂಕುಸಿತ ಹಾಗೂ ಪ್ರವಾಹದಿಂದ ಉಂಟಾಗಿರುವ ಅನಾಹುತದ ಒಂದು ಚಿತ್ರ ಎಂದು ಉಲ್ಲೇಖಿಸುತ್ತಿದ್ದಾರೆ. ಇದು ಎಡಪಂಥೀಯರ ಕೇರಳ ಮಾದರಿಯ ಒಂದು ನಿದರ್ಶನ ಎಂದೂ ಅವರು ಪ್ರತಿಪಾದನೆ ಮಾಡುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊ ಮೇಲ್ಭಾಗದಲ್ಲಿ ಅದನ್ನು ಚಿತ್ರೀಕರಿಸಿದ ದಿನಾಂಕ ದಾಖಲಾಗಿದ್ದು, ಅದು ಜೂನ್ 16, 2024 ಎಂದಿದೆ. ವಯನಾಡ್‌ನಲ್ಲಿ ಭೂಕುಸಿತ ಸಂಭವಿಸಿದ್ದು ಜುಲೈ 30, 2024ರಂದು. ಜತೆಗೆ, ವಿಡಿಯೊ ಅನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಅದು ಚೀನಾದ ಮಿಜೊವ್ ನಗರದ ಚಿತ್ರ ಎನ್ನುವುದು ತಿಳಿದುಬಂತು. ಈ ಬಗ್ಗೆ ಮತ್ತಷ್ಟು ಹುಡುಕಾಟ ನಡೆಸಿದಾಗ, ಅಲ್ಲಿನ ಜಲಾಶಯದ ಬಾಗಿಲುಗಳನ್ನು ಯಾವುದೇ ಮುನ್ಸೂಚನೆ ನೀಡದೇ ತೆರೆದದ್ದರಿಂದ ಕೆಲವು ಮನೆಗಳು ನೀರಿನಲ್ಲಿ ಮುಳುಗಿಹೋದವು ಎನ್ನುವುದು ತಿಳಿಯಿತು. ಈ ಬಗ್ಗೆ ಅಲ್ಲಿನ ಕೆಲವು ಮಾಧ್ಯಮಗಳು ವರದಿ ಮಾಡಿರುವುದು ಕಂಡುಬಂತು. ಚೀನಾದ ಈ ವಿಡಿಯೊ ಅನ್ನು ಕೆಲವರು ಕೇರಳದ ಭೂಕುಸಿತಕ್ಕೆ ತಳಕು ಹಾಕಿ, ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ. ಈ ಬಗ್ಗೆ ಬೂಮ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಬುದ್ಧಿ ಭಾವಗಳ ನಿರಂತರ ಬೆಳವಣಿಗೆ

ನುಡಿ ಬೆಳಗು

ಎಚ್.ಎಸ್.ನವೀನಕುಮಾರ್, ಹೊಸದುರ್ಗ

ಮಹಾತ್ಮ ಗಾಂಧೀಜಿಯವರು ದಕ್ಷಿಣ ಆಫ್ರಿಕಾದ ತಮ್ಮ ಫೀನಿಕ್ಸ್ ಆಶ್ರಮದಲ್ಲಿ ಆಶ್ರಮವಾಸಿಗಳ ಮಕ್ಕಳಿಗಾಗಿ ಶಾಲೆಯೊಂದನ್ನು ತೆರೆದಿದ್ದರು. ಗಾಂಧೀಜಿಯವರ ನಿಲುವಿನಲ್ಲಿ ಶಿಕ್ಷಣವೆಂದರೆ ಬರೀ ಅಂಕ ಗಳಿಕೆಗಷ್ಟೇ ಸೀಮಿತವಾಗಿರದೇ, ನಮ್ಮ ಬುದ್ಧಿ ಹಾಗೂ ಭಾವ ಎರಡನ್ನೂ ವಿಕಾಸಗೊಳಿಸುವಂಥ ಜ್ಞಾನಾರ್ಜನೆಯಾಗಿರಬೇಕು.ಇಂತಹ ನಿಜವಾದ ಶಿಕ್ಷಣವನ್ನು ಮಕ್ಕಳಿಗೆ ನೀಡಬೇಕು ಎಂಬುದು ಅವರ ಉದ್ದೇಶವಾಗಿತ್ತು. ಹೀಗಾಗಿ ಅವರು ಮಕ್ಕಳ ಪ್ರಗತಿಯನ್ನು ವಿಭಿನ್ನ ಮಾನದಂಡದಲ್ಲಿ ಅಳೆಯುತ್ತಿದ್ದರು. ಪರೀಕ್ಷೆಯಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಸಮನಾದ ಪ್ರಶ್ನೆಯನ್ನು ನೀಡಲಾಗುತ್ತಿತ್ತು. ಮೌಲ್ಯಮಾಪನದ ನಂತರ ಗಾಂಧೀಜಿಯವರು ಅತಿ ಕಡಿಮೆ ಅಂಕಗಳಿಸಿದ ವಿದ್ಯಾರ್ಥಿಗಳನ್ನು ಪ್ರಶಂಶಿಸುತ್ತಿದ್ದರು ಹಾಗೂ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಬೈದು ಬುದ್ಧಿ ಹೇಳುತ್ತಿದ್ದರು. ಗಾಂಧೀಜಿಯವರ ಈ ನಿಲುವು, ಮಕ್ಕಳು ಹಾಗೂ ಅವರ ಪೋಷಕರನ್ನು ಸಹಜವಾಗಿ ಗೊಂದಲಕ್ಕೆ ದೂಡಿತು. ಅವರು ಗಾಂಧೀಜಿಯವರನ್ನು ‘ಹೀಗೇಕೆ ಮಾಡುತ್ತಿದ್ದೀರಿ’ ಎಂದು ಪ್ರಶ್ನಿಸಿದಾಗ ಗಾಂಧೀಜಿ, ‘ನಾನು ಕಡಿಮೆ ಅಂಕ ಪಡೆದ ವಿದ್ಯಾರ್ಥಿಯನ್ನು ಅವನು ಪಡುತ್ತಿರುವ ಪರಿಶ್ರಮಕ್ಕಾಗಿ ಪ್ರಶಂಶಿಸುತ್ತಿದ್ದೇನೆ. ಇದರಿಂದಾಗಿ ಅವನ ಪರಿಶ್ರಮ ಇನ್ನಷ್ಟು ಹೆಚ್ಚುತ್ತದೆ. ಹಾಗೆಯೇ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ, ಕಡಿಮೆ ಅಂಕ ಪಡೆದ ವಿದ್ಯಾರ್ಥಿಯೊಂದಿಗೆ ತನ್ನನ್ನು ತಾನು ಹೋಲಿಸಿಕೊಂಡು ತಾನೇ ಬುದ್ಧಿವಂತ ಎಂಬ ಆಲೋಚನೆಯೊಂದಿಗೆ ಹೆಚ್ಚಿನ ಪರಿಶ್ರಮ ಪಡುವುದನ್ನೇ ನಿಲ್ಲಿಸಿ ಬಿಡುತ್ತಾನೆ. ಇದರಿಂದ ಅವನ ಪ್ರಗತಿ ಕುಂಠಿತವಾಗುತ್ತದೆ. ಜ್ಞಾನ ನಿಂತ ನೀರಾಗುತ್ತದೆ. ಹಾಗಾಗಿ ಅವರಿಗೆ ಬೈದು ಬುದ್ಧಿ ಹೇಳುತ್ತೇನೆ’ ಎಂದು ಉತ್ತರಿಸಿದರು.

ಇಂದು ಸಂಪೂರ್ಣವಾಗಿ ವ್ಯಾಪಾರೀಕರಣಗೊಂಡಿರುವ ಶಿಕ್ಷಣದ ಸ್ಥಿತಿ ಗತಿಗಳ ಸಂದರ್ಭದಲ್ಲಿ ಗಮನಿಸಿದಾಗ ಗಾಂಧೀಜಿಯವರ ಚಿಂತನೆ ಎಷ್ಟು ಅರ್ಥಪೂರ್ಣವಾಗಿದೆ ಎಂದೆನಿಸುವುದಿಲ್ಲವೇ? ಅಂಕ ಗಳಿಕೆಯೇ ಇಂದು ಜ್ಞಾನಾರ್ಜನೆಯ ಏಕೈಕ ಮಾನದಂಡವಾಗಿಬಿಟ್ಟಿದೆ. ಇದರಿಂದ ಹೆಚ್ಚು ಅಂಕ ಪಡೆದವರನ್ನು ಮಾತ್ರ ಜ್ಞಾನಿಗಳು ಎಂದು ಗುರುತಿಸುವಂತಾಗಿದೆ. ಆದರೆ ಅವರ ಜ್ಞಾನ, ಬುದ್ಧಿ ಭಾವಗಳ ವಿಕಾಸಕ್ಕೆ ಕಾರಣವಾಗಿದೆಯೇ? ಜ್ಞಾನಾರ್ಜನೆ ಎಂದರೆ ಎಂದಿಗೂ ನಿಂತ ನೀರಾಗದೆ ನಿರಂತರವಾದ ಪ್ರಕ್ರಿಯೆ ಎಂಬ ಚಿಂತನೆ ಅವರಲ್ಲಿ ಇದೆಯೇ? ತನಗಷ್ಟೇ ಒಳ್ಳೆಯ ಉದ್ಯೋಗ, ತನ್ಮೂಲಕ ಅತ್ಯುತ್ತಮ ಪಗಾರವನ್ನು ಗಳಿಸಿಕೊಡುವ ಶಿಕ್ಷಣ, ಮಾನಸಿಕವಾಗಿ ನಮ್ಮ ಪ್ರಗತಿಗೆ ಕಾರಣವಾಗುತ್ತಿದೆಯೇ? ಸಮಾಜದ ಬೇರೆಯವರ ನೋವಿಗೆ ಕಷ್ಟಕ್ಕೆ ಸ್ಪಂದಿಸುವ ಸೂಕ್ಷ್ಮತೆಯನ್ನು, ಸಹಾನುಭೂತಿಯನ್ನು ನಮ್ಮ ಮಕ್ಕಳಲ್ಲಿ ತುಂಬುತ್ತಿದೆಯೇ?

ಈ ಬಗೆಯ ಮೌಲ್ಯ ಶಿಕ್ಷಣಕ್ಕೆ ಖಂಡಿತವಾಗಿಯೂ ಅಂಕಗಳ ಹಂಗಿರುವುದಿಲ್ಲ. ಈ ರೀತಿಯ ಶಿಕ್ಷಣವನ್ನೇ, ನಾವು ನಮ್ಮ ಬದುಕಿನುದ್ದಕ್ಕೂ ಪಡೆದುಕೊಳ್ಳಬೇಕಾದದ್ದು. ಹಾಗೂ ಇದು ನಮ್ಮ ಜೀವನ ಮೌಲ್ಯವನ್ನು ನಿರಂತರವಾಗಿ ವಿಕಸನಗೊಳಿಸುವ ಭಾವ ಬುದ್ಧಿಗಳ ಪರಿಷ್ಕರಣೆ. ಮೌಲ್ಯಯುತವಾದ ಸಮಾಜ ನಿರ್ಮಾಣಕ್ಕೆ ಇಂತಹ ಶೈಕ್ಷಣಿಕ ವ್ಯವಸ್ಥೆಯ ಅಗತ್ಯ ಖಂಡಿತವಾಗಿಯೂ ಇದೆಯಲ್ಲವೇ?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಆಗಸ್ಟ್ 5, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಪ್ರತಿಪದ್ ಗಂ. 18-04 ನಕ್ಷತ್ರ: ಆಶ್ಲೇಷ ಗಂ. 15-22 ಯೋಗ: ವ್ಯತೀಪಾತ ಗಂ. 10-38 ಕರಣ: ಬವ ಗಂ. 18-04, ಕರ್ಕಾಟಕ ಮಾಸದ 19 ನೇ ದಿನ, ಮಳೆನಕ್ಷತ್ರ: ಆಶ್ಲೇಷ 1.
ರಾಹುಕಾಲ : ಬೆಳಗ್ಗೆ 07-30 - 09-00
ಸೂರ್ಯೋದಯ : 06-20 ಸೂರ್ಯಾಸ್ತ : 06-53
ಮುಸ್ಲಿಂ ದಿನಾಂಕ : 25 ಮೊಹರಮ್
ಅದೃಷ್ಟ ಸಂಖ್ಯೆ : 3, 12

ಮೇಷ: ಯಶಸ್ಸು ಹಿರಿಯರ ಮನಸ್ಸಿಗೆ ನೆಮ್ಮದಿ ಹಾಗೂ ಸಂತೋಷವನ್ನು ತರುತ್ತದೆ. ನಿರೀಕ್ಷಿಸಿದ ಕಾರ್ಯಗಳು ಅವಿಘ್ನವಾಗಿ ನೆರವೇರಿ ನೆಮ್ಮದಿ ಉಂಟಾಗುವುದು. ದ್ವಿಚಕ್ರ ವಾಹನ ಮಾರಾಟಗಾರರಿಗೆ ಲಾಭವಿದೆ.

ವೃಷಭ: ವೃತ್ತಿಗಿಂತ ಪ್ರವೃತ್ತಿಯಲ್ಲಿ ಆಸಕ್ತಿ ಹೆಚ್ಚಲಿದೆ. ಅದರಲ್ಲಿ ಹೆಚ್ಚಿನ ಲಾಭವಿದೆ. ಬೆಂಕಿಯಿಂದ ಅನಾಹುತ ಸಂಭವಿಸಬಹುದು, ಜಾಗ್ರತರಾಗಿರಿ. ಸಾಮಾಜಿಕ ವಿಷಯಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ.

ಮಿಥುನ: ನಿರುದ್ಯೋಗಿಗಳ ಅಲೆದಾಟ ತಪ್ಪಿ ಹೊಸ ಕೆಲಸ ಪ್ರಾರಂಭ ಮಾಡುವ ಅವಕಾಶ. ಸತ್ಕಾರ್ಯಗಳಲ್ಲಿ ಬಂಧುಗಳ ಸಕ್ರಿಯ ಪಾತ್ರವಿದ್ದು ಸಹಕರಿಸುವರು. ಕೋರ್ಟು ವ್ಯವಹಾರಗಳ ಓಡಾಟ ತಪ್ಪಲಿದೆ.

ಕರ್ಕಾಟಕ: ಆದಾಯದಲ್ಲಿ ಸಣ್ಣ ಹೊಡೆತ ಎದುರಿಸುವಂತಾಗಬಹುದು. ಅದರ ಕಾರಣವನ್ನು ಹುಡುಕಿ ಪಾಠದ ರೀತಿಯಲ್ಲಿ ತೆಗೆದುಕೊಳ್ಳುವುದು ಉತ್ತಮ. ವಾಹನ ರಿಪೇರಿಗಾಗಿ ಖರ್ಚು ಮಾಡಬೇಕಾಗುವುದು.

ಸಿಂಹ: ಮನೆತನದ ವೃತ್ತಿಯನ್ನೇ ಮುಂದುವರಿಸಿಕೊಂಡು ಹೋಗುತ್ತಿರುವವರಿಗೆ ಹಿರಿಯರಿಂದ ಪಡೆದ ಸಲಹೆಯು ಹೊಸ ಬುನಾದಿಯಾಗಲಿದೆ. ಹವ್ಯಾಸಕ್ಕೆ ಬಿಡುವು ಮಾಡಿಕೊಳ್ಳುವಿರಿ.

ಕನ್ಯಾ: ರಿಯಲ್ ಎಸ್ಟೇಟ್ ವ್ಯವಹಾರ ನಡೆಸುವ ವ್ಯಕ್ತಿಗಳಿಗೆ ಕಲ್ಪನೆಗಿಂತ ಅಧಿಕ ಕಮಿಷನ್ ದೊರೆಯಲಿದೆ. ಹೊಸ ಮನೆಯ ನಿರ್ಮಾಣ ಕಾರ್ಯಗಳು ಚುರುಕುಗತಿಯಲ್ಲಿ ಸಾಗುವುದು. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ ಕಂಡುಬರಲಿದೆ.

ತುಲಾ: ವಿದ್ಯಾರ್ಥಿಗಳಿಗೆ ನಿರ್ಮಿಸಿಕೊಂಡ ಅನುಕೂಲಕರ ವಾತಾವರಣವು ವಿದ್ಯಾಭ್ಯಾಸದಲ್ಲಿ ಮುನ್ನಡೆ ತಂದುಕೊಡಲಿದೆ. ವೈದ್ಯರಿಗೆ ವೃತ್ತಿಯಲ್ಲಿ ಸವಾಲೆನಿಸುವ ವಿಷಯಗಳಲ್ಲಿ ಯಶಸ್ಸು ಕಂಡುಬರಲಿದೆ.

ವೃಶ್ಚಿಕ: ಸಣ್ಣಪುಟ್ಟ ವಿಚಾರವಾಗಿ ಅಥವಾ ಇತರರ ಮಾತುಗಳಿಗೆ ಕಿವಿ ಕೊಟ್ಟು ಅತ್ತೆ ಸೊಸೆಯ ಸಂಬಂಧದಲ್ಲಿ ಭಿನ್ನಾಭಿಪ್ರಾಯ ಮೂಡಲಿದೆ. ವೈಯಕ್ತಿಕ ಕೆಲಸಗಳಿಗೆ ನೀವಂದುಕೊಂಡ ಯಾವುದೇ ಅಡಚಣೆ ಇರುವುದಿಲ್ಲ.

ಧನು: ಕೆಲಸ ಕಾರ್ಯಗಳ ಬಗ್ಗೆ ನಿಗಾ ಕೊಡುವಂತೆ ಅಧಿಕಾರಿಗಳಿಂದ ತೀಕ್ಷ್ಣವಾದ ಸಂದೇಶ ಬರಲಿದೆ. ಧಾನ್ಯಗಳ ಮಾರಾಟಗಾರರಿಗೆ ಉತ್ತಮ ಲಾಭ. ಮನಸ್ಸಿನ ಭಾವನೆಗಳನ್ನು ಹೊರ ಹಾಕುವಂತಾಗಲಿದೆ.

ಮಕರ: ಜವಾಬ್ದಾರಿಯುಕ್ತ ನಡೆ, ದಿಟ್ಟತನದ ಜೊತೆಗೆ ಸ್ವಲ್ಪ ತಂತ್ರಗಾರಿಕೆ ತೋರಿದರೆ ಅಧಿಕಾರಿಗಳ ಗಮನ ಸೆಳೆಯುವುದು ಕಷ್ಟ ಆಗುವುದಿಲ್ಲ. ದೇವರ ಸೇವೆಯಿಂದ ಕೌಟುಂಬಿಕ ಸಮಸ್ಯೆಗಳು ದೂರವಾಗಲಿವೆ.

ಕುಂಭ: ಸ್ವಶಕ್ತಿಯಿಂದ ಜೀವನದಲ್ಲಿ ಮುಂಬರುವ ದಾರಿ ಆರಿಸಿಕೊಳ್ಳಿ. ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದು. ಮಿತ್ರರಿಂದ ಸಹಕಾರ ಒದಗಿ ಬರಲಿದೆ. ಆರೋಗ್ಯದ ಬಗ್ಗೆ ಗಮನ ಹರಿಸಬೇಕಾದೀತು.

ಮೀನ: ಪಿತ್ರಾರ್ಜಿತ ಆಸ್ತಿಗಳ ವಿಚಾರದಲ್ಲಿ ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡಿಬರಲಿದೆ. ಧ್ಯಾನ ಮತ್ತು ಯೋಗದತ್ತ ಗಮನ ಹರಿಸುವಿರಿ. ವೈಯಕ್ತಿಕ ಆಸೆ ಆಕಾಂಕ್ಷೆಗಳು ಪೂರ್ಣಗೊಳ್ಳುವ ಸಂಭವವಿದೆ.

ಪದಬಂಧ 5763

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಗೆಲುವನ್ನು ಸಾರುವ ಘೋಷ (4)
5.ಜಲವನ್ನು ಹೀಗೂ ಹೇಳುವರು (3)
7.ಕೊನೆಗೆ ಪಣವಿಟ್ಟರೆ ಐಶ್ವರ್ಯ ಕಾಣುತ್ತಿದೆಯಲ್ಲಾ? (3)
9.ನೈಟ್ರೋಜನ್ ಅನ್ನು ಕನ್ನಡೀಕರಿಸಿ (5)
10.ನೀರಿನಿಂದಾದ ಅನಿಲ (5)
12.ಯಾವುದಾದರೂ ಘಟನೆ,ವಿಷಯ ಮುಂತಾದುವುಗಳ ಕ್ರಮಬದ್ಧವಾದ ನಿರೂಪಣೆ (3)
14.ನೀರನ್ನು ಕೊಡುವ ಮೋಡ (3)
16.ನೀರು ಧುಮ್ಮಿಕ್ಕುವ ಸ್ಥಳ (4)

ಮೇಲಿಂದ ಕೆಳಕ್ಕೆ
1.ಒಂದು ಜಾತಿಯ ಬಿಳಿಯ ಪಕ್ಷಿ (2)
2.ನೀರಿನಲ್ಲಿ ವಾಸಿಸುವ ಪ್ರಾಣಿಗಳು (4)
3.ದಾಖಲೆ ಪತ್ರ ಮುಂತಾದವುಗಳ ಕೊನೆಯಲ್ಲಿ ಸೇರಿಸುವ ವಿಶೇಷಾಂಶ (2)
4.ದೊಡ್ಡ ಮಡಿಕೆ ಇಲ್ಲಿದೆ (3)
6.ಈತ ಕಾಡನ್ನು ರಕ್ಷಿಸುವವನು (5)
8.ಈ ಪರಿ ಚಿಮುಕಿಸುವಿಕೆ! (4)
9.ಆಧ್ಯಾತ್ಮಿಕ ಜ್ಞಾನದ ಅರಿವು ಸಾರದೊಳಗಿದೆ (4)
11.ಅದೇ ತಾನೆ ಕಡೆದ ಹೊಸ ಬೆಣ್ಣೆ (4)
12.ದಂಪತಿಗಳು ಹಬ್ಬಿಸಿರುವ ಗಾಳಿಸುದ್ದಿ! (3)
13.ವಿರಾಜಮಾನವಾಗಿರುವ ದೊರೆ (2)
15.ದಡಕ್ಕನೆ ನೋಡಿದ ತಟ! (2)



5762ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅತ್ತರು 2.ಒಕ್ಕು
3.ವಾತಾಯನ 4.ಬಂಧನ 5.ಕೆನೆ
7.ಶ್ರೀನಿವಾಸರಾಮಾನುಜನ್
10.ಧಾಮ 12.ಶತಕ
13.ಹರಿವಾಣ 14.ಹುಂಡಿ
15.ಗದಗ

ಮೇಲಿಂದ ಕೆಳಕ್ಕೆ:
1.ಅಪಧಮನಿ 2.ಒನಕೆ
3.ವಾಲ್ಮೀಕಿರಾಮಾಯಣ
6.ಜೇನು 8.ವಾಣಿ
9.ಜಲತರಂಗ 11.ಮಹಡಿ

ಸುಡೊಕು 6148

9		3		6				2
	4						5	
	1			5		6		4
	8			1		4		
3		4	2		7		8	
	9		4		3			6
6		5					2	
				7		3		1
1		8	9		6		4	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6147 ಸುಡೊಕು

7	8	4	2	5	3	9	6	1
1	9	2	6	8	4	5	7	3
6	5	3	1	7	9	8	2	4
5	3	8	9	2	7	4	1	6
9	1	6	4	3	8	7	5	2
4	2	7	5	1	6	3	8	9
2	4	5	7	9	1	6	3	8
8	6	1	3	4	5	2	9	7
3	7	9	8	6	2	1	4	5

1. ಕಾಳಜಿ ಕೇಂದ್ರದಲ್ಲಿರುವ ಮಕ್ಕಳನ್ನು ಆಟದಲ್ಲಿ ತೊಡಗಿಸಿಕೊಂಡು ನೋವು ಮರೆಸಲು ಪ್ರಯತ್ನಿಸುತ್ತಿರುವ ಆಪ್ತಸಮಾಲೋಚಕರು 2. ಭೂಕುಸಿತದಲ್ಲಿ ಸಾವಿಗೀಡಾದವರ, ಗುರುತು ಪತ್ತೆಯಾಗದ 8 ದೇಹಗಳನ್ನು ಚೂರಲ್‌ಮಲ ಸಮೀಪದ ಪೂತ್ತುಮಲದಲ್ಲಿರುವ ಹ್ಯಾರಿಸನ್ಸ್ ಮಲಯಾಳಂ ಪ್ಲಾಂಟೇಷನ್ ಕಾರ್ಪೊರೇಷನ್‌ನ 64 ಸೆಂಟ್ ಜಾಗದಲ್ಲಿ ಭಾನುವಾರ ರಾತ್ರಿ ಸಂಸ್ಕರಿಸಲಾಯಿತು —ಪ್ರಜಾವಾಣಿ ಚಿತ್ರಗಳು/ಫಕ್ರುದ್ದೀನ್ ಎಚ್.

ಕಾಳಜಿ ಕೇಂದ್ರಗಳ ಸಾಂತ್ವನದ ನಡುವೆ ನೋವಿನಲ್ಲಿ ಮುದುಡಿದ ಜೀವಗಳು

ಬೆಚ್ಚಿಬೀಳಿಸುತ್ತಿರುವ ಊರ ನೆನಪು

• ವಿಕ್ರಂ ಕಾಂತಿಕೆರೆ

ಕಲ್ಪೆಟ್ಟ (ವಯನಾಡ್ ಜಿಲ್ಲೆ): ಚೂರಲ್‌ಮಲದಲ್ಲಿ ವಾಸವಾಗಿದ್ದ ಸಿಸಿಲಿ ಅವರಿಗೆ ಹೃದ್ರೋಗವಿದೆ. ಎಕೊ ಮಾಡಿಸಬೇಕು ಎಂದು ವೈದ್ಯರು ಬರೆದುಕೊಟ್ಟಿದ್ದರು. ಮೇಪ್ಪಾಡಿ ಕಿರಿಯ ಪ್ರಾಥಮಿಕ ಶಾಲೆಯ ಕಾಳಜಿ ಕೇಂದ್ರದಲ್ಲಿರುವ ಅವರು, ಭಾನುವಾರ ಆಸ್ಪತ್ರೆಗೆ ಹೋಗಲು ಸಜ್ಜಾಗಿ ಮಗ ಬರಲಿ ಎಂದು ಕಾಯುತ್ತಿದ್ದರು. ಆದರೆ ಡಿಎಂ ವಿಮ್ಸ್ ಆಸ್ಪತ್ರೆಯ ಸಿಬ್ಬಂದಿ ಸ್ವಂತ ತಾಯಿ ಎಂಬಂತೆ ಅವರನ್ನು ಕರೆದುಕೊಂಡು ಹೋದರು.

ಚೂರಲ್‌ಮಲದ ಖದೀಜ ಮತ್ತು ಜಮಾಲ್ ದಂಪತಿಯೂ ಇದೇ ಕಾಳಜಿ ಕೇಂದ್ರದಲ್ಲಿದ್ದಾರೆ. ಬೆನ್ನುನೋವು, ಕಾಲುನೋವು, ಮಧುಮೇಹ, ರಕ್ತದೊತ್ತಡ ಇತ್ಯಾದಿ ಸಮಸ್ಯೆ ಇಬ್ಬರನ್ನೂ ಕಾಡುತ್ತಿದೆ. ಕಾಳಜಿ ಕೇಂದ್ರದ ಸಿಬ್ಬಂದಿ ಆಗಾಗ ಬಂದು ಔಷಧಿ ಸೇವಿಸುವಂತೆ ಹೇಳುತ್ತಿದ್ದರು. ಔಷಧಿ ತೆಗೆದುಕೊಳ್ಳುವವರೆಗೂ ಅವರ ಒತ್ತಾಯ ಮುಂದುವರಿಯಿತು.

ನಾಲ್ಕು ಊರುಗಳನ್ನು ಸರ್ವನಾಶ ಮಾಡಿದ ಭೂಕುಸಿತದಲ್ಲಿ ಸಂಬಂಧಿಕರು, ಆಪ್ತರು ಮತ್ತು ಮನೆಗಳನ್ನು ಕಳೆದುಕೊಂಡು ಕಾಳಜಿ ಕೇಂದ್ರಗಳಲ್ಲಿ ಕಳೆಯುತ್ತಿರುವವರಿಗೆ ಇಂಥ ಆಪ್ತ ಆರೈಕೆ ಸಿಗುತ್ತಿದೆ. ಈ ಸಂದರ್ಭದಲ್ಲಿ ಕೆಲವು ನಿಮಿಷ ನೋವು ಮರೆಯುವ ಅವರು, ಕ್ಷಣಾರ್ಧದಲ್ಲಿ ದುರಿತ ತಂದ ಕುಸಿತದ ಆ ದಿನಗಳನ್ನು ನೆನೆದು ಬೆಚ್ಚಿಬೀಳುತ್ತಾರೆ.

ದುರಂತದ ನೆಲದಿಂದ

ಅವರ ಬಳಿ ದುರಂತವನ್ನು ವಿವರಿಸಲು ಪದಗಳಿಲ್ಲ. ಆದರೆ ಜನಿಸಿ ಬೆಳೆದ ಊರಿನ ಬಗ್ಗೆ ಹೇಳಲು ನೂರಾರು ಕಥೆಗಳಿವೆ. ಅಂಥ ಊರನ್ನು ಮರೆಯಲು ಅವರೀಗ ಪ್ರಯತ್ನಿಸುತ್ತಿದ್ದಾರೆ. ಇನ್ನೆಷ್ಟು ಕಾಲ ಕಳೆದರೂ ದುರಂತದ ಆ ದಿನಗಳನ್ನು, ಕಣ್ಣಮುಂದೆಯೇ ಕಳೆದುಹೋದವರನ್ನು ಮರೆಯಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ.

ಬದುಕುಳಿದರೂ ಮೊಯ್ದು ಈಗ ಅತಂತ್ರ

ಮೊಯ್ದು ಓಳಪರಂಬನ್

ಮಗಳು ಮತ್ತು ಮೊಮ್ಮಗನನ್ನು ಅತ್ಯಂತ ಸಾಹಸದಿಂದ ಉಳಿಸಿದ ಚೂರಲ್‌ಮಲ ಪಟ್ಟಣದ ಎದುರಿನ ಮನೆಯಲ್ಲಿ ವಾಸವಾಗಿದ್ದ ಮೊಯ್ದು ಓಳಪರಂಬನ್, ಬದುಕಿ ಉಳಿದರೂ ಅತಂತ್ರ. 68 ವರ್ಷ ವಯಸ್ಸಿನ ಅವರು, ದುರಂತದ ಸಂದರ್ಭದಲ್ಲಿ ನಡೆಸಿದ ಹೋರಾಟದಿಂದ ಕಾಲುಗಳಿಗೆ ದೊಡ್ಡ ಗಾಯಗಳಾಗಿವೆ. ದೇಹವೂ ಸೋತಿದೆ.

‘ಭೂಕುಸಿತ ಉಂಟಾದ ವಿಷಯ ತಿಳಿದು ಮಗಳು ರಮ್ಸೀಲಾ ಮತ್ತು ಆಕೆಯ ಮಗು ಹನ್ಸಲ್‌ನನ್ನು ಹಿಡಿದುಕೊಂಡು ಓಡಿದೆ. ಬಾಗಿಲು ತೆಗೆಯುವಷ್ಟರಲ್ಲಿ ಎದೆಯ ಮಟ್ಟಕ್ಕೆ ಕೆಸರು ತುಂಬಿತು. ಅವರಿಬ್ಬರನ್ನು ಗಟ್ಟಿಯಾಗಿ ಹಿಡಿದುಕೊಂಡೆ. ಮೂವರೂ ಹೇಗೋ ಉಳಿದೆವು. ಈಗ ಮನಸ್ಸು ಮರಗಟ್ಟಿದೆ. ಏನೊಂದೂ ಗೊತ್ತಾಗುತ್ತಿಲ್ಲ. ಮಗಳು ಮತ್ತು ಮೊಮ್ಮಗನನ್ನು ಹೇಗೆ ಸಾಕುವುದು ಎಂದೇ ತಿಳಿಯುತ್ತಿಲ್ಲ’ ಎಂದು ಅವರು ಹೇಳಿದರು.

ಚೂರಲ್‌ಮಲ ಶಾಲೆಯ ಸಮೀಪದ ರಸ್ತೆಯ ಬದಿಯಲ್ಲಿ ಮನೆ ಇದ್ದ ಜಮಾಲ್ ಮತ್ತು ಖದೀಜ ಅವರ ಕುಟುಂಬದವರೆಲ್ಲರೂ ಬದುಕಿ ಉಳಿದಿದ್ದಾರೆ. ಆದರೆ ಖದೀಜ ಅವರ ದೊಡ್ಡಪ್ಪನ ಕುಟುಂಬ ಸೇರಿದಂತೆ ನಾಲ್ಕು ಮನೆಗಳ 22 ಮಂದಿ ಒಮ್ಮೆಲೇ ಇಲ್ಲವಾಗಿದ್ದಾರೆ. ಇವರ ಪೈಕಿ ಕೆಲವರ ದೇಹ ಮಾತ್ರ ಸಿಕ್ಕಿದೆ. ಉಳಿದವರ ಬಗ್ಗೆ ಯಾವ ಮಾಹಿತಿಯೂ ಇಲ್ಲ ಎಂದು ಹೇಳುವಷ್ಟರಲ್ಲಿ ಖದೀಜ ಭಾವುಕರಾದರು. ಬಿಕ್ಕಿಬಿಕ್ಕಿ ಅತ್ತು ‘ಮಾತ್ರೆ ಸೇವಿಸುವುದಕ್ಕಿದೆ’ ಎಂದು ಹೇಳಿ ಅತ್ತ ಸಾಗಿದರು.

‘ಭೂಕುಸಿತ ಉಂಟಾಗುವ ಹಿಂದಿನ ರಾತ್ರಿ ನಮ್ಮ ಮನೆಯ ಹಿಂದೆ ಕೆಸರು ಮಿಶ್ರಿತ ನೀರು ಕಂಡಿದ್ದೆವು. ಸಂದೇಹಗೊಂಡು ಎಲ್ಲರೂ ಮೇಪ್ಪಾಡಿಯ ಕೋಟ್ಟತ್ತರವಯಲ್‌ನಲ್ಲಿರುವ ಮಗಳ ಮನೆಗೆ ಬಂದು ಆಶ್ರಯ ಪಡೆದೆವು. 2018ರಲ್ಲಿ ಉಂಟಾದ ದುರಂತದ ಸಂದರ್ಭದಲ್ಲಿ ಮಗಳ ಮನೆಯವರು ಮೇಪ್ಪಾಡಿಗೆ ಬಂದು ನೆಲೆಸಿದ್ದರು. ಆಕೆಯ ಮನೆಗೆ ಬಂದ ಕಾರಣ ನಾವೆಲ್ಲರೂ ಉಳಿದೆವು’ ಎಂದು ಜಮಾಲ್ ಹೇಳಿದರು.

> **12 ಮಂದಿ ಆಪ್ತ ಸಮಾಲೋಚಕರು ಮಲಪ್ಪುರಂ ಜಿಲ್ಲೆಯಿಂದ ಬಂದಿದ್ದೇವೆ. ಮಕ್ಕಳನ್ನು ಆಘಾತದಿಂದ ಹೊರತರುವುದೇ ನಮ್ಮ ಮುಖ್ಯ ಉದ್ದೇಶ**
> **ಧನ್ಯಾ ಆಬಿದ್,** ಆಪ್ತ ಸಮಾಲೋಚಕಿ

ಆಸರೆ ಪಡೆದ ಮನೆಯೇ ನಾಶ: ಖದೀಜ ಅವರ ದೊಡ್ಡಪ್ಪ ಮತ್ತು ಕುಟುಂಬ ಮುಂಡಕ್ಕೈಯಲ್ಲಿದ್ದರು. ಹಿಂದಿನ ದಿನ ಸಣ್ಣದೊಂದು ಕುಸಿತ ಸಂಭವಿಸಿದ್ದರಿಂದ ಹೆದರಿ ಗುಡ್ಡ ಇಳಿದು ಚೂರಲ್‌ಮಲದ ಸಂಬಂಧಿಕರ ಮನೆಯಲ್ಲಿ ಆಸರೆ ಪಡೆದಿದ್ದರು. ಆದರೆ ಆ ಮನೆ ಮತ್ತು ಅಲ್ಲಿದ್ದವರೆಲ್ಲರನ್ನೂ ಕೆಸರುನೀರು ಕೊಚ್ಚಿಕೊಂಡು ಹೋಗಿದೆ.

ಖದೀಜ ಮತ್ತು ಶರೀಫಾ ಅಕ್ಕಪಕ್ಕದ ನಿವಾಸಿಗಳು. 2018ರಲ್ಲಿ ಉಂಟಾದ ಪುತ್ತುಮಲ ಭೂಕುಸಿತದಲ್ಲಿ ಬಚಾವಾದ ಶರೀಫಾ ಮತ್ತು ಕುಟುಂಬದವರು ಚೂರಲ್‌ಮಲ ಪ್ರದೇಶಕ್ಕೆ ಬಂದಿದ್ದರು. ಗುಡ್ಡಕುಸಿತದಲ್ಲಿ ಭಾರಿ ಪ್ರಮಾಣದ ನೀರು ಬರುವುದು ಕಂಡು ಗುಡ್ಡ ಹತ್ತಿ ಓಡಿಹೋಗಿ ಯಾರದೋ ಮನೆಯಲ್ಲಿ ಆಶ್ರಯ ಪಡೆದು ಕಾಳಜಿ ಕೇಂದ್ರಕ್ಕೆ ತಲುಪಿದ್ದಾರೆ.

‘ನಮ್ಮದು ಹೆಂಚು ಹಾಸಿದ ಸಣ್ಣ ಮನೆ. ಅದರ ಒಂದು ಭಾಗಕ್ಕೆ ಮಾತ್ರ ಹಾನಿಯಾಗಿದೆ. ಆದರೆ ಸ್ವಲ್ಪ ದೂರ ಸಂಬಂಧಿಕರಿದ್ದರು. ಅವರದು ಎರಡು ಮಹಡಿ ಮನೆ. ಅದು ಪೂರ್ಣ ಕೊಚ್ಚಿಕೊಂಡು ಹೋಗಿದೆ. ಜೊತೆಯಲ್ಲಿದ್ದ ಯಾರೂ ಈಗ ನಮ್ಮ ಊರಿನಲ್ಲಿ ಇಲ್ಲ. ಆದ್ದರಿಂದ ಇನ್ನು ಅತ್ತ ತೆರಳುವ ಪ್ರಶ್ನೆಯೇ ಇಲ್ಲ’ ಎಂದು ಶರೀಫಾ ಹೇಳಿದರು.

ನನ್ನಮ್ಮನ ಕಂಡವರಿಹರೇ...?

ಕಂಡೋ ನಾಟ್ಟಾರೆ
ಕಂಡೋ ಎನ್ ನಾಟ್ಟಾರೆ
ಉಣ್ಣೀಡೆ ಅಮ್ಮಯೆ ಕಂಡೋರುಂಡೊ...
(ಓ ನಾಡಜನರೇ ಓ ಎನ್ನ ಪ್ರೀತಿಯ ಜನಗಳೇ
ನನ್ನಮ್ಮನ ಎಲ್ಲಾದರೂ ಕಂಡವರಿಹರೇ...)

ಎಂಟು ವರ್ಷದ ಅಮರ್‌ಜೀತ್ ಜೋರಾಗಿ ಹಾಡಿದಾಗ ಮೇಪ್ಪಾಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಇದ್ದವರೆಲ್ಲರ ಕಣ್ಣಂಚಿನಿಂದ ನೀರು ಜಿನುಗಿತು.

ದುರಂತದಲ್ಲಿ ಸಂಬಂಧಿಕರನ್ನು ಕಳೆದುಕೊಂಡು ಕಾಳಜಿ ಕೇಂದ್ರ ಸೇರಿರುವ ಮಕ್ಕಳಲ್ಲಿ ಭರವಸೆ ಮೂಡಿಸಿ, ಅವರನ್ನು ನವಜೀವನದತ್ತ ಕರೆದುಕೊಂಡು ಬರಲು ಕೇರಳ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವತಿಯಿಂದ ಆಪ್ತ ಸಮಾಲೋಚನೆ ಮಾಡುತ್ತಿರುವ ಕಾರ್ಯಕರ್ತರು ಶನಿವಾರ ಮಧ್ಯಾಹ್ನ ಏರ್ಪಡಿಸಿದ್ದ ಮನರಂಜನಾ ಕಾರ್ಯಕ್ರಮದಲ್ಲಿ ಚೂರಲ್‌ಮಲ ಸರ್ಕಾರಿ ಶಾಲೆಯ ಅಮರ್‌ಜೀತ್ ಮಿಮಿಕ್ರಿಯ ನಂತರ ಈ ನಾಡನ್ ಪಾಟ್ಟ್ (ಜಾನಪದ ಗೀತೆ) ಹಾಡಿದರು.

ತಂದೆ ತಾಯಿಯನ್ನು ಕಳೆದುಕೊಂಡ ಅನೇಕ ಮಕ್ಕಳು ಅಲ್ಲಿದ್ದರು. ಒಂಬತ್ತು ಮಂದಿಯನ್ನು ಕಳೆದುಕೊಂಡ ಕುಟುಂಬದ ಕುಡಿಗಳೂ ಅಲ್ಲಿದ್ದವು. ಆಪ್ತಸಮಾಲೋಚಕಿಯರು ಹೇಳಿಕೊಟ್ಟ ಆಟದಲ್ಲಿ ಪಾಲ್ಗೊಂಡ ಅವರು ಆಟದ ನಡುವಿನ ಬಿಡುವಿನಲ್ಲಿ ಅಂತರ್ಮುಖಿಯಾಗುತ್ತಿದ್ದುದನ್ನು ಗಮನಿಸಿದ ಎಲ್ಲರ ಕಣ್ಣಂಚಿನಲ್ಲೂ ನೀರು ಜಿನುಗುತ್ತಿತ್ತು. ನನ್ನಮ್ಮನ ಕಂಡಿದ್ದೀರಾ ಎಂದು ಅಮರ್‌ಜೀತ್ ಹಾಡಿದಾಗ ಆ ಕಣ್ಣೀರ ಕಟ್ಟೆ ಒಡೆಯಿತು.

ಪ್ರಪಾತದಲ್ಲಿ ಕಾರು, ಸೈಕಲ್, ಸಿಲಿಂಡರ್

ಮುಂಡಕ್ಕೈ ಗುಡ್ಡದ ತುದಿಯ ಪುಂಜಿರಿಮಟ್ಟಂ ಭಾಗದಿಂದ ಒಡೆದು ಬಂದ ಕೆಸರು ಮಣ್ಣು, ಕೆಳಗುರುಳಿದ ಬಂಡೆಕಲ್ಲುಗಳ ಪ್ರಹಾರಕ್ಕೆ ಸಿಲುಕಿ ಎಂಟು ಕಿಲೋಮೀಟರ್ ವರೆಗಿನ ಪ್ರದೇಶ ನಾಶವಾಗಿದೆ. ಚೂರಲ್‌ಮಲದ ಇಳಿಜಾರು ಪ್ರದೇಶದಿಂದ ಇನ್ನಷ್ಟು ಮನುಷ್ಯರು, ಮನೆ ಮತ್ತು ಸಾಮಗ್ರಿ ಕೊಚ್ಚಿಕೊಂಡು ಹೋದ ಕೆಸರುನೀರು, ಐದು ಕಿಲೊಮೀಟರ್ ದೂರದಲ್ಲಿರುವ ಸೂಜಿಕ್ಕಲ್ಲು ಜಲಪಾತದಿಂದ ಧುಮುಕಿ ಮುಂದೆ ಸಾಗಿದೆ.

ಸೂಜಿಕ್ಕಲ್ಲು ಪ್ರದೇಶದಲ್ಲಿ ಮೂರು ಜಲಪಾತಗಳಿದ್ದು ಮೊದಲ ಜಲಪಾತದ ನೀರು ಸುಮಾರು 100 ಅಡಿಗಳಷ್ಟು ಮೇಲಿಂದ ಬಿದ್ದು ಮುಂದೆ ಹರಿಯುವ ಜಾಗದಲ್ಲಿ ಕಾರು, ಮಕ್ಕಳ ಸೈಕಲ್, ಮನೆ ಸಾಮಗ್ರಿ, ಅನೇಕ ಗ್ಯಾಸ್ ಸಿಲಿಂಡರ್‌ಗಳು ಬಿದ್ದುಕೊಂಡಿವೆ.

ಗುರುತು ಪತ್ತೆಗೆ ಡಿಎನ್‌ಎ ಪರೀಕ್ಷೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ವಯನಾಡ್ ಭೂಕುಸಿತದ ಅವಘಡದಲ್ಲಿ ಮೃತಪಟ್ಟವರ ಸಂಖ್ಯೆ 221ಕ್ಕೆ ಏರಿದ್ದು, ಇನ್ನೂ ಸುಮಾರು 180 ಮಂದಿ ನಾಪತ್ತೆಯಾಗಿದ್ದಾರೆ.

ಇದುವರೆಗೆ 171 ಶವಗಳ ಗುರುತು ಪತ್ತೆಯಾಗಿದೆ. ಉಳಿದ ಮೃತರ ಗುರುತು ಪತ್ತೆಗೆ ಡಿಎನ್‌ಎ ಪರೀಕ್ಷೆ ನಡೆಸುವ ಪ್ರಕ್ರಿಯೆಗೆ ಸರ್ಕಾರ ಮುಂದಾಗಿದೆ.

ಮೃತರಲ್ಲಿ 37 ಮಕ್ಕಳು, 87 ಮಂದಿ ಮಹಿಳೆಯರು ಸೇರಿದ್ದಾರೆ. ಚಾಲಿಯಾರ್ ನದಿಯಲ್ಲಿ 166 ಅಂಗಾಂಗಗಳು ಸಿಕ್ಕಿವೆ. ಅನಧಿಕೃತವಾಗಿ ಮೃತರ ಸಂಖ್ಯೆ 375ಕ್ಕೆ ಏರಿದಂತಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಾಪತ್ತೆಯಾದವರ ಪತ್ತೆಗೆ ಭಾನುವರವೂ ಚಾಲಿಯಾರ್ ನದಿಯ 40 ಕಿ.ಮೀ. ವ್ಯಾಪ್ತಿ ಹಾಗೂ ಭೂಕುಸಿತದ ಪ್ರದೇಶದಲ್ಲಿ ತೀವ್ರ ಶೋಧ ನಡೆದಿದ್ದು, ಎರಡು ಶವ ಮತ್ತು 9 ಅಂಗಾಂಗಗಳು ಪತ್ತೆಯಾದವು.

ರಕ್ಷಣಾ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿರುವ ಅಧಿಕಾರಿಯೊಬ್ಬರು, ‘ನದಿಯಲ್ಲಿ ಕೊಚ್ಚಿಹೋಗಿರುವವರು ವನ್ಯಜೀವಿಗಳಿಗೆ ಸಿಕ್ಕಿರುವ ಸಾಧ್ಯತೆ ತಳ್ಳಿಹಾಕಲಾಗದು. ಆದರೆ, ಈ ವಲಯದಲ್ಲಿ ಮನುಷ್ಯನನ್ನು ತಿನ್ನಬಹುದಾದ ವನ್ಯಜೀವಿಗಳು ಕಡಿಮೆ’ ಎಂದು ಹೇಳಿದರು.

ನದಿಯಲ್ಲಿ ಅಲ್ಲದೆ, ಸೂಚಿಪರ ಜಲಪಾತದ ಬಳಿಯೂ ಶೋಧ ಕಾರ್ಯ ನಡೆದಿದೆ. 2019ರಲ್ಲಿ ಪುತ್ತುಮಲ ಬಳಿ ಸಂಭವಿಸಿದ್ದ ಭೂಕುಸಿತದ ವೇಳೆ ಈ ಜಲಪಾತದಲ್ಲಿ ಅನೇಕ ಶವಗಳು ಪತ್ತೆಯಾಗಿದ್ದವು. ಆಗ ನಾಪತ್ತೆಯಾದವರ ಐವರ ಶವಗಳು ಇನ್ನೂ ಪತ್ತೆಯಾಗಿಲ್ಲ ಎಂದು ಅಧಿಕಾರಿಯೊಬ್ಬರು ಹೇಳಿದರು.

ಪಡಿತರ ಚೀಟಿ ಆಧರಿಸಿ ಕುಟುಂಬ ಸದಸ್ಯರಿಂದ ಮಾಹಿತಿ ಪಡೆದು ನಾಪತ್ತೆಯಾದವರ ಮಾಹಿತಿ ಕ್ರೋಡೀಕರಿಸುವ ಕಾರ್ಯವನ್ನು ಸರ್ಕಾರ ಕೈಗೊಂಡಿದೆ. ಪ್ರಾಥಮಿಕ ಅಂದಾಜಿನ ಪ್ರಕಾರ, ಭೂಕುಸಿತ ನಡೆದ ಪ್ರದೇಶದಲ್ಲಿ 1,721 ಕುಟುಂಬಗಳಿದ್ದು, 4,833 ಜನರಿದ್ದರು.

ತೀವ್ರ ಶೋಧ ಕಾರ್ಯದ ನಂತರವೂ ಶವಗಳು ಪತ್ತೆಯಾಗದೇ ಇದ್ದರೆ, ಸರ್ಕಾರ ತನ್ನ ವಿಶೇಷಾಧಿಕಾರವನ್ನು ಬಳಸಿ ನಾಪತ್ತೆ ಆದವರನ್ನು ಮೃತಪಟ್ಟಿದ್ದಾರೆ ಎಂದು ಘೋಷಿಸಬಹುದಾಗಿದೆ ಎಂದು ಮೂಲಗಳು ತಿಳಿಸಿವೆ.

ದೇಣಿಗೆ ನೀಡಿದ ಕಬಡ್ಡಿ ಪಟು

ಪ್ರಜಾವಾಣಿ ವಾರ್ತೆ

ಶ್ರೇಯಾ ಮತ್ತು ಶ್ರವಂತ್

ರಿಪ್ಪನ್‌ಪೇಟೆ: ಕೇರಳದ ವಯನಾಡಿನಲ್ಲಿ ಭಾರಿ ಮಳೆಯಿಂದ ಸಂಭವಿಸಿದ ಭೂ ಕುಸಿತದಿಂದ ಹಾನಿಗೊಳಗಾದ ಸಂತ್ರಸ್ತರಿಗೆ ಇಲ್ಲಿನ ರಾಮಕೃಷ್ಣ ಪ್ರೌಢಶಾಲೆಯ 9ನೇ ತರಗತಿಯ ವಿದ್ಯಾರ್ಥಿನಿ, ಕಬಡ್ಡಿ ಪಟು ಆರ್. ಶ್ರೇಯಾ ಹಾಗೂ ಆಕೆಯ ಸೋದರ ಶ್ರವಂತ್ ₹ 15,000 ದೇಣಿಗೆ ನೀಡಿದ್ದಾರೆ.

ಈಚೆಗೆ ಹೈದರಾಬಾದ್‌ನಲ್ಲಿ ನಡೆದ 14 ವರ್ಷದೊಳಗಿನ ಬಾಲಕಿಯರ ಕಬಡ್ಡಿ ಪಂದ್ಯಾವಳಿಯಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸಿದ್ದ ಶ್ರೇಯಾ ಹಾಗೂ ಇದೇ ಶಾಲೆಯ 10ನೇ ತರಗತಿ ವಿದ್ಯಾರ್ಥಿ ಶ್ರವಂತ್ ಅವರು ಗ್ರಾಮದ ಸವಿತಾ ಮತ್ತು ರಾಘವೇಂದ್ರ ಅವರ ಮಕ್ಕಳು.

ರಾಜ್ಯ ತಂಡ ಪ್ರತಿನಿಧಿಸಿದ್ದ ಶ್ರೇಯಾಗೆ ರಾಜ್ಯ ಸರ್ಕಾರದಿಂದ ₹ 10,000 ಕ್ರೀಡಾ ವಿದ್ಯಾರ್ಥಿವೇತನ ದೊರೆತಿತ್ತು. ಅದರೊಂದಿಗೆ ಶ್ರವಂತ್ ಕೂಡಿಟ್ಟ ₹ 5,000 ಸೇರಿಸಿ ಇಲ್ಲಿನ ನಾಡಕಚೇರಿಯಲ್ಲಿ ಭಾನುವಾರ ತಹಶೀಲ್ದಾರ್ ರಶ್ಮಿ ಹಾಲೇಶ್ ಅವರ ಮೂಲಕ ವಯನಾಡ್ ಸಂತ್ರಸ್ತರ ನಿಧಿಗೆ ದೇಣಿಗೆ ನೀಡಿದರು.

‘ರಾಷ್ಟ್ರೀಯ ವಿಪತ್ತು; ಅವಕಾಶವಿಲ್ಲ’

ತಿರುವನಂತಪುರ (ಪಿಟಿಐ): ವಯನಾಡ್ ಭೂಕುಸಿತವನ್ನು ‘ರಾಷ್ಟ್ರೀಯ ವಿಪತ್ತು’ ಎಂಬುದಾಗಿ ಘೋಷಿಸಲು ಅವಕಾಶವಿಲ್ಲ ಎಂದು ಬಿಜೆಪಿ ಮುಖಂಡ ವಿ.ಮುರಳೀಧರನ್ ಹೇಳಿದ್ದಾರೆ.

ಭೂಕುಸಿತವನ್ನು ‘ರಾಷ್ಟ್ರೀಯ ವಿಪತ್ತು’ ಎಂದು ಘೋಷಿಸುವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿದಂತೆ ಹಲವರು ಮುಂದಿಟ್ಟಿರುವ ಬೇಡಿಕೆಗೆ ಬಿಜೆಪಿಯು ಭಾನುವಾರ ಪ್ರತಿಕ್ರಿಯಿಸಿದೆ.

‘ಅಂತಹ ಪರಿಕಲ್ಪನೆಯು ಕೇಂದ್ರ ಸರ್ಕಾರದ ಮಾರ್ಗಸೂಚಿಗಳಡಿ ಅಸ್ತಿತ್ವದಲ್ಲಿಲ್ಲ. ಯುಪಿಎ ಸರ್ಕಾರದ ಅವಧಿಯಿಂದಲೂ ಈ ನೀತಿ ಬದಲಾಗಿಲ್ಲ’ ಎಂದು ಮುರಳೀಧರನ್ ಅವರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

‘ಪ್ರಾಕೃತಿಕ ವಿಕೋಪವನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಲು ಯಾವುದೇ ಅವಕಾಶವಿಲ್ಲ ಎಂದು 2013ರಲ್ಲಿ ಅಂದಿನ ಕೇಂದ್ರ ಸಚಿವರಾಗಿದ್ದ ಮುಲ್ಲಪ್ಪಳ್ಳಿ ರಾಮಚಂದ್ರನ್ ಅವರು ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಹೇಳಿದ್ದರು’ ಎಂಬ ಅಂಶವನ್ನೂ ಪೋಸ್ಟ್ ಮಾಡಿದ್ದಾರೆ.

‘ರಾಷ್ಟ್ರೀಯ ವಿಪತ್ತು’ ಎಂಬ ಅಧಿಕೃತ ಹೆಸರು ಇಲ್ಲದಿದ್ದರೂ, ಪ್ರತಿಯೊಂದು ಪ್ರಾಕೃತಿಕ ವಿಕೋಪವನ್ನೂ ಅದರ ತೀವ್ರತೆಗೆ ಅನುಗುಣವಾಗಿ ನಿರ್ವಹಿಸಲಾಗುತ್ತದೆ’ ಎಂದರು.

ಚಿರಂಜೀವಿ ₹1 ಕೋಟಿ ದೇಣಿಗೆ

ಚಿರಂಜೀವಿ

ಹೈದರಾಬಾದ್ (ಪಿಟಿಐ): ವಯನಾಡ್‌ನಲ್ಲಿ ಸಂಭವಿಸಿದ ಭೂಕುಸಿತದಿಂದಾಗಿ ಸಂಕಷ್ಟದಲ್ಲಿರುವ ಸಂತ್ರಸ್ತರಿಗೆ ನೆರವಾಗಲು ₹1 ಕೋಟಿ ದೇಣಿಗೆ ನೀಡುವುದಾಗಿ ನಟ ಚಿರಂಜೀವಿ ಮತ್ತು ಅವರ ಪುತ್ರ ರಾಮ್ ಚರಣ್ ತಿಳಿಸಿದ್ದಾರೆ.

ಚಿರಂಜೀವಿ ಅವರು ‘ಎಕ್ಸ್’ನಲ್ಲಿ, ‘ಸಾವು–ನೋವು ತೀವ್ರ ವೇದನೆ ಉಂಟು ಮಾಡಿದೆ. ಚರಣ್ ಮತ್ತು ನಾನು ಜೊತೆಯಾಗಿ ಮುಖ್ಯಮಂತ್ರಿ ಅವರ ವಿಪತ್ತು ಪರಿಹಾರ ನಿಧಿಗೆ ₹1 ಕೋಟಿ ನೀಡುತ್ತಿದ್ದೇವೆ. ಸಂತ್ರಸ್ತರು ನೋವಿನಿಂದ ಶೀಘ್ರ ಹೊರಬರಲಿ ಎಂದು ಪ್ರಾರ್ಥಿಸುತ್ತೇನೆ’ ಎಂದಿದ್ದಾರೆ.

ತೆಲುಗು ನಟ ಅಲ್ಲು ಅರ್ಜುನ್ ಅವರೂ ಕೇರಳ ಮುಖ್ಯಮಂತ್ರಿ ಪರಿಹಾರ ನಿಧಿಗೆ ₹25 ಲಕ್ಷ ದೇಣಿಗೆ ನೀಡಿದ್ದಾರೆ. ‘ಕೇರಳದ ಜನರು ನನಗೆ ಪ್ರೀತಿ ನೀಡುತ್ತಾರೆ. ಭಾರಿ ಭೂಕುಸಿತದಿಂದ ನಲುಕಿರುವ ವಯನಾಡ್ ನೋಡಿದರೆ ಮನಸ್ಸಿಗೆ ಗಾಸಿಯಾಗುತ್ತದೆ. ಕಂಗೆಟ್ಟ ಕುಟುಂಬಗಳು ಮತ್ತೆ ಬದುಕು ಕಟ್ಟಿಕೊಳ್ಳಬೇಕಿದೆ. ಅವರಿಗೆ ಧೈರ್ಯ ತುಂಬಲು ನೆರವು ನೀಡಿದ್ದೇನೆ’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಪೊಲೀಸ್ ಕಾರ್ಯಕ್ಕೆ ಮೆಚ್ಚುಗೆ

ಪಿಣರಾಯಿ ವಿಜಯನ್

ತ್ರಿಶ್ಶೂರ್ (ಪಿಟಿಐ): ವಯನಾಡ್ ಜಿಲ್ಲೆಯ ಭೂಕುಸಿತದ ಸ್ಥಳಗಳಲ್ಲಿ ಕೆಚ್ಚೆದೆಯಿಂದ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿರುವ ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿಯ ವೃತ್ತಿಪರತೆಯನ್ನು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಭಾನುವಾರ ಶ್ಲಾಘಿಸಿದರು.

ಇದೇ ಸಂದರ್ಭದಲ್ಲಿ ‘ಇದು ರಾಜ್ಯದ ಇತಿಹಾಸದಲ್ಲಿ ಸಂಭವಿಸಿದ ಅತಿ ದೊಡ್ಡ ದುರಂತ’ ಎಂದು ಹೇಳಿದರು.

ಕೇರಳ ಪೊಲೀಸ್ ನಿರ್ಗಮನ ಪಥಸಂಚಲನವನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಭೀಕರ ದುರಂತದಲ್ಲಿ ಉಂಟಾದ ಅನಾಹುತಗಳಿಂದ ರಾಜ್ಯವು ಇನ್ನಷ್ಟೇ ಚೇತರಿಸಿಕೊಳ್ಳಬೇಕಿದೆ’ ಎಂದು ಹೇಳಿದರು.

‘ಪೊಲೀಸ್ ಮತ್ತು ಅಗ್ನಿಶಾಮಕ ದಳವು ದಿಟ್ಟತನದಿಂದ ರಕ್ಷಣಾ ಕಾರ್ಯಾಚರಣೆ ನಡೆಸಿದೆ. ವಯನಾಡ್ ದುರಂತಕ್ಕೆ ಇಡೀ ಜಗತ್ತು ಕಂಬನಿ ಮಿಡಿದಿದೆ. ಮಾನವೀಯತೆಯ ಅನಾವರಣವಾಗಿದೆ’ ಎಂದರು.

ಪೊಲೀಸ್ ಪಡೆಗೆ ಹೊಸದಾಗಿ ಸೇರ್ಪಡೆಯಾದವರನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಉನ್ನತ ವಿದ್ಯಾಭ್ಯಾಸ ಪಡೆದ ಮಹಿಳೆಯರ ಉಪಸ್ಥಿತಿಯು ಪೊಲೀಸ್ ಪಡೆಯ ಬಲವನ್ನು ಹೆಚ್ಚಿಸುತ್ತದೆ’ ಎಂದು ಹೇಳಿದರು.

ಯುಡಿಎಫ್ ಶಾಸಕರಿಂದ ವೇತನ ದೇಣಿಗೆ

ವಿ.ಡಿ.ಸತೀಶನ್

ಕೊಚ್ಚಿ (ಪಿಟಿಐ): ವಯನಾಡ್‌ನ ಭೂಕುಸಿತ ಸಂತ್ರಸ್ತರಿಗೆ ನೆರವಾಗಲು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟದ ಎಲ್ಲ ಶಾಸಕರು ತಿಂಗಳ ವೇತನವನ್ನು ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ ನೀಡಲಿದ್ದಾರೆ.

ಭೂಕುಸಿತ ಬಾಧಿತ ಪ್ರದೇಶಗಳಲ್ಲಿ ರಕ್ಷಣೆ, ಸಂತ್ರಸ್ತರಿಗೆ ನೆರವು ನೀಡಲು ಮೈತ್ರಿಕೂಟವು ಸರ್ಕಾರಕ್ಕೆ ಎಲ್ಲ ನೆರವು ನೀಡಲಿದೆ ಎಂದು ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ಹೇಳಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರಕಟಿಸಿರುವ 100 ಮನೆಗಳ ನಿರ್ಮಾಣ ಹೊರತುಪಡಿಸಿ, ಮೈತ್ರಿ ಪಕ್ಷವಾದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಕೂಡ ಪರಿಹಾರದ ನೆರವು ಪ್ರಕಟಿಸಿದೆ.

ಇದಕ್ಕೂ ಮೊದಲು ಸಿಪಿಎಂ ನೇತೃತ್ವದ ಎಲ್‌ಡಿಎಫ್ ಮೈತ್ರಿಕೂಟವು ವಿಧಾನಸಭೆ ಮತ್ತು ಸಂಸತ್ತಿನಲ್ಲಿರುವ ಮೈತ್ರಿಕೂಟದ ಸದಸ್ಯರು ತಿಂಗಳ ವೇತನವನ್ನು ದೇಣಿಗೆಯಾಗಿ ನೀಡುವರು ಎಂದು ಪ್ರಕಟಿಸಿತ್ತು.

ಕಾಂಗ್ರೆಸ್ ನಾಯಕ ರಮೇಶ್ ಚೆನ್ನಿತ್ತಲ ಅವರು, ಪರಿಹಾರ ನಿಧಿಗೆ ತಿಂಗಳ ವೇತನವನ್ನು ದೇಣಿಗೆ ನೀಡುವುದಾಗಿ ಪ್ರಕಟಿಸಿದ್ದರು.

ಅಮಿತ್ ಶಾ ವಿರುದ್ಧ ಹಕ್ಕುಚ್ಯುತಿ ನೋಟಿಸ್



ಅಮಿತ್ ಶಾ

ನವದೆಹಲಿ: ವಯನಾಡ್‌ನ ಭೂಕುಸಿತ ಕುರಿತು ಕೇರಳ ಸರ್ಕಾರಕ್ಕೆ ಮುನ್ಸೂಚನೆ ನೀಡಿದ್ದರೂ, ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ ಎಂದು ಹೇಳಿಕೆ ನೀಡುವ ಮೂಲಕ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯಸಭೆಯ ದಿಕ್ಕು ತಪ್ಪಿಸಿದ್ದಾರೆ ಎಂದು ಆರೋಪಿಸಿ ಸಿಪಿಎಂ, ಸಿಪಿಐ ಹಕ್ಕುಚ್ಯುತಿ ಮಂಡಿಸಿವೆ. ಕಾಂಗ್ರೆಸ್ ಕೂಡ ಇದೇ ನಿರ್ಧಾರ ತೆಗೆದುಕೊಂಡಿದೆ.

‘ಭೂಕುಸಿತದ ಕುರಿತು ಕೇರಳ ಸರ್ಕಾರಕ್ಕೆ ಎಚ್ಚರಿಕೆ ನೀಡಲಾಗಿತ್ತು, ಸೂಕ್ತ ರೀತಿಯಲ್ಲಿ ಸ್ಪಂದಿಸಿದ್ದರೆ, ಹಲವು ಜೀವಗಳನ್ನು ಉಳಿಸಬಹುದಾಗಿತ್ತು’ ಎಂದು ಬುಧವಾರ ಗಮನಸೆಳೆಯುವ ಸೂಚನೆ ಮಂಡನೆ ವೇಳೆ ಗೃಹ ಸಚಿವ ಅಮಿತ್ ಶಾ ತಿಳಿಸಿದ್ದರು. ಕೇಂದ್ರದ ಆರೋಪವನ್ನು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಸ್ಪಷ್ಟವಾಗಿ ನಿರಾಕರಿಸಿದ್ದರು.

ಸಿಪಿಎಂ ಪರವಾಗಿ ರಾಜ್ಯಸಭಾ ಸಂಸದ ವಿ. ಶಿವದಾಸನ್, ಸಿಪಿಐ ಪಕ್ಷದ ಸದನದ ನಾಯಕ ಪಿ.ಸಂತೋಷ್ ಕುಮಾರ್ ಅವರು ಶನಿವಾರ ಪ್ರತ್ಯೇಕವಾಗಿ ನೋಟಿಸ್ ಸಲ್ಲಿಸಿದ್ದು, ಗೃಹ ಸಚಿವರ ವಿರುದ್ಧ ಹಕ್ಕುಚ್ಯುತಿ ಮಂಡನೆಗೆ ಅವಕಾಶ ನೀಡಬೇಕು ಎಂದು ರಾಜ್ಯಸಭಾ ಸಭಾಪತಿಗೆ ಮನವಿ ಮಾಡಿದ್ದಾರೆ.

ಚಾಲಕನ ಪತ್ತೆಗೆ ಮತ್ತೆ ಪತ್ರ

ತಿರುವನಂತಪುರ: ಶಿರೂರಿನ ಗುಡ್ಡಕುಸಿತದಲ್ಲಿ ಸಿಕ್ಕಿ ಗಂಗಾವಳಿ ನದಿಯಲ್ಲಿ ಕಣ್ಮರೆಯಾಗಿರುವ ಮಲಯಾಳಿ ಲಾರಿ ಚಾಲಕ ಅರ್ಜುನ್‌ಗಾಗಿ ಶೋಧ ಪುನರಾರಂಭಿಸುವಂತೆ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಭಾನುವಾರ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮತ್ತೊಮ್ಮೆ ಒತ್ತಾಯಿಸಿದ್ದಾರೆ.

ಅರ್ಜುನ್ ಅವರ ಕುಟುಂಬದವರನ್ನು ಭೇಟಿ ಮಾಡಿದ ವಿಜಯನ್ ಅವರು, ಶೋಧ ಕಾರ್ಯಾಚರಣೆ ಭಾನುವಾರ ಪುನರಾರಂಭಗೊಳ್ಳಬೇಕಿತ್ತು. ಅದು ಸಾಧ್ಯವಾಗಿಲ್ಲದಿರುವುದು ಗೊತ್ತಾಗಿದೆ. ಶೋಧ ಕಾರ್ಯ ಪುನರಾರಂಭಿಸಲು ಸಿದ್ದರಾಮಯ್ಯ ಅವರು ಖುದ್ದು ಮಧ್ಯ ಪ್ರವೇಶಿಸಬೇಕು ಎಂದು ಒತ್ತಾಯಿಸಿ ಅವರು ಪುನಃ ಪತ್ರ ಬರೆದಿದ್ದಾರೆ.

ಜುಲೈ 16 ರಂದು ಬೆಳಿಗ್ಗೆ 8.45ರ ಸುಮಾರಿಗೆ ಶಿರೂರಿನಲ್ಲಿ ಗುಡ್ಡ ಕುಸಿತ ಅವಘಡ ಸಂಭವಿಸಿತ್ತು. ಘಟನೆ ನಡೆದ ಹತ್ತು ದಿನದ ಬಳಿಕ ಲಾರಿಯ ಕ್ಯಾಬಿನ್ ನದಿ ದಡದಿಂದ 60 ಮೀಟರ್ ದೂರದಲ್ಲಿ, ಐದು ಮೀಟರ್ ಆಳದಲ್ಲಿ ಸಿಲುಕಿರುವುದಾಗಿ ಡ್ರೋಣ್ ತಂತ್ರಜ್ಞಾನದ ಶೋಧ ಯಂತ್ರದಿಂದ ಪತ್ತೆ ಹಚ್ಚಲಾಯಿತು. ಆದರೆ, ಈವರೆಗೂ ಚಾಲಕ ಅರ್ಜುನ್ ಸುಳಿವು ಸಿಕ್ಕಿಲ್ಲ.

ಯುವಕನ ಶವ ಪತ್ತೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಬಿ.ಕೆ. ಕಂಗ್ರಾಳಿಯಲ್ಲಿ ಶನಿವಾರ ರಾತ್ರಿ ಮಾರ್ಕಂಡೇಯ ನದಿಗೆ ಬೈಕ್ ಬಿದ್ದು, ಪ್ರವಾಹದಲ್ಲಿ ತೇಲಿಹೋಗಿದ್ದ ಯುವಕನ ಶವ ಭಾನುವಾರ ಪತ್ತೆಯಾಗಿದೆ.

ತಾಲ್ಲೂಕಿನ ಅಳತಗಾ ಗ್ರಾಮದ ಓಂಕಾರ ಅರುಣ ಪಾಟೀಲ (23) ಮೃತ ಯುವಕ. ನದಿಗೆ ಬಿದ್ದ ಸ್ಥಳದಿಂದ ತುಸು ದೂರದಲ್ಲೇ ಶವ ಪತ್ತೆಯಾಗಿದೆ.

ಅಳತಗಾ ಗ್ರಾಮದ ಓಂಕಾರ ಹಾಗೂ ಜ್ಯೋತಿನಾಥ ಸಹೋದರರು ಕ್ಷೌರ ಮಾಡಿಸಲು ಶನಿವಾರ ರಾತ್ರಿ ಕಂಗ್ರಾಳಿಗೆ ಹೊರಟಿದ್ದರು. ಉಕ್ಕಿ ಹರಿಯುತ್ತಿರುವ ಮಾರ್ಕಂಡೇಯ ನದಿ ದಡದಲ್ಲಿ ಸಾಗುವಾಗ ಬೈಕ್ ನಿಯಂತ್ರಣ ತಪ್ಪಿ ನೀರಿಗೆ ಬಿದ್ದಿತ್ತು. ಇಬ್ಬರೂ ಸಹೋದರರು ನದಿ ಸೆಳೆತಕ್ಕೆ ತೇಲಿಹೋಗಿದ್ದರು. ಜ್ಯೋತಿನಾಥ್ ಈಜಿ ದಡ ಸೇರಿದ್ದರು. ಕಾಣೆಯಾಗಿದ್ದ ಓಂಕಾರ ಶವವಾಗಿ ಪತ್ತೆಯಾಗಿದ್ದಾರೆ.

ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬನ್ಯಾಂಗ್, ಡಿಸಿಪಿ ಪಿ.ವಿ.ಸ್ನೇಹಾ ಸ್ಥಳದಲ್ಲೇ ಇದ್ದು ಕಾರ್ಯಾಚರಣೆ ನೋಡಿಕೊಂಡರು.

ನದಿಗಳ ಮಟ್ಟ ಯಥಾಸ್ಥಿತಿ: ಜಿಲ್ಲೆಯಲ್ಲಿ ಮಳೆ ಸಂಪೂರ್ಣ ತಗ್ಗಿದೆ. ಆದರೆ, ಮಹಾರಾಷ್ಟ್ರದ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಮತ್ತೆ ಧಾರಾಕಾರವಾಗಿ ಸುರಿಯುತ್ತಿದೆ. ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಬ್ಯಾರೇಜ್‌ನಲ್ಲಿ ಭಾನುವಾರ ಕೂಡ 2.89 ಲಕ್ಷ ಕ್ಯುಸೆಕ್‌ಗಿಂತ ಹೆಚ್ಚು ನೀರು ನಿರಂತರ ಹರಿಯುತ್ತಿದೆ.

ಮೇಘಸ್ಫೋಟ: ಮೃತರ ಸಂಖ್ಯೆ 13ಕ್ಕೆ ಏರಿಕೆ

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶ ರಾಜ್ಯದ ಮೂರು ಜಿಲ್ಲೆಗಳಲ್ಲಿ ಮೇಘಸ್ಫೋಟದಿಂದ ಉಂಟಾದ ದಿಢೀರ್ ಪ್ರವಾಹಕ್ಕೆ ಸಿಲುಕಿ ಮೃತಪಟ್ಟವರ ಸಂಖ್ಯೆಯು 13ಕ್ಕೆ ಏರಿಕೆ ಆಗಿದೆ. ಮಂಡಿ ಜಿಲ್ಲೆಯಲ್ಲಿ ಇಬ್ಬರ ಮೃತದೇಹಗಳು ಸಿಕ್ಕಿವೆ.

40ಕ್ಕೂ ಹೆಚ್ಚು ಮಂದಿ ಇನ್ನೂ ಪತ್ತೆಯಾಗಿಲ್ಲ. ಭಾನುವಾರ ಪತ್ತೆಯಾದ ಮೃತದೇಹಗಳಲ್ಲಿ ಮೂರು ತಿಂಗಳ ಹಸುಳೆ ಮಾನ್ವಿಯ ಮೃತದೇಹವೂ ಸೇರಿದೆ.

ನಾಪತ್ತೆಯಾಗಿರುವವರನ್ನು ಪತ್ತೆ ಮಾಡಲು ಡ್ರೋನ್, ಶ್ವಾನದಳ ಬಳಸಿ ಭಾನುವಾರವೂ ಕಾರ್ಯಾಚರಣೆ ಮುಂದುವರಿದಿದೆ. ಸೇನೆ, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಐಟಿಬಿಪಿ ಸೇರಿದಂತೆ ವಿವಿಧ ಏಜೆನ್ಸಿಗಳ ಒಟ್ಟು 410 ಮಂದಿ ರಕ್ಷಣಾ ಕಾರ್ಯದಲ್ಲಿ ಭಾಗಿಯಾಗಿದ್ದಾರೆ.

ಶ್ರೀನಗರ–ಲೇಹ್ ಹೆದ್ದಾರಿಯಲ್ಲಿ ಸಂಚಾರ ನಿರ್ಬಂಧ: ಶ್ರೀನಗರ (ಪ್ರಜಾವಾಣಿ ವರದಿ): ಮೇಘಸ್ಫೋಟದ ನಂತರ ಅಲ್ಲಲ್ಲಿ ಮಣ್ಣು ಕುಸಿತ ಆಗಿರುವುದರಿಂದ ಶ್ರೀನಗರ–ಲೇಹ್ ಹೆದ್ದಾರಿಯಲ್ಲಿ ಸಂಚಾರ ನಿರ್ಬಂಧಿಸಲಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಮಧ್ಯ ಕಾಶ್ಮೀರದ ಗಂದೇರ್‌ಬಲ್ ಪ್ರದೇಶದ ವ್ಯಾಪ್ತಿಯಲ್ಲಿ ಅಲ್ಲಲ್ಲಿ ಮಣ್ಣು ಕುಸಿತ ಉಂಟಾಗಿದೆ ಎಂದಿದ್ದಾರೆ.

‘ರಸ್ತೆಯಲ್ಲಿನ ವಾಹನಗಳನ್ನು ತೆರವುಗೊಳಿಸುವುದು ನಮ್ಮ ಆದ್ಯತೆ. ಮಣ್ಣು ಕುಸಿತದಿಂದಾಗಿ ತೊಂದರೆಗೆ ಸಿಲುಕಿರುವ ನಿವಾಸಿಗಳನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದೆ. ಜಿಲ್ಲಾಡಳಿತದ ಸಿಬ್ಬಂದಿ, ಪೊಲೀಸರು, ಖಾಸಗಿ ಸಂಸ್ಥೆಗಳವರು ಈ ಕೆಲಸಗಳಿಗೆ ಕೈಜೋಡಿಸಿದ್ದಾರೆ. ಲೇಹ್–ಲಡಾಖ್ ಪ್ರವಾಸ ಕೈಗೊಂಡಿರುವವರು ಹಾಗೂ ಅಮರನಾಥ ಯಾತ್ರೆಗೆ ಬಂದಿರುವವರು ಮುಂದಿನ ಆದೇಶದವರೆಗೆ ಕಾಯಬೇಕಿದೆ’ ಎಂದು ಗಂದೇರ್‌ಬಲ್‌ನ ಹೆಚ್ಚುವರಿ ಜಿಲ್ಲಾಧಿಕಾರಿ (ಎಡಿಸಿ) ಗುಲ್ಜಾರ್ ಅಹಮದ್ ಮಾಹಿತಿ ನೀಡಿದ್ದಾರೆ.

ಶಿಮ್ಲಾದಲ್ಲಿ ಮೇಘಸ್ಫೋಟ ಆದ ನಂತರ ಅಧಿಕಾರಿಗಳು ಮತ್ತಿತರರು ಭಾನುವಾರ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದರು —ಪಿಟಿಐ ಚಿತ್ರ

ಬೆಟ್ಟದ ದೇಗುಲದಲ್ಲಿ ಸಿಲುಕಿದ್ದ 8 ಮಂದಿ ರಕ್ಷಣೆ

ಶಿವಪುರಿ, ಮಧ್ಯಪ್ರದೇಶ (ಪಿಟಿಐ): ನದಿಯ ನೀರಿನ ಮಟ್ಟ ಏರಿದ ನಂತರ ಇಲ್ಲಿನ ಬೆಟ್ಟದ ಮೇಲಿನ ದೇವಸ್ಥಾನದಲ್ಲಿ ಸಿಲುಕಿದ್ದ 8 ಮಂದಿಯನ್ನು ರಕ್ಷಣೆ ಮಾಡಲಾಗಿದೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದರು.

‘ಇಲ್ಲಿನ ಪೋಹ್ರಿ ಪಟ್ಟಣದಲ್ಲಿರುವ ಕೇದಾರೇಶ್ವರ ದೇವಾಲಯಕ್ಕೆ ತೆರಳಿದ್ದ ವೇಳೆ 8 ಮಂದಿ ಸಿಲುಕಿಕೊಂಡಿದ್ದರು. ರಾಜ್ಯ ವಿಪತ್ತು ರಕ್ಷಣಾ ಪಡೆಯು ಸ್ಥಳಕ್ಕೆ ಧಾವಿಸಿ, ರಾತ್ರಿ 10 ಗಂಟೆ ವೇಳೆಗೆ ಎಲ್ಲರನ್ನೂ ರಕ್ಷಣೆ ಮಾಡಿದೆ’ ಎಂದು ಹಿರಿಯ ಪೊಲೀಸ್ ಅಧಿಕಾರಿ ಸುರ್ಜಿತ್ ಸಿಂಗ್ ತಿಳಿಸಿದರು.

ಪುಣೆ, ನಾಸಿಕ್‌ನಲ್ಲಿ ಭಾರಿ ಮಳೆ

ಮುಂಬೈ: ಮಹಾರಾಷ್ಟ್ರದ ಪುಣೆ ಮತ್ತು ನಾಸಿಕ್ ಜಿಲ್ಲೆಗಳಲ್ಲಿ ನಿರಂತರ ಮಳೆ ಮುಂದುವರೆದಿದ್ದು, ಭಾರಿ ಪ್ರಮಾಣದ ನೀರನ್ನು ಭಾನುವಾರ ಗೋದಾವರಿ ನದಿಗೆ ಬಿಡಲಾಗಿದೆ.

ಮಳೆಯಿಂದಾಗಿ ಹಲವು ಪ್ರದೇಶಗಳು ಜಲಾವೃತಗೊಂಡಿವೆ. ಗೋದಾ ಘಾಟ್‌ನಲ್ಲಿ ಗೋದಾವರಿ ನದಿಯ ದಡದಲ್ಲಿರುವ ಅನೇಕ ದೇವಾಲಯಗಳು ನೀರಿನಲ್ಲಿ ಮುಳುಗಿವೆ.

ಪುಣೆಯಲ್ಲಿ ಖಡಕ್ವಾಸ್ಲಾ ಅಣೆಕಟ್ಟಿನಿಂದ ಮುಲಾ-ಮುಠಾ ನದಿಗೆ ನೀರು ಬಿಡಲಾಗುತ್ತಿರುವ ಹಿನ್ನಲೆ ಸ್ಥಳೀಯರಿಗೆ ಎಚ್ಚರಿಕೆ ನೀಡಲಾಗಿದೆ. ವಿಪತ್ತು ನಿರ್ವಹಣಾ ಸೇವೆಗಳಿಗೆ ಸಜ್ಜಾಗಿದ್ದಾರೆ.

ಪೋಸ್ಟ್‌ಗೆ ಟೀಕೆ; ತರೂರ್ ಸ್ಪಷ್ಟನೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ಶಶಿ ತರೂರ್ ಅವರು, ವಯನಾಡ್‌ನಲ್ಲಿ ಭೂಕುಸಿತ ಸಂಭವಿಸಿದ ಸ್ಥಳಗಳಿಗೆ ಭೇಟಿ ನೀಡಿ, ‘ಮೆಮೊರಬಲ್ ಡೇ’ ಎಂದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಕ್ಕೆ ಟೀಕೆ ವ್ಯಕ್ತವಾಗಿದೆ. ಈ ಬೆನ್ನಲ್ಲೇ ಅವರು ‘ಮೆಮೊರಬಲ್’ (ಸ್ಮರಣೀಯ) ಪದದ ಅರ್ಥ ವಿವರಿಸಿದ್ದಾರೆ.

ತರೂರ್ ಅವರು, ಭೂಕುಸಿತಕ್ಕೆ ತುತ್ತಾಗಿರುವ ಸ್ಥಳಗಳಿಗೆ ಭೇಟಿ ನೀಡಿ ಪರಿಹಾರ ಕಾರ್ಯಗಳಲ್ಲಿ ಭಾಗಿಯಾಗಿರುವ ವಿಡಿಯೊವನ್ನು ಶುಕ್ರವಾರ ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದರು. ‘ವಯನಾಡ್‌ನಲ್ಲಿ ಕಳೆದ ಸ್ಮರಣೀಯ ದಿನದ ಕೆಲ ನೆನಪುಗಳು’ ಎಂದು ಒಕ್ಕಣೆ ಬರೆದಿದ್ದರು. ಇದಕ್ಕೆ ‘ಭೀಕರ ದುರಂತ ಮತ್ತು ಸಾವು–ನೋವು ನಿಮಗೆ ಸ್ಮರಣೀಯವೇ’ ಎಂದು ಬಳಕೆದಾರರೊಬ್ಬರು ಪ್ರಶ್ನಿಸಿದ್ದರು.

‘ಸ್ಮರಣೀಯ ಎಂದರೆ ನೆನಪಿನಲ್ಲಿ ಇಟ್ಟುಕೊಳ್ಳಲು ಯೋಗ್ಯವಾದುದು ಅಥವಾ ಮರೆಯಲು ಅಸಾಧ್ಯವಾದುದು ಎಂದರ್ಥ’ ಎಂದು ತರೂರ್ ಹೇಳಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್ *	124.80	123	53,198	39,494
ಹಾರಂಗಿ	2,859	2,854.77	7,756	6,000
ಕಬಿನಿ	2,284.00	2,281.33	19,606	14,517
ಹೇಮಾವತಿ	2,922	2,920.60	17,070	10,875
ಲಿಂಗನಮಕ್ಕಿ	1,819	1,815.60	36,601	13,590
ಸೂಪಾ (ಮೀ)	564	557.03	29,579	4,698.35
ಮಾಣಿ	595	587.96	5,174	0
ತುಂಗಭದ್ರಾ	1,633	1,631.26	1,36,574	1,30,855
ಮಲಪ್ರಭಾ	2,079.5	2,076.20	9,164	3,954
ಘಟಪ್ರಭಾ	2,175	2,170.63	34,440	34,440
ಭದ್ರಾ *	186	180	19,512	29,894
ಆಲಮಟ್ಟಿ (ಮೀ)	519.6	516.06	3,13,387	2,64,012
ನಾರಾಯಣಪುರ (ಮೀ)	492.25	490.60	2,50,000	2,22,850

* ನೆಲಮಟ್ಟದಿಂದ

ಪ್ರಕ್ಷುಬ್ಧ ಸ್ಥಿತಿ: ರಾಯಭಾರ ಕಚೇರಿಯಿಂದ 'ಎಕ್ಸ್' ಮೂಲಕ ಸಂದೇಶ • ಬಾಂಗ್ಲಾದೇಶಕ್ಕೆ ಹೋಗಬೇಡಿ– ಭಾರತ

ಎಚ್ಚರದಿಂದಿರಲು ಭಾರತೀಯರಿಗೆ ಸೂಚನೆ

ಢಾಕಾ (ಎಎಫ್‌ಪಿ): ಬಾಂಗ್ಲಾದೇಶದಲ್ಲಿ ಸರ್ಕಾರವನ್ನು ವಿರೋಧಿಸಿ ಪ್ರತಿಭಟನೆ ಹೆಚ್ಚುತ್ತಿರುವ ಕಾರಣ ಭಾರತೀಯ ಸಮುದಾಯದವರನ್ನು ಉದ್ದೇಶಿಸಿ ರಾಯಭಾರ ಕಚೇರಿಯು ಎಚ್ಚರಿಕೆಯ ಸಂದೇಶ ರವಾನಿಸಿದೆ.

'ಸಿಲಹಟ್‌ನ ಭಾರತೀಯ ಸಹಾಯಕ ಹೈಕಮಿಷನ್ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿಗಳು ಸೇರಿದಂತೆ ಭಾರತದ ಎಲ್ಲ ಪ್ರಜೆಗಳು ಕಚೇರಿಯ ಜೊತೆ ಸಂಪರ್ಕದಲ್ಲಿ ಇರಬೇಕು ಎಂದು ಮನವಿ ಮಾಡಲಾಗುತ್ತಿದೆ' ಎಂದು ಕಚೇರಿಯು 'ಎಕ್ಸ್' ಮೂಲಕ ಮನವಿ ಮಾಡಿದೆ.

ಅಲ್ಲದೆ, 'ಅವರು ಎಚ್ಚರಿಕೆಯಿಂದ ಇರಬೇಕು ಎಂದು ಮನವಿ ಮಾಡಲಾಗುತ್ತಿದೆ. ತುರ್ತು ಪರಿಸ್ಥಿತಿ ಎದುರಾದಲ್ಲಿ ಕಚೇರಿಯನ್ನು ಸಂಪರ್ಕಿಸಬೇಕು' ಎಂದು ಅದು ಹೇಳಿದೆ.

14 ಪೊಲೀಸರು ಮೃತ: ಭಾನುವಾರ ನಡೆದ ಘರ್ಷಣೆಯಲ್ಲಿ ಮೃತಪಟ್ಟವರಲ್ಲಿ 14 ಮಂದಿ ಪೊಲೀಸರು ಸೇರಿದ್ದಾರೆ. ಪ್ರತಿಭಟನಕಾರರು ಪೊಲೀಸ್ ಅಧಿಕಾರಿಗಳ ಮೇಲೆ ಹಲ್ಲೆ ನಡೆಸಿದ್ದಾರೆ,

ಬಾಂಗ್ಲಾಗೆ ತೆರಳಬೇಡಿ (ನವದೆಹಲಿ ವರದಿ): 'ಬಾಂಗ್ಲಾದಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಮುಂದಿನ ಸೂಚನೆ ಬರುವವರೆಗೂ ಆ ದೇಶಕ್ಕೆ ಪ್ರಯಾಣಿಸಬಾರದು' ಎಂದು ವಿದೇಶಾಂಗ ಸಚಿವಾಲಯವು ಭಾನುವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಬಾಂಗ್ಲಾದಲ್ಲಿ ಅಸಹಕಾರ ಚಳವಳಿ: ಹಿಂಸೆಗೆ 100 ಸಾವು

ಒಂದನೇ ಪುಟದಿಂದ...

'ತಾರತಮ್ಯದ ವಿರುದ್ಧ ವಿದ್ಯಾರ್ಥಿಗಳು' ಹೆಸರಿನ ಒಕ್ಕೂಟವೊಂದು ಹಸೀನಾ ರಾಜೀನಾಮೆಗೆ ಆಗ್ರಹಿಸಿ, ಅಸಹಕಾರ ಚಳವಳಿಗೆ ಕರೆ ನೀಡಿದೆ. ಆದರೆ, ಪ್ರತಿಭಟನೆಯ ಹೆಸರಿನಲ್ಲಿ ದೇಶದಾದ್ಯಂತ ವಿಧ್ವಂಸಕ ಕಾರ್ಯಗಳಲ್ಲಿ ತೊಡಗಿರುವವರು ವಿದ್ಯಾರ್ಥಿಗಳಲ್ಲ, ಅವರು ಭಯೋತ್ಪಾದಕರು ಎಂದು ಹಸೀನಾ ಹೇಳಿದ್ದಾರೆ. ಅವರನ್ನು ಹತ್ತಿಕ್ಕಬೇಕು ಎಂದು ಜನರಿಗೆ ಕರೆ ನೀಡಿದ್ದಾರೆ.

ಢಾಕಾದ ಶಾಹಬಾಗ್‌ನಲ್ಲಿ ಸೇರಿದ ನೂರಾರು ಮಂದಿ ವೃತ್ತಿಪರರು ಹಾಗೂ ವಿದ್ಯಾರ್ಥಿಗಳು ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟುಮಾಡಿದರು. ಢಾಕಾದಲ್ಲಿ ಬಹುತೇಕ ಮಾಲ್‌ಗಳು ಹಾಗೂ ಅಂಗಡಿಗಳು ತೆರೆದಿರಲಿಲ್ಲ. ಈಚೆಗೆ ನಡೆದ ಕೆಲವು ಪ್ರತಿಭಟನೆಗಳಲ್ಲಿ ಮೃತಪಟ್ಟವರಿಗೆ ನ್ಯಾಯ ಕೊಡಿಸುವ ಕೆಲಸ ಆಗಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಬಂಗಬಂಧು ಶೇಖ್ ಮುಜೀಬ್ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ (ಬಿಎಸ್‌ಎಂಎಂಯು) ನಿಲ್ಲಿಸಿದ್ದ ಹಲವು ವಾಹನಗಳಿಗೆ ಭಾನುವಾರ ಬೆಂಕಿ ಹಾಕಿದ್ದಾರೆ ಎಂದು ಪತ್ರಿಕೆಯೊಂದು ವರದಿ ಮಾಡಿದೆ. ಅಲ್ಲದೆ, ಖಾಸಗಿ ಆಸ್ಪತ್ರೆಯೊಂದರ ಆವರಣದಲ್ಲಿ ನಿಲ್ಲಿಸಿದ್ದ ಖಾಸಗಿ ಕಾರುಗಳಿಗೆ, ಆಂಬುಲೆನ್ಸ್ ವಾಹನಗಳಿಗೆ, ದ್ವಿಚಕ್ರ ವಾಹನಗಳಿಗೆ ಮತ್ತು ಬಸ್ಸುಗಳಿಗೆ ದೊಣ್ಣೆಗಳನ್ನು ಹಿಡಿದಿದ್ದ ಕೆಲವರು ಹಾನಿ ಉಂಟುಮಾಡಿದ್ದಾರೆ.

ದೇಶದ ಹಲವೆಡೆ ಪೊಲೀಸ್ ವಾಹನಗಳು ಹಾಗೂ ಸರ್ಕಾರಿ ಕಚೇರಿಗಳ ಮೇಲೆ ದಾಳಿ ನಡೆಸಿದ ವರದಿಗಳು ಇವೆ.

ಮಾತುಕತೆಗೆ ಬರುವಂತೆ ಹಸೀನಾ ಅವರು ನೀಡಿದ್ದ ಆಹ್ವಾನವನ್ನು ಪ್ರತಿಭಟನಕಾರರು ತಿರಸ್ಕರಿಸಿದ್ದಾರೆ. ಶಾಲೆ, ಕಾಲೇಜು, ವಿಶ್ವವಿದ್ಯಾಲಯ, ಮದರಸಾಗಳ ವಿದ್ಯಾರ್ಥಿಗಳು, ರಾಜಕೀಯ ಕಾರ್ಯಕರ್ತರು ಮತ್ತು ಇತರರು ಪ್ರತಿಭಟನೆಯಲ್ಲಿ ಭಾಗಿಯಾಗಬೇಕು ಎಂದು ಪ್ರತಿಭಟನೆಗಳ ಸಮನ್ವಯದ ಹೊಣೆ ಹೊತ್ತವರು ಕರೆ ನೀಡಿದ್ದಾರೆ.

ಬಾಂಗ್ಲಾ ಸ್ವಾತಂತ್ರ್ಯ ಸಮರದಲ್ಲಿ ಭಾಗಿಯಾಗಿದ್ದವರ ಸಂಬಂಧಿಕರಿಗೆ ಸರ್ಕಾರದ ಹುದ್ದೆಗಳಲ್ಲಿ ಶೇ 30ರಷ್ಟು ಮೀಸಲಾತಿ ಕಲ್ಪಿಸುವ ವಿವಾದಾತ್ಮಕ ಮೀಸಲು ವ್ಯವಸ್ಥೆಯನ್ನು ಕೊನೆಗೊಳಿಸಬೇಕು ಎಂಬುದು ಪ್ರತಿಭಟನಕಾರರ ಬೇಡಿಕೆ.

ಢಾಕಾದಲ್ಲಿ ಭಾನುವಾರ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಜನ. –ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- ಮಾತುಕತೆ ಆಹ್ವಾನ ತಿರಸ್ಕರಿಸಿದ ಪ್ರತಿಭಟನಕಾರರು
- ದೇಶದಲ್ಲಿ ಸಾಮಾಜಿಕ ಜಾಲತಾಣಗಳ ಸ್ಥಗಿತಕ್ಕೆ ಆದೇಶ
- ವಿಧ್ವಂಸಕ ಕೃತ್ಯ ನಡೆಸುತ್ತಿರುವವರು ಉಗ್ರರು: ಹಸೀನಾ

ಗೋಡೆ ಬಿದ್ದು 9 ಮಕ್ಕಳು ಮೃತ

ಗೋಡೆ ಕುಸಿದ ಸ್ಥಳದಲ್ಲಿ ನಡೆದ ರಕ್ಷಣಾ ಕಾರ್ಯಾಚರಣೆ –ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ/ಪಿಟಿಐ

ಸಾಗರ (ಮಧ್ಯಪ್ರದೇಶ): ಶಿಥಿಲಗೊಂಡಿದ್ದ ಮನೆಯೊಂದರ ಗೋಡೆ ಕುಸಿದು ಭಾನುವಾರ ಒಂಬತ್ತು ಮಂದಿ ಮಕ್ಕಳು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ರಹಲಿ ವಿಧಾನಸಭಾ ಕ್ಷೇತ್ರವ್ಯಾಪ್ತಿಯ ಶಾಹಪುರ ಗ್ರಾಮದಲ್ಲಿ ಧಾರ್ಮಿಕ ಕಾರ್ಯಕ್ರಮವೊಂದು ನಡೆಯುತ್ತಿದ್ದ ಸಂದರ್ಭದಲ್ಲಿ ದೇವಸ್ಥಾನದ ಆವರಣದ ಸನಿಹದಲ್ಲಿ ಬೆಳಿಗ್ಗೆ 8.30ರಿಂದ 9ರ ನಡುವೆ ಈ ದುರ್ಘಟನೆ ಸಂಭವಿಸಿದೆ.

ಮೃತ ಮಕ್ಕಳೆಲ್ಲ 8ರಿಂದ 15 ವರ್ಷದ ನಡುವಿನವರು. ಗೋಡೆ ಕುಸಿದಿದ್ದರಿಂದ ಇಬ್ಬರಿಗೆ ಗಾಯಗಳಾಗಿವೆ ಎಂದು ಸಾಗರ ವಿಭಾಗೀಯ ಆಯುಕ್ತ ವೀರೇಂದ್ರ ಸಿಂಗ್ ರಾವತ್ ತಿಳಿಸಿದ್ದಾರೆ. ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಬಂದಿದ್ದಾರೆ.

ಮೃತರ ಕುಟುಂಬಗಳಿಗೆ ತಲಾ ₹4 ಲಕ್ಷ ಪರಿಹಾರ ನೀಡುವುದಾಗಿ ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್ ಘೋಷಿಸಿದ್ದಾರೆ.

'ಪಾರ್ಥಿವ ಶಿವಲಿಂಗ ನಿರ್ಮಾಣ' ಕಾರ್ಯಕ್ರಮವು ಶಿಥಿಲಗೊಂಡಿದ್ದ ಮನೆಯ ಸನಿಹದಲ್ಲಿ ಡೇರೆಯೊಂದರಲ್ಲಿ ನಡೆಯುತ್ತಿತ್ತು. ಆಗ ಗೋಡೆ ಕುಸಿದು, ಡೇರೆಯ ಮೇಲೆ ಉರುಳಿತು ಎಂದು ಸ್ಥಳೀಯ ಶಾಸಕ, ಬಿಜೆಪಿಯ ಗೋಪಾಲ್ ಭಾರ್ಗವ ಅವರು ಸುದ್ದಿಗಾರರಿಗೆ ತಿಳಿಸಿದರು. ಮಕ್ಕಳು ಗೋಡೆಯ ಅಡಿಯಲ್ಲಿ ಸಿಲುಕಿ ಮೃತಪಟ್ಟರು.

ಮಕ್ಕಳು ಡೇರೆಯ ಅಡಿಯಲ್ಲಿ ಕುಳಿತಿದ್ದರು. ಮಳೆಯ ಕಾರಣದಿಂದಾಗಿ ಗೋಡೆ ಕುಸಿದಿದೆ ಎಂದು ಜಿಲ್ಲಾಧಿಕಾರಿ ದೀಪಕ್ ಆರ್ಯ ಮಾಹಿತಿ ನೀಡಿದ್ದಾರೆ. ಶಿವಲಿಂಗ ನಿರ್ಮಿಸುವ ಹಾಗೂ ಭಾಗವತದ ಕಥೆ ಪಠಿಸುವ ಚಟುವಟಿಕೆಯಲ್ಲಿ ಮಕ್ಕಳು ತೊಡಗಿಸಿಕೊಂಡಿದ್ದರು. ಭಾನುವಾರ ರಜೆ ಇದ್ದ ಕಾರಣ ಮಕ್ಕಳು ಹೆಚ್ಚಿನವರು ಪಾಲ್ಗೊಂಡಿದ್ದರು ಎನ್ನಲಾಗಿದೆ.

ಇಬ್ಬರು ಮಕ್ಕಳು ಸ್ಥಳದಲ್ಲೇ ಮೃತಪಟ್ಟರು. ಏಳು ಮಂದಿ ಆಸ್ಪತ್ರೆಗೆ ಸಾಗಿಸುವಾಗ ಮೃತಪಟ್ಟರು. ಗಾಯಗೊಂಡಿರುವ ಇಬ್ಬರು ಮಕ್ಕಳಿಗೆ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ, ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಆರ್ಯ ಹೇಳಿದ್ದಾರೆ.

ಸಂತ್ರಸ್ತೆ ಕುಟುಂಬಸ್ಥರ ಭೇಟಿಯಾದ ನಿಯೋಗ

ಅಯೋಧ್ಯೆ: ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ ಪ್ರಕರಣ: ಬಿಜೆಪಿ, ಎಸ್‌ಪಿ ನಡುವೆ ಕೆಸರೆರಚಾಟ

ಅಯೋಧ್ಯೆ (ಉತ್ತರಪ್ರದೇಶ) (ಪಿಟಿಐ): ಸಾಮೂಹಿಕ ಅತ್ಯಾಚಾರಕ್ಕೆ ಒಳಗಾದ 12 ವರ್ಷದ ಬಾಲಕಿಯ ಕುಟುಂಬದ ಸದಸ್ಯರನ್ನು ಭಾನುವಾರ ಭೇಟಿಯಾದ ಬಿಜೆಪಿಯ ಮೂವರು ಸದಸ್ಯರನ್ನು ಒಳಗೊಂಡ ನಿಯೋಗವು ವಿಸ್ತೃತ ಚರ್ಚೆ ನಡೆಸಿತು.

'ರಾಜ್ಯಸಭಾ ಸಂಸದೆ ಸಂಗೀತಾ ಬಲವಂತ್, ಉತ್ತರ ಪ್ರದೇಶ ಹಿಂದುಳಿದ ವರ್ಗಗಳ ಅಭಿವೃದ್ಧಿ ಸಚಿವ ನರೇಂದ್ರ ಕಶ್ಯಪ್ ಅವರೂ ಇದ್ದ ನಿಯೋಗವು ಸಿದ್ಧಪಡಿಸಿದ ವರದಿಯನ್ನು ಬಿಜೆಪಿ ಹಿಂದುಳಿದ ವರ್ಗಗಳ ಘಟಕದ ರಾಷ್ಟ್ರೀಯ ಅಧ್ಯಕ್ಷ ಕೆ.ಲಕ್ಷ್ಮಣ್ ಅವರಿಗೆ ಸಲ್ಲಿಸಲಾಗುವುದು' ಎಂದು ರಾಜ್ಯಸಭಾ ಸಂಸದ ಬಾಬುರಾಮ್ ನಿಶಾದ್ ಅವರು ಭೇಟಿಯ ಬಳಿಕ ತಿಳಿಸಿದರು.

'ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಮೊಯಿದ್ ಖಾನ್ ಪ್ರಮುಖ ಆರೋಪಿಯಾಗಿದ್ದು, ಸಮಾಜವಾದಿ ಪಕ್ಷದ ಸದಸ್ಯನಾಗಿದ್ದಾನೆ. ಫೈಜಾಬಾದ್ ಸಂಸದ ಅವಧೇಶ್ ಪ್ರಸಾದ್ ತಂಡದಲ್ಲಿಯೂ ಗುರುತಿಸಿಕೊಂಡಿದ್ದಾನೆ' ಎಂದು ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಆರೋಪಿಸಿದ್ದಾರೆ.

'ಅತ್ಯಾಚಾರಕ್ಕೊಳಗಾದ ಸಂತ್ರಸ್ತೆಯ ತಾಯಿ ಹಾಗೂ ಕುಟುಂಬದ ಇತರೆ ಸದಸ್ಯರನ್ನು ಭೇಟಿಯಾಗಿ ಸಮಗ್ರ ಮಾಹಿತಿ ಪಡೆದಿದ್ದು, ಸರ್ಕಾರದಿಂದ ಆರೋಪಿ ವಿರುದ್ಧ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಸಮಗ್ರವಾದ ತನಿಖೆ ನಡೆಸಿ ಪ್ರಕರಣವು ತಾರ್ಕಿಕ ಅಂತ್ಯ ಕಾಣುವಂತೆ ಮಾಡುತ್ತೇವೆ' ಎಂದು ನಿಶಾದ್ ವಿವರಿಸಿದರು.

'ಆರೋಪಿ ವಿರುದ್ಧ ಸರ್ಕಾರ ತೆಗೆದುಕೊಂಡ ಕಾನೂನು ಕ್ರಮಗಳ ಕುರಿತು ಕುಟುಂಬದ ಸದಸ್ಯರು ಸಂತೃಪ್ತರಾಗಿದ್ದಾರೆ' ಎಂದರು.

ಬಾಲಕಿ ಮೇಲಿನ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ, ಅಯೋಧ್ಯೆ ಜಿಲ್ಲೆಯ ಬಾದರಸಾ ನಗರದಲ್ಲಿ ಬೇಕರಿ ನಡೆಸುತ್ತಿದ್ದ ಆರೋಪಿಗಳಾದ ಮೊಯಿದ್ ಖಾನ್, ಆತನ ನೌಕರ ರಾಜು ಖಾನ್‌ನನ್ನು ಜುಲೈ 30ರಂದು ಪೊಲೀಸರು ಬಂಧಿಸಿದ್ದರು.

ಎರಡು ತಿಂಗಳ ಹಿಂದೆ ಇಬ್ಬರೂ ಸೇರಿ ಬಾಲಕಿ ಮೇಲೆ ಅತ್ಯಾಚಾರವೆಸಗಿದ್ದು, ನಂತರ ಈ ಕೃತ್ಯವನ್ನು ವಿಡಿಯೊ ಮಾಡಿಟ್ಟುಕೊಂಡಿದ್ದರು. ಇತ್ತೀಚೆಗೆ ಬಾಲಕಿಯ ಆರೋಗ್ಯ ತಪಾಸಣೆ ನಡೆಸಿದ ವೇಳೆ ಆಕೆ ಗರ್ಭಿಣಿಯಾಗಿರುವುದು ದೃಢಪಟ್ಟಿತ್ತು.

'ಅಯೋಧ್ಯೆಯಲ್ಲಿ ಈ ಪ್ರಕರಣ ನಡೆದಿದೆ. ಆರೋಪಿಯು ಸಮಾಜವಾದಿ ಪಕ್ಷಕ್ಕೆ ಸೇರಿದ್ದು, ಆತನ ವಿರುದ್ಧ ಪಕ್ಷವು ಯಾವುದೇ ಕ್ರಮ ತೆಗೆದುಕೊಂಡಿಲ್ಲ' ಎಂದು ಯೋಗಿ ಆದಿತ್ಯನಾಥ ಅಧಿವೇಶನದಲ್ಲಿ ಗುರುವಾರ ಹೇಳಿದ್ದರು.

ಬೇಕರಿ ನೆಲಸಮ: ಖಾನ್‌ಗೆ ಸೇರಿದ ಬೇಕರಿಯನ್ನು ಅಯೋಧ್ಯೆ ಜಿಲ್ಲಾಡಳಿತವು ಶನಿವಾರ ಉರುಳಿಸಿದೆ.

'ನೀರಿನ ಕೊಳದ ಮೇಲೆ ಕಾನೂನು ಬಾಹಿರವಾಗಿ ಬೇಕರಿಯನ್ನು ನಿರ್ಮಿಸಿದ್ದರಿಂದ ಉರುಳಿಸಲಾಗಿದೆ' ಎಂದು ಅಯೋಧ್ಯೆ ಜಿಲ್ಲಾಧಿಕಾರಿ ಚಂದ್ರ ವಿಜಯ್ ಸಿಂಗ್ ತಿಳಿಸಿದರು.

ಅಯೋಧ್ಯೆಯಲ್ಲಿ ಬಾಲಕಿ ಮೇಲೆ ಅತ್ಯಾಚಾರವೆಸಗಿದ ಆರೋಪಿ ಮೊಯಿದ್ ಖಾನ್‌ಗೆ ಸೇರಿದ ಬೇಕರಿಯನ್ನು ಜಿಲ್ಲಾಡಳಿತ ಹೊಡೆದುರುಳಿಸಿತು– ಪಿಟಿಐ ಚಿತ್ರ

'ಗೂಂಡಾಗಿರಿ, ಅರಾಜಕತೆಯೇ ಎಸ್‌ಪಿ ಡಿಎನ್‌ಎ'

ಬಲಿಯಾ (ಪಿಟಿಐ): 'ಅಯೋಧ್ಯೆಯಲ್ಲಿ ನಡೆದ ಅತ್ಯಾಚಾರದ ಆರೋಪಿಗಳಿಗೆ ಮುಂದಿನ ಪೀಳಿಗೆಯೂ ನೆನಪಿಟ್ಟುಕೊಳ್ಳುವಷ್ಟು ಶಿಕ್ಷೆ ನೀಡಲಾಗುವುದು' ಎಂದು ಉತ್ತರಪ್ರದೇಶ ಉಪಮುಖ್ಯಮಂತ್ರಿ ಬ್ರಜೇಶ್ ಪಾಠಕ್ ಎಚ್ಚರಿಕೆ ನೀಡಿದ್ದಾರೆ.

ಆರೋಪಿಯ ಡಿಎನ್‌ಎ ಪರೀಕ್ಷೆ ನಡೆಸಬೇಕು, ಅತ್ಯಾಚಾರ ಸಂತ್ರಸ್ತೆಗೆ ಸೂಕ್ತ ರಕ್ಷಣೆ ನೀಡಲು ಸರ್ಕಾರಕ್ಕೆ ನ್ಯಾಯಾಲಯವು ಸೂಚಿಸಬೇಕು ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಸಿಂಗ್ ಯಾದವ್ ಆಗ್ರಹಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿರುವ ಪಾಠಕ್, 'ಗೂಂಡಾಗಿರಿ, ಅರಾಜಕತೆಯು ಸಮಾಜವಾದಿ ಪಕ್ಷದ ಡಿಎನ್‌ಎ ಆಗಿದೆ' ಎಂದರು.

'ಕೊಲೆಗಡುಕರು ಹಾಗೂ ಅತ್ಯಾಚಾರಿಗಳಿಗೆ ರಕ್ಷಣೆ ನೀಡುವುದು ಸಮಾಜವಾದಿ ಪಕ್ಷದ ಹಳೆಯ ಚಾಳಿಯಾಗಿದೆ' ಎಂದು ಈ ವೇಳೆ ಟೀಕಿಸಿದರು.

ಮಹಿಳೆಗೆ ನಿಂದನೆ : ಸಚಿವನ ರಾಜೀನಾಮೆಗೆ ಸೂಚನೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಕಾರಾಗೃಹ ಸಚಿವ ಅಖಿಲ್ ಗಿರಿ ಅವರು ಅರಣ್ಯ ಇಲಾಖೆಯ ಮಹಿಳಾ ಅಧಿಕಾರಿಗೆ ಬೆದರಿಕೆ ಹಾಕಿ, ಅವಾಚ್ಯವಾಗಿ ನಿಂದಿಸಿದ್ದಾರೆ ಎನ್ನಲಾದ ವಿಡಿಯೊ ಹರಿದಾಡಿದ ಬೆನ್ನಲ್ಲೇ, ಗಿರಿ ಅವರು ಕ್ಷಮೆ ಯಾಚಿಸಬೇಕು ಮತ್ತು ತಮ್ಮ ಹುದ್ದೆಗೆ ರಾಜೀನಾಮೆ ನೀಡಬೇಕು ಎಂದು ಟಿಎಂಸಿ ಭಾನುವಾರ ಸೂಚಿಸಿದೆ.

ಪೂರ್ವ ಮೇದಿನಿಪುರ ಜಿಲ್ಲೆಯ ಕಂಠಿಯಲ್ಲಿ ಮಾತನಾಡಿದ ಗಿರಿ ಅವರು, 'ರಾಜೀನಾಮೆ ನೀಡುತ್ತೇನೆ. ಆದರೆ, ಕ್ಷಮೆಯಾಚಿಸುವುದಿಲ್ಲ' ಎಂದು ಹೇಳಿದ್ದಾರೆ.

ಅರಣ್ಯ ಇಲಾಖೆ ಅಧಿಕಾರಿ ಮನೀಶಾ ಸಾಹು ಮತ್ತು ತಂಡವು ತಾಜ್‌ಪುರ ಸಮುದ್ರ ತೀರ ಪ್ರದೇಶದಲ್ಲಿ ಒತ್ತುವರಿಯಾಗಿದ್ದ ಅರಣ್ಯ ಇಲಾಖೆಯ ಜಾಗವನ್ನು ತೆರವುಗೊಳಿಸಿತ್ತು. ನಂತರ ಸಚಿವ ಗಿರಿ ಅವರು, ಅಧಿಕಾರಾವಧಿಯನ್ನು ಕಡಿತ ಮಾಡುವುದಾಗಿ ಸಾಹು ಅವರನ್ನು ಬೆದರಿಸಿದ್ದರು. ಈ ಕುರಿತ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು.

'ಘಟನೆ ನಂತರ ಪಕ್ಷದ ಸೂಚನೆಯಂತೆ ರಾಜ್ಯಾಧ್ಯಕ್ಷ ಸುಬ್ರತಾ ಬಕ್ಷಿ ಅವರು ಅಖಿಲ್ ಗಿರಿ ಅವರನ್ನು ಭಾನುವಾರ ಮಧ್ಯಾಹ್ನ ಕರೆಸಿ, ಮಹಿಳಾ ಅಧಿಕಾರಿಯ ಬಳಿ ಕ್ಷಮೆ ಕೇಳುವಂತೆ ಮತ್ತು ಕೂಡಲೇ ರಾಜೀನಾಮೆ ಸಲ್ಲಿಸುವಂತೆ ಸೂಚಿಸಿದ್ದಾರೆ' ಎಂದು ಟಿಎಂಸಿ ವಕ್ತಾರ ಶಾಂತನು ಸೇನ್ ತಿಳಿಸಿದರು.

ಈ ವೇಳೆ ಗಿರಿ ಅವರು, 'ಕ್ಷಮೆ ಕೇಳುವ ಪ್ರಶ್ನೆಯೇ ಇಲ್ಲ. ರಾಜೀನಾಮೆ ಯನ್ನು ಇ–ಮೇಲ್ ಮೂಲಕ ಕಳುಹಿಸುತ್ತೇನೆ. ಸೋಮವಾರ ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೇ ರಾಜೀನಾಮೆ ಪತ್ರ ಸಲ್ಲಿಸುತ್ತೇನೆ' ಎಂದು ತಿಳಿಸಿದ್ದಾಗಿ ಶಾಂತನು ಹೇಳಿದರು.

2022ರಲ್ಲಿಯೂ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಕುರಿತ ಗಿರಿ ಅವರ ಹೇಳಿಕೆಯು ವಿವಾದಕ್ಕೆ ಕಾರಣವಾಗಿತ್ತು. ಬಳಿಕ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಕ್ಷಮೆ ಕೋರಿದ್ದರು.

'ಐದು ವರ್ಷಗಳಲ್ಲಿ 772 ರೈಲು ಸೇವೆ'

ಪ್ರಜಾವಾಣಿ ವಾರ್ತೆ

ನವದೆಹಲಿ: '100 ವಂದೇ ಭಾರತ ಎಕ್ಸ್‌ಪ್ರೆಸ್ ರೈಲುಗಳನ್ನು ಒಳಗೊಂಡಂತೆ ಒಟ್ಟು 772 ರೈಲು ಸೇವೆಗಳನ್ನು ಕಳೆದ ಐದು ವರ್ಷಗಳಲ್ಲಿ ಭಾರತೀಯ ರೈಲ್ವೆ ಆರಂಭಿಸಿದೆ' ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ರಾಜ್ಯಸಭೆಗೆ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

'ಹೊಸ ಹೊಸ ರೈಲು ಸೇವೆಗಳನ್ನು ಆರಂಭಿಸುವುದು ಇಲಾಖೆಗೆ ಹೊಸತೇನಲ್ಲ. ಆದರೆ, ಇದರ ಜೊತೆಯಲ್ಲಿಯೇ ರೈಲು ಸಂಚಾರಕ್ಕೆ ಸಂಬಂಧಿಸಿದ ಕಾರ್ಯಗಳು, ಇಲಾಖೆಯ ಕಾರ್ಯವೈಖರಿಯಲ್ಲಿ ಇನ್ನಷ್ಟು ದಕ್ಷತೆ ಸೇರಿದಂತೆ ಹಲವು ವಿಭಾಗಗಳಲ್ಲಿಯೂ ಇಲಾಖೆಯು ಜನರಿಗೆ ಅನುಕೂಲ ಮಾಡಿಕೊಡುವ ಕೆಲಸ ಮಾಡುತ್ತಿದೆ' ಎಂದಿದ್ದಾರೆ.

'ಜನರ ಅನುಕೂಲಕ್ಕಾಗಿ ಎಕ್ಸ್‌ಪ್ರೆಸ್ ರೈಲುಗಳು, ಸೂಪರ್‌ಫಾಸ್ಟ್ ರೈಲುಗಳು, ಪ್ಯಾಸೆಂಜರ್, ಉಪನಗರ ರೈಲು ಸೇವೆಗಳನ್ನು ಇಲಾಖೆ ನೀಡುತ್ತಿದೆ. ಜೊತೆಗೆ, ಇದೇ ವರ್ಷದ ಜುಲೈ 29ರವರೆಗೆ, 102 ವಂದೇ ಭಾರತ ಎಕ್ಸ್‌ಪ್ರೆಸ್‌ಗಳ ಸಂಚಾರ ದೇಶದಾದ್ಯಂತ ನಡೆಯಿತು. ಗರಿಷ್ಠ 760 ಕಿ.ಮೀ. ದೂರದವರೆಗೆ ಈ ರೈಲು ಸೇವೆ ಒದಗಿಸುತ್ತಿದೆ' ಎಂದು ಹೇಳಿದ್ದಾರೆ.

ಭಾರತೀಯರಿಬ್ಬರು ಚೀನಾ ಗಡಿಯಲ್ಲಿ ಕಣ್ಮರೆ

ನವದೆಹಲಿ(ಪಿಟಿಐ):ಅರುಣಾಚಲಪ್ರದೇಶದ ಇಬ್ಬರು ವ್ಯಕ್ತಿಗಳು ಕಳೆದ ಎರಡು ವರ್ಷಗಳಿಂದ ಕಣ್ಮರೆಯಾಗಿದ್ದಾರೆ. ಗಿಡಮೂಲಿಕೆ ಔಷಧ ಸಸ್ಯಗಳನ್ನು ಹುಡುಕಿಕೊಂಡು ಭಾರತ– ಚೀನಾ ಗಡಿಯ ದುರ್ಗಮ ಪ್ರದೇಶಕ್ಕೆ ಹೋಗಿದ್ದಾಗ ಈ ಘಟನೆ ನಡೆದಿದೆ. ಈ ಇಬ್ಬರನ್ನು ಚೀನಾ ಸೇನೆ ಬಂಧಿಸಿ ವಶದಲ್ಲಿಟ್ಟುಕೊಂಡಿದೆ ಎಂದು ನಂಬಲಾಗಿದೆ. ಆದರೆ, ಚೀನಾ ಸೇನೆ ಇದನ್ನು ಈವರೆಗೆ ಒಪ್ಪಿಕೊಂಡಿಲ್ಲ. ಯಾವುದೇ ಪ್ರತಿಕ್ರಿಯೆ ಕೂಡ ನೀಡಿಲ್ಲ.

ಬಟೆಲಮ್ ಟಿಕ್ರೊ (35) ಮತ್ತು ಇವರ ಸೋದರ ಸಂಬಂಧಿ ಬೈನ್ನಿ ಮಾನ್ಯು (37) ಕಾಣೆಯಾದವರು. ಟಿಕ್ರೊ ಅವಿವಾಹಿತನಾಗಿದ್ದು, ಮಾನ್ಯು ಅವರಿಗೆ ಪತ್ನಿ ಮತ್ತು ಇಬ್ಬರು ಮಕ್ಕಳು ಇದ್ದಾರೆ.

2022ರ ಆಗಸ್ಟ್ 19ರಂದು ಈ ಇಬ್ಬರು ಗಿಡಮೂಲಿಕೆ ಔಷಧ ಸಸ್ಯಗಳನ್ನು ಅರಸಿಕೊಂಡು ಅರುಣಾಚಲ ಪ್ರದೇಶದ ಅಂಜಾವ್ ಜಿಲ್ಲೆಯ ಎತ್ತರದ ಭಾಗ್ಲಾಗಾಮ್ ಪ್ರದೇಶಕ್ಕೆ ಹೋಗಿದ್ದರು. 2022ರ ಆಗಸ್ಟ್ 24ರಂದು ಇವರು ಕೊನೆ ಬಾರಿಗೆ ಕೆಲವು ಗ್ರಾಮಸ್ಥರ ಕಣ್ಣಿಗೆ ಗಡಿ ಭಾಗದಲ್ಲಿ ಕಾಣಿಸಿದ್ದರು. ಅನಂತರ, ಈ ಇಬ್ಬರೂ ಎಲ್ಲೂ ಕಾಣಿಸಿಲ್ಲ. ಇವರಿಗಾಗಿ ವ್ಯಾಪಕ ಹುಡುಕಾಟ ನಡೆಸಿದರೂ ಯಾವುದೇ ಸುಳಿವು ಸಿಕ್ಕಿಲ್ಲ.

ಆಚರಣೆ... 'ಆದಿ ಅಮಾವಾಸ್ಯೆ' ಅಂಗವಾಗಿ ಕನ್ಯಾಕುಮಾರಿಯಲ್ಲಿ ಭಾನುವಾರ ಜನರು ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಿದರು –ಪಿಟಿಐ ಚಿತ್ರ

ಇದು ಆದಾಯ ಹೆಚ್ಚಿಸುವ ಕಸರತ್ತು: ಜೈರಾಮ್ ರಮೇಶ್

ನವದೆಹಲಿ (ಪಿಟಿಐ): ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ಕಳೆದ ಆರು ವರ್ಷದಲ್ಲಿ ₹448 ಕೋಟಿ ನಿವ್ವಳ ಲಾಭ ಗಳಿಸಿದೆ ಎಂದು ಕಾಂಗ್ರೆಸ್ ಭಾನುವಾರ ತಿಳಿಸಿದೆ. ಆ ಮೂಲಕ ದೇಶದ ಭವಿಷ್ಯ ರೂಪಿಸುವ ಲಕ್ಷಾಂತರ ಯುವಕರನ್ನು ನರೇಂದ್ರ ಮೋದಿ ಸರ್ಕಾರವು ಆದಾಯ ಹೆಚ್ಚಿಸುವ ಕಸರತ್ತಿಗೆ ಬಳಸಿಕೊಂಡಿದೆ ಎಂದು ಕಿಡಿಕಾರಿದೆ.

ಎನ್‌ಟಿಎ ಕುರಿತು ಜುಲೈ 31ರಂದು ರಾಜ್ಯಸಭೆಯಲ್ಲಿ ಕೇಳಿದ ಪ್ರಶ್ನೆಗೆ ಶಿಕ್ಷಣ ಇಲಾಖೆಯ ರಾಜ್ಯ ಸಚಿವ ಸುಕಾಂತಾ ಮಜುಂದಾರ್ ನೀಡಿದ ಉತ್ತರದ ಪ್ರತಿಯನ್ನು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ.

'ಎನ್‌ಟಿಎ, ನೀಟ್ ಹಗರಣದ ಹೃದಯವಾಗಿದೆ. ಇದು ಶಿಕ್ಷಣ ಸಚಿವಾಲಯದ ದೇಹವಾಗಿದ್ದು, ತನ್ನ ಕೆಲಸವನ್ನು ಖಾಸಗಿ ವ್ಯಕ್ತಿಗಳಿಗೆ ಹೊರಗುತ್ತಿಗೆ ನೀಡುವ ಏಕೈಕ ಉದ್ದೇಶವಾಗಿದೆ' ಎಂದು ಅವರು ಕಿಡಿಕಾರಿದ್ದಾರೆ.

ಬ್ರಿಟನ್: 100ಕ್ಕೂ ಅಧಿಕ ಬಂಧನ

ಬ್ರಿಸ್ಟಲ್‌ನಲ್ಲಿ ಪ್ರತಿಭಟನಕಾರರು ಪೊಲೀಸರೊಂದಿಗೆ ಘರ್ಷಣೆಗಿಳಿದರು –ಎಎಫ್‌ಪಿ ಚಿತ್ರ

ಲಂಡನ್ (ಪಿಟಿಐ): ಬ್ರಿಟನ್‌ನಾದ್ಯಂತ ವಲಸೆ ವಿರೋಧಿ ಪ್ರತಿಭಟನೆ ನಡೆಯುತ್ತಿದ್ದು, ಪೊಲೀಸರು ಇದುವರೆಗೆ 100ಕ್ಕೂ ಅಧಿಕ ಮಂದಿಯನ್ನು ಬಂಧಿಸಿದ್ದಾರೆ.

ಪ್ರಧಾನಿ ಕಿಯರ್ ಸ್ಟಾರ್ಮರ್ ಅವರು ಹಿಂಸಾತ್ಮಕ ಪ್ರತಿಭಟನೆಗಿಳಿಯುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಲಿವರ್‌ಪೂಲ್, ಹಲ್, ಬ್ರಿಸ್ಟಲ್, ಲೀಡ್ಸ್, ಬ್ಲ್ಯಾಕ್‌ಪೂಲ್, ಬೆಲ್‌ಫಾಸ್ಟ್, ನಾಟಿಂಗ್‌ಹ್ಯಾಂ ಮತ್ತು ಮ್ಯಾಂಚೆಸ್ಟರ್ ನಗರಗಳಲ್ಲಿ ಬಲಪಂಥೀಯ ಗುಂಪುಗಳ ಸದಸ್ಯರು ಬೀದಿಗಿಳಿದು ಪ್ರತಿಭಟನೆ ನಡೆಸಿದರು.

ಹಲವೆಡೆ ಕಲ್ಲೆಸೆತ, ಬೆಂಕಿ ಇಡುವ ಘಟನೆಗಳು ವರದಿಯಾಗಿವೆ. ವಲಸಿಗರಿಗೆ ಆಶ್ರಯ ನೀಡಿರುವ ಹೋಟೆಲ್‌ವೊಂದರ ಕಿಟಕಿ ಗಾಜುಗಳನ್ನು ಒಡೆದು ಹಾಕಲಾಗಿದೆ.

'ಹಿಂಸೆಗೆ ಇಳಿದವರು ತಕ್ಕ ಬೆಲೆ ತೆರಲಿದ್ದಾರೆ' ಎಂದು ಬ್ರಿಟನ್‌ನ ಗೃಹ ಕಾರ್ಯದರ್ಶಿ ಯಿವೆಟ್ ಕೂಪರ್ ಎಚ್ಚರಿಸಿದ್ದಾರೆ.

'ಹಿಂಸೆ: ಸೇನೆಯೇ ಕ್ಷಮೆಯಾಚಿಸಬೇಕು'

ಇಮ್ರಾನ್ ಖಾನ್

ಇಸ್ಲಾಮಾಬಾದ್ (ಪಿಟಿಐ): ಕಳೆದ ವರ್ಷ ಮೇ ತಿಂಗಳಿನಲ್ಲಿ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿ ದಂತೆ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಕ್ಷಮೆಯಾಚಿಸಲು ನಿರಾಕರಿಸಿದ್ದು, ಹಿಂಸಾಚಾರಕ್ಕೆ ಸೇನೆಯೇ ಕ್ಷಮೆಯಾಚಿಸಬೇಕು ಎಂದು ಹೇಳಿದ್ದಾರೆ.

ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿ ದಂತೆ 2023ರ ಮೇ 9ರಂದು ಇಸ್ಲಾಮಾಬಾದ್ ಉಚ್ಚ ನ್ಯಾಯಾಲಯದ ಆವರಣದಿಂದ ಮೇಜರ್ ನೇತೃತ್ವದ ಸೇನೆಯು ಖಾನ್ ಅವರನ್ನು ಬಂಧಿಸಿತ್ತು.

ರಾವಲ್ಪಿಂಡಿಯ ಅಡಿಯಾಲಾ ಜೈಲಿನಲ್ಲಿ ಶನಿವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಖಾನ್, ಯಾವುದೇ ಕಾರಣಕ್ಕೂ ಕ್ಷಮೆಯಾಚಿಸುವುದಿಲ್ಲ ಎಂದು ಹೇಳಿದ್ದಾರೆ.

ಖಾನ್ ಬಂಧನ ವಿರೋಧಿಸಿ ಪಾಕಿಸ್ತಾನ ತೆಹ್ರೀಕ್–ಎ–ಇನ್ಸಾಫ್ ಪಕ್ಷದ ಬೆಂಬಲಿಗರು ರಾಷ್ಟ್ರವ್ಯಾಪ್ತಿ ಪ್ರತಿಭಟನೆ ಮತ್ತು ಗಲಭೆ ನಡೆಸಿದ್ದರು.

ಮೇ 7ರಂದು ಸೇನೆಯ ವಕ್ತಾರ ಮೇಜರ್ ಅಹ್ಮದ್ ಷರೀಫ್, 'ತನ್ನ ಅರಾಜಕತೆಯ ರಾಜಕೀಯಕ್ಕಾಗಿ ಪಕ್ಷವು ಕ್ಷಮೆಯಾಚಿಸಿದರೆ ಮಾತ್ರ ಪಕ್ಷದೊಂದಿಗೆ ಯಾವುದೇ ಮಾತುಕತೆಗೆ ನಡೆಸಬಹುದು' ಎಂದು ಹೇಳಿದ್ದರು.

ನಂತರ, 'ಬ್ಲಾಕ್ ಡೇ ಹಿಂಸಾಚಾರ'ಕ್ಕಾಗಿ ಖಾನ್ ಕ್ಷಮೆಯಾಚಿಸಬೇಕು ಎಂದು ಹಲವು ವಲಯಗಳಿಂದ ಕರೆ ಬಂದಿತ್ತು.

ವಿದೇಶ ಸುದ್ದಿಗಳು

ನಕಲಿ ದಾಖಲೆ; ಭಾರತಕ್ಕೆ ಮರಳಿದ ವಿದ್ಯಾರ್ಥಿ

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ವಿಶ್ವವಿದ್ಯಾಲಯವೊಂದರಲ್ಲಿ ಪ್ರವೇಶ ಪಡೆಯಲು ದಾಖಲೆಗಳನ್ನು ನೀಡಿರುವ ಆರೋಪದಲ್ಲಿ ಬಂಧಿತನಾಗಿದ್ದ 19 ವರ್ಷದ ವಿದ್ಯಾರ್ಥಿಯು ಅಲ್ಲಿನ ಅಧಿಕಾರಿಗಳೊಂದಿಗೆ ಮಾಡಿಕೊಂಡ ಮನವಿ ಒಪ್ಪಂದದ ಆಧಾರದ ಮೇಲೆ ಭಾರತಕ್ಕೆ ಮರಳಲಿದ್ದಾನೆ.

ಪೆನ್ಸಿಲ್ವೇನಿಯಾದ ಖಾಸಗಿ ಸಂಶೋಧನಾ ವಿವಿಯಾದ ಲೇಹಿ ವಿವಿಯಲ್ಲಿ 2023–24ರ ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಪಡೆಯಲು ಆರ್ಯನ್ ಆನಂದ್ ಎಂಬಾತನು ನಕಲಿ ದಾಖಲೆಗಳನ್ನು ಸಲ್ಲಿಸಿದ್ದನು ಎನ್ನಲಾಗಿದೆ.

ವಿವಿಗೆ ಪ್ರವೇಶ ಮತ್ತು ನಂತರ ಸ್ಕಾಲರ್‌ಶಿಪ್ ಪಡೆಯುವ ಉದ್ದೇಶದಿಂದ ಆರ್ಯನ್, ತನ್ನ ತಂದೆ ನಿಧನ ಹೊಂದಿದ್ದಾಗಿ ನಕಲಿ ಮರಣ ದಾಖಲೆಗಳನ್ನು ಸೃಷ್ಟಿಸಿ ಸಲ್ಲಿಸಿದ್ದಾರೆ ಎಂಬುದು ಪೊಲೀಸ್ ತನಿಖೆಯಲ್ಲಿ ಪತ್ತೆಯಾಗಿರುವುದಾಗಿ ವಿವಿಯ ವಿದ್ಯಾರ್ಥಿ ದಿನ ಪತ್ರಿಕೆಯಾದ 'ದಿ ಬ್ರೌನ್ ಅ್ಯಂಡ್ ವೈಟ್' ಕಳೆದ ತಿಂಗಳು ವರದಿ ಮಾಡಿತ್ತು.

ತಪ್ಪೊಪ್ಪಿಕೊಂಡ ಆರ್ಯನ್‌ಗೆ ಜೂನ್ 12ರಂದು ಜಿಲ್ಲಾ ನ್ಯಾಯಾಲಯವು ₹20.94 ಲಕ್ಷ ಪಾವತಿಯೊಂದಿಗೆ ಜಾಮೀನು ನೀಡಿದೆ.

ಸಂಕ್ಷಿಪ್ತ ಸುದ್ದಿ

ವಡೋದರಾದ ಬೀದಿಗಳಲ್ಲಿ ಮೊಸಳೆಗಳ ಕಾಟ

ಅಹಮದಾಬಾದ್ (ಪಿಟಿಐ): ವಿಶ್ವಾಮಿತ್ರಿ ನದಿಯ ನೀರಿನ ಮಟ್ಟ ಏರಿಕೆಯಾಗಿದ್ದು, ವಡೋದರಾದ ಬೀದಿಗಳಲ್ಲಿ ಮೊಸಳೆಗಳ ಕಾಟ ಈ ವರ್ಷವೂ ಹೆಚ್ಚಾಗಿದೆ. ಜುಲೈನಲ್ಲಿ 21 ಮೊಸಳೆಗಳನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

'ಜುಲೈನಲ್ಲಿ ಮಳೆಯ ಪ್ರಮಾಣ ಹೆಚ್ಚಾಗಿದ್ದು, ತಗ್ಗು ಪ್ರದೇಶಗಳು ಜಲಾವೃತಗೊಂಡಿವೆ. ವಿಶ್ವಾಮಿತ್ರಿ ನದಿಯ ಎರಡೂ ಬದಿಗಳಲ್ಲಿ ಜನವಸತಿ ಪ್ರದೇಶವಿದ್ದು, ವಡೋದರಾದ ರಸ್ತೆಗಳಲ್ಲಿ ಮೊಸಳೆಗಳ ಸಂಚಾರ ಹೆಚ್ಚಾಗಿದೆ. ಮೊಸಳೆಗಳನ್ನು ರಕ್ಷಿಸುವ ಕಾರ್ಯ ವರ್ಷವಿಡೀ ನಡೆದಿದೆ. ಜೂನ್‌ನಲ್ಲಿ ನಾಲ್ಕು ಮೊಸಳೆಗಳನ್ನು ರಕ್ಷಿಸಿ ನದಿಗೆ ಬಿಡಲಾಗಿತ್ತು. ಆದರೆ, ಜುಲೈನಲ್ಲಿ ಅವುಗಳ ಸಂಖ್ಯೆ ಹೆಚ್ಚಾಗಿದೆ' ಎಂದು ವಲಯ ಅರಣ್ಯಾಧಿಕಾರಿ ಕರಣ್ ಸಿಂಗ್ ರಜಪೂತ್ ತಿಳಿಸಿದರು.

'ಕಾಡುಪ್ರಾಣಿಗಳು ತಮ್ಮ ನೆಲೆಯನ್ನು ಬಿಡಲು ಇಷ್ಟಪಡುವುದಿಲ್ಲ. ಆದರೆ, ಪ್ರವಾಹದ ಸಮಯದಲ್ಲಿ ಮಾತ್ರ ಆ ಜಾಗವನ್ನು ತೊರೆಯುತ್ತವೆ. ಮೊಸಳೆಗಳು ಕಾಲುವೆಗಳ ಮೂಲಕ ಒಂದು ಜಲ ಮೂಲದಿಂದ ಮತ್ತೊಂದೆಡೆ ಸಂಚರಿಸುತ್ತವೆ' ಎಂದು ವಿವರಿಸಿದರು.

ಕಮರಿಗೆ ಬಿದ್ದಿದ್ದ ಯುವತಿ ರಕ್ಷಣೆ

ಮುಂಬೈ: ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಬೋರ್ನೆ ಘಾಟ್‌ನಲ್ಲಿ ಸೆಲ್ಫಿ ತೆಗೆದುಕೊಳ್ಳುವ ವೇಳೆ 29 ವರ್ಷದ ಯುವತಿ ಆಯತಪ್ಪಿ 150 ಅಡಿ ಆಳದ ಕಮರಿಗೆ ಶನಿವಾರ ಸಂಜೆ ಬಿದ್ದರು. ಪರ್ವತಾರೋಹಿಗಳ ತಂಡವು ತಕ್ಷಣವೇ ಕಾರ್ಯಾಚರಣೆ ನಡೆಸಿ ಆಕೆಯನ್ನು ರಕ್ಷಿಸಿದೆ.

ಪುಣೆಯ ಎಂಟು ಜನರ ತಂಡವು ಠೋಸೆಗರ್ ಜಲಪಾತ ಚಾರಣ ಮಾಡಲು ಬಂದಿತ್ತು. ಕೆಲವು ದಿನಗಳಿಂದ ವ್ಯಾಪಕ ಮಳೆಯಾಗಿದ್ದರಿಂದ ಪ್ರವಾಸಿಗರಿಗೆ ನಿರ್ಬಂಧವಿತ್ತು. ಹೀಗಾಗಿ ಅಲ್ಲಿಂದ ಬೋರ್ನೆ ಘಾಟ್ ವೀಕ್ಷಣೆಗಾಗಿ ತೆರಳಿದ್ದರು.

ಯುವತಿ ಬಿದ್ದ ದೃಶ್ಯ, ರಕ್ಷಣಾ ಕಾರ್ಯಾಚರಣೆಯ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಕಾಲುಜಾರಿ ಬಿದ್ದ ತಕ್ಷಣವೇ ಸ್ಥಳೀಯರು ದಪ್ಪನೆಯ ಹಗ್ಗವನ್ನು ಕೆಳಗೆ ಇಳಿಬಿಟ್ಟಿದ್ದರು. ಹೋಮ್‌ಗಾರ್ಡ್ ಅಭಿಜಿತ್ ಕೆಳಗಿಳಿದು, ಆಕೆಯನ್ನು ಮೇಲಕ್ಕೆ ಕರೆತಂದರು. ತೀವ್ರವಾಗಿ ಗಾಯಗೊಂಡಿದ್ದರಿಂದ ಆಸ್ಪತ್ರೆಗೆ ದಾಖಲಿಸಲಾಗಿದೆ.

'ತಳಮಹಡಿಯ ಕೋಚಿಂಗ್ ಸೆಂಟರ್‌ಗೆ ಬೀಗ'

ಪಟ್ನಾ (ಪಿಟಿಐ): ಜಿಲ್ಲೆಯಲ್ಲಿ ಕಟ್ಟಡದ ತಳಮಹಡಿಯಲ್ಲಿ ಕೋಚಿಂಗ್ ತರಗತಿಗಳನ್ನು ನಡೆಸುವುದು ಕಂಡುಬಂದಲ್ಲಿ ಅಂಥವುಗಳಿಗೆ ತಕ್ಷಣವೇ ಬೀಗಮುದ್ರೆ ಹಾಕಲಾಗುವುದು ಎಂದು ಪಟ್ನಾ ಜಿಲ್ಲಾಡಳಿತ ಭಾನುವಾರ ಎಚ್ಚರಿಕೆ ನೀಡಿದೆ.

ಪಟ್ನಾ ಜಿಲ್ಲಾ ಮ್ಯಾಜಿಸ್ಟ್ರೇಟ್ ಚಂದ್ರಶೇಖರ್ ಸಿಂಗ್ ಅವರು, 'ಅಧಿಕಾರಿಗಳು ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ತಳಮಹಡಿಯಲ್ಲಿ ತರಗತಿಗಳನ್ನು ನಡೆಸುತ್ತಿರುವ ಯಾವುದೇ ಕೋಚಿಂಗ್ ಸೆಂಟರ್ ಈವರೆಗೆ ಪತ್ತೆಯಾಗಿಲ್ಲ. ಅಂಥವು ಕಂಡುಬಂದರೆ ತತ್‌ಕ್ಷಣವೇ ಅವುಗಳಿಗೆ ಬೀಗ ಹಾಕಲು ಸೂಚನೆ ನೀಡಲಾಗಿದೆ. ತಳಮಹಡಿಯಲ್ಲಿ ತರಗತಿಗಳನ್ನು ನಡೆಸುವುದು ಅಸ್ತಿತ್ವದಲ್ಲಿರುವ ನಿಯಮಗಳಿಗೆ ವಿರುದ್ಧವಾಗಿದೆ' ಎಂದು ಹೇಳಿದರು.

ಬಾವಲಿಗಳಲ್ಲಿ ನಿಫಾ ಸೋಂಕು ಪತ್ತೆ

ತಿರುವನಂತಪುರ (ಪಿಟಿಐ): 'ಮಲಪ್ಪುರಂ ಜಿಲ್ಲೆಯ ಪಾಂಡಿಕ್ಕಾಡ್ ಪ್ರದೇಶದ ಬಾವಲಿಗಳಲ್ಲಿ ನಿಫಾ ಸೋಂಕು ಇರುವುದು ದೃಢಪಟ್ಟಿದೆ. ಐದು ಕಿ.ಮೀ ವ್ಯಾಪ್ತಿಯಲ್ಲಿ ಸುಮಾರು 27 ಬಾವಲಿಗಳ ಮಾದರಿಗಳನ್ನು ಪರೀಕ್ಷಿಸಲಾಗಿತ್ತು. ಈ ಪೈಕಿ ಆರು ಬಾವಲಿಗಳಲ್ಲಿ ಪ್ರತಿಕಾಯ ಇರುವುದ ಪತ್ತೆಯಾಗಿದೆ' ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ಮಾಹಿತಿ ನೀಡಿದ್ದಾರೆ.

'ಜೂನ್ 21ರಂದು ಮಲಪ್ಪುರಂ ಜಿಲ್ಲೆಯ 14 ವರ್ಷದ ಬಾಲಕ ನಿಫಾ ಸೋಂಕಿನಿಂದ ಮೃತಪಟ್ಟಿದ್ದ. ಬಾಲಕನ ಸಂಪರ್ಕಕ್ಕೆ ಬಂದಿದ್ದವರ ಪರೀಕ್ಷೆಯನ್ನೂ ನಡೆಸಲಾಗಿದೆ. ಅವರೆಲ್ಲರ ವರದಿಗಳು ನೆಗೆಟಿವ್ ಬಂದಿವೆ' ಎಂದರು.

'ಮನಿಮಾಜಾರ ಯೋಜನೆ' ಉದ್ಘಾಟಿಸಿದ ಸಚಿವ ಅಮಿತ್ ಶಾ

'2029ರಲ್ಲೂ ಎನ್‌ಡಿಎ ಅಧಿಕಾರಕ್ಕೆ'

ಚಂಡೀಗಢ (ಪಿಟಿಐ): ಕೇಂದ್ರದಲ್ಲಿ ಎನ್‌ಡಿಎ ಬಲವನ್ನು ಪ್ರಶ್ನಿಸಿದ್ದ ವಿರೋಧ ಪಕ್ಷಗಳಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, 'ಮೈತ್ರಿಕೂಟದ ಕೇಂದ್ರ ಸರ್ಕಾರವು ಐದು ವರ್ಷಗಳನ್ನು ಪೂರೈಸಲಿದೆ. 2029ರಲ್ಲೂ ಎನ್‌ಡಿಎ ಮತ್ತೆ ಅಧಿಕಾರಕ್ಕೆ ಬರಲಿದೆ' ಎಂದು ಹೇಳಿದ್ದಾರೆ.

ನಗರ ವ್ಯಾಪ್ತಿಯಲ್ಲಿ 24 ಗಂಟೆ ನೀರು ಸರಬರಾಜು ಮಾಡುವ 'ಮನಿಮಾಜಾರ ಯೋಜನೆ' ಉದ್ಘಾಟಿಸಿ ಮಾತನಾಡಿದ ಅವರು, 'ವಿರೋಧ ಪಕ್ಷಗಳು ಏನು ಹೇಳುತ್ತವೆಯೋ ಆ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ ಎಂದು ನಾನು ನಿಮಗೆ ಭರವಸೆ ನೀಡುತ್ತೇನೆ. 2029ರಲ್ಲೂ ಎನ್‌ಡಿಎ ಅಧಿಕಾರಕ್ಕೆ ಏರಲಿದ್ದು, ನರೇಂದ್ರ ಮೋದಿ ಅವರು ಮತ್ತೆ ಬರಲಿದ್ದಾರೆ' ಎಂದು ಅವರು ಹೇಳಿದ್ದಾರೆ.

'ಕೆಲವು ಸ್ಥಾನಗಳನ್ನು ಗೆದ್ದು, ಚುನಾವಣೆಯಲ್ಲಿ ಯಶಸ್ಸು ಸಿಕ್ಕಿದೆ ಎಂದು ವಿಪಕ್ಷಗಳು ಭಾವಿಸಿವೆ. ಕಳೆದ ಮೂರು ಲೋಕಸಭಾ ಚುನಾವಣೆಗಳಲ್ಲಿ ಒಟ್ಟು ಕಾಂಗ್ರೆಸ್ ಗೆದ್ದಿರುವ ಸ್ಥಾನಗಳಿಗಿಂತ ಹೆಚ್ಚನ್ನು ಬಿಜೆಪಿ 2024ರ ಚುನಾವಣೆಯಲ್ಲಿ ಗೆದ್ದಿದೆ. ಅಲ್ಲದೆ, ಇಂಡಿಯಾ ಬಣದ ಒಟ್ಟು ಸ್ಥಾನಗಳಿಗಿಂತ ಹೆಚ್ಚು ಸಂಖ್ಯೆಯನ್ನು ಎನ್‌ಡಿಎ ಬಣದ ಏಕೈಕ ಪಕ್ಷವು ಬಿಜೆಪಿ ಹೊಂದಿದೆ' ಎಂದು ಕುಟುಕಿದ್ದಾರೆ.

'ಅನಿಶ್ಚಿತತೆ ಸೃಷ್ಟಿಸಲು ಯತ್ನಿಸುತ್ತಿರುವವರು, ಪದೇ ಪದೇ ಈ ಸರ್ಕಾರ ಉಳಿಯುವುದಿಲ್ಲ ಎಂದು ಹೇಳುತ್ತಿದ್ದಾರೆ' ಎಂದು ಶಾ ಕಿಡಿಕಾರಿದ್ದಾರೆ.

'ಈ ಸರ್ಕಾರ ಐದು ವರ್ಷ ಪೂರ್ಣಗೊಳಿಸಲಿದ್ದು, ಮುಂದಿನ ಅವಧಿಯಲ್ಲೂ ಅಧಿಕಾರಕ್ಕೆ ಬರಲಿದೆ ಎಂದು ವಿರೋಧ ಪಕ್ಷಗಳ ನನ್ನ ಸ್ನೇಹಿತರಿಗೆ ಭರವಸೆ ನೀಡಲು ಬಯಸುತ್ತೇನೆ. ವಿರೋಧ ಪಕ್ಷದಲ್ಲೇ ಕೂರಲು ಸಿದ್ಧವಾಗಿರಿ. ಪ್ರತಿಪಕ್ಷದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುವತ್ತ ಚಿತ್ತ ಹರಿಸಿ' ಎಂದು ಸಲಹೆ ನೀಡಿದ್ದಾರೆ.

'ಹೊಸ ಕಾನೂನುಗಳು 21ನೇ ಶತಮಾನದ ಅತಿ ದೊಡ್ಡ ಸುಧಾರಣೆ'

'ಮೂರು ಹೊಸ ಕ್ರಿಮಿನಲ್ ಕಾನೂನುಗಳು 21ನೇ ಶತಮಾನದ ಅತೀ ದೊಡ್ಡ ಸುಧಾರಣೆಯಾಗಿದ್ದು, ಜನರಿಗೆ ನ್ಯಾಯ ಸಿಗುವುದನ್ನು ಖಚಿತಪಡಿಸುವುದೇ ಅದರ ಉದ್ದೇಶವಾಗಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದ್ದಾರೆ.

'ಭಾರತೀಯ ನ್ಯಾಯ ಸಂಹಿತಾ(ಬಿಎನ್‌ಎಸ್), ಭಾರತೀಯ ನಾಗರಿಕ ಸುರಕ್ಷತಾ ಸಂಹಿತಾ(ಬಿಎನ್‌ಎಸ್‌ಎಸ್) ಹಾಗೂ ಭಾರತೀಯ ಸುರಕ್ಷ್ಯಾ ಅಭಿಯಾನಂ (ಬಿಎಸ್‌ಎ) ಕಾನೂನಿನ ಸಂಪೂರ್ಣ ಅನುಷ್ಠಾನದಿಂದ ಭಾರತವು ಅತ್ಯಂತ ಆಧುನಿಕ ತಂತ್ರಜ್ಞಾನದ ನ್ಯಾಯವ್ಯವಸ್ಥೆಯನ್ನು ಹೊಂದಲಿದೆ' ಎಂದು ಅವರು ತಿಳಿಸಿದರು.

'ಮುಂದಿನ ಎರಡು ತಿಂಗಳಲ್ಲಿ ಮೂರು ಕಾನೂನುಗಳು ನೂರಕ್ಕೆ ನೂರರಷ್ಟು ಅನುಷ್ಠಾನವಾಗಲಿರುವ ಮೊದಲ ಘಟಕ ಚಂಡೀಗಢವಾಗಲಿದೆ' ಎಂದು ಇದೇ ವೇಳೆ ಶಾ ತಿಳಿಸಿದರು.

ನಾಳೆಯಿಂದ ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆ

ರೆಪೊ ದರದಲ್ಲಿ ಯಥಾಸ್ಥಿತಿ?

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯು ಆಗಸ್ಟ್ 6ರಿಂದ 8ರ ವರೆಗೆ ನಡೆಯಲಿದ್ದು, ಈ ಬಾರಿಯೂ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ಸಾಧ್ಯತೆಯಿದೆ.

ಅಧ್ಯಕ್ಷತೆ ವಹಿಸಲಿರುವ ಗವರ್ನರ್ ಶಕ್ತಿಕಾಂತ ದಾಸ್, ಆಗಸ್ಟ್ 8ರಂದು ಸಭೆಯ ನಿರ್ಧಾರ ಪ್ರಕಟಿಸಲಿದ್ದಾರೆ.

ಶೇ 4ರ ಮಿತಿಯಲ್ಲಿ ಚಿಲ್ಲರೆ ಹಣದುಬ್ಬರವನ್ನು ಕಾಯ್ದುಕೊಳ್ಳುವುದು ಆರ್‌ಬಿಐ ಗುರಿಯಾಗಿದೆ. ಆದರೆ, ಹಣದುಬ್ಬರವು ಈ ಮಿತಿಯೊಳಗೆ ಬಂದಿಲ್ಲ. ಸದ್ಯ ರೆಪೊ ದರ ಶೇ 6.5ರಷ್ಟಿದ್ದು, 2023ರ ಫೆಬ್ರುವರಿಯಿಂದಲೂ ಬದಲಾವಣೆ ಮಾಡಿಲ್ಲ.

ರೆಪೊ ದರ ಇಳಿಕೆಗೂ ಮೊದಲು ಆರ್‌ಬಿಐ, ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್‌ನ ನಿರ್ಧಾರವನ್ನು ಅವಲೋಕಿಸಲಿದೆ. ಫೆಡರಲ್ ರಿಸರ್ವ್ ಬಡ್ಡಿದರ ಕಡಿತಗೊಳಿಸಿಲ್ಲ. ಹಾಗಾಗಿ, ಆರ್‌ಬಿಐ ಕೂಡ ಇದೇ ಹಾದಿ ತುಳಿಯುವ ಸಾಧ್ಯತೆಯಿದೆ ಎಂದು ಆರ್ಥಿಕ ತಜ್ಞರು ತಿಳಿಸಿದ್ದಾರೆ.

‘ಸದ್ಯ ಚಿಲ್ಲರೆ ಹಣದುಬ್ಬರವು ಶೇ 5.1ರಷ್ಟಿದೆ. ಮುಂಬರುವ ತಿಂಗಳುಗಳಲ್ಲಿ ಇದು ಇಳಿಕೆಯಾಗುವ ಸಾಧ್ಯತೆಯಿದೆ. ಅಲ್ಲಿಯವರೆಗೂ ರೆಪೊ ದರ ಪರಿಷ್ಕರಣೆ ಮಾಡುವ ಸಾಧ್ಯತೆ ಇಲ್ಲ’ ಎಂದು ಬ್ಯಾಂಕ್ ಆಫ್ ಬರೋಡಾದ ಮುಖ್ಯ ಅರ್ಥಶಾಸ್ತ್ರಜ್ಞ ಮದನ್ ಸಬ್ನವಿಸ್ ತಿಳಿಸಿದ್ದಾರೆ.

ಈಗಿರುವ ಬಡ್ಡಿದರವು ವ್ಯಾಪಾರ ಚಟುವಟಿಕೆಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಹೇಳಿದ್ದಾರೆ.

‘ಸಭೆಯಲ್ಲಿ ಜಿಡಿಪಿ ಬೆಳವಣಿಗೆಯನ್ನು ಪರಿಷ್ಕರಿಸುವ ಸಾಧ್ಯತೆ ಕಡಿಮೆ. ಹಣದುಬ್ಬರದ ಸ್ಥಿತಿಗತಿ ಬಗ್ಗೆ ಹೆಚ್ಚಿನ ವಿವರಣೆ ನೀಡುವ ನಿರೀಕ್ಷೆಯಿದೆ’ ಎಂದು ಹೇಳಿದ್ದಾರೆ.

‘ರೆಪೊ ದರ ಕಡಿತಗೊಳಿಸಿದರೆ ಗೃಹ ಸಾಲ ಪಡೆದವರಿಗೆ ಕೊಂಚ ಪರಿಹಾರ ಸಿಗಲಿದೆ. ಆರ್ಥಿಕತೆ ಬೆಳವಣಿಗೆಗೆ ನೆರವಾಗಲಿದೆ. ರಿಯಲ್ ಎಸ್ಟೇಟ್ ಸೇರಿ ಹಲವು ವಲಯಗಳು ಅಭಿವೃದ್ಧಿಯಾಗಲಿವೆ. ಅಲ್ಲದೆ, ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 4.9ರಷ್ಟು ವಿತ್ತೀಯ ಕೊರತೆ ಕಾಯ್ದುಕೊಳ್ಳುವ ಸರ್ಕಾರದ ಗುರಿ ಸಾಧನೆಗೂ ಸಹಕಾರಿಯಾಗಲಿದೆ’ ಎಂದು ಸಿಗ್ನೆಚರ್ ಗ್ಲೋಬಲ್ (ಇಂಡಿಯಾ) ಸಂಸ್ಥಾಪಕ ಮತ್ತು ಮುಖ್ಯಸ್ಥ ಪ್ರದೀಪ್ ಅಗರ್ವಾಲ್ ತಿಳಿಸಿದ್ದಾರೆ.

ಡಿಸೆಂಬರ್‌ನಲ್ಲಿ ಕಡಿತ ಸಾಧ್ಯತೆ

‘ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಹಣದುಬ್ಬರವು ಶೇ 4.9ರಷ್ಟಿದೆ. ಹಾಗಾಗಿ, ರೆಪೊ ದರ ಕಡಿತ ಕುರಿತಂತೆ ಹಿಂದಿನ ಸಭೆಯಲ್ಲಿ ಕೈಗೊಂಡಿದ್ದ ಎಂಪಿಸಿ ಸದಸ್ಯರ ಮತ ಚಲಾವಣೆ ನಿರ್ಧಾರದಲ್ಲಿ ಬದಲಾವಣೆಯಾಗುವ ಸಾಧ್ಯತೆ ಕಡಿಮೆಯಿದೆ’ ಎಂದು ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

‘ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ಉತ್ತಮ ಮಳೆಯಾದರೆ ಆಹಾರ ಪದಾರ್ಥಗಳ ಬೆಲೆ ಇಳಿಕೆಯಾಗಲಿದೆ. ಜಾಗತಿಕ ಅಥವಾ ದೇಶೀಯ ಮಟ್ಟದಲ್ಲಿ ಬಿಕ್ಕಟ್ಟು ತಲೆದೋರದಿದ್ದರೆ ಅಕ್ಟೋಬರ್‌ನಲ್ಲಿ ನಡೆಯುವ ಎಂಪಿಸಿ ಸಭೆಯಲ್ಲಿ ರೆಪೊ ದರ ಕಡಿತಗೊಳಿಸಲು ಆರ್‌ಬಿಐ ನಿರ್ಧಾರ ಕೈಗೊಳ್ಳಲಿದೆ. ಡಿಸೆಂಬರ್‌ನಲ್ಲಿ ಶೇ 0.25ರಷ್ಟು ಕಡಿತಗೊಳಿಸಬಹುದು. ಬಳಿಕ 2025ರ ಫೆಬ್ರುವರಿಯಲ್ಲಿ ಇಷ್ಟೇ ಪ್ರಮಾಣದಲ್ಲಿ ಇಳಿಕೆ ಮಾಡುವ ಸಾಧ್ಯತೆಯಿದೆ’ ಎಂದು ಹೇಳಿದ್ದಾರೆ.

ಕಾರ್ಡ್ ದುರ್ಬಳಕೆ ತಡೆ ಹೇಗೆ?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಕ್ರೆಡಿಟ್ ಕಾರ್ಡ್ ಅಥವಾ ಡೆಬಿಟ್ ಕಾರ್ಡ್ ಕಳೆದುಕೊಳ್ಳುವುದು ಮನಸ್ಸಿಗೆ ಬೇಸರ ಉಂಟು ಮಾಡುತ್ತದೆ. ಜೊತೆಗೆ, ಹಣಕಾಸಿನ ನಷ್ಟಕ್ಕೂ ದಾರಿ ಮಾಡಿಕೊಡಬಹುದು.

ಈಗಂತೂ ಬಹುಪಾಲು ಕ್ರೆಡಿಟ್ ಕಾರ್ಡ್ ಅಥವಾ ಡೆಬಿಟ್ ಕಾರ್ಡ್‌ನಲ್ಲಿ ಟ್ಯಾಪ್ ಟು ಪೇ ವ್ಯವಸ್ಥೆ (ಪಿನ್ ನಂಬರ್ ಇಲ್ಲದೆ ಪಾವತಿಸುವ ವ್ಯವಸ್ಥೆ) ಇದೆ. ಇದರಿಂದ ಕಳೆದು ಹೋದ ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಅನ್ನು ದುರ್ಬಳಕೆ ಮಾಡಿಕೊಳ್ಳುವುದು ಬಹಳ ಸುಲಭ. ಈ ಕಾರ್ಡ್‌ಗಳು ಕಳೆದು ಹೋದಾಗ ಅಥವಾ ಕಳ್ಳತನವಾದಾಗ ಖಾತೆಯಲ್ಲಿ ಇರುವ ಹಣ ಅನ್ಯರ ಪಾಲಾಗದಂತೆ ಎಚ್ಚರಿಕೆವಹಿಸುವುದು ಹೇಗೆ? ಅವುಗಳನ್ನು ಬ್ಲಾಕ್ ಮಾಡಲು ಹಲವು ಮಾರ್ಗಗಳಿವೆ. ಆ ಕುರಿತು ತಿಳಿಯೋಣ.

- **ಬ್ಯಾಂಕ್‌ನ ಕಸ್ಟಮರ್ ಕೇರ್‌ಗೆ ಕರೆ ಮಾಡಿ:** ಕ್ರೆಡಿಟ್ ಕಾರ್ಡ್ ಅಥವಾ ಡೆಬಿಟ್ ಕಾರ್ಡ್ ಕಳೆದು ಹೋದ ತಕ್ಷಣ ಮಾಡಬೇಕಾದ ಮೊದಲನೇ ಕೆಲಸವೆಂದರೆ ಅದನ್ನು ಬ್ಲಾಕ್ ಮಾಡುವುದು. ಬ್ಯಾಂಕ್‌ನ ಕಸ್ಟಮರ್ ಕೇರ್‌ಗೆ (ಗ್ರಾಹಕರ ಸಹಾಯವಾಣಿ) ಕರೆ ಮಾಡಿ ಕೂಡಲೇ ಬ್ಲಾಕ್ ಮಾಡಲು ತಿಳಿಸಬೇಕು. ಹೀಗೆ ಬ್ಲಾಕ್ ಮಾಡುವ ಮುನ್ನ ಕಸ್ಟಮರ್ ಕೇರ್ ಸಿಬ್ಬಂದಿ ನಿಮ್ಮ ಬ್ಯಾಂಕ್ ಖಾತೆ ಸಂಖ್ಯೆ, ವೈಯಕ್ತಿಕ ಮಾಹಿತಿ ಇತ್ಯಾದಿ ಕೆಲವು ವಿವರ ಕೇಳುತ್ತಾರೆ. ಅವನ್ನು ಒದಗಿಸಿದರೆ ಕಾರ್ಡ್ ಬ್ಲಾಕ್ ಮಾಡಲು ಅವರು ಸಹಾಯ ಮಾಡುತ್ತಾರೆ.
- **ಎಸ್‌ಎಂಎಸ್ ಬಳಕೆ:** ಬಹುಪಾಲು ಬ್ಯಾಂಕ್‌ಗಳು ಎಸ್‌ಎಂಎಸ್ ಮೂಲಕ ಕಾರ್ಡ್‌ಗಳನ್ನು ಬ್ಲಾಕ್ ಮಾಡಲು ಅವಕಾಶ ಕಲ್ಪಿಸಿವೆ. ನಿಮ್ಮ ಕಾರ್ಡ್ ಕಳ್ಳತನವಾದಲ್ಲಿ ಸೂಚಿತ ಮೊಬೈಲ್ ಸಂಖ್ಯೆಗೆ ಸೂಚಿತ ಮಾದರಿಯಲ್ಲಿ ‘BLOCK’ ಅಂತ ಎಸ್‌ಎಂಎಸ್ ಕಳುಹಿಸಿದರೆ ಕಾರ್ಡ್‌ಗಳನ್ನು ಬ್ಲಾಕ್ ಮಾಡಲು ಸಾಧ್ಯವಿದೆ. ಈ ರೀತಿಯ ಎಸ್‌ಎಂಎಸ್ ಮೂಲಕ ಅತ್ಯಂತ ವೇಗವಾಗಿ ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಅನ್ನು ಬ್ಲಾಕ್ ಮಾಡಬಹುದಾಗಿದೆ. ಯಾರು ಕೀ ಪ್ಯಾಡ್ ಮೊಬೈಲ್ ಬಳಸುವರೋ ಅವರಿಗೂ ಎಸ್‌ಎಂಎಸ್ ಮಾದರಿಯಿಂದ ಅನುಕೂಲವಿದೆ. ಬ್ಲಾಕ್ ಎಸ್‌ಎಂಎಸ್ ಕಳುಹಿಸಿದ ನಂತರದಲ್ಲಿ ಕಾರ್ಡ್ ಸ್ಥಗಿತಗೊಳಿಸಿರುವ ಬಗ್ಗೆ ಬ್ಯಾಂಕ್ ಮತ್ತೊಂದು ಎಸ್‌ಎಂಎಸ್ ಸಂದೇಶ ಕಳುಹಿಸುತ್ತದೆ.
- **ನೆಟ್ ಬ್ಯಾಂಕಿಂಗ್, ಬ್ಯಾಂಕ್ ಆ್ಯಪ್ ಬಳಕೆ:** ನೀವು ನೆಟ್ ಬ್ಯಾಂಕಿಂಗ್ ವ್ಯವಸ್ಥೆ ಹೊಂದಿದ್ದರೆ ಅದರ ಮೂಲಕವೂ ಕಾರ್ಡ್‌ಗಳನ್ನು ಬ್ಲಾಕ್ ಮಾಡಲು ಸಾಧ್ಯವಿದೆ. ಹೀಗೆ ಮಾಡುವುದರಿಂದ ಕಾರ್ಡ್‌ನ ಸಂಭಾವ್ಯ ದುರ್ಬಳಕೆ ಮತ್ತು ಹಣಕಾಸಿನ ನಷ್ಟ ತಪ್ಪಿಸಬಹುದು.

ಹಲವು ಬ್ಯಾಂಕ್‌ಗಳು ಮೊಬೈಲ್ ಬ್ಯಾಂಕಿಂಗ್ ಆ್ಯಪ್‌ಗಳ ಮೂಲಕ ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಬಳಕೆ ಸ್ಥಗಿತಗೊಳಿಸುವ ವ್ಯವಸ್ಥೆ ಕಲ್ಪಿಸಿವೆ. ಆ್ಯಪ್‌ಗಳ ಮೂಲಕ ಡೆಬಿಟ್ ಕಾರ್ಡ್ ಅನ್ನು ಅತ್ಯಂತ ವೇಗವಾಗಿ ಮಾಡಲು ಸಾಧ್ಯವಿದೆ. ಇನ್ನು ಕೆಲವು ಬ್ಯಾಂಕ್‌ಗಳು ವಾಟ್ಸ್‌ಆ್ಯಪ್ ಮೂಲಕ ಕೂಡ ಕಾರ್ಡ್ ಸ್ಥಗಿತಗೊಳಿಸಲು ಅವಕಾಶ ಕಲ್ಪಿಸಿವೆ.

- **ಬ್ಯಾಂಕ್ ಶಾಖೆಗೆ ಭೇಟಿ ನೀಡಿ:** ಒಂದೊಮ್ಮೆ ಬ್ಯಾಂಕ್ ಕಾರ್ಯ ನಿರ್ವಹಿಸುವ ಸಮಯದಲ್ಲಿ ನಿಮ್ಮ ಕಾರ್ಡ್ ಕಳೆದು ಹೋದರೆ ನೇರವಾಗಿ ಸಮೀಪದ ಬ್ಯಾಂಕ್ ಶಾಖೆಗೆ ಹೋಗಿ ಬ್ಲಾಕ್ ಮಾಡಿಸಬಹುದಾಗಿದೆ. ಆನ್‌ಲೈನ್, ಎಸ್‌ಎಂಎಸ್, ಆ್ಯಪ್ ಮೂಲಕ ಬ್ಲಾಕ್ ಮಾಡಲು ಸಾಧ್ಯವಾಗದಿದ್ದರೆ ಬ್ಯಾಂಕ್ ಶಾಖೆಗೆ ಹೋಗುವುದು ಉತ್ತಮ ಆಯ್ಕೆಯಾಗಿದೆ.

ಬ್ಯಾಂಕ್ ಶಾಖೆಗೆ ಹೋದಾಗ ಯಾವುದಾದರು ಗುರುತಿನ ಚೀಟಿ ಮತ್ತಿತರ ವಿವರ ಕೇಳುತ್ತಾರೆ. ಅದನ್ನು ನೀಡಿ ಕಾರ್ಡ್ ಕಳೆದು ಹೋದ ಬಗ್ಗೆ ವಿವರಿಸಿದರೆ ಕೂಡಲೇ ಕಾರ್ಡ್ ಬ್ಲಾಕ್ ಮಾಡುತ್ತಾರೆ. ಆ ವೇಳೆಯಲ್ಲಿಯೇ ಮತ್ತೊಂದು ಹೊಸ ಕಾರ್ಡ್ ಪಡೆಯುವುದು ಹೇಗೆ ಎನ್ನುವ ಬಗ್ಗೆಯೂ ಬ್ಯಾಂಕ್‌ನಲ್ಲಿ ವಿವರ ಪಡೆದುಕೊಳ್ಳಬಹುದು.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಕಾರ್ಡ್ ಬ್ಲಾಕ್ ಮಾಡೋದು ಏಕೆ ಮುಖ್ಯ?

- ನಿಮ್ಮ ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್‌ನಲ್ಲಾಗುವ ಅನಧಿಕೃತ ವಹಿವಾಟು ತಡೆಯಲು ಕಾರ್ಡ್ ಬ್ಲಾಕ್ ಮಾಡಿಸಬೇಕು
- ಕಾರ್ಡ್ ಕಳೆದು ಹೋದಾಗ ಅದನ್ನು ಬ್ಲಾಕ್ ಮಾಡಿಸದಿದ್ದರೆ ಬೇರೆಯವರು ಕಾರ್ಡ್ ದುರುಪಯೋಗ ಮಾಡಿಕೊಂಡಾಗ ಕ್ರೆಡಿಟ್ ಸ್ಕೋರ್ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ
- ಯಾವುದೇ ಅನಧಿಕೃತ ವಹಿವಾಟನ್ನು ಬ್ಯಾಂಕ್‌ನಲ್ಲಿ ಪ್ರಶ್ನೆ ಮಾಡಬೇಕಾದರೆ ಕಳೆದು ಹೋದ ಕಾರ್ಡ್ ಅನ್ನು ಬ್ಲಾಕ್ ಮಾಡುವುದು ಬಹಳ ಮುಖ್ಯ
- ಕಾರ್ಡ್ ಕಳೆದು ಹೋದಾಗ ಅದನ್ನು ಬ್ಲಾಕ್ ಮಾಡಿಸುವುದರಿಂದ ಮಾನಸಿಕ ನೆಮ್ಮದಿ ಸಿಗುತ್ತದೆ

ಷೇರುಪೇಟೆ ಸೂಚ್ಯಂಕಗಳ ಓಟಕ್ಕೆ ತಡೆ

ಆಗಸ್ಟ್ 2ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಕುಸಿತ ದಾಖಲಿಸಿವೆ. 80,981 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.43ರಷ್ಟು ಇಳಿಕೆಯಾಗಿದೆ. 24,717 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.47ರಷ್ಟು ತಗ್ಗಿದೆ.

ಅಮೆರಿಕದ ಮಾಹಿತಿ ತಂತ್ರಜ್ಞಾನ ಕಂಪನಿಗಳ ಫಲಿತಾಂಶಗಳಲ್ಲಿ ಹಿನ್ನಡೆ, ಅಮೆರಿಕದಲ್ಲಿ ಉದ್ಯೋಗ ಕೊರತೆ ಹೆಚ್ಚಳ, ಚೀನಾದಲ್ಲಿ ಪ್ರಗತಿಯ ವೇಗ ಕುಂಠಿತ, ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡು ಬಂದ ಕುಸಿತ, ಅಮೆರಿಕ ಫೆಡರಲ್ ಬ್ಯಾಂಕ್‌ನ ಬಡ್ಡಿದರದಲ್ಲಿ ಯಥಾಸ್ಥಿತಿ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಹೂಡಿಕೆ ಹಿಂತೆಗೆತ ಸೇರಿ ಹಲವು ಅಂಶಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ರಿಯಲ್ ಎಸ್ಟೇಟ್ ಶೇ 3.76, ನಿಫ್ಟಿ ಐ.ಟಿ ಶೇ 3.04, ನಿಫ್ಟಿ ಆಟೊ ಶೇ 2.04, ಎಫ್‌ಎಂಸಿಜಿ ಶೇ 1.57, ಲೋಹ ಶೇ 1.16, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 1.01ರಷ್ಟು ಕುಸಿದಿವೆ.

ನಿಫ್ಟಿ ಎನರ್ಜಿ ಶೇ 2.53, ಫಾರ್ಮಾ ಶೇ 1.39, ಮಾಧ್ಯಮ ಶೇ 1.19, ಅನಿಲ ಮತ್ತು ತೈಲ ಶೇ 0.68, ಫೈನಾನ್ಸ್ ಶೇ 0.21 ಮತ್ತು ನಿಫ್ಟಿ ಬ್ಯಾಂಕ್ ಶೇ 0.11ರಷ್ಟು ಹೆಚ್ಚಳ ಕಂಡಿವೆ.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ಎನ್‌ಟಿಪಿಸಿ ಶೇ 5.95, ಬಿಪಿಸಿಎಲ್ ಶೇ 5.89, ಏಷ್ಯನ್ ಪೇಂಟ್ಸ್ ಶೇ 5.31, ಪವರ್ ಗ್ರಿಡ್ ಶೇ 4.01, ಡಿವೀಸ್ ಲ್ಯಾಬ್ಸ್ ಶೇ 3.33, ಕೋಲ್ ಇಂಡಿಯಾ ಶೇ 3.03, ಅದಾನಿ ಪೋರ್ಟ್ಸ್ ಶೇ 2.97, ಅದಾನಿ ಎಂಟರ್ ಪ್ರೈಸಸ್ ಶೇ 2.71, ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 2.52, ಬಜಾಜ್ ಫಿನ್‌ಸರ್ವ್ ಶೇ 2.46, ಶ್ರೀರಾಮ್ ಫೈನಾನ್ಸ್ ಶೇ 2.05 ಮತ್ತು ಬಜಾಜ್ ಆಟೊ ಶೇ 1.33ರಷ್ಟು ಏರಿಕೆ ಕಂಡಿವೆ.

ಐಷರ್ ಮೋಟರ್ಸ್ ಶೇ 5.63, ಎಲ್‌ಟಿಐ ಮೈಂಡ್ ಟ್ರೀ ಶೇ 5.24, ಗ್ರಾಸಿಮ್ ಇಂಡಸ್ಟ್ರೀಸ್ ಶೇ 5.21, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 4.51, ವಿಪ್ರೊ ಶೇ 4.34, ಹೀರೊ ಮೋಟೊಕಾರ್ಪ್ ಶೇ 3.4, ಸಿಪ್ಲಾ ಶೇ 3.23, ಇನ್ಫೊಸಿಸ್ ಶೇ 3.22, ಹಿಂಡಾಲ್ಕೋ ಇಂಡಸ್ಟ್ರೀಸ್ ಶೇ 3.06, ಐಟಿಸಿ ಶೇ 2.71, ಟಾಟಾ ಸ್ಟೀಲ್ ಶೇ 2.58, ಟಿಸಿಎಸ್ ಶೇ 2.35ರಷ್ಟು ಕುಸಿದಿವೆ.

ಮುನ್ನೋಟ: ಈ ವಾರ ಏರ್‌ಟೆಲ್, ಒಎನ್‌ಜಿಸಿ, ಬಿಇಎಂಎಲ್, ವಿಆರ್‌ಎಲ್ ಲಾಜಿಸ್ಟಿಕ್ಸ್, ಎಬಿಬಿ ಇಂಡಿಯಾ, ಹನಿವೆಲ್ ಆಟೊಮೇಷನ್, ಗ್ರಾಫೈಟ್ ಇಂಡಿಯಾ, ರೇಮಂಡ್, ಪಿಡಿಲೈಟ್ ಇಂಡಸ್ಟ್ರೀಸ್, ಎನ್‌ಎಚ್‌ಪಿಸಿ, ಬಾಷ್, ಟಿವಿಎಸ್ ಮೋಟರ್ ಕಂಪನಿ, ಇಂಡಿಗೊ ಪೇಂಟ್ಸ್, ಎಂಆರ್‌ಎಫ್, ಆಯಿಲ್ ಇಂಡಿಯಾ, ಬಯೋಕಾನ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ.

ಕಂಪನಿಗಳ ತ್ರೈಮಾಸಿಕ ಫಲಿತಾಂಶ ಆಧರಿಸಿ ಕೆಲ ಕಂಪನಿಗಳ ಷೇರುಗಳು ಮಾರುಕಟ್ಟೆಯಲ್ಲಿ ಏರಿಳಿತ ಕಾಣಲಿವೆ. ಉಳಿದಂತೆ ಜಾಗತಿಕ ಮಾರುಕಟ್ಟೆಗಳಲ್ಲಿನ ಪ್ರಭಾವವು ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳ ಮೇಲೆ ಇರಲಿದೆ.

ತೈಲ ಕಂಪನಿಗಳ ಲಾಭ ಕುಸಿತ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಾದ ಭಾರತೀಯ ತೈಲ ನಿಗಮ (ಐಒಸಿ), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನ (ಎಚ್‌ಪಿಸಿಎಲ್) ಲಾಭದ ಪ್ರಮಾಣವು ಶೇ 90ರಷ್ಟು ಕುಸಿದಿದೆ.

ಉತ್ಪಾದನಾ ವೆಚ್ಚ ಕಡಿಮೆಯಾದಾಗ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ದರ ಇಳಿಸಲಿಲ್ಲ. ಹಿಂದಿನ ವರ್ಷದಲ್ಲಿ ಆಗಿರುವ ನಷ್ಟ ಸರಿದೂಗಿಸಿಕೊಳ್ಳುವ ನಿಟ್ಟಿನಲ್ಲಿ ಇಂಧನ ಬೆಲೆ ಪರಿಷ್ಕರಿಸುವುದಿಲ್ಲ ಎಂದು ಸಮರ್ಥಿಸಿಕೊಂಡಿದ್ದವು. ಇದರಿಂದ ಕಂಪನಿಗಳ ಬೊಕ್ಕಸಕ್ಕೆ ಹೆಚ್ಚು ಆದಾಯ ಹರಿದು ಬಂದಿತ್ತು.

ಈ ನಡುವೆಯೇ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ₹2 ಕಡಿತಗೊಳಿಸಿತು. ಜೊತೆಗೆ, ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್ ದರವನ್ನೂ ನಿಯಂತ್ರಿಸಿತು. ಇದರಿಂದ ಕಂಪನಿಗಳ ಲಾಭದಲ್ಲಿ ಕುಸಿತವಾಗಿದೆ.

ಐಒಸಿ ಕಳೆದ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹13,750 ಕೋಟಿ ಲಾಭ ಗಳಿಸಿತ್ತು. ಈ ತ್ರೈಮಾಸಿಕದಲ್ಲಿ ₹2,643 ಗಳಿಸಿದೆ. ಈ ಲಾಭಕ್ಕೆ ಹೋಲಿಸಿದರೆ ಶೇ 81ರಷ್ಟು ಕುಸಿತವಾಗಿದೆ.

ಎಚ್‌ಪಿಸಿಎಲ್ ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹6,765 ಕೋಟಿ ಲಾಭ ಗಳಿಸಿತ್ತು. ಈ ತ್ರೈಮಾಸಿಕದಲ್ಲಿ ₹633 ಕೋಟಿ ಗಳಿಸಿದೆ. ಲಾಭದ ಪ್ರಮಾಣದಲ್ಲಿ ಶೇ 90ರಷ್ಟು ಇಳಿಕೆಯಾಗಿದೆ.

ಬಿಪಿಸಿಎಲ್ ಲಾಭದ ಪ್ರಮಾಣವು ಇಳಿಕೆಯಾಗಿದ್ದು, ₹2,841 ಕೋಟಿ ಗಳಿಸಿದೆ. ಕಳೆದ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹10,644 ಕೋಟಿ ಗಳಿಸಿತ್ತು. 2023–24ನೇ ಪೂರ್ಣ ಆರ್ಥಿಕ ವರ್ಷದಲ್ಲಿ ಐಒಸಿ ₹39,618 ಕೋಟಿ, ಬಿಪಿಸಿಎಲ್ ₹26,673 ಕೋಟಿ ಮತ್ತು ಎಚ್‌ಪಿಸಿಎಲ್ ₹14,693 ಕೋಟಿ ಲಾಭ ಗಳಿಸಿತ್ತು.

ಆರ್ಡರ್ ಶುಲ್ಕ ಜೊಮಾಟೊದಿಂದ ₹83 ಕೋಟಿ ಸಂಗ್ರಹ

ನವದೆಹಲಿ (ಪಿಟಿಐ): ಜೊಮಾಟೊ ಕಂಪನಿಯು ತನ್ನ ಪ್ರತಿ ಆರ್ಡರ್ ಮೇಲೆ ವಿಧಿಸುವ ಶುಲ್ಕದ (ಪ್ಲಾಟ್‌ಫಾರ್ಮ್ ಫೀ) ಮೂಲಕ ಪ್ರಸಕ್ತ ವರ್ಷದ ಮಾರ್ಚ್ ಅಂತ್ಯದವರೆಗೆ ₹83 ಕೋಟಿ ಸಂಗ್ರಹಿಸಿದೆ.

ಕಳೆದ ವರ್ಷದ ಆಗಸ್ಟ್‌ನಿಂದ ಈ ಶುಲ್ಕ ವಿಧಿಸುವ ಪ್ರಕ್ರಿಯೆ ಆರಂಭಿಸಲಾಗಿತ್ತು. ವಾರ್ಷಿಕ ಲಾಭ ಹಾಗೂ ವರಮಾನ ಹೆಚ್ಚಳಕ್ಕಾಗಿ ಈ ಶುಲ್ಕ ವಿಧಿಸಲಾಗುತ್ತದೆ ಎಂದು ಕಂಪನಿಯು ತಿಳಿಸಿದೆ.

ರೆಸ್ಟೋರೆಂಟ್‌ಗಳಿಗೆ ಕಮಿಷನ್ ನೀಡಿಕೆಯಲ್ಲಿ ಏರಿಕೆ ಮಾಡಲಾಗಿದೆ. ಕಂಪನಿಯ ಜಾಹೀರಾತು ಸುಧಾರಣೆಗೆ ಒತ್ತು ನೀಡಲಾಗಿದೆ. ಈ ವೆಚ್ಚ ಸರಿದೂಗಿಸಲು ಶುಲ್ಕದ ಮೂಲಕ ಸಂಗ್ರಹಿಸಿದ ಹಣವನ್ನು ಬಳಸಲಾಗುತ್ತಿದೆ ಎಂದು ಹೇಳಿದೆ. ಕಳೆದ ಆರ್ಥಿಕ ವರ್ಷದಲ್ಲಿ ದೆಹಲಿ ನಾಗರಿಕರು ತಡರಾತ್ರಿ ಆರ್ಡರ್‌ಗಳನ್ನು ಹೆಚ್ಚು ಮಾಡಿದ್ದಾರೆ. ಬೆಂಗಳೂರಿನಲ್ಲಿ ಬ್ರೇಕ್‌ಫಾಸ್ಟ್ ಆರ್ಡರ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗಿವೆ ಎಂದು ತಿಳಿಸಿದೆ.

ಎನ್‌ಇಸಿಸಿ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹470
12 ಕ್ಕೆ	₹68
ಮೈಸೂರು	
100ಕ್ಕೆ	₹470

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹270-441

ದ್ವಿತಳಿ (ಬಿ.ವಿ) ₹245-569

ವಿಮಾನ ನಿಲ್ದಾಣ ನಿರ್ವಹಣೆಗೆ ₹796 ಕೋಟಿ ವೆಚ್ಚ: ಎಎಐ

ನವದೆಹಲಿ (ಪಿಟಿಐ): 2023-24ನೇ ಆರ್ಥಿಕ ವರ್ಷದಲ್ಲಿ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವು (ಎಎಐ) ದೇಶದ 101 ವಿಮಾನ ನಿಲ್ದಾಣಗಳ ದುರಸ್ತಿ ಮತ್ತು ನಿರ್ವಹಣೆ ಕಾರ್ಯಕ್ಕೆ ₹796 ಕೋಟಿ ವೆಚ್ಚ ಮಾಡಿದೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯವು ರಾಜ್ಯಸಭೆಗೆ ತಿಳಿಸಿದೆ.

ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ವೆಚ್ಚದ ಪ್ರಮಾಣವು ಶೇ 20ರಷ್ಟು ಏರಿಕೆಯಾಗಿದೆ. 2022–23ರಲ್ಲಿ ₹663 ಕೋಟಿ ಹಾಗೂ 2021–22ರಲ್ಲಿ ₹535 ಕೋಟಿ ಖರ್ಚು ಮಾಡಲಾಗಿದೆ ಎಂದು ಹೇಳಿದೆ.

ಒಟ್ಟು 121 ವಿಮಾನ ನಿಲ್ದಾಣಗಳ ವೆಚ್ಚದ ಬಗ್ಗೆ ಮಾಹಿತಿ ನೀಡಿದ್ದು, ಉಳಿದ 20 ವಿಮಾನ ನಿಲ್ದಾಣಗಳ ನಿರ್ವಹಣೆಗೆ ಯಾವುದೇ ಹಣ ಖರ್ಚು ಮಾಡಿಲ್ಲ ಎಂದು ತಿಳಿಸಿದೆ.

‘ವಿಮಾನ ನಿಲ್ದಾಣದಲ್ಲಿರುವ ಕಟ್ಟಡಗಳ ಸ್ಥಿತಿಗತಿ ಮತ್ತು ಮೂಲ ಸೌಕರ್ಯ ಕುರಿತಂತೆ ಮೂರನೇ ವ್ಯಕ್ತಿಯಿಂದ ಆಡಿಟ್ ನಡೆಸುವಂತೆ ನಿಲ್ದಾಣಗಳ ಆಪರೇಟರ್‌ಗಳಿಗೆ ನಿರ್ದೇಶಿಸಲಾಗಿದೆ’ ಎಂದು ನಾಗರಿಕ ವಿಮಾನಯಾನ ಖಾತೆ ರಾಜ್ಯ ಸಚಿವ ಮುರಳೀಧರ್ ಮೊಹೋಲ್, ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು (ಡಿಜಿಸಿಎ) ಪರವಾನಗಿ ಪಡೆದ ವಿಮಾನ ನಿಲ್ದಾಣಗಳ ತಪಾಸಣೆ ನಡೆಸಲಿದೆ.

ದುರಸ್ತಿ ಉತ್ತರಾಖಂಡ ರಾಜ್ಯದ ರುದ್ರಪ್ರಯಾಗ್ ಜಿಲ್ಲೆಯ ಸೋನಪ್ರಯಾಗ್ ಬಳಿ ಭೂಕುಸಿತದಿಂದ ಹಾನಿಗೀಡಾಗಿರುವ ಸೇತುವೆಯ ದುರಸ್ತಿಯಲ್ಲಿ ತೊಡಗಿರುವ ಯೋಧರು –ಪಿಟಿಐ ಚಿತ್ರ

ಸಿಮೆಂಟ್ ಬೇಡಿಕೆ ಹೆಚ್ಚಳ ನಿರೀಕ್ಷೆ

ನವದೆಹಲಿ (ಪಿಟಿಐ): ದೇಶದಲ್ಲಿ ನಿರ್ಮಾಣ ಚಟುವಟಿಕೆಗಳು ಹೆಚ್ಚುತ್ತಿವೆ. ಹಾಗಾಗಿ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸಿಮೆಂಟ್ ಬೇಡಿಕೆಯು ಶೇ 7ರಿಂದ ಶೇ 8ರಷ್ಟು ಹೆಚ್ಚಳವಾಗುವ ನಿರೀಕ್ಷೆಯಿದೆ ಎಂದು ಅಲ್ಟ್ರಾಟೆಕ್ ಸಿಮೆಂಟ್ ಕಂಪನಿಯ ವಾರ್ಷಿಕ ವರದಿ ತಿಳಿಸಿದೆ.

ಮೂಲಸೌಕರ್ಯ ಹಾಗೂ ವಸತಿ ವಲಯದಲ್ಲಿ ಸಿಮೆಂಟ್‌ಗೆ ಬೇಡಿಕೆ ಹೆಚ್ಚಲಿದೆ ಎಂದು ತಿಳಿಸಿದೆ.

ಈ ಬೇಡಿಕೆ ಪೂರೈಸಲು ಉದ್ಯಮವು ಹೆಚ್ಚುವರಿಯಾಗಿ 3.5 ಕೋಟಿ ಟನ್‌ನಿಂದ 4 ಕೋಟಿ ಟನ್‌ನಷ್ಟು ಸಿಮೆಂಟ್ ಉತ್ಪಾದಿಸಬೇಕಿದೆ. ಈ ಉತ್ಪಾದನೆಯ ಪೈಕಿ ದೇಶದ ಪೂರ್ವ ಮತ್ತು ದಕ್ಷಿಣ ಭಾಗಕ್ಕೆ ಶೇ 60ರಿಂದ ಶೇ 65ರಷ್ಟು ಸಿಮೆಂಟ್ ಪೂರೈಕೆಯಾಗಲಿದೆ ಎಂದು ಆದಿತ್ಯ ಬಿರ್ಲಾ ಸಮೂಹಕ್ಕೆ ಸೇರಿದ ಈ ಕಂಪನಿಯು ಅಂದಾಜಿಸಿದೆ.

ಶ್ರೀಲಂಕಾ ತಂಡಕ್ಕೆ ಜಯ • ಸರಣಿಯಲ್ಲಿ ಮುನ್ನಡೆ • ರೋಹಿತ್ ಅರ್ಧಶತಕ

ಜೆಫ್ರಿ ಮೋಡಿಗೆ ಕುಸಿದ ಭಾರತದ ಬ್ಯಾಟರ್‌ಗಳು

ಕೊಲಂಬೊ (ಪಿಟಿಐ): ರೋಹಿತ್ ಶರ್ಮಾ ಮತ್ತು ಶುಭಮನ್ ಗಿಲ್ ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ ಉತ್ತಮ ಅಡಿಪಾಯ ಹಾಕಿದರೂ ಉಳಿದ ಬ್ಯಾಟರ್‌ಗಳು ಭಾರತ ತಂಡವನ್ನು ಗೆಲುವಿನ ಗುರಿ ಮುಟ್ಟಿಸುವಲ್ಲಿ ವಿಫಲರಾದರು. ಆತಿಥೇಯ ಶ್ರೀಲಂಕಾ ತಂಡದ ಲೆಗ್‌ಸ್ಪಿನ್ನರ್ ಜೆಫ್ರಿ ವಾಂಡರ್ಸೆ ಅರ್ಧಡಜನ್ ವಿಕೆಟ್ ಕಬಳಿಸಿ ಭಾರತ ತಂಡಕ್ಕೆ ಸೋಲಿನ ಕಹಿ ಉಣಿಸಿದರು.

ಭಾನುವಾರ ಇಲ್ಲಿ ನಡೆದ ಏಕದಿನ ಕ್ರಿಕೆಟ್ ಸರಣಿಯ ಎರಡನೇ ಪಂದ್ಯದಲ್ಲಿ ಶ್ರೀಲಂಕಾ ತಂಡವು 32 ರನ್‌ಗಳಿಂದ ಜಯಿಸಿತು.

ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಶ್ರೀಲಂಕಾ ತಂಡವು ಮೊದಲು ಬ್ಯಾಟಿಂಗ್ ಮಾಡಿತು. ಅವಿಷ್ಕಾ ಫರ್ನಾಂಡೊ (40; 62ಎ, 4X5), ದುನಿತ್ ವೆಲಾಳಗೆ (39; 35ಎ) ಮತ್ತು ಕಮಿಂದು ಮೆಂಡಿಸ್ (40; 44ಎ) ಅವರ ಬ್ಯಾಟಿಂಗ್ ಬಲದಿಂದ ಲಂಕಾ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 240 ರನ್ ಗಳಿಸಿತು. ವಾಷಿಂಗ್ಟನ್ ಸುಂದರ್ (30ಕ್ಕೆ3) ಮತ್ತು ಕುಲದೀಪ್ ಯಾದವ್ (33ಕ್ಕೆ2) ಉತ್ತಮ ಬೌಲಿಂಗ್ ಮಾಡಿದರು.

ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ ಅರ್ಧಶತಕ ಗಳಿಸಿದ ರೋಹಿತ್ (64; 44ಎ, 4X5, 6X4) ಮತ್ತು ಗಿಲ್ (35; 44ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 97 ರನ್ ಸೇರಿಸಿದರು. ಆದರೆ ಈ ಗಟ್ಟಿ ಅಡಿಪಾಯದ ಮೇಲೆ ಭಾರತ ತಂಡವು ವಿಜಯದ ಮಹಲು ಕಟ್ಟಲು ಜೆಫ್ರಿ ಬಿಡಲಿಲ್ಲ. ಪರಿಣಾಮಕಾರಿ ದಾಳಿ ನಡೆಸಿದ ಅವರು ಅನುಭವಿ ಬ್ಯಾಟರ್ ವಿರಾಟ್ ಕೊಹ್ಲಿ (14; 19ಎ) ಸೇರಿದಂತೆ ಆರು ವಿಕೆಟ್‌ಗಳನ್ನು ಕಬಳಿಸಿದರು. ಕೆ.ಎಲ್. ರಾಹುಲ್ ಅವರಿಗೆ ಖಾತೆ ತೆರೆಯಲೂ ಬಿಡಲಿಲ್ಲ.

ಮೂರು ಪಂದ್ಯಗಳ ಸರಣಿಯಲ್ಲಿ ಲಂಕಾ ತಂಡವು 1-0 ಮುನ್ನಡೆ ಸಾಧಿಸಿತು. ಮೊದಲ ಪಂದ್ಯವು ಟೈ ಆಗಿತ್ತು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 240 (ಅವಿಷ್ಕಾ ಫರ್ನಾಂಡೊ 40, ಕುಶಾಲ ಮೆಂಡಿಸ್ 30, ಚರಿತ ಅಸಲಂಕಾ 25, ದುನಿತ್ ವೆಲಾಳಗೆ 39, ಕಮಿಂದು ಮೆಂಡಿಸ್ 40, ವಾಷಿಂಗ್ಟನ್ ಸುಂದರ್ 30ಕ್ಕೆ3, ಕುಲದೀಪ್ ಯಾದವ್ 33ಕ್ಕೆ2) ಭಾರತ: 42.2 ಓವರ್‌ಗಳಲ್ಲಿ 208 (ರೋಹಿತ್ ಶರ್ಮಾ 64, ಶುಭಮನ್ ಗಿಲ್ 35, ಅಕ್ಷರ್ ಪಟೇಲ್ 44, ಜೆಫ್ರಿ ವಾಂಡರ್ಸೆ 33ಕ್ಕೆ6, ಚರಿತ ಅಸಲಂಕಾ 20ಕ್ಕೆ3) ಫಲಿತಾಂಶ: ಶ್ರೀಲಂಕಾ ತಂಡಕ್ಕೆ 32 ರನ್‌ಗಳ ಜಯ.

ವಿಕೆಟ್ ಗಳಿಸಿದ ಶ್ರೀಲಂಕಾ ತಂಡದ ಬೌಲರ್ ಜೆಫ್ರಿ ವಾಂಡರ್ಸೆ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಪಿಟಿಐ ಚಿತ್ರ

ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹ ಕಚೇರಿ ಕೃಷ್ಣಾದಲ್ಲಿ ಭಾನುವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಪ್ಯಾರಾಲಿಂಪಿಕ್ಸ್, ಏಷ್ಯನ್ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಗೇಮ್ಸ್‌ಗಳಲ್ಲಿ ಪದಕ ವಿಜೇತ ರಾಜ್ಯದ ಕ್ರೀಡಾಪಟುಗಳಿಗೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನೇಮಕಾತಿ ಅವಕಾಶ ಪತ್ರ ವಿತರಿಸಿದರು. ಈ ಸಂದರ್ಭದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಆರ್ ಚೇತನ್, ಪ್ಯಾರಾಲಿಂಪಿಕ್ ಕರ್ನಾಟಕದ ಕಾರ್ಯದರ್ಶಿ ಸತ್ಯನಾರಾಯಣ ಮತ್ತು ಕ್ರೀಡಾಪಟುಗಳಾದ (ಎಡದಿಂದ) ಎಸ್. ವಿ.ಸುನಿಲ್ ಮತ್ತು ನಿಕಿನ್ ತಿಮ್ಮಯ್ಯ, (ಹಾಕಿ), ಉಷಾ ರಾಣಿ ಎನ್. (ಕಬಡ್ಡಿ), ಗಿರೀಶ್ ಎಚ್. ಎನ್. (ಪ್ಯಾರಾ ಅಥ್ಲೀಟ್), ದಿವ್ಯಾ ಟಿ.ಎಸ್.(ಶೂಟಿಂಗ್), ರಾಹಾ. ವಿ ಮತ್ತು ಶರತ್ ಎಂ.ಎಸ್(ಪ್ಯಾರಾ ಅಥ್ಲೀಟ್‌ಗಳು), ಕಿಶನ್ ಗಂಗೊಳ್ಳಿ (ಅಂಧ ಚೆಸ್), ಸುಶ್ಮಿತಾ ಪವಾರ್ ಒ. (ಕಬಡ್ಡಿ), ರಾಘವೇಂದ್ರ ರತ್ನಾಕರ ಅಣವೇಕರ್ (ಈಜು) ಮತ್ತು ಮಲಪ್ರಭಾ ಯಲ್ಲಪ್ಪ ಜಾಧವ್ (ಕುರಾಶ್) ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ/ ಎಸ್.ಕೆ.ದಿನೇಶ್

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PROCLAMATION REQUIRING ATTENDANCE OF DEFENDANT
(ORDER V, RULE 20 Of The Code Of Civil Procedure)
IN THE COURT OF SH. VIDYA PRAKASH, DISTRICT JUDGE, (COMMERCIAL COURT - 02), ROOM NO. 25, PHC, NDD, NEW DELHI
ROOM NO. 25
CASE NO. CS (COMM.) NO. 69 OF 2023
TITLE :- M/S. G M MODULAR PVT. LTD.
V/S
ARJUN SINGH
TO,
1. ARJUN SINGH, PROPRIETOR, G M PIPE (INDIA) AT - 811, T.D. LANE, COTTONPET, BENGALURU, KARNATAKA - 560053.
WHEREAS above name PLAINTIFF has instituted a commercial suit against you. You are hereby summoned to appear before this court in person or by a pleader on 17.09.2024 at 10:00 AM to answer the same.
The written statement must be filed within thirty days from the date of receipt of the summons. You are to also file affidavit of admission/ denial off the documents filed by the plaintiff with written statement. It is made clear that any unjustified denial of documents and delay in time lines may lead to an order of costs against the concerned party.
Take notice that, in default of your appearance on that day before mentioned, the suit will be heard and determined in your absence. Given under my hand and the seal of the Court, this 23rd day of JULY, 2024 (Seal)

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
www.dhclassifieds.com
BOOK NOW
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@ 500/-* PER SQCM
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9901641752
+91 9845114560 | +91 9731810277

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವ್ಯಾಪಾರ
Business to Business
Business
ಗಮನಿಸಿ
ಸೂಕ್ಷ್ಮ ಸಣ್ಣ ಮತ್ತು ಮಧ್ಯಮ ಉದ್ಯಮಗಳು (MSME)
ಪ್ರಮುಖ ಸರ್ಕಾರಿ ಸಂಸ್ಥೆಯಿಂದ ವ್ಯವಹಾರವನ್ನು ಪಡೆಯಲು ಮತ್ತು ಬ್ಯಾಂಕ್‌ನಿಂದ ಸಾಲದ ಬೆಂಬಲವನ್ನು ಪಡೆಯಲು ಉತ್ತಮ ಅವಕಾಶ. ಮಾರಾಟಗಾರರ ಅಭಿವೃದ್ಧಿ ಸಭೆ ಮತ್ತು ಕ್ರೆಡಿಟ್ ಬೆಂಬಲಕ್ಕಾಗಿ MSMEಗಳನ್ನು ಆಹ್ವಾನಿಸಲಾಗಿದೆ.
ದಿನಾಂಕ: 6.8.2024, 3:00 PM
ಸ್ಥಳ: KASSIA ಹಾಲ್, ಡಿಮಾರ್ಟ್ ಬಿಲ್ಡಿಂಗ್, ವಿಜಯನಗರ ಬೆಂಗಳೂರು - 560 040
NATIONAL SMALL INDUSTRIES CORPORATION LIMITED BENGALURU (PEENYA)
Email: bopeenya@nsic.co.in
www.nsic.co.in

ಉದ್ಯೋಗಾವಕಾಶ
General
ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930
Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.
ಮನೆಯಲ್ಲಿ ವರ್ಕ್ ಫ್ರಮ್ ಹೋಮ್ ಕೆಲಸಮಾಡಿ4000–20,000/– ಪಡೆಯಿರಿ. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526.

EDUCATION CORNER
ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾವಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರ್ಷದ
ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸ್ (DCTTC)
Nursery Teachers Training Course
Post Graduation Diploma in Information Technology
6 ತಿಂಗಳ DIT, DCA, DOA ಇತ್ಯಾದಿ ಕೋರ್ಸುಗಳು.
(Qual : SSLC/ PUC) ಸರಕಾರದ PM ವಿಶ್ವಕರ್ಮ ಹಾಗೂ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ
DIPLOMA IN COMPUTER DATA ENTRY OPERATOR
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Sharing Computer Literacy with Govt. of India
Recognized by Govt. of Karnataka
Email: info@thercss.com
Website: www.thercss.com
The RCSS
MOB.: 9008419955, 9901520055, 9449198555

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000-20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555, 9663542555

ಪ್ರವಾಸ
Travel
★ವಿಮಾನದಲ್ಲಿ 24.09.2024★ 16/12ದಿನಗಳು ಅಖಂಡ ನೇಪಾಳ,ಮುಕ್ತಿನಾಥ,ಕಾಶಿ ಪ್ರವಾಸ.26.08.2024, 14.09.2024,05.10.2024 6ದಿನಗಳು ಕಾಶಿ,ಅಯೊಧ್ಯಾ, ಗಯಾ ಪ್ರವಾಸ.ಆರ್.ಗಾಂಧಿ ಟೂರ್ಸ್.ತ್ಯಾಗರಾಜನಗರ. 9945445809/ 8861545809
29.08.2024: 6`ದಿನಗಳು ವಿಮಾನದಲ್ಲಿ ಕಾಶಿ,ಅಯೋಧ್ಯ ಗಯಾ,ಅಲಹಾಬದ್ 32000/ (ಕೆಲವೇ`ಸೀಟುಗಳಿವೆ) 16.09.2024: 12/16`ದಿನಗಳು ದೆಹಲಿ,ಹರಿದ್ವರ್ ಬದ್ರಿನಾಥ್,ಕೇದಾರನಾಥ ಗಂಗೋತ್ರಿ,ಯಮುನೋತ್ರಿ 30000/`42000/ ಶ್ರೀಸಾಯಿ`ರಾಘವೇಂದ್ರ ಟ್ರಾವೆಲ್ಸ್ 9739847429/ 9845560219/ 9886968166
13 ದಿನಗಳ ಚಾರ್‌ಧಾಮ್. 8 ದಿನಗಳ ನೇಪಾಳ,ಮುಕ್ತಿನಾಥ. 13/7 ದಿನಗಳು ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್. 6 ದಿನಗಳ ಇಂಡೋನೇಷ್ಯಾ ಬಾಲಿ. 6 ದಿನಗಳ ದುಬೈ. 18 ದಿನಗಳ ಯುಕೆ,ಯುರೋಪ್ (10ದೇಶಗಳು). 6 ದಿನಗಳ ಶ್ರೀಲಂಕಾ ಪ್ರವಾಸ. ಸಂಪರ್ಕಿಸಿ: 9900080793 9880079588. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು-04

ಸಂಕ್ಷಿಪ್ತ ಸುದ್ದಿ

ನೈಜೀರಿಯಾ ಬ್ಯಾಸ್ಕೆಟ್‌ಬಾಲ್ ಸಾಧನೆ

ವಿಲಿನವಾ ಡಿ ಅಕಿ, ಫ್ರಾನ್ಸ್ (ಎಪಿ): ನೈಜೀರಿಯಾದ ಮಹಿಳೆಯರ ತಂಡವು ಬ್ಯಾಸ್ಕೆಟ್‌ಬಾಲ್ ಕ್ವಾರ್ಟರ್‌ಫೈನಲ್‌ಗೆ ಪ್ರವೇಸಿಸಿತು.

ಒಲಿಂಪಿಕ್ಸ್ ಬ್ಯಾಸ್ಕೆಟ್‌ಬಾಲ್‌ನಲ್ಲಿ ಎಂಟರ ಘಟ್ಟ ತಲುಪಿದ ಆಫ್ರಿಕಾದ ಮೊದಲ ದೇಶವೆಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಭಾನುವಾರ ನೈಜೀರಿಯಾ ತಂಡವು 79-70ರಿಂದ ಕೆನಡಾ ವಿರುದ್ಧ ಜಯಿಸಿತು.

ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್‌ಗೆ ಇಬ್ಬರು

ಪ್ಯಾರಿಸ್ (ಎಪಿ): ಬ್ರೆಜಿಲ್‌ನ ಬ್ರುನಾ ಅಲೆಕ್ಸಾಂಡ್ರೆ ಮತ್ತು ಆಸ್ಟ್ರೇಲಿಯಾದ ಮೆಲಿಸಾ ಟೇಪರ್ ಅವರು ಒಲಿಂಪಿಕ್ಸ್ ಮತ್ತು ಮುಂಬರುವ ಪ್ಯಾರಾಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲಿದ್ದಾರೆ.

29 ವರ್ಷದ ಬ್ರುನಾ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದರು. ಅವರಿಗೆ ಕೆಲವು ತಿಂಗಳುಗಳ ಹಿಂದೆ ಬಲಗೈ ತೋಳಿನಲ್ಲಿ ರಕ್ತ ಹೆಪ್ಪುಗಟ್ಟುವಿಕೆಯ ಸಮಸ್ಯೆಯಾಗಿತ್ತು. ಆಗ ಅವರಿಗೆ ಶಸ್ತ್ರಚಿಕಿತ್ಸೆ ಮಾಡಿ ಕೈ ಕತ್ತರಿಸಲಾಗಿತ್ತು. ಟ್ಯಾಪರ್ ಅವರು 2016ರ ರಿಯೊ ಮತ್ತು 2020ರ ಟೋಕಿಯೊ ಒಲಿಂಪಿಕ್ ಕೂಟಗಳಲ್ಲಿ ಸ್ಪರ್ಧಿಸಿದ್ದರು. ಆದರೆ ಕೆಲವು ತಿಂಗಳುಗಳ ಹಿಂದೆ ಅವರಿಗೆ ಪಾರ್ಶ್ವವಾಯುವಿನಿಂದಾಗಿ ಬಲಗೈ ಊನವಾಗಿತ್ತು.

ನಿರಾಶ್ರಿತರ ತಂಡಕ್ಕೆ ಪದಕ ಖಚಿತ

ಸಿಂದೈ

ವಿಲಿಪಿಂಟ್, ಫ್ರಾನ್ಸ್ (ಎಪಿ): ನಿರಾಶ್ರಿತರ ತಂಡವನ್ನು ಪ್ರತಿನಿಧಿಸಿರುವ ಕ್ಯಾಮರೂನ್ ಮೂಲದ ಸಿಂದೈ ಎನ್‌ಗಾಂಬಾ ಭಾನುವಾರ ಮಹಿಳೆಯರ ಬಾಕ್ಸಿಂಗ್‌ನಲ್ಲಿ ಪದಕ ಜಯವನ್ನು ಖಚಿತಪಡಿಸಿಕೊಂಡರು. ಇದರಿಂದಾಗಿ ನಿರಾಶ್ರಿತರ ತಂಡಕ್ಕೆ ಲಭಿಸಲಿರುವ ಮೊದಲ ಪದಕ ಇದಾಗಿದೆ. ಭಾನುವಾರ ನಡೆದ ಮಿಡಲ್‌ವೇಟ್ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ಸಿಂದೈ ಅವರು ಆತಿಥೇಯ ದೇಶದ ದವಿನಾ ಮೈಕೆಲ್ ವಿರುದ್ಧ ಜಯಿಸಿದರು. ಇದರೊಂದಿಗೆ ಸೆಮಿಫೈನಲ್ ಪ್ರವೇಶಿಸಿ ಕಂಚಿನ ಪದಕ ಖಚಿತಪಡಿಸಿಕೊಂಡರು.

ಪೆನಾಲ್ಟಿ ಶೂಟೌಟ್‌ನಲ್ಲಿ ಗೋಲು ಗಳಿಸಿದ ಸಂಭ್ರಮದಲ್ಲಿ ಭಾರತ ತಂಡದ ರಾಜಕುಮಾರ್ ಪಾಲ್ (ಎಡಚಿತ್ರ). ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರು ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್ ಅವರೊಂದಿಗೆ ಸಂಭ್ರಮಿಸಿದರು
–ಪ್ರಜಾವಾಣಿ ಚಿತ್ರಗಳು/ ಕೆ.ಎನ್. ಶಾಂತಕುಮಾರ್

ಬ್ರಿಟನ್ ವಿರುದ್ಧ ಪೆನಾಲ್ಟಿ ಶೂಟೌಟ್‌ನಲ್ಲಿ 4–2 ಜಯ • ಮಿಂಚಿದ ಗೋಲ್‌ಕೀಪರ್ ಶ್ರೀಜೇಶ್

ಭಾರತದ ಕೆಚ್ಚೆದೆ ಆಟಕ್ಕೆ ಒಲಿದ ಗೆಲುವು

• ಸಿಡ್ನಿ ಕಿರಣ್

ಪ್ಯಾರಿಸ್: ಭಾರತ ಪುರುಷರ ಹಾಕಿ ತಂಡವು ಇತ್ತೀಚಿನ ದಶಕಗಳಲ್ಲೇ ಅತ್ಯಂತ ಕೆಚ್ಚೆದೆಯ ಪ್ರದರ್ಶನವೊಂದನ್ನು ನೀಡಿ ಒಲಿಂಪಿಕ್ಸ್ ಹಾಕಿ ಸೆಮಿಫೈನಲ್ ತಲುಪಿತು. ಆ ಮೂಲಕ ಸತತ ಎರಡನೇ ಒಲಿಂಪಿಕ್ಸ್‌ನಲ್ಲಿ ಪದಕದ ಕನಸನ್ನು ಜೀವಂತವಾಗುಳಿಸಿಕೊಂಡಿತು. ವಿದಾಯದ ಹೊಸ್ತಿಲಲ್ಲಿರುವ ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್ ಅವರು ಗ್ರೇಟ್ ಬ್ರಿಟನ್ ವಿರುದ್ಧ ಈ ಕ್ವಾರ್ಟರ್‌ಫೈನಲ್ ಪಂದ್ಯದ ಗೆಲುವಿನಲ್ಲಿ 'ಹೀರೊ' ಎನಿಸಿದರು.

ತಂಡದ ಅನುಭವಿ ಡಿಫೆಂಡರ್ ಅಮಿತ್ ರೋಹಿದಾಸ್ ಎರಡನೇ ಕ್ವಾರ್ಟರ್ ಮಧ್ಯದಲ್ಲಿ ವಿಲಿಯಂ ಕಲ್ನಾನ್ ಅವರತ್ತ ಅಜಾಗೂಕತೆಯಿಂದ ಸ್ಟಿಕ್ ಎತ್ತಿದ್ದಕ್ಕೆ ರೆಡ್‌ಕಾರ್ಡ್ ಪಡೆದು ಹೊರ ನಡೆಯಬೇಕಾಯಿತು. ಉಳಿದ ಅವಧಿಗೆ 10 ಮಂದಿಗೆ ಸೀಮಿತಗೊಂಡರೂ ತಂಡ ವೀರೋಚಿತವಾಗಿ ಹೋರಾಡಿತು. ತಂಡ ರಕ್ಷಣೆಯಲ್ಲಿ ಶಿಸ್ತುಬದ್ಧವಾಗಿ ಆಡಿ ನಿಗದಿತ ಅವಧಿಯನ್ನು 1–1ರಲ್ಲಿ ಸಮಮಾಡಿಕೊಂಡಿತು.

ಇವ್ಸ್ ಡಿ ಮ್ಯಾನುವಾ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಸಿಂಗ್ ಪಡೆ ಪೆನಾಲ್ಟಿ ಶೂಟೌಟ್‌ನಲ್ಲಿ 4–2 ಗೆಲುವು ಸಾಧಿಸಿತು. 42 ನಿಮಿಷಗಳಷ್ಟು ದೀರ್ಘ ಅವಧಿಗೆ 10 ಆಟಗಾರರಿದ್ದರೂ ತಂಡ ಎದೆಗುಂದಲಿಲ್ಲ. ತಮ್ಮ ಜೀವವೇ ಪಣಕ್ಕಿದೆ ಎನ್ನುವಂತೆ ಆಡಿ ಬ್ರಿಟನ್ ತಂಡದ ದಾಳಿಗಳನ್ನು ದಿಟ್ಟವಾಗಿ ಎದುರಿಸಿತು.

36 ವರ್ಷ ವಯಸ್ಸಿನ ಶ್ರೀಜೇಶ್ ತಮ್ಮ ಹಾಕಿ ಬದುಕಿನ ಸಂಧ್ಯಾಕಾಲದಲ್ಲೂ ಅವಿಸ್ಮರಣೀಯ ಪ್ರದರ್ಶನ ನೀಡಿದರು. ಬ್ರಿಟನ್‌ನ ಹಲವು ಗೋಲು ಅವಕಾಶಗಳಿಗೆ ಗೋಡೆಯಾದರು. ಅವರ ಗ್ರಹಿಕೆ, ಮುಂದಾಲೋಚನೆ, ಚುರುಕಿನ ಚಲನೆಗಳಿಲ್ಲದೇ ಹೋಗಿದ್ದಲ್ಲಿ, ಭಾರತ ರೋಹಿದಾಸ್ ಮಾಡಿದ ತಪ್ಪಿಗೆ ಭಾರಿ ಬೆಲೆ ತೆರಬೇಕಾಗುತಿತ್ತು.

ಭಾರತದ ಶ್ರೇಷ್ಠ ಗೋಲ್‌ಕೀಪರ್‌ಗಳಲ್ಲಿ ನಿರ್ವಿವಾದವಾಗಿ ಒಬ್ಬರೆನಿಸಿರುವ ಶ್ರೀಜೇಶ್, ಬ್ರಿಟನ್‌ನ ಕಾನರ್ ವಿಲಿಯಮ್ಸನ್ ಅವರ ಪೆನಾಲ್ಟಿ ಯತ್ನ ಹೊರಹೋಗುವಂತೆ ಪ್ರಚೋದಿಸಿದರು. ಫಿಲಿಪ್ ರೋಪಾರ್ ಅವರ ಯತ್ನವನ್ನು ಯಶಸ್ವಿಯಾಗಿ ತಡೆದರು. ಆಗ ಸ್ಕೋರ್ 3–2 ಆಯಿತು. ಭಾರತದ ಪರ ನಾಲ್ಕನೇ ಯತ್ನ ತೆಗೆದುಕೊಂಡ ರಾಜಕುಮಾರ್ ಪಾಲ್ ಸಂಯಮ ವಹಿಸಿ ಗೋಲು ಗಳಿಸುತ್ತಿದ್ದಂತೆ ಆಟಗಾರರ ಸಂಭ್ರಮಕ್ಕೆ ಪಾರವೇ ಇರಲಿಲ್ಲ. ಇನ್ನೊಂದು ಕಡೆ ಬ್ರಿಟನ್ ಆಟಗಾರರು ಹತಾಶರಾದರು. ಒಳ್ಳೆಯ ಅವಕಾಶವನ್ನು ಕಳೆದುಕೊಂಡಿದ್ದಕ್ಕೆ ಕೈಕೈಹಿಸುಕಿ ಕಣ್ಣೀರು ತುಂಬಿಕೊಂಡರು.

ಇದಕ್ಕೆ ಮೊದಲು ಹರ್ಮನ್‌ಪ್ರೀತ್, ಸುಖಜೀತ್, ಲಲಿತ್ ಕುಮಾರ್ ಅವರು ಪೆನಾಲ್ಟಿ ಯತ್ನಗಳಲ್ಲಿ ಯಶ ಕಂಡಿದ್ದರು. ಬ್ರಿಟನ್ ತಂಡದ ಜೇಮ್ಸ್ ಅಲ್ಬರಿ, ಕಾನರ್ ಚೆಂಡನ್ನು ಗುರಿ ತಲುಪಿಸಿದರು. ಆರಂಭದಲ್ಲಿ ಬ್ರಿಟನ್ ಆಟಗಾರರು ಮೇಲುಗೈ ಸಾಧಿಸಿ ಭಾರತದ ರಕ್ಷಣೆಗೆ ಸವಾಲೊಡ್ಡಿದರು. ಆದರೆ ಭಾರತದ ಆಟಗಾರರು ಇದಕ್ಕೆ ಸಜ್ಜಾಗಿದ್ದಂತೆ ಆಡಿದರು. ಪ್ರತಿದಾಳಿಗೂ ಹಿಂದೇಟು ಹಾಕಲಿಲ್ಲ.

ಎರಡನೇ ಕ್ವಾರ್ಟರ್‌ನಲ್ಲಿ ರೋಹಿದಾಸ್ ಅವರನ್ನು ಅಂಪೈರ್ ಹೊರಕಳಿಸಿದರು. ಭಾರತದ ಆಟಗಾರರು ಇದು 'ಹಳದಿ ಕಾರ್ಡ್' ಎಚ್ಚರಿಕೆಯ ತಪ್ಪು ಎಂಬ ಭಾವನೆಯನ್ನೇನೊ ವ್ಯಕ್ತಪಡಿಸಿದರು. ಆದರೆ ವಿಡಿಯೊ ಅಂಪೈರ್ ಬೆಂಜಮಿನ್ ಗೊಂಟ್ಜನ್ ಅವರು ಎಚ್ಚರಿಕೆಯ ಪರಿಶೀಲನೆಯ ನಂತರ ಅಮಿತ್ ಹೊರ ಹೋಗಬೇಕಾಯಿತು. ಈ ಸ್ಥಿತಿಯಲ್ಲಿ ಭಾರತದ ಮುಂದೆ ದೊಡ್ಡ ಸವಾಲೇ ಇತ್ತು.

ಆದರೆ ಭಾರತದ ಆಟಗಾರರು ಸಮರಾಂಗಣದಲ್ಲಿದ್ದ ಯೋಧರಂತೆ ಹೋರಾಡಿದರು. 22ನೇ ನಿಮಿಷ ಪೆನಾಲ್ಟಿ ಕಾರ್ನರ್‌ನಲ್ಲಿ ನಾಯಕ ಹರ್ಮನ್‌ಪ್ರೀತ್ ಸಿಂಗ್ ಗೋಲು ಗಳಿಸುವ ಮೂಲಕ ತಂಡಕ್ಕೆ ಮುನ್ನಡೆಯನ್ನೂ ಗಳಿಸಿಕೊಟ್ಟರು. ಪದೇಪದೇ ಮುಷ್ಟಿಕಟ್ಟಿಕೊಂಡು ಸಂಭ್ರಮ ಆಚರಿಸಿ ತಂಡಕ್ಕೆ ವಿಶ್ವಾಸ ಮೂಡಿಸಿದರು.

ಆದರೆ ಈ ಸಂಭ್ರಮ ಬೇಗ ಕರಗಿತು. ಐದು ನಿಮಿಷಗಳಲ್ಲೇ ಬ್ರಿಟನ್‌ನ ಲೀ ಮಾರ್ಟನ್ ಸ್ಕೋರ್ ಸಮ ಮಾಡಿದರು. ಹರ್ಮನ್‌ಪ್ರೀತ್ ಅವರು ಆಟಗಾರರು ವಿಶ್ವಾಸಗುಂದದಂತೆ ಎಚ್ಚರಿಕೆ ವಹಿಸಿದರು. ಅವರ ನಿರೀಕ್ಷೆಗೆ ತಕ್ಕಂತೆ ಆಟಗಾರರೂ ಹೋರಾಡಿ ಇಂಗ್ಲೆಂಡ್ ತಂಡದ ಸರಣಿ ದಾಳಿಗಳನ್ನು ಹಿಮ್ಮೆಟ್ಟಿಸಿದರು. ಅದರಲ್ಲೂ ಶ್ರೀಜೇಶ್ ಅವರ ಗೋಲಿನೆದುರು ಬಂಡೆಗಲ್ಲಿನಂತೆ ನಿಂತರು. ಅವರ ಒಂದೊಂದು ತಡೆಯೂ ಆಟಗಾರರಲ್ಲಿ ಧೈರ್ಯಮೂಡಿಸಿತು. ಭಾರತ ಆಟಗಾರರ ಗಟ್ಟಿಮನೋಬಲಕ್ಕೆ ಈ ಪಂದ್ಯ ನಿದರ್ಶನವಾಯಿತು. ಸೆಮಿಫೈನಲ್‌ನಲ್ಲಿ ಭಾರತ, ಜರ್ಮನಿಯನ್ನು ಮಂಗಳವಾರ ಎದುರಿಸಲಿದೆ.

'ಶ್ರೀಜೇಶ್ ಗೋಲುತಡೆ; ಪವಾಡಕ್ಕಿಂತ ಕಮ್ಮಿಯಿರಲಿಲ್ಲ'

ನವದೆಹಲಿ: ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರು ಗ್ರೇಟ್ ಬ್ರಿಟನ್ ವಿರುದ್ಧದ ಪಂದ್ಯದಲ್ಲಿ ತಡೆಗ ಗೋಲು ಪ್ರಯತ್ನಗಳು ಪವಾಡಕ್ಕಿಂತ ಕಡಿಮೆಯೇನಾಗಿರಲಿಲ್ಲ ಎಂದು ಭಾರತದ ಮಾಜಿ ಹಾಕಿ ತಾರೆ, ಫಾರ್ವರ್ಡ್ ಆಟಗಾರ ಧನರಾಜ್ ಪಿಳ್ಳೆ ಪ್ರತಿಕ್ರಿಯಿಸಿದರು.

ಭಾವೋದ್ವೇಗಕ್ಕೆ ಒಳಗಾಗಿದ್ದ ಅವರು 'ಭಾರತದ ಆಟ ನೋಡಿದಾಗ ಎದೆತುಂಬಿ ಬಂತು. ಕಣ್ಣೀರು ತಡೆಯಲಾಗಲಿಲ್ಲ. ಸಿಡ್ನಿ ಒಲಿಂಪಿಕ್ಸ್ (2000) ನಂತರ ಇಂಥ ಆಟ ನೋಡೇ ಇರಲಿಲ್ಲ. ಈ ತಂಡ 44 ವರ್ಷಗಳ ನಂತರ ಚಿನ್ನ ತರಬಹುದೆಂಬ ವಿಶ್ವಾಸ ಮೂಡಿದೆ' ಎಂದರು.

ಸ್ಪೇನ್‌ಗೆ ಮಣಿದ ಬೆಲ್ಜಿಯಂ

ಮುಕ್ತಾಯಕ್ಕೆ ಮೂರು ನಿಮಿಷಗಳಿರುವಾಗ ನಾಯಕ ಮಾರ್ಕ್ ಮಿರಾಲಸ್ ಗಳಿಸಿದ ಗೋಲಿನ ನೆರವಿನಿಂದ ಎಂಟನೇ ಕ್ರಮಾಂಕದ ಸ್ಪೇನ್ ತಂಡ ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಬೆಲ್ಜಿಯಂ ತಂಡವನ್ನು3–2 ಗೋಲುಗಳಿಂದ ಸೋಲಿಸಿತು.

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	19	15	11	45
ಅಮೆರಿಕ	18	26	25	69
ಫ್ರಾನ್ಸ್	12	14	18	44
ಆಸ್ಟ್ರೇಲಿಯಾ	12	11	8	31
ಬ್ರಿಟನ್	10	12	15	37
ದ.ಕೊರಿಯಾ	10	7	7	24
ಜಪಾನ್	8	5	10	23
ಇಟಲಿ	7	9	5	21
ನೆದರ್‌ಲೆಂಡ್ಸ್	6	5	4	15
ಭಾರತ	0	0	3	3

ಪಟ್ಟಿಯಲ್ಲಿ ಭಾರತ 57ನೇ ಸ್ಥಾನದಲ್ಲಿದೆ

ಒಲಿಂಪಿಕ್ಸ್‌ನಲ್ಲಿ ಇಂದು (ಭಾರತದ ಸ್ಪರ್ಧೆ)

ಶೂಟಿಂಗ್
ಸ್ಕೀಟ್ ಮಿಶ್ರ ತಂಡ ಅರ್ಹತಾ ಸುತ್ತು: ಮಹೇಶ್ವರಿ ಚೌಹಾನ್, ಅನಂತ್‌ಜೀತ್ ಸಿಂಗ್ ನರುಕಾ, ಮಧ್ಯಾಹ್ನ 12.30

ಟೇಬಲ್ ಟೆನಿಸ್
ಮಹಿಳೆಯರ ತಂಡ (ಪ್ರಿ ಕ್ವಾರ್ಟರ್‌ಫೈನಲ್): ಭಾರತ ವಿರುದ್ಧ ರುಮೇನಿಯಾ, ಮಧ್ಯಾಹ್ನ 1.30

ಸೇಲಿಂಗ್
ಮಹಿಳೆಯ ಡಿಂಘಿ ಓಪನಿಂಗ್ ಸಿರೀಸ್: ರೇಸ್ 9, ಮಧ್ಯಾಹ್ನ 3.45. ರೇಸ್ 10, ಸಂಜೆ 4.53
ಪುರುಷರ ಡಿಂಘಿ ಓಪನಿಂಗ್ ಸಿರೀಸ್: ರೇಸ್ 9, ಸಂಜೆ 6.10. ರೇಸ್ 10, ರಾತ್ರಿ 7.15

ಅಥ್ಲೆಟಿಕ್ಸ್
ಮಹಿಳೆಯರ 400 ಮೀ. ಓಟ (ಮೊದಲ ಸುತ್ತು): ಕಿರಣ್ ಪಹಲ್ (ಹೀಟ್ 5), ಮಧ್ಯಾಹ್ನ 3.57
ಪುರುಷರ 3000 ಮೀ ಸ್ಟೀಪಲ್‌ಚೇಸ್ (ಮೊದಲ ಸುತ್ತು): ಅವಿನಾಶ್ ಸಾಬ್ಳೆ (ಹೀಟ್ 2), ರಾತ್ರಿ 10.50

ಬ್ಯಾಡ್ಮಿಂಟನ್
ಪುರುಷರ ಸಿಂಗಲ್ಸ್: ಕಂಚಿನ ಪದಕ ಪಂದ್ಯ: ಲಕ್ಷ್ಯ ಸೇನ್ ವಿರುದ್ಧ ಲೀ ಝಿ ಜಿಯಾ (ಮಲೇಷ್ಯಾ), ಸಂಜೆ 6

ನೇರ ಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್

ಸೆಮಿಗೆ ನೆದರ್ಲೆಂಡ್ಸ್

ಪ್ಯಾರಿಸ್: ನೆದರ್ಲೆಂಡ್ಸ್ ಹಾಕಿ ತಂಡವು ಒಲಿಂಪಿಕ್ಸ್‌ನ ಕ್ವಾರ್ಟರ್ ಫೈನಲ್‌ನಲ್ಲಿ 2–0ರಿಂದ ಆಸ್ಟ್ರೇಲಿಯಾವನ್ನು ಮಣಿಸಿ ಸೆಮಿಫೈನಲ್ ಪ್ರವೇಶಿಸಿತು. ಟೋಕಿಯೊ ಕೂಟದಲ್ಲಿ ಆಸ್ಟ್ರೇಲಿಯಾ ಬೆಳ್ಳಿ ಗೆದ್ದಿತ್ತು

ಶೂಟಿಂಗ್: ಮಹೇಶ್ವರಿಗೆ 14, ರೈಜಾಗೆ 23ನೇ ಸ್ಥಾನ

ಶಾತೋಹು (ಪಿಟಿಐ): ಭಾರತದ ರೈಜಾ ಧಿಲ್ಲೋನ್ ಮತ್ತು ಮಹೇಶ್ವರಿ ಚೌಹಾನ್ ಅವರು ಶೂಟಿಂಗ್‌ನ ಮಹಿಳೆಯರ ಸ್ಕೀಟ್ ವಿಭಾಗದ ಅರ್ಹತಾ ಸುತ್ತಿನಲ್ಲಿ ಕ್ರಮವಾಗಿ 14 ಮತ್ತು 23ನೇ ಸ್ಥಾನ ಪಡೆಯುವ ಮೂಲಕ ತಮ್ಮ ಸ್ಪರ್ಧೆ ಮುಗಿಸಿದರು.

ಮಹೇಶ್ವರಿ ಅವರು ಶನಿವಾರ ನಡೆದಿದ್ದ ಮೂರು ಸೇರಿದಂತೆ ಒಟ್ಟು ಐದು ಸರಣಿಯಲ್ಲಿ 118 ಅಂಕ ಗಳಿಸಿದರು. ಅವರು ಕ್ರಮವಾಗಿ 23, 24, 24, 25, 22 ಅಂಕ ದಾಖಲಿಸಿದರು. ರೈಜಾ 21, 22, 23, 23, 24 ಅಂಕ ದಾಖಲಿಸುವ ಮೂಲಕ ಒಟ್ಟು 113 ಅಂಕ ಪಡೆದರು. ಅರ್ಹತಾ ಸುತ್ತಿನಲ್ಲಿ ಅಗ್ರ ಆರು ಸ್ಥಾನ ಪಡೆದ ಶೂಟರ್‌ಗಳು ಫೈನಲ್‌ಗೆ ಅರ್ಹತೆ ಪಡೆಯುತ್ತಾರೆ.

ಕಣದಲ್ಲಿ ಭಾರತದ ಆರು ಪೈಲ್ವಾನರು: ಸ್ಪರ್ಧೆ ಇಂದಿನಿಂದ

ಕುಸ್ತಿ ಅಖಾಡದಲ್ಲಿ ಭಾರತದ ಕನಸು

ಪ್ಯಾರಿಸ್ (ಪಿಟಿಐ): ಒಲಿಂಪಿಕ್ ಕೂಟದಲ್ಲಿ ಸೋಮವಾರದಿಂದ ಕುಸ್ತಿ ಸ್ಪರ್ಧೆಗಳು ಆರಂಭವಾಗಲಿವೆ. ಭಾರತದ ಒಟ್ಟು ಆರು ಕುಸ್ತಿಪಟುಗಳು ಅಖಾಡಕ್ಕಿಳಿಯಲು ಸಿದ್ಧರಾಗಿದ್ದಾರೆ.

ಪುರುಷರ ವಿಭಾಗದಲ್ಲಿ ಅಮನ್ ಸೆಹ್ರಾವತ್ ಅವರೊಬ್ಬರೇ ಭಾರತದ ಭರವಸೆಯಾಗಿದ್ದಾರೆ. ಉಳಿದ ಐವರು ಮಹಿಳೆಯರಾಗಿದ್ದಾರೆ. ಈ ಆರೂ ಮಂದಿಯಲ್ಲಿ ಐವರಿಗೆ ಇದು ಚೊಚ್ಚಲ ಒಲಿಂಪಿಕ್ಸ್ ಆಗಿದೆ. ವಿನೇಶಾ ಫೋಗಾಟ್ ಅವರಿಗೆ ಇದು ಮೂರನೇ ಒಲಿಂಪಿಕ್ ಕೂಟವಾಗಿದೆ. ಅದರಿಂದಾಗಿ ಅವರ ಮೇಲೆ ಪದಕ ಜಯಿಸುವ ನಿರೀಕ್ಷೆ ಮೂಡಿಸಿದೆ.

ಹೋದ ವರ್ಷ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಅವರು ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂದು ಆರೋಪಿಸಿ ಕುಸ್ತಿಪಟುಗಳು ನಡೆಸಿದ ಮುಷ್ಕರದಲ್ಲಿ ವಿನೇಶಾ ಮುಂಚೂಣಿಯಲ್ಲಿದ್ದರು.

ಅಂತಿಮ ಪಂಘಾಲ್ ಅವರು ಇತ್ತೀಚಿನ ದಿನಗಳಲ್ಲಿ ಅಂತರರಾಷ್ಟ್ರೀಯ ಕುಸ್ತಿ ಸ್ಪರ್ಧೆಗಳಲ್ಲಿ ಉತ್ತಮ ಸಾಧನೆ ಮಾಡಿರುವ ಯುವ ಕುಸ್ತಿಪಟುವಾಗಿದ್ದಾರೆ. ಆದ್ದರಿಂದ ಅವರು ಕೂಡ ಪದಕ ಜಯದ ಭರವಸೆ ಮೂಡಿಸಿದ್ದಾರೆ. ತಂಡದಲ್ಲಿರುವ ಎಲ್ಲ ಕುಸ್ತಿಪಟುಗಳೂ ಹರಿಯಾಣದವರಾಗಿದ್ದಾರೆ.

ವಿನೇಶಾ ಫೋಗಾಟ್ ವಯಸ್ಸು; 29
ವಿಭಾಗ: ಮಹಿಳೆಯರ 50 ಕೆ.ಜಿ
ಶೈಲಿ: ಫ್ರೀ ಸ್ಟೈಲ್
- 2016 ಮತ್ತು 2020ರ ಒಲಿಂಪಿಕ್ ಕೂಟಗಳಲ್ಲಿ ಸ್ಪರ್ಧಿಸಿದ್ದರು. ಕ್ರಮವಾಗಿ 9 ಮತ್ತು 10ನೇ ಸ್ಥಾನ ಪಡೆದಿದ್ದರು
- 2019 ಮತ್ತು 2022ರ ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ ಕಂಚು
- 2014 ಮತ್ತು 2018ರ ಏಷ್ಯನ್ ಕ್ರೀಡಾಕೂಟಗಳಲ್ಲಿ ಕ್ರಮವಾಗಿ ಕಂಚು ಮತ್ತು ಚಿನ್ನ
- 2014, 2018, 2022ರ ಕಾಮನ್‌ವೆಲ್ತ್ ಗೇಮ್ಸ್‌ಗಳಲ್ಲಿ ಚಿನ್ನ
- 2021ರ ಏಷ್ಯನ್ ಚಾಂಪಿಯನ್ ಷಿಪ್‌ನಲ್ಲಿ ಚಿನ್ನ
- 2013ರ ಯೂತ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ



ಅಮನ್ ಸೆಹ್ರಾವತ್ ವಯಸ್ಸು; 21
- ವಿಭಾಗ: ಪುರುಷರ 57 ಕೆ.ಜಿ. • ಶೈಲಿ: ಫ್ರೀಸ್ಟೈಲ್
- 2022ರ ಏಷ್ಯನ್ ಗೇಮ್ಸ್‌ನಲ್ಲಿ ಕಂಚು
- 2023ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ
- 2022, 2024ರಲ್ಲಿ ಗ್ರ್ಯಾನ್ ಪ್ರಿ ಕುಸ್ತಿಯ 57 ಕೆ.ಜಿ.ವಿಭಾಗಗಳಲ್ಲಿ ಚಿನ್ನ
- 2022ರಲ್ಲಿ ಗ್ರ್ಯಾನ್ ಪ್ರಿ 61 ಕೆ.ಜಿ. ವಿಭಾಗದಲ್ಲಿ ಬೆಳ್ಳಿ
- 2023 ಹಾಗೂ 2024ರಲ್ಲಿ 57 ಕೆ.ಜಿ. ವಿಭಾಗದಲ್ಲಿ ಕ್ರಮವಾಗಿ ಕಂಚು, ಬೆಳ್ಳಿ
- 2022ರಲ್ಲಿ ಏಷ್ಯನ್ 23 ವರ್ಷದೊಳಗಿನವರ ವಿಭಾಗದಲ್ಲಿ ಚಿನ್ನ
- 2022ರ ವಿಶ್ವ 23 ವರ್ಷದೊಳಗಿನವರ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ
- 2018, 2019ರಲ್ಲಿ ವಿಶ್ವ ಕೆಡೆಟ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ.
- ಪ್ಯಾರಿಸ್ ಒಲಿಂಪಿಕ್ಸ್‌ಗೆ ಭಾರತದ ಪುರುಷರ ತಂಡದಲ್ಲಿ ಆಯ್ಕೆಯಾಗಿರುವ ಏಕೈಕ ಕುಸ್ತಿಪಟು.

ಅಂತಿಮ ಪಂಘಲ್ ವಯಸ್ಸು; 19
- ವಿಭಾಗ: ಮಹಿಳೆಯರ 53 ಕೆ.ಜಿ • ಶೈಲಿ: ಫ್ರೀ ಸ್ಟೈಲ್
- 2023ರ ವಿಶ್ವ ಚಾಂಪಿಯನ್‌ಷಿಪ್ ಕಂಚು
- 2022ರ ಏಷ್ಯನ್ ಗೇಮ್ಸ್‌ನಲ್ಲಿ ಕಂಚು
- 2023ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ
- 2022ರ ಗ್ರ್ಯಾನ್‌ಪ್ರಿಯಲ್ಲಿ ಚಿನ್ನ, 2024ರಲ್ಲಿ ಬೆಳ್ಳಿ
- 2022 ಮತ್ತು 2023ರ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ
- 2024 ಮೊದಲ ಬಾರಿಗೆ ಒಲಿಂಪಿಕ್ ಕೂಟಕ್ಕೆ ಅರ್ಹತೆ

ನಿಶಾ ದಹಿಯಾ
ವಯಸ್ಸು; 25
ವಿಭಾಗ: ಮಹಿಳೆಯರ 68 ಕೆ.ಜಿ
ಶೈಲಿ: ಫ್ರೀ ಸ್ಟೈಲ್
- 2021ರ ವಿಶ್ವ 23 ವರ್ಷದೊಳಗಿನವರ ಚಾಂಪಿಯನ್‌ಷಿಪ್‌ನಲ್ಲಿ ಕಂಚು
- 2023ರ ಏಷ್ಯನ್ ಚಾಂಪಿಯನ್‌ಷಿಪ್ ನಲ್ಲಿ ಬೆಳ್ಳಿ

ರೀತಿಕಾ ಹೂಡಾ
ವಯಸ್ಸು; 22
ವಿಭಾಗ: ಮಹಿಳೆಯರ 76 ಕೆ.ಜಿ
ಶೈಲಿ: ಫ್ರೀ ಸ್ಟೈಲ್
- 2023ರ ಏಷ್ಯನ್ ಚಾಂಪಿಯನ್‌ಷಿಪ್ ಕಂಚು
- 2023ರ 23 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ಷಿಪ್ ಚಿನ್ನ
- ಅವರು ಪ್ರಸ್ತುತ ಭಾರತ ನೌಕಾಪಡೆಯಲ್ಲಿ ಅಧಿಕಾರಿಯಾಗಿದ್ದಾರೆ

ಅಂಶು ಮಲಿಕ್
ವಯಸ್ಸು; 22
ವಿಭಾಗ: ಮಹಿಳೆಯರ 57 ಕೆ.ಜಿ
ಶೈಲಿ: ಫ್ರೀ ಸ್ಟೈಲ್
- 2021ರ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ
- 2022ರ ಕಾಮನ್‌ವೆಲ್ತ್ ಗೇಮ್ಸ್ ಬೆಳ್ಳಿ
- 2020ರ ಇಂಡಿವಿಜುವಲ್ ವಿಶ್ವಕಪ್ ಬೆಳ್ಳಿ
- 2019 ವಿಶ್ವ ಜೂನಿಯರ್ ಕುಸ್ತಿ ಚಿನ್ನ
- ಏಷ್ಯನ್ ಚಾಂಪಿಯನ್‌ಷಿಪ್– 2020 ಕಂಚು, 2021 ಚಿನ್ನ, 2022 ಬೆಳ್ಳಿ ಹಾಗೂ 2023 ಕಂಚು

ಅಲ್ಡ್ರಿನ್, ಪಾರುಲ್‌ಗೆ ನಿರಾಸೆ

ಪ್ಯಾರಿಸ್ (ಪಿಟಿಐ): ಒಲಿಂಪಿಕ್ಸ್ ಅಥ್ಲೆಟಿಕ್ಸ್‌ನಲ್ಲಿ ಭಾರತದ ಕಳಾಹೀನ ಪ್ರದರ್ಶನ ಮುಂದುವರಿಯಿತು. ಮಹಿಳೆಯರ 3000 ಮೀಟರ್ಸ್ ಸ್ಟೀಪಲ್ ಚೇಸ್‌ನಲ್ಲಿ ಪಾರುಲ್ ಚೌಧರಿ ಮತ್ತು ಲಾಂಗ್‌ಜಂಪ್‌ನಲ್ಲಿ ಜೆಸ್ವಿನ್ ಆಲ್ಡ್ರಿನ್ ಅವರು ಭಾನುವಾರ ಹೀಟ್ಸ್ ಹಂತದಿಂದ ಮೇಲೇರಲಿಲ್ಲ.

ಪಾರುಲ್ ತಮ್ಮ ಹೀಟ್ ರೇಸ್‌ನಲ್ಲಿ ಎಂಟನೇ ಸ್ಥಾನದಲ್ಲಿ ಮುಗಿಸಿದರು ಹಾಗೂ ಒಟ್ಟಾರೆ 21ನೇ ಸ್ಥಾನದ ಕಾಲಾವಧಿ ದಾಖಲಿಸಿದರು. 29 ವರ್ಷದ ಪಾರುಲ್, ಕ್ರೀಡೆಗಳಿಗೆ ಸಜ್ಜುಗೊಳ್ಳಲು ಕೆಲವು ತಿಂಗಳಿಂದ ಅಮೆರಿಕದ ಎತ್ತರದ ಪ್ರದೇಶದಲ್ಲಿ ತರಬೇತಿ ಪಡೆದಿದ್ದರು. ಅವರು 3000 ಮೀ.ಸ್ಟೀಪಲ್‌ಚೇಸ್ ಸ್ಪರ್ಧೆಯನ್ನು 9ನಿ.23.39 ಸೆ.ಗಳಲ್ಲಿ ಕ್ರಮಿಸಿದರು. ಇದು ಅವರ ಈ ವರ್ಷದ ಉತ್ತಮ ಓಟ ಎನಿಸಿತು.

ಹಾಲಿ (ಟೋಕಿಯೊ ಕ್ರೀಡೆಗಳ) ಚಾಂಪಿಯನ್ ಪೆರುತ್ ಚೆಮುತೈ ಅವರು ಹೀಟ್ಸ್ ರೇಸ್ ಒಂದರಲ್ಲಿ 9ನಿ.10.51 ಸೆ. ತೆಗೆದುಕೊಂಡು ಗೆದ್ದರೆ, ಹೀಟ್ ರೇಸ್ ಎರಡರಲ್ಲಿ ಕೆನ್ಯಾದ ಫೇತ್ ಚೆರೊಟಿಚ್ 9:10.57 ಅವಧಿಯೊಡನೆ ಮತ್ತು ಮೂರನೇ ಹೀಟ್ ರೇಸ್‌ನಲ್ಲಿ ಜರ್ಮನಿಯ ಗೆಸಾ ಫೆಲಿಸಿಟಾಸ್ ಕ್ರಾಸೆ (9:10.68) ಅಗ್ರಸ್ಥಾನ ಪಡೆದರು.

ಸ್ಟೀಪಲ್‌ಚೇಸ್‌ನಲ್ಲಿ ಒಲಿಂಪಿಕ್ಸ್ ಪ್ರವೇಶಕ್ಕೆ ಬೇಕಾದ ಅರ್ಹತಾ ಮಾನದಂಡ (9:23.00) ಸಾಧಿಸಿ ಪಾರುಲ್ ನೇರವಾಗಿ ಅರ್ಹತೆ ಪಡೆದಿದ್ದರು.

ಈ ಹಿಂದೆ ಲಲಿತಾ ಬಾಬರ್ ಮಾತ್ರ ಮಹಿಳೆಯರ 3,000 ಮೀ. ಸ್ಟೀಪಲ್‌ಚೇಸ್‌ನಲ್ಲಿ ಫೈನಲ್ ತಲುಪಿದ್ದರು. ರಿಯೊದಲ್ಲಿ ಆ ಸಾಧನೆ ಮಾಡಿದ್ದರು.

ಅಲ್ಡ್ರಿನ್ ವಿಫಲ: ಪುರುಷರ ಲಾಂಗ್‌ಜಂಪ್‌ನಲ್ಲಿ ಮೊದಲೆರಡು ಯತ್ನಗಳಲ್ಲಿ ಫೌಲ್ ಮಾಡಿದ ಜೆಸ್ವಿನ್ ಆಲ್ಡ್ರಿನ್, ಮೂರನೇ ಯತ್ನದಲ್ಲಿ 7.61 ಮೀ. ದೂರ ಜಿಗಿದರು. ಗ್ರೂಪ್ ಬಿ ಕ್ವಾಲಿಫಿಕೇಷನ್‌ನಲ್ಲಿ ಅವರು 16 ಸ್ಪರ್ಧಿಗಳ ಪೈಕಿ 13ನೇ ಸ್ಥಾನ ಪಡೆದರು. ಒಟ್ಟಾರೆ 26ನೇ ಸ್ಥಾನಕ್ಕೆ ಸರಿದರು.



ಡಾಮಿನಿಕಾದ ಥಿಯಾ ಲೆಫಾಂಡ್ ಅವರ ಜಿಗಿತದ ಭಂಗಿ –ಎಎಫ್‌ಪಿ ಚಿತ್ರ

ಟ್ರಿಪಲ್ ಜಂಪ್: ಥಿಯಾಗೆ ಚಿನ್ನ

ಸೇಂಟ್ ಡೆನಿಸ್, ಫ್ರಾನ್ಸ್ (ಎಪಿ): ಕೆರೀಬಿಯನ್ ದೇಶ ಡಾಮಿನಿಕಾದ ಥಿಯಾ ಲೆಫಾಂಡ್ ಒಲಿಂಪಿಕ್ಸ್‌ನಲ್ಲಿ ತಮ್ಮ ದೇಶಕ್ಕೆ ಮೊದಲ ಚಿನ್ನದ ಪದಕ ಕಾಣಿಕೆ ನೀಡಿದರು.

ಶನಿವಾರ ತಡರಾತ್ರಿ ನಡೆದ ಮಹಿಳೆಯರ ಟ್ರಿಪಲ್ ಜಂಪ್ ಸ್ಪರ್ಧೆಯಲ್ಲಿ ಅವರು ಮೊದಲ ಸ್ಥಾನ ಗಳಿಸಿ ಚಿನ್ನ ಜಯಿಸಿದರು.

ಥಿಯಾ ಅವರು 15.02 ಮೀಟರ್ಸ್ ದೂರ ಜಿಗಿದು ಚಿನ್ನದ ಪದಕ ಗೆದ್ದರು. ಜಮೈಕಾದ ಶಾನಿಕಾ ರಿಕೆಟ್ಸ್ (14.87 ಮೀ) ಹಾಗೂ ಅಮೆರಿಕದ ಜಾಸ್ಮಿನ್ ಮೂರ್ (14.67 ಮೀ) ಅವರು ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಥಿಯಾ ಅವರು ಈ ಒಲಿಂಪಿಕ್ಸ್‌ನ ಅಥ್ಲೆಟಿಕ್ಸ್‌ನಲ್ಲಿ ಡಾಮಿನಿಕಾ ದೇಶದಿಂದ ಸ್ಪರ್ಧಿಸಿರುವ ಏಕೈಕ ಮಹಿಳಾ ಸ್ಪರ್ಧಿಯಾಗಿದ್ದಾರೆ. ಹೋದ ಮಾರ್ಚ್‌ನಲ್ಲಿ ಅವರು ವಿಶ್ವ ಒಳಾಂಗಣ ಅಥ್ಲೆಟಿಕ್ಸ್‌ನಲ್ಲಿ ಚಿನ್ನ ಗೆದ್ದಾಗಲೂ ತಮ್ಮ ದೇಶದ ಏಕೈಕ ಪ್ರತಿನಿಧಿಯಾಗಿದ್ದರು. ಡಾಮಿನಿಕಾ ದ್ವೀಪದಲ್ಲಿ ಅಥ್ಲೆಟಿಕ್ಸ್ ತರಬೇತಿಗೆ ಬೇಕಾದ ಮೂಲಸೌಲಭ್ಯಗಳು ಇಲ್ಲ.

'ಟ್ರ್ಯಾಕ್ ನಿರ್ಮಾಣಕ್ಕೆ ಭೂಮಿ ಸಿಗುವುದು ಕಷ್ಟ. ಪದಕ ಜಯಿಸಿರುವುದರಿಂದ ದೇಶದ ಆಡಳಿತಾಧಿಕಾರಿಗಳ ಗಮನ ಇತ್ತ ಹರಿಯಬಹುದು. ಸೌಲಭ್ಯಗಳ ಅಭಿವೃದ್ಧಿಗೆ ಮನಸ್ಸು ಮಾಡಿದರೆ ಮುಂದಿನ ಪೀಳಿಗೆಯ ಕ್ರೀಡಾಪಟುಗಳಿಗೆ ಅನುಕೂಲವಾಗುತ್ತದೆ' ಎಂದೂ ಥಿಯಾ ಹೇಳಿದರು.

ಗೆಲುವಿನ ಬಳಿಕ ಮಗಳನ್ನು ತಬ್ಬಿಕೊಂಡು ಆನಂದಬಾಷ್ಪ ಹರಿಸಿದ ಸರ್ಬಿಯಾದ ಟೆನಿಸ್ ತಾರೆ ನೊವಾಕ್ ಜೊಕೊವಿಚ್
–ಪ್ರಜಾವಾಣಿ ಚಿತ್ರ/ ಕೆ.ಎನ್. ಶಾಂತಕುಮಾರ್

ಫೈನಲ್‌ನಲ್ಲಿ ಕಾರ್ಲೋಸ್ ಅಲ್ಕರಾಜ್ ವಿರುದ್ಧ ಗೆಲುವು

ಜೊಕೊವಿಚ್ ಕೊರಳಿಗೆ ಚಿನ್ನ

ಪ್ಯಾರಿಸ್ (ಎಎಫ್‌ಪಿ): ಸ್ಪೇನ್‌ನ ಪ್ರತಿಭಾನ್ವಿತ ಕಾರ್ಲೋಸ್ ಅಲ್ಕರಾಜ್ ವಿರುದ್ಧ ನೇರ ಸೆಟ್‌ಗಳಲ್ಲಿ ಗೆಲುವು ಸಾಧಿಸಿದ ಸರ್ಬಿಯಾದ ದಿಗ್ಗಜ ನೊವಾಕ್ ಜೊಕೊವಿಚ್ ಅವರು ಒಲಿಂಪಿಕ್ಸ್ ಟೆನಿಸ್ ಪುರುಷರ ಸಿಂಗಲ್ಸ್ ಚಿನ್ನದ ಪದಕ ಗೆದ್ದರು. ಆ ಹಾದಿಯಲ್ಲಿ ತಾವು ಸಾರ್ವಕಾಲಿಕ ಶ್ರೇಷ್ಠ ಆಟಗಾರ ಎಂಬುದನ್ನು ಮತ್ತೊಮ್ಮೆ ಸಾರಿದರು.

ರೋಲೆಂಡ್ ಗ್ಯಾರೋಸ್‌ನ ಫಿಲಿಪ್ ಶಾಟಿಯೆ ಕೋರ್ಟ್‌ನಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ 37 ವರ್ಷ ವಯಸ್ಸಿನ, ಅಗ್ರ ಶ್ರೇಯಾಂಕದ ಆಟಗಾರ ಜೊಕೊವಿಚ್ 7-6 (3), 7-6 (2) ರಿಂದ ತಮಗಿಂತ 16 ವರ್ಷದ ಕಿರಿಯ ಆಟಗಾರನನ್ನು ಸೋಲಿಸಿದರು.

ಇದು ಅವರಿಗೆ ಮೊದಲ ಒಲಿಂಪಿಕ್ಸ್ ಚಿನ್ನ. ಬೀಜಿಂಗ್ ಕ್ರೀಡೆಗಳಲ್ಲಿ (2008) ಕಂಚಿನ ಪದಕ ಗೆದ್ದಿದ್ದು ಒಲಿಂಪಿಕ್ಸ್‌ನಲ್ಲಿ ಇದುವರೆಗಿನ ಉತ್ತಮ ಸಾಧನೆಯಾಗಿತ್ತು. ಅವರು 24 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದಿದ್ದು, ವೃತ್ತಿಜೀವನದಲ್ಲಿ 'ಗೋಲ್ಡನ್ ಸ್ಲಾಮ್' ಪೂರೈಸಿದರು. ಈ ವರ್ಷ ಫ್ರೆಂಚ್ ಓಪನ್ ಮತ್ತು ವಿಂಬಲ್ಡನ್ ಪ್ರಶಸ್ತಿ ಗೆದ್ದುಕೊಂಡಿರುವ 21 ವರ್ಷ ವಯಸ್ಸಿನ ಅಲ್ಕರಾಜ್ ಇಲ್ಲೂ ಪ್ರಾಬಲ್ಯ ಸಾಧಿಸುವುದಕ್ಕೆ ಜೊಕೊವಿಚ್ ತಡೆಹಾಕಿದರು.

ಈ ಸಂಭ್ರಮದಲ್ಲಿ ಭಾವೋದ್ವೇಗಕ್ಕೆ ಒಳಗಾದ ಜೊಕೊವಿಚ್ ಅವರಿಗೆ ಕಣ್ಣೀರು ತಡೆಯಲಾಗಲಿಲ್ಲ. ಆ ಮೂಲಕ ಇಲ್ಲಿನ ಯಶಸ್ಸು ತಮಗೆ ಎಷ್ಟು ಮುಖ್ಯ ಎಂಬುದನ್ನೂ ಸೂಚಿಸಿದರು. ಹಲವು ದಾಖಲೆಗಳು ಜೊಕೊವಿಚ್ ಹೆಸರಿನಲ್ಲಿವೆ. ಅವರು 428 ವಾರಗಳ ಕಾಲ ವಿಶ್ವದ ಅಗ್ರಮಾನ್ಯ ಆಟಗಾರನ ಪಟ್ಟದಲ್ಲಿದ್ದರು. ಮಾಸ್ಟರ್ಸ್ ಮಟ್ಟದ 40 ಪ್ರಶಸ್ತಿಗಳನ್ನು ಬಾಚಿಕೊಂಡಿದ್ದಾರೆ.

ಈ ವರ್ಷ ಜೊಕೊವಿಚ್ ಒಂದೂ ಪ್ರಶಸ್ತಿ ಗೆದ್ದಿರಲಿಲ್ಲ. ಆದರೆ ಕೆಂಪುಮಣ್ಣಿನ ಕೋರ್ಟ್‌ನಲ್ಲಿ ಗೆಲ್ಲುವ ಮೂಲಕ ತಮ್ಮ ಮನೋಬಲ ಎಷ್ಟು ಗಟ್ಟಿ ಎಂಬುದನ್ನು ಸಾಬೀತು ಪಡಿಸಿದರು.

ಟೆನಿಸ್ ಪುರುಷರ ಸಿಂಗಲ್ಸ್‌ನಲ್ಲಿ ಪದಕ ಗೆದ್ದ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ (ಬೆಳ್ಳಿ), ಸರ್ಬಿಯಾದ ನೊವಾಕ್ ಜೊಕೊವಿಚ್ (ಚಿನ್ನ) ಮತ್ತು ಇಟಲಿಯ ಲೊರೆಂಜೊ ಮುಸೆಟ್ಟಿ (ಕಂಚು) –ಪ್ರಜಾವಾಣಿ ಚಿತ್ರ/ ಕೆ.ಎನ್. ಶಾಂತಕುಮಾರ್

ಪುರುಷರ ಸಿಂಗಲ್ಸ್: ಮಲೇಷ್ಯಾದ ಜಿಯಾ ವಿರುದ್ಧ ಕಂಚಿನ ಪದಕಕ್ಕೆ ಪ್ಲೇ ಆಫ್ ಪಂದ್ಯ ಇಂದು

ವಿಕ್ಟರ್‌ಗೆ ಮಣಿದ ಲಕ್ಷ್ಯ ಸೇನ್

ಗೆಲುವಿನ ಸಂಭ್ರಮದಲ್ಲಿ ಡೆನ್ಮಾರ್ಕ್‌ನ ವಿಕ್ಟರ್ ಆಕ್ಸೆಲ್ಸನ್

ಭಾರತದ ಲಕ್ಷ್ಯ ಸೇನ್ ಹೊಡೆತದ ವೈಖರಿ –ಪಿಟಿಐ ಚಿತ್ರಗಳು

ಪ್ಯಾರಿಸ್ (ಪಿಟಿಐ): ಒಲಿಂಪಿಕ್ಸ್ ಬ್ಯಾಡ್ಮಿಂಟನ್‌ನಲ್ಲಿ ಮೊದಲ ಚಿನ್ನ ಗೆಲ್ಲುವ ಭಾರತದ ಕನಸು ಈ ಬಾರಿ ಈಡೇರಲಿಲ್ಲ. ಲಕ್ಷ್ಯ ಸೇನ್ ಅವರು ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಹಾಲಿ ಚಾಂಪಿಯನ್ ವಿಕ್ಟರ್ ಆಕ್ಸೆಲ್ಸನ್ ಅವರಿಗೆ ಭಾನುವಾರ ನೇರ ಗೇಮ್‌ಗಳಲ್ಲಿ ಸೋತರು.

ಉತ್ತರಾಖಂಡದ ಅಲ್ಮೋರಾದ ಆಟಗಾರ ಮೊದಲ ಗೇಮ್‌ನಲ್ಲಿ 20–17ರಲ್ಲಿ ಮೂರು ಪಾಯಿಂಟ್‌ಗಳ ನಿರ್ಣಾಯಕ ಮುನ್ನಡೆ ಮತ್ತು ಎರಡನೇ ಗೇಮ್‌ನಲ್ಲಿ 7–0 ಮುನ್ನಡೆ ಬಿಟ್ಟುಕೊಟ್ಟು 20–22, 14–21 ರಲ್ಲಿ ಡೆನ್ಮಾರ್ಕ್ ಆಟಗಾರನಿಗೆ ಶರಣಾದರು. ಎರಡು ಬಾರಿಯ ವಿಶ್ವ ಚಾಂಪಿಯನ್ ಆಕ್ಸೆಲ್ಸನ್ 54 ನಿಮಿಷಗಳಲ್ಲಿ ಪಂದ್ಯ ಗೆದ್ದರು.

22 ವರ್ಷ ವಯಸ್ಸಿನ ಸೇನ್ ಅವರಿಗೆ ಕಂಚಿನ ಪದಕ ಗೆಲ್ಲಲು ಅವಕಾಶವಿದ್ದು, ಅದಕ್ಕಾಗಿ ಸೋಮವಾರ ಸಂಜೆ ನಡೆಯುವ ಪ್ಲೇ ಆಫ್ ಪಂದ್ಯದಲ್ಲಿ ಮಲೇಷ್ಯಾದ ಲೀ ಝಿ ಜಿಯಾ ಅವರನ್ನು ಎದುರಿಸಲಿದ್ದಾರೆ. ಪುರುಷರ ಸಿಂಗಲ್ಸ್‌ನಲ್ಲಿ ಭಾರತ ಇದುವರೆಗೆ ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದಿಲ್ಲ. ಮಹಿಳೆಯರ ವಿಭಾಗದಲ್ಲಿ ಪಿ.ವಿ. ಸಿಂಧು ಒಮ್ಮೆ ಬೆಳ್ಳಿ (2016), ಒಮ್ಮೆ ಕಂಚಿನ ಪದಕ (2020) ಹಾಗೂ ಸೈನಾ ನೆಹ್ವಾಲ್ ಒಮ್ಮೆ (2012) ಕಂಚಿನ ಪದಕ ವಿಜೇತರಾಗಿದ್ದಾರೆ.

ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಸೇನ್ ಇದುವರೆಗಿನ ಒಂಬತ್ತು ಮುಖಾಮುಖಿಗಳಲ್ಲಿ ಎಂಟು ಬಾರಿ ಆಕ್ಸೆಲ್ಸನ್‌ಗೆ ಸೋತಿದ್ದಾರೆ. 2022ರ ಜರ್ಮನ್ ಓಪನ್ ಫೈನಲ್‌ನಲ್ಲಿ ಮಾತ್ರ ಲಕ್ಷ್ಯ ಗೆದ್ದಿದ್ದರು.

'ಮೊದಲ ಗೇಮನ್ನು 20–17 ರಲ್ಲಿಮುಂದಿದ್ದುಸೋತಿದ್ದಕ್ಕೆಪ್ರತಿಕ್ರಿಯಿಸಿದ ಅವರು 'ಪಂದ್ಯ ಮುಂದುವರಿದಂತೆ ಅವರು ಆಕ್ರಮಣಕಾರಿಯಾದರು. ನಾನು ಏನೂ ಮಾಡದಾದೆ. ಬರೇ ರಕ್ಷಣೆಯನ್ನಷ್ಟೇ ಮಾಡಬೇಕಾಯಿತು. ನಾನೂ ಅವಕಾಶಕ್ಕೆ ಹೋಗಿ ಆಕ್ರಮಣಕಾರಿಯಾಗಬೇಕಿತ್ತು' ಎಂದರು.

ಸತತ ಎರಡು ಬಾರಿ ಚಿನ್ನ ಗೆದ್ದಿರುವ ಚೀನಾದ ದಂತಕತೆ ಲಿನ್ ದಾನ್ ಅವರ ಸಾಧನೆ ಸರಿಗಟ್ಟುವ ಹಾದಿಯಲ್ಲಿ ಆಕ್ಸೆಲ್ಸನ್ ದಿಟ್ಟಹೆಜ್ಜೆಯಿಟ್ಟಿದ್ದಾರೆ.

ಈ ಹಿಂದಿನ ಎಲ್ಲ ಸೋಲುಗಳಿಗಿಂತ ಈ ಬಾರಿಯ ಸೋಲು ಸೆನ್ ಅವರನ್ನು ಹೆಚ್ಚು ಕಾಡಲಿದೆ. ಮೊದಲ ಸೆಟ್ ಗೆದ್ದು, ಎದುರಾಳಿಯ ಮೇಲೆ ಒತ್ತಡ ಹೇರುವ ಅವಕಾಶವನ್ನು ಅವರು ಕಳೆದುಕೊಂಡ ಮೇಲೆ ಒತ್ತಡಕ್ಕೆ ಒಳಗಾದರು. ಇದರ ಲಾಭವನ್ನು ಆಕ್ಸೆಲ್ಸನ್ ಪಡೆದರು. ಸರ್ವ್ ಮಾಡುವಾಗ ಸ್ವಲ್ಪ ವಿಳಂಬ ಮಾಡುವ ಅವರ ತಂತ್ರವೂ ಸೇನ್ ಅವರನ್ನು ಕೆಲಮಟ್ಟಿಗೆ ವಿಚಲಿತಗೊಳಿಸಿತು.

'ನನ್ನ ಪೋಷಕರು, ಸೋದರ (ಚಿರಾಗ್ ಸೇನ್) ಪ್ರೇಕ್ಷಕರ ಸ್ಟ್ಯಾಂಡ್‌ನಲ್ಲಿದ್ದು ಬೆಂಬಲಿಸಿದರು. ಪ್ರೇಕ್ಷಕರಿಂದಲೂ ಒಳ್ಳೆಯ ಬೆಂಬಲ ದೊರೆಯಿತು. ಕಂಚಿನ ಪದಕದ ಪಂದ್ಯಕ್ಕೂ ಜನರು ಬಂದು ಬೆಂಬಲಿಸುವರೆಂಬ ವಿಶ್ವಾಸವಿದೆ' ಎಂದರು.

ಶ್ರೇಯಾಂಕರಹಿತ ತೈವಾನ್ ಜೋಡಿಗೆ ಚಿನ್ನ

ಪ್ಯಾರಿಸ್ (ಎಎಫ್‌ಪಿ): ತೈವಾನ್‌ನ ಲೀ ಯಂಗ್ ಮತ್ತು ವಾಂಗ್ ಚಿ-ಲಿನ್ ಅವರು ಬ್ಯಾಡ್ಮಿಂಟನ್ ಪುರುಷರ ಡಬಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ಚೀನಾ ಜೋಡಿಯನ್ನು ಸೋಲಿಸಿ ಚಿನ್ನ ಗೆದ್ದರು. ಕಳೆದ ಬಾರಿಯೂ ತೈವಾನ್ ಜೋಡಿ ಚಾಂಪಿಯನ್ ಆಗಿತ್ತು. ಇದು ಪ್ಯಾರಿಸ್ ಕ್ರೀಡೆಗಳಲ್ಲಿ ತೈವಾನ್‌ಗೆ ಮೊದಲ ಚಿನ್ನ ಎನಿಸಿತು.

ಲಾ ಷಾಫೆಲ್ ಅರೇನಾದಲ್ಲಿ ನಡೆದ ಫೈನಲ್ಸ್‌ನಲ್ಲಿ ಯಂಗ್‌–ವಾಂಗ್ ಜೋಡಿ 21–17, 18–21 21–19 ರಿಂದ ಲಿಯಾಂಗ್ ವೀಕೆಂಗ್– ವಾಂಗ್ ಚಾಂಗ್ ಅವರನ್ನು ಸೋಲಿಸಿತು. ಮಿಶ್ರ ಮತ್ತು ಮಹಿಳಾ ಡಬಲ್ಸ್ ಸ್ವರ್ಣ ದ್ದಿದ್ದ ಚೀನಾ ಇನ್ನೊಂದನ್ನು ಸೇರಿಸುವ ಯತ್ನಕ್ಕೆ ತೈವಾನ್ ಜೋಡಿ ಅಡ್ಡಗಾಲು ಹಾಕಿತು.

ಮಲೇಷ್ಯಾದ ಆರನ್ ಚಿಯ– ಸೊ ವೂಯಿ ಯಿಕ್ ಜೋಡಿ ಸತತ ಎರಡನೇ ಬಾರಿ ಕಂಚಿನ ಪದಕ ಪಡೆಯಿತು.

ಲೆಡೆಕಿಗೆ ದಾಖಲೆಯ 9ನೇ ಚಿನ್ನ


ಕೇಟ್ ಲೆಡೆಕಿ

ಪ್ಯಾರಿಸ್ (ಎಎಫ್‌ಪಿ): ಅಮೆರಿಕದ ಈಜುತಾರೆ ಕೇಟ್ ಲೆಡೆಕಿ ಒಲಿಂಪಿಕ್ಸ್‌ನ 800 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದುಕೊಂಡರು. ಇದರೊಂದಿಗೆ ಅವರು ಒಲಿಂಪಿಕ್ಸ್‌ನಲ್ಲಿ 9ನೇ ಸ್ವರ್ಣ ಗೆದ್ದು ದಾಖಲೆ ನಿರ್ಮಿಸಿದರು.

27 ವರ್ಷ ವಯಸ್ಸಿನ ಲೆಡೆಕಿ ಸತತ ನಾಲ್ಕನೇ ಒಲಿಂಪಿಕ್ಸ್‌ನಲ್ಲಿ 800 ಮೀ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಚಿನ್ನದ ಪದಕವನ್ನು ಕೊರಳಿಗೇರಿಸಿಕೊಂಡರು. ಈ ಮೂಲಕ ಒಲಿಂಪಿಕ್ಸ್‌ನ ಯಾವುದೇ ಕ್ರೀಡೆಯಲ್ಲಿ ಮಹಿಳಾ ಅಥ್ಲೀಟ್ ಗಳಿಸಿದ ಗರಿಷ್ಠ ಚಿನ್ನದ (9) ಪದಕಗಳ ದಾಖಲೆಯನ್ನು ಸರಿಗಟ್ಟಿದರು. 1956-1964ರ ಅವಧಿ ಯಲ್ಲಿ ರಷ್ಯಾದ ಜಿಮ್ನಾಸ್ಟ್ ಲಾರಿಸಾ ಲ್ಯಾಟಿನಿನಾ ಒಲಿಂಪಿಕ್ಸ್‌ನಲ್ಲಿ ಒಂಬತ್ತು ಚಿನ್ನ ಗೆದ್ದು ದಾಖಲೆ ಬರೆದಿದ್ದರು.

2012ರಲ್ಲಿ ಲಂಡನ್ ಒಲಿಂಪಿಕ್ಸ್‌ನ 800 ಮೀಟರ್ ಫ್ರೀಸ್ಟೈಲ್‌ನಲ್ಲಿ 15ನೇ ವಯಸ್ಸಿನಲ್ಲೇ ಲೆಡೆಕಿ ಮೊದಲ ಚಿನ್ನ ಗೆದಿದ್ದರು. ನಂತರ ರಿಯೊ ಕೂಟದಲ್ಲಿ 4 ಚಿನ್ನ ಸೇರಿದಂತೆ ಐದು ಪದಕ ಮತ್ತು ಟೋಕಿಯೊದಲ್ಲಿ ಎರಡು ಚಿನ್ನ ಸೇರಿದಂತೆ ನಾಲ್ಕು ಪದಕ ಜಯಿಸಿದ್ದರು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಲೆಡೆಕಿ ಅವರಿಗೆ ಇದು ನಾಲ್ಕನೇ ಪದಕವಾಗಿದೆ. ಈ ಮೊದಲು 1500 ಮೀಟರ್ ಫ್ರೀಸ್ಟೈಲ್‌ನಲ್ಲಿ ಚಿನ್ನ, 4x200 ಮೀಟರ್ ಫ್ರೀಸ್ಟೈಲ್ ರಿಲೆನಲ್ಲಿ ಬೆಳ್ಳಿ ಮತ್ತು 400 ಮೀಟರ್ ಫ್ರೀಸ್ಟೈಲ್‌ನಲ್ಲಿ ಕಂಚು ಗೆದಿದ್ದರು. ಒಲಿಂಪಿಕ್ಸ್‌ಗೆ ಅವರ ಪದಕಗಳ ಸಂಖ್ಯೆ 14ಕ್ಕೆ ಏರಿಕೆಯಾಗಿದೆ.

ಶನಿವಾರ ಫೈನಲ್‌ನಲ್ಲಿ ಲೆಡೆಕಿ 8 ನಿ.11.04 ಸೆಕೆಂಡ್‌ನಲ್ಲಿ ಗುರಿ ತಲುಪಿದರು. ಆಸ್ಟ್ರೇಲಿಯಾದ ಅರಿಯಾನ್ ಟಿಟ್ಮಸ್ (8 ನಿ.12.29ಸೆ) ಮತ್ತು ಅಮೆರಿಕದ ಪೈಗೆ ಮ್ಯಾಡೆನ್ (8 ನಿ. 13ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಮೆಡ್ಲೆ ರಿಲೆಯಲ್ಲಿ ಹೊಸ ದಾಖಲೆ: ಮಹಿಳೆಯರ 4x100ಮೀ ಮೆಡ್ಲೆ ರಿಲೆಯಲ್ಲಿ ಅಮೆರಿಕ ಹೊಸ ದಾಖಲೆಯೊಂದಿಗೆ ಚಿನ್ನ ಗೆದ್ದಿತ್ತು.

ರೇಗನ್ ಸ್ಮಿತ್, ಲಿಲ್ಲಿ ಕಿಂಗ್, ಗ್ರೆಚೆನ್ ವಾಲ್ಶ್ ಮತ್ತು ಟೋರಿ ಹಸ್ಕೆ ಅವರನ್ನು ಒಳಗೊಂಡ ತಂಡವು 3 ನಿಮಿಷ 49.63 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಈ ಮೂಲಕ 2019ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಅಮೆರಿತ ತಂಡವೇ ನಿರ್ಮಿಸಿದ್ದ (3:50.40) ದಾಖಲೆಯನ್ನು ಮುರಿದರು. ಆಸ್ಟ್ರೇಲಿಯಾ ಮತ್ತು ಚೀನಾ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದುಕೊಂಡವು.

ಸಮ್ಮರ್‌ಗೆ ಹ್ಯಾಟ್ರಿಕ್ ಚಿನ್ನ: ಕೆನಡಾದ ಉದಯೋನ್ಮುಖ ಈಜುತಾರೆ ಸಮ್ಮರ್ ಮೆಕಿಂತೋಷ್ ಅವರು ಪ್ಯಾರಿಸ್‌ನಲ್ಲಿ ಹ್ಯಾಟ್ರಿಕ್ ಚಿನ್ನದ ಪದಕಗಳನ್ನು ಗೆದ್ದರು.

17 ವರ್ಷ ವಯಸ್ಸಿನ ಸಮ್ಮರ್ 200 ಮೀಟರ್ ಮಿಡ್ಲೆ, 400 ಮೀಟರ್ ಮಿಡ್ಲೆ ಮತ್ತು 200 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಚಿನ್ನ ಗೆದ್ದುಕೊಂಡರು.

ಭಾರತದ ಲವ್ಲಿನಾ ಬೊರ್ಗೊಹೈನ್ ಅವರಿಗೆ ಪಂಚ್ ನೀಡಿದ ಚೀನಾದ ಲಿಕ್ವಿಯಾನ್ –ಎಎಫ್‌ಪಿ ಚಿತ್ರ

ಲವ್ಲಿನಾಗೆ ಸೋಲು: ಭಾರತದ ಬಾಕ್ಸರ್‌ಗಳ ಸವಾಲು ಅಂತ್ಯ

ಪ್ಯಾರಿಸ್ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ಭಾರತದ ಬಾಕ್ಸರ್ ಲವ್ಲಿನಾ ಬೊರ್ಗೊಹೈನ್ ಅವರು ಪ್ಯಾರಿಸ್ ಕೂಟದಿಂದ ಹೊರಬಿದ್ದಿದ್ದಾರೆ.

ಲವ್ಲಿನಾ ಸೋಲಿನೊಂದಿಗೆ ಪ್ಯಾರಿಸ್ ಒಲಿಂಪಿಕ್ಸ್ ಬಾಕ್ಸಿಂಗ್‌ನಲ್ಲಿ ಭಾರತದ ಸವಾಲು ಅಂತ್ಯಗೊಂಡಿದೆ. ಭಾನುವಾರ ನಡೆದ ಮಹಿಳೆಯರ ಬಾಕ್ಸಿಂಗ್ 75 ಕೆ.ಜಿ. ವಿಭಾಗದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಲವ್ಲಿನಾ 1–4ರಿಂದ ಚೀನಾದ ಲಿ ಕ್ವಿಯಾನ್ ವಿರುದ್ಧ ಸೋಲನುಭವಿಸಿದರು.

ಪ್ಯಾರಿಸ್ ಕೂಟದಲ್ಲಿ ನಾಲ್ಕು ಮಹಿಳೆಯರು ಸೇರಿದಂತೆ ಒಟ್ಟು ಆರು ಮಂದಿ ಪ್ರಬಲ ಸ್ಪರ್ಧಿಗಳು ಭಾರತವನ್ನು ಪ್ರತಿನಿಧಿಸಿದ್ದರು.

ಅಥ್ಲೆಟಿಕ್ಸ್: ಆರ್ಯನ್ ವೇಗದ ಓಟಗಾರ

ಬೆಂಗಳೂರು: ಬೆಂಗಳೂರಿನ ಆರ್ಯನ್ ಮನೋಜ್ ಅವರು ರಾಜ್ಯ ಅಥ್ಲೆಟಿಕ್ಸ್ ಕೂಟದ ಪುರುಷರ 100 ಮೀ. ಓಟದಲ್ಲಿ ಚಿನ್ನ ಗೆದ್ದರು. ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಸ್ಪರ್ಧೆಯಲ್ಲಿ ಅವರು 10.42 ಸೆಕೆಂಡುಗಳಲ್ಲಿ ಗುರಿ ತಲುಪಿದರು.

ಫಲಿತಾಂಶಗಳು: ಪುರುಷರು: 100 ಮೀ ಓಟ: ಆರ್ಯನ್ ಮನೋಜ್ (ಬೆಂಗಳೂರು ನಗರ)–1, ಗಗನ್ ಗೌಡ (ಬೆಂಗಳೂರು ನಗರ)–2, ಧನುಷ್ ಡಿ.(ಉಡುಪಿ)–3, ಕಾಲ:10.42ಸೆ. 400 ಮೀ: ಬಾಲಕೃಷ್ಣ (ಹಾಸನ)–1, ಭುವನ್ ಪೂಜೆರಿ (ಬೆಂಗಳೂರು ನಗರ)–2, ಮಹೇಂದ್ರ ಚೌಧರಿ (ಬಿಜಾಪುರ)–3, ಕಾಲ:47.78ಸೆ. 10,000 ಮೀ: ವಿಜಯ್ ಸಾವರ್ತಕರ್ (ಬೆಳಗಾವಿ)–1, ಸುರೇಶ್ ನಾಟೀಕರ್ (ಬಿಜಾಪುರ)–2, ಲಕ್ಷ್ಮೀಷ್ ಸಿ.ಎಸ್. (ಬೆಂಗಳೂರು ನಗರ)–3, ಕಾಲ:32 ನಿ 32.7ಸೆ. ಡೆಕಥ್ಲಾನ್: ರಾಥೋಡ್ ಲೋಕೇಶ್ (ಯಾದಗಿರಿ)–1, ತ್ರಿಲೋಕ್ ಒಡೆಯರ್ (ಚಿತ್ರದುರ್ಗ)–2, ಪ್ರತಾಪ್ ಎಸ್.(ಬೆಂಗಳೂರು)–3, ಅಂಕ: 6189. ಮಹಿಳೆಯರು: ಹೆಪ್ಟಾಥ್ಲಾನ್: ರಕ್ಷಿತಾ (ಉಡುಪಿ)–1, ಶ್ರಾವಣಿ ಬಿ. (ಬೆಂಗಳೂರು ನಗರ)–2, ಅಂಕ: 4370

ಕೀಲು ನೋವಿನಿಂದ ಮುಕ್ತರಾಗಿ
ಮತ್ತು ಸಂತಸದಿಂದ ಜೀವಿಸಿರಿ

ಕೀಲು ನೋವಿನ Specialist

ಮಂಡಿನೋವು ಬೆನ್ನುನೋವು ಮಣಿಕಟ್ಟು ನೋವು ಭುಜದ ನೋವು

ಅಪರೂಪದ 10 ಆಯುರ್ವೇದಿಕ ಮೂಲಿಕೆಗಳ ಸಾರಗಳಿಂದ ಅಥವಾ ತೈಲಗಳಿಂದ ತಯಾರಿಸಲಾದ ಡಾ. ಆರ್ಥೋ ಸ್ಟ್ರಾಂಗ್ ಆಯಿಲ್, ನೋವಿರುವ ಭಾಗದಲ್ಲಿ ಆಳಕ್ಕಿಳಿಯುತ್ತದೆ ಮತ್ತು ಪರಿಣಾಮಕಾರಿಯಾಗಿ ನೋವು ನಿವಾರಿಸಲು ನೆರವಾಗುತ್ತದೆ. ದಿನಕ್ಕೆ 1–2 ಬಾರಿ ನೋವಿರುವ ಭಾಗದ ಮೇಲೆ 8–10 ಮಿ.ಲೀ. ಆಯಿಲ್ ಹಾಕಿ ಮೃದುವಾಗಿ ಮಸಾಜ್ ಮಾಡಿರಿ. ಇದರ ಪರಿಣಾಮಗಳು ತಾತ್ಕಾಲಿಕವಾಗಿರದೆ, ದೀರ್ಘಕಾಲದವರೆಗೆ ನೋವಿನಿಂದ ಮುಕ್ತಿ ನೀಡುತ್ತವೆ.

24x7 Helpline: 78769 77777 | www.drorthooil.com

Dr. Juneja's
ಡಾ.ಆರ್ಥೋ®
Ayurvedic Oil, Capsules, Spray & Ointment

HONDA

Scooter ಅಂದ್ರೆ ACTIVA

HDFC BANK Credit Card
5% ಕ್ಯಾಶ್‌ಬ್ಯಾಕ್ ₹5000## ವರೆಗೆ

IDFC FIRST Bank
ಕಡಿಮೆ ಬಡ್ಡಿ ದರ @7.99%**
ಕಡಿಮೆ EMI ₹2351**

ವೀಡಿಯೋ ಆನಂದಿಸಲು, QR ಕೋಡ್ ಸ್ಕ್ಯಾನ್ ಮಾಡಿ.

ACTIVA OVER 3.25 CRORE* HAPPY CUSTOMERS

ಡೀಲರ್ ವಿವರಗಳಿಗಾಗಿ QR ಕೋಡ್ ಸ್ಕ್ಯಾನ್ ಮಾಡಿ

ಹೆಚ್ಚಿನ ಮಾಹಿತಿಗಾಗಿ 7230032200 ಮಿಸ್ ಕಾಲ್ ನೀಡಿ

BOOK ONLINE NOW! www.honda2wheelersindia.com
CLICK BOOK RELAX

^ನಿಯಮ ಮತ್ತು ಷರತ್ತುಗಳು ಅನ್ವಯ. ##ಪೈನ್ ಲ್ಯಾಬ್ಸ್ ಮಶಿನ್‌ಗಳ ಮೂಲಕ HDFC ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಮಾಡಿದ EMI ವಹಿವಾಟುಗಳಿಗೆ ಮಾತ್ರ ಎಲ್ಲ ಹೋಂಡಾ ಟೂ-ವೀಲರ್ ಮಾಡೆಲ್‌ಗಳ ಮೇಲೆ ಕ್ಯಾಶ್‌ಬ್ಯಾಕ್ ಕೊಡುಗೆ ಲಭ್ಯವಿರುತ್ತದೆ. ##ಗ್ರಾಹಕರು ರೂ. 5000 ವರೆಗೆ 5% ಇನ್‌ಸ್ಟಂಟ್ ಕ್ಯಾಶ್‌ಬ್ಯಾಕ್ ಅನ್ನು ಪಡೆಯಬಹುದಾಗಿದೆ. ##ಕೊಡುಗೆ ಅವಧಿಯಲ್ಲಿ ಪ್ರತಿ ಕಾರ್ಡ್/ಆರ್ಡರ್‌ಗೆ ಮಾಡಿದ ಒಂದು ವಹಿವಾಟಿನ ಮೇಲೆ ಮಾನ್ಯವಾಗಿದೆ. ##2024 ಆಗಸ್ಟ್ 31ರ ವರೆಗೆ ಕ್ಯಾಶ್‌ಬ್ಯಾಕ್ ಕೊಡುಗೆ ಮಾನ್ಯವಾಗಿದೆ. ##ಆಯ್ದ ಔಟ್‌ಲೆಟ್‌ಗಳಲ್ಲಿ ಮಾತ್ರ ಸ್ಕೀಮ್ ಲಭ್ಯವಿದೆ. **ಹಣಕಾಸು ಯೋಜನೆ ಮತ್ತು ಕ್ರೆಡಿಟ್ ಸೌಲಭ್ಯವು IDFC ಫಸ್ಟ್ ಬ್ಯಾಂಕ್‌ನ ("ಬ್ಯಾಂಕ್") ವಿವೇಚನೆಯ ಮೇರೆಗೆ ಸೀಮಿತ ಅವಧಿಗೆ ಮಾತ್ರ ಲಭ್ಯವಿದೆ. ಚಿತ್ರದಲ್ಲಿ ತೋರಿಸಿದ ಉತ್ಪನ್ನವು ಮಾರ್ಕೆಟ್‌ನಲ್ಲಿರುವ ನಿಜವಾದ ಉತ್ಪನ್ನಕ್ಕಿಂತ ವಿಭಿನ್ನವಾಗಿರಬಹುದು. ಚಿತ್ರದಲ್ಲಿ ತೋರಿಸಿದ ಅಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಲ್ಲ. *ಮೂಲ: HMSI ಆಂತರಿಕ ಡೇಟಾ ಆಧಾರದಲ್ಲಿ 2001 ಜೂನ್ ಇಂದ 2024 ಜೂನ್‌ವರೆಗಿನ ಬ್ರ್ಯಾಂಡ್ Activaದ ಸಂಚಿತ ಮಾರಾಟ ಅಂಕಿಅಂಶ.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com